ಇಂದಿನ ಹವಾಮಾನ
ದಕ್ಷಿಣ ಕನ್ನಡ 28⁰ 25⁰ | ಉಡುಪಿ 28⁰ 26⁰

ಹೊಸ ದಿಗಂತ
ರಾಷ್ಟ್ರ ಜಾಗೃತಿಯ ದೈನಿಕ
ಸಂಗಮ
ದಕ್ಷಿಣ ಕನ್ನಡ | ಉಡುಪಿ | ಕೊಡಗು | ಕಾಸರಗೋಡು

ಮಂಗಳವಾರ 09, ಜೂನ್ 2026 | e-mail diganthamlr@gmail.com | Website www.hosadigantha.com | e-paper epaper.hosadigantha.com | MANGALURU



ಪುಟ 5
ಅನಂತಪುರ ಕಾರ್ಖಾನೆಗಳ ವಿರುದ್ಧ ಪ್ರತಿಭಟನಾ ಮೆರವಣಿಗೆ



ಪುಟ 6
ನಾಡದೋಣಿ ಮೀನುಗಾರರಿಗೆ ಇಂಧನ ದರ ಏರಿಕೆ ಬಿಸಿ

ಸುದ್ದಿ ಅಪ್ಡೇಟ್‌ಗಾಗಿ Google lensನಲ್ಲಿ ಈ QR ಕೋಡ್ ಸ್ಕ್ಯಾನ್ ಮಾಡಿ, whatsApp ಗ್ರೂಪ್ ಇಂದೇ ಸೇರಿ!

ಬಂದರು ನಗರಿ ಮಂಗಳೂರಿನಲ್ಲಿ ಈಗ ಮಳೆಗಾಲದ ಕಳೆ ಹೆಚ್ಚಿಸುತ್ತಿದೆ ಮುಂಗಾರಿನ ಮಳೆ



ದಕ್ಷಿಣ ಕನ್ನಡ ಸಹಿತ ಕರಾವಳಿ ಭಾಗದ ಜಿಲ್ಲೆಗಳಲ್ಲಿ ಭಾರೀ ಮಳೆಯಾಗುವ ಮುನ್ಸೂಚನೆಯನ್ನು ಹವಾಮಾನ ಇಲಾಖೆ ನೀಡಿದ್ದರೂ ಸೋಮವಾರ ಒಂದೆರಡು ಭಾಗಗಳನ್ನು ಹೊರತುಪಡಿಸಿ ಉಳಿದ ಕಡೆಗಳಲ್ಲಿ ಸಾಧಾರಣ ಪ್ರಮಾಣದಲ್ಲಿ ಮಳೆಯಾಗಿದೆ. ಮಂಗಳೂರು ನಗರದಲ್ಲಿ ಬೆಳಗ್ಗಿನ ಹೊತ್ತು ಕೆಲಕಾಲ ಮಳೆ ಸುರಿದಿದ್ದು, ಆಹ್ಲಾದಕರ ವಾತಾವರಣ ಸೃಷ್ಟಿಸಿತ್ತು. ಚಿತ್ರಗಳು: ರಾಜೇಶ್ ಶೆಟ್ಟಿ ಬಲ್ಲಾಳ್‌ಬಾಗ್

ಕರಾವಳಿ ಜಿಲ್ಲೆಗಳಲ್ಲಿ ಭಾರೀ ಮಳೆ ಮುನ್ನೆಚ್ಚರಿಕೆ
ಎಚ್ಚರ ಎಚ್ಚರಾ ಎಚ್ಚರ
ಕಡಲ ತೀರಗಳಲ್ಲಿ ಬಿರುಗಾಳಿಯ ಸಾಧ್ಯತೆ

ಮಂಗಳೂರು/ ಉಡುಪಿ/ಕಾಸರಗೋಡು: ರಾಜ್ಯದಲ್ಲಿ ಮುಂಗಾರು ತೀವ್ರವಾಗಿ ಚುರುಕುಗೊಂಡಿದ್ದು, ಜೂ. 8ರಿಂದ ಮುಂದಿನ ಕೆಲವು ದಿನಗಳ ಕಾಲ ಕರಾವಳಿ ಹಾಗೂ ಮಲೆನಾಡು ಭಾಗಗಳಲ್ಲಿ ಭಾರೀ ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ಎಚ್ಚರಿಸಿದೆ.

ಕರಾವಳಿ ಜಿಲ್ಲೆಗಳಿಗೆ 'ರೆಡ್ ಅಲರ್ಟ್'

ವಿಶೇಷವಾಗಿ ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಮಳೆಯ ತೀವ್ರತೆಯು ಅತ್ಯಂತ ಹೆಚ್ಚಾಗಲಿದೆ ಎಂದು ಇಲಾಖೆ ಎಚ್ಚರಿಸಿದ್ದು, ಈ ಹಿನ್ನೆಲೆಯಲ್ಲಿ ಈ ಜಿಲ್ಲೆಗಳಿಗೆ ಕಟ್ಟುನಿಟ್ಟಿನ 'ರೆಡ್ ಅಲರ್ಟ್' ಘೋಷಿಸಲಾಗಿದೆ.

ಕಾಸರಗೋಡಿನಲ್ಲಿ ಮಳೆಯ ಅಬ್ಬರ

ಕಾಸರಗೋಡು ಜಿಲ್ಲೆಯ ಬಹುತೇಕ ಭಾಗಗಳಲ್ಲಿ ಈಗಾಗಲೇ ಮಳೆ ಆರ್ಭಟ ತೀವ್ರಗೊಂಡಿದ್ದು, ಇಂದು ಮುನ್ನೆಚ್ಚರಿಕಾ ಕ್ರಮವಾಗಿ ಶಾಲಾ ಕಾಲೇಜುಗಳಿಗೆ ರಜೆ ಘೋಷಿಸಲಾಗಿದೆ.

ಇನ್ನುಳಿದಂತೆ ಉತ್ತರ ಕನ್ನಡ, ಶಿವಮೊಗ್ಗ ಹಾಗೂ ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಆರೆಂಜ್ ಅಲರ್ಟ್ ಮುಂದುವರಿದಿದೆ. ಜೂ.7ರಂದು ಕರಾವಳಿ, ಮಲೆನಾಡು, ಉತ್ತರ ಕರ್ನಾಟಕದ ಬೆಳಗಾವಿ, ಧಾರವಾಡ ಮತ್ತು ಹಾವೇರಿ ಜಿಲ್ಲೆಗಳಲ್ಲಿ ಆರೆಂಜ್ ಅಲರ್ಟ್ ಇತ್ತಾದರೂ, ಇಂದಿನಿಂದ (ಜೂನ್ 8) ಮಳೆಯ ಆರ್ಭಟ ಮತ್ತಷ್ಟು ಹೆಚ್ಚಾಗಲಿದೆ.



204.5 ಮಿ.ಮೀ.ಗಿಂತ ಅಧಿಕ ಮಳೆಯ ಸಾಧ್ಯತೆ

ಹವಾಮಾನ ಇಲಾಖೆಯ ವರದಿಯ ಪ್ರಕಾರ, ಜೂನ್ 8 ಮತ್ತು 9 ರಂದು ಉಡುಪಿ ಹಾಗೂ ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ 204.5 ಮಿ.ಮೀ.ಗಿಂತಲೂ ಅಧಿಕ ಮಳೆಯಾಗುವ ಸಾಧ್ಯತೆಯಿದೆ. ಇದರೊಂದಿಗೆ ಕರಾವಳಿ ತೀರದಲ್ಲಿ ಗಂಟೆಗೆ 40 ರಿಂದ 50 ಕಿ.ಮೀ. ವೇಗದಲ್ಲಿ ಬಲವಾದ ಗಾಳಿ ಬೀಸಲಿದ್ದು, ಗುಡುಗು ಸಿಡಿಲು ಸಹಿತ ಮಳೆಯಾಗಲಿದೆ.

ನದಿ, ಸಮುದ್ರ ತೀರ, ಗುಡ್ಡಗಾಡು, ತಗು ಪ್ರದೇಶಗಳಲ್ಲಿನ ಜನತೆಗೆ ಆಡಳಿತದ ಎಚ್ಚರಿಕೆ

ಮಳೆ ಬಿರುಸು ಪಡೆದುಕೊಳ್ಳುವ ಸಾಧ್ಯತೆ ಹಿನ್ನೆಲೆಯಲ್ಲಿ ನದಿ ತೀರ, ಸಮುದ್ರ ತೀರ ಹಾಗೂ ಗುಡ್ಡಗಾಡು ಮತ್ತು ತಗ್ಗು ಪ್ರದೇಶಗಳಲ್ಲಿ ವಾಸಿಸುವ ಸಾರ್ವಜನಿಕರು ಎಚ್ಚರಿಕೆಯಿಂದ ಇರಬೇಕು ಎಂದು ಆಡಳಿತಗಳು ಎಚ್ಚರಿಸಿವೆ. ಅನಗತ್ಯ ಪ್ರಯಾಣ, ಕಡಲಿಗಿಳಿಯುವ ಸಾಹಸ ಮಾಡದಂತೆ ನಾಗರಿಕರಿಗೆ, ಪ್ರವಾಸಿಗರಿಗೆ ಕಂದಾಯ ಮತ್ತು ವಿಪತ್ತು ನಿರ್ವಹಣಾ ಇಲಾಖೆಯ ಅಧಿಕಾರಿಗಳು ಮನವಿ ಮಾಡಿದ್ದಾರೆ.

ಆನ್‌ಲೈನ್ ದಂಧೆಗೆ ತಟ್ಟಿದೆ ಭರ್ಜರಿ ಬಿಸಿ
ಆಪರೇಶನ್ ಪಿ ಹಂಟ್: ಅಲ್ಲಲ್ಲಿ ಖಾಕಿ ಪಡೆ ದಾಳಿ
ಪೊಲೀಸ್ ಕಾರ್ಯಾಚರಣೆಗೆ ವೇಗ

ಕಾಸರಗೋಡು: ಆನ್‌ಲೈನ್‌ನ ಮೂಲಕ ಮಕ್ಕಳಿಗೆ ಲೈಂಗಿಕ ಶೋಷಣೆಯ ದೃಶ್ಯಗಳನ್ನು ಪ್ರಚಾರಮಾಡುತ್ತಿರುವವರವಿರುದ್ಧಕಠಿಣರೀತಿ ಕಾನೂನು ಕ್ರಮಗಳನ್ನು ಕೈಗೊಳ್ಳುವ ನಿಟ್ಟಿನಲ್ಲಿ 'ಆಪರೇಶನ್ ಪಿ ಹಂಟ್' ಎಂಬ ಹೆಸರಿನಲ್ಲಿ ಕಾರ್ಯಾಚರಣೆ ಆರಂಭಿಸಲಾಗಿದೆ.

ಜಿಲ್ಲೆಯಲ್ಲಿ 15 ಕೇಂದ್ರಗಳಿಗೆ ದಾಳಿ

ಈ ಕೂಂಬಿಂಗ್ ಕಾರ್ಯಾಚರಣೆಯಡಿ ಜಿಲ್ಲೆಯಲ್ಲಿ ಭಾನುವಾರ ಒಟ್ಟು 15 ಕೇಂದ್ರಗಳಿಗೆ ದಾಳಿ ನಡೆಸಿರುವ ಪೊಲೀಸರು ಎಲ್ಲೆಡೆ ತೀವ್ರ ತಪಾಸಣೆ ಕೈಗೊಂಡಿದ್ದಾರೆ. ಕಾಸರಗೋಡು ಠಾಣೆಯಲ್ಲಿ 1, ಕುಂಬಳೆಯಲ್ಲಿ 2 ಸೇರಿದಂತೆ



ಜಿಲ್ಲೆಯ ವಿವಿಧ ಪೊಲೀಸ್ ಠಾಣೆಗಳಲ್ಲಿ ಪ್ರಕರಣ ದಾಖಲಿಸಲಾಗಿದೆ. ಈ ಹಿನ್ನೆಲೆ ಯಲ್ಲಿ ಕಾಸರಗೋಡಿನಿಂದ ಓರ್ವನನ್ನು ವಿಚಾರಣೆಗೆ ಒಳಪಡಿಸಿದ ಪೊಲೀಸರು, ವಿವಿಧ ಇಲೆಕ್ಟ್ರಾನಿಕ್ಸ್ ಉಪಕರಣಗಳನ್ನು ವಶಕ್ಕೆ ತೆಗೆದಿದ್ದಾರೆ.

ಸುತ್ತಮುತ್ತ

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮೋಡ, ಹನಿ ಮಳೆಗೆ ಸೋಮವಾರ ಸೀಮಿತ!

ಮಂಗಳೂರು: ದಕ್ಷಿಣ ಕನ್ನಡ ಜಿಲ್ಲೆಯ ಬಹುತೇಕ ಭಾಗಗಳಲ್ಲಿ ಸೋಮವಾರ ಮಳೆ ಸಂಪೂರ್ಣ ಮರೆಯಾಗಿದ್ದು, ಎಲ್ಲೆಡೆ ಬಿಸಿಲು ಹಾಗೂ ಮೋಡ ಕವಿದ ವಾತಾವರಣ ಕಂಡುಬಂದಿತ್ತು. ಕೆಲವು ಭಾಗಗಳಲ್ಲಿ ಸಂಜೆಯ ಬಳಿಕ ಮಳೆಯಾಗಿದ್ದು, ಎಲ್ಲಿಯೂ ಹಾನಿ ಉಂಟಾಗಿಲ್ಲ. ಈ ನಡುವೆ ಹವಾಮಾನ ಇಲಾಖೆ 'ಭಾರೀ ಮಳೆ' ಮುನ್ಸೂಚನೆ ನೀಡಿದೆಯಾದರೂ ಮಳೆಯ ಆ ಪರಿಯ ತೀವ್ರತೆ ಮಾತ್ರ ಸೋಮವಾರ ಕಂಡುಬಂದಿಲ್ಲ.

ರಸ್ತೆ ಪುನರ್ ನಿರ್ಮಾಣ: ಸಂಚಾರ ಮಾರ್ಗ ಬದಲಿ

ವಿಟ್ಲ: ಕಡೂರು – ಕಾಂಞಂಗಾಡು ರಾಜ್ಯ ಹೆದ್ದಾರಿಯ ಬೊಬ್ಬೆಕೇರಿಯಲ್ಲಿ ರಸ್ತೆ ಪುನರ್ ನಿರ್ಮಾಣ ಕಾಮಗಾರಿ ನಡೆಯುವ ಹಿನ್ನಲೆಯಲ್ಲಿ ಬದಲಿ ಮಾರ್ಗದಲ್ಲಿ ವಾಹನ ಸಂಚಾರ ನಡೆಸುವಂತೆ ಜಿಲ್ಲಾಧಿಕಾರಿಗಳು ಆದೇಶ ಹೊರಡಿಸಿದ್ದಾರೆ.

ವಾಹನಗಳಿಗೆ ಯಾವ ಮಾರ್ಗ?

ಸಾರಡ್ಕ, ವಿಟ್ಲ ಕಡೆಯಿಂದ ಮಂಗಳಪದವು ಕಲ್ಲಡ್ಕ ಕಡೆಗೆ ಸಂಚರಿಸುವ ದ್ವಿಚಕ್ರ, ನಾಲ್ಕು ಚಕ್ರದ ವಾಹನ ಹಾಗೂ ಎಲ್ಲಾ ಬಸ್‌ಗಳು ವಿಟ್ಲ ಪಂಚಲಿಂಗೇಶ್ವರ ದೇವಸ್ಥಾನದ ಮುಂಭಾಗದ ರಸ್ತೆಯಲ್ಲಿ ಸಂಚರಿಸುವುದು. ಕಲ್ಲಡ್ಕದಿಂದ ವಿಟ್ಲಕ್ಕೆ ಆಗಮಿಸುವ ಎಲ್ಲಾ ವಾಹನಗಳು ಈಗಿರುವ ರಸ್ತೆಯಲ್ಲಿ ಏಕಮುಖವಾಗಿ ಸಂಚರಿಸುವುದು. ನಾಲ್ಕು ಮಾರ್ಗದಿಂದ ಬೊಬ್ಬೆಕೇರಿ ನಡುವೆ ಬಾರಿ ಘನವಾಹನಗಳ ಸಂಚಾರವನ್ನು ಸಂಪೂರ್ಣ ನಿಷೇಧಿಸಿದ್ದು, ಎಲ್ಲವೂ ಕಬಕ ರಸ್ತೆ ಮೂಲಕ ಸಂಚರಿಸಲು ಆದೇಶದಲ್ಲಿ ತಿಳಿಸಲಾಗಿದೆ. ಈ ಆದೇಶ ಜೂ. 5ರಿಂದ ಮೂರು ತಿಂಗಳ ಕಾಲ ಅನ್ವಯವಾಗಲಿದೆ.

ಕಬ್ಬೆ ಬೆಟ್ಟ ವೀಕ್ಷಣೆಗೆ ಬಂದಿದ್ದ ಕಾರು ನಿಯಂತ್ರಣ ತಪ್ಪಿ ತೋಟಕ್ಕೆ ನುಗ್ಗಿತು

ನಾಪೋಕ್ಲು: ಇಲ್ಲಿನ ದುಗ್ಗಳ ಸಮೀಪದಲ್ಲಿನ ಚೆಯ್ಯಂಡಾಣೆಯಲ್ಲಿ ಚಾಲಕನ ನಿಯಂತ್ರಣ ತಪ್ಪಿ ಪ್ರವಾಸಿಗರ ಕಾರೊಂದು ರಸ್ತೆ ಬದಿಯ ತೋಟಕ್ಕೆ ನುಗ್ಗಿದ ಘಟನೆ ಸೋಮವಾರ ನಡೆದಿದೆ.

ಕೇರಳ ಮೂಲದ ಪ್ರವಾಸಿಗರು ಚೆಯ್ಯಂಡಾಣೆ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿನ ಚೆಲಾವರ ಜಲಪಾತ ಹಾಗೂ ಕಬ್ಬೆ ಬೆಟ್ಟವನ್ನು ವೀಕ್ಷಿಸಲು ಆಗಮಿಸಿದ್ದರು. ಈ ವೇಳೆ ಘಟನೆ ನಡೆದಿದೆ. ಅಪಘಾತದಲ್ಲಿ ಕಾರಿನ ಮುಂಭಾಗ ನಜ್ಜುಗುಜ್ಜಾಗಿದೆ. ಕಾರಿನಲ್ಲಿದ್ದ ಮಹಿಳೆಗೆ ಸಣ್ಣಪುಟ್ಟ ಗಾಯಗಳಾಗಿದ್ದು ಉಳಿದವರು ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಕಾರನ್ನು ಸ್ಥಳೀಯರ ನೆರವಿನಿಂದ ಹೊರ ತೆಗೆಯಲಾಯಿತು.



- ಚಾಲಕನ ನಿಯಂತ್ರಣ ತಪ್ಪಿ ಅಪಘಾತಕ್ಕೀಡಾದ ಪ್ರವಾಸಿ ಕಾರು
- ಸ್ಥಳೀಯರ ನೆರವಿನಿಂದ ಪ್ರವಾಸಿಗರ ರಕ್ಷಣೆ, ತೋಟದಿಂದ ವಾಹನ ತೆರವು

ಕುಂದಾಪುರ, ಬೈಂದೂರು ತಾಲೂಕಿನಾದ್ಯಂತ ಉತ್ತಮ ವರ್ಷಧಾರೆ

ಕುಂದಾಪುರ: ಕುಂದಾಪುರ ಹಾಗೂ ಬೈಂದೂರು ತಾಲೂಕಿನಾದ್ಯಂತ ಸೋಮವಾರ ಉತ್ತಮ ಮಳೆಯಾಗಿದೆ. ಹಳನಾಡು ಗ್ರಾಮದ ಬಡಾಬೆಟ್ಟು ಎಂಬಲ್ಲಿನ ಸೀತಾ ಅವರ ಮನೆಯ ಮೇಲ್ಛಾವಣಿಗೆ ಮಳೆಯಿಂದ ಹಾನಿಯಾಗಿದ್ದು, ಅಂದಾಜು 30 ಸಾವಿರ ರೂ. ನಷ್ಟ ಸಂಭವಿಸಿದೆ. ಕುಂದಾಪುರ, ಬೈಂದೂರು, ಉಪ್ಪುಂದ, ಕಂಬದಕೋಣೆ, ಮರವಂತೆ, ತ್ರಾಸಿ, ಗಂಗೊಳ್ಳಿ, ಹೆಮ್ಮಾಡಿ, ತಲ್ಲೂರು, ನೇರಳಕಟ್ಟೆ ಮತ್ತಿತರೆಡೆ ದಿನವಿಡೀ ಉತ್ತಮ ಮಳೆಯಾಗಿದೆ.

ಮೊನ್ನೆ ಉರಿ ಬಿಸಿಲು | ನಂತರ ಮತ್ಸ್ಯ ಕ್ಷಾಮ | ಈಗ 'ನಿಷೇಧ'
ಕಡಲಮಕ್ಕಳಿಗೆ ಕಹಿ ಉಣಿಸಿತು 'ಋತು'

ಕಾಸರಗೋಡು: ಮೊನ್ನೆ ಮೊನ್ನೆಯ ತನಕ ಉರಿ ಬಿಸಿಲಿನ ವಾತಾವರಣ, ಈಗ ಮಳೆಗಾಲ ಶುರು. ಈ ಬಾರಿಯ ಮೀನುಗಾರಿಕಾ ವರ್ಷ ಮಾತ್ರ ಕಡಲ ಮಕ್ಕಳಿಗೆ ಸಿಹಿಗಿಂತ ಕಹಿಯೇ ಹೆಚ್ಚು.

ಕಡಲಿಗಿಳಿಯುವಂತಿಲ್ಲ

ಇಂದಿನಿಂದ (ಜೂ.9) ಕಾಸರಗೋಡು ಜಿಲ್ಲೆಯಲ್ಲಿ ಮೀನುಗಾರಿಕೆಗೆ ಪೂರ್ಣ ನಿಷೇಧ ಹೇರಲಾಗಿದೆ. ಇನ್ನೆರಡು ತಿಂಗಳ ಕಾಲ ಮೀನುಗಾರರು ಕಡಲಿಗೆ ಇಳಿಯುವಂತಿಲ್ಲ. ಈ ಮೊದಲು ಮೀನುಗಾರಿಕೆಗೆ ಅವಕಾಶ ಇದ್ದಾಗ ಹವಾಮಾನ ವೈಪರೀತ್ಯ, ಮತ್ಸ್ಯ ಕ್ಷಾಮ ಅವರನ್ನು ಕಂಗೆಡಿಸಿತ್ತು. ಸಾಕಷ್ಟು ಮೀನು ಲಭಿಸಬೇಕಾಗಿದ್ದ ದಿನದಲ್ಲೂ ಬರಿಗೈಯ್ಯಲ್ಲಿ ಮರಳುವಂತಾಗಿತ್ತು.



ಹಿಂದೆಲ್ಲಾ ಮೀನು ಕಾರ್ಮಿಕರಿಗೆ ಆರು ತಿಂಗಳು ನೌಕರಿ, ಆರು ತಿಂಗಳು ವಿಶ್ರಾಂತಿ ಎಂಬಂತಿತ್ತು. ಆದರೆ ಸದ್ಯ ಪ್ರಸಕ್ತ ದಿನಗಳಲ್ಲಿ ಈ ವ್ಯವಸ್ಥೆಗಳೆಲ್ಲಾ ಏರುಪೇರಾಗಿವೆ ಎಂದು ಮೀನು ಕಾರ್ಮಿಕರು ಹೇಳಿದ್ದಾರೆ.

ಲಕ್ಷಾಂತರ ರೂಪಾಯಿ ಸಾಲ ಪಡೆದು ಬಲೆ, ದೋಣಿ, ಯಂತ್ರ ಖರೀದಿಸಿದ ಮೀನು ಕಾರ್ಮಿಕರು ನಿರೀಕ್ಷಿತ ಮಟ್ಟದಲ್ಲಿ ಮೀನುಗಾರಿಕೆ ನಡೆಯದೆ ಆರ್ಥಿಕವಾಗಿ ಅತೀ ಹೆಚ್ಚು ಸಮಸ್ಯೆಗೆ ಒಳಗಾಗಿದ್ದಾರೆ. »» ಪುಟ 6

ಈ ಬಾರಿ ಬಿಸಿಲು ಹೈರಾಣಾಗಿತ್ತು...

ಹಿಂದೆಂದೂ ಕಾಣದ ಬೇಸಿಗೆ ದಿನಗಳು ಈ ಬಾರಿ ಬಂದಿದ್ದವು. ಸಮುದ್ರದಲ್ಲಿ ಉಷ್ಣಾಂಶವೂ ಏರಿಕೆಯಾಗಿತ್ತು. ಉರಿಬಿಸಿಲಿನ ಹಿನ್ನೆಲೆ ಮೀನುಸಂಪತ್ತಿಗೆ ಭಾರೀ ಸಮಸ್ಯೆ ಎದುರಾಗಿದ್ದು, ಇದರೊಂದಿಗೆ ಬೇಸಿಗೆ ಕಾಲ ದಲ್ಲಿ ಮೀನು ಕಾರ್ಮಿಕರೂ ಸಂಕಷ್ಟ ಅನುಭವಿಸಿದ್ದರು.

ಕಡಲ ತೀರಕ್ಕೆ ಕಡಲ ಕೊರೆತದ ಸಮಸ್ಯೆ...

ಕಡಲ ಮಕ್ಕಳಿಗೆ ಮೀನುಗಾರಿಕೆ ನಿಷೇಧ ಚಿಂತೆಯಾದರೆ ಕಡಲ ತೀರದ ಜನತೆಗೆ ಕಡಲ್ಕೊರೆತದ ಚಿಂತೆ. ಪ್ರತೀ ವರ್ಷ ಕಡಲ್ಕೊರೆತದಿಂದ ಅನೇಕ ಮಂದಿ ಜೀವ ಕಳೆದುಕೊಳ್ಳುತ್ತಿದ್ದು, ಇದರೊಂದಿಗೆ ಭೂಮಿ, ಮನೆ, ತೆಂಗಿನಮರ, ಗಾಳಿಮರ ಸಹಿತ ಎಲ್ಲವೂ ಸಮುದ್ರ ಪಾಲಾಗಿ ಅಪಾರ ನಷ್ಟ ಉಂಟಾಗುತ್ತಿದೆ. ಕರಾವಳಿ ತೀರದಲ್ಲಿ ಕಡಲ್ಕೊರೆತ ಶಾಶ್ವತವಾಗಿ ತಡೆಗಟ್ಟಲು ಯಾವುದೇ ಕ್ರಮವಾಗಿಲ್ಲ.

ಕೆಸಿಇಟಿ ಫಲಿತಾಂಶ: ಅಂಬಿಕಾ ಕಾಲೇಜು ತಾಲೂಕಿನಲ್ಲೇ ಟಾಪ್ ರ‍್ಯಾಂಕ್‌ಗಳು 2

ಆರೋಗ್ಯ ಸಚಿವ ಖಾದರ್‌ಗೆ ಅದ್ದೂರಿ ಸಾರ್ವಜನಿಕ ಅಭಿನಂದನೆ 3

ಸುತ್ತಮುತ್ತ

ಗಣೇಶಪುರ ಕೇಸರಿ ಫ್ರೆಂಡ್ಸ್ ಮಹಾಸಭೆ

ಮಂಗಳೂರು: ಕೇಸರಿ ಫ್ರೆಂಡ್ಸ್ ಗಣೇಶಪುರ ಇದರ 16ನೆಯ ವಾರ್ಷಿಕ ಮಹಾ ಸಭೆ ಕೇಸರಿ ಸಮುದಾಯ ಭವನದಲ್ಲಿ ಪುನೀತ್ ಶೆಟ್ಟಿ ಇವರ ಅಧ್ಯಕ್ಷತೆಯಲ್ಲಿ ನಡೆಯಿತು. 2026–27 ರ ಅಧ್ಯಕ್ಷರಾಗಿ ರಾಕೇಶ್ ಅಂಚನ್ ಆಯ್ಕೆಯಾದರು.



ಗೌರವಾಧ್ಯಕ್ಷರಾಗಿ ಗಿರೀಶ್ ನಾಯಕ್, ದುರ್ಗಾದಾಸ್ ಶೆಟ್ಟಿ ಗೌರವ ಸಲಹೆಗಾರರಾಗಿ ರಾಜೇಶ್ ಶೆಟ್ಟಿಗಾರ್, ಉಪಾಧ್ಯಕ್ಷರಾಗಿ ಅಶೋಕ್ ಶೆಟ್ಟಿಗಾರ್, ಗೌತಮ್ ಜಿ. ನಾಯಕ್, ಪ್ರಧಾನ ಕಾರ್ಯದರ್ಶಿಯಾಗಿ ಕೃಷ್ಣ ಕುಮಾರ್, ಕಾರ್ಯದರ್ಶಿ ಶ್ರೀನಿವಾಸ ಪೂಜಾರಿ, ರವಿಕಿರಣ್, ಕೋಶಾಧಿಕಾರಿ ಹರ್ಷಿತ್ ಆರ್, ಸಂಘಟನಾ ಕಾರ್ಯದರ್ಶಿ ಶ್ರವಣ ಶೆಟ್ಟಿ ಅನ್ವಿತ್ ಕುಮಾರ್, ಆಯ್ಕೆಯಾದರು.

ಫರಂಗಿಪೇಟೆ: ಗಣೇಶೋತ್ಸವ ಸಮಿತಿ ಅಧ್ಯಕ್ಷರಾಗಿ ಆಯ್ಕೆ

ಬಂಟ್ವಾಳ: ಫರಂಗಿಪೇಟೆ ಹಿಂದೂ ಧಾರ್ಮಿಕ ಸೇವಾ ಸಮಿತಿ ಇದರ ಆಶ್ರಯದಲ್ಲಿ ನಡೆಯುವ 44ನೇ ವರುಷದ ಸಾರ್ವಜನಿಕ ಶ್ರೀ ಗಣೇಶೋತ್ಸವದ ಸಮಾಲೋಚನಾ ಸಭೆಯು ಭಾನುವಾರ ಸೇವಾಂಜಲಿ ಸಭಾಗೃಹದಲ್ಲಿ ನಡೆಯಿತು. ಶ್ರೀ ಗಣೇಶೋತ್ಸವ ಸಮಿತಿಯ ನೂತನ ಅಧ್ಯಕ್ಷರಾಗಿ ಉಪನ್ಯಾಸಕಿ ಕೆ ಕವಿತಾ ದೇವದಾಸ ಅರ್ಕುಳ ಇವರು ಸರ್ವಾನುಮತದಿಂದ ಆಯ್ಕೆಯಾದರು. ಫರಂಗಿಪೇಟೆ ಸಾರ್ವಜನಿಕ ಶ್ರೀ ಗಣೇಶೋತ್ಸವದ 43 ವರುಷಗಳ ಇತಿಹಾಸದಲ್ಲಿ ಮೊದಲ ಬಾರಿಗೆ ಮಹಿಳೆಯೋರ್ವರು ಅಧ್ಯಕ್ಷೆಯಾಗಿ ಆಯ್ಕೆಯಾಗಿದ್ದಾರೆ. ಕೆ ಕವಿತಾ ದೇವದಾಸ



ಅರ್ಕುಳ ಇವರು ತುಂಬೆ ಪಿಯು ಕಾಲೇಜಿನಲ್ಲಿ ಲೆಕ್ಕಶಾಸ್ತ್ರ ಹಾಗೂ ವ್ಯವಹಾರ ಅಧ್ಯಯನ ವಿಷಯದಲ್ಲಿ ಉಪನ್ಯಾಸಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ದ.ಕ. ಜಿಲ್ಲಾ ಪಿಯು ವಾಣಿಜ್ಯ ಉಪನ್ಯಾಸಕರ ಸಂಘದ ಕೋಶಾಧಿಕಾರಿಯಾಗಿ, ಫರಂಗಿಪೇಟೆ ಅಂಜನಾದೇವಿ ಮಾತೃ ಮಂಡಲಿಯ ಸ್ಥಾಪಕ ಅಧ್ಯಕ್ಷರಾಗಿ, ಸೇವಾಂಜಲಿ ಪ್ರತಿಷ್ಠಾನದ ಸಕ್ರಿಯ ಸದಸ್ಯರಾಗಿ, ಕಾರ್ಯಕ್ರಮ ನಿರೂಪಕರಾಗಿ ಸಾಮಾಜಿಕ, ಧಾರ್ಮಿಕ ಕ್ಷೇತ್ರಗಳಲ್ಲಿ ತನ್ನನ್ನು ತೊಡಗಿಸಿಕೊಂಡಿದ್ದಾರೆ. ಕಾರ್ಯದರ್ಶಿಯಾಗಿ ಶೇಖರ ಪೂಜಾರಿ ಕಲ್ಲತಡಮೆ, ಕೋಶಾಧಿಕಾರಿಯಾಗಿ ರಾಜೇಶ್ ಬಿ. ಅಂಚನ್ ಸುಜೀರು, ಉಪಾಧ್ಯಕ್ಷರಾಗಿ ಪ್ರಭಾಕರ ಆಚಾರ್ಯ ರಾಮಲ್ ಕಟ್ಟೆ, ಉಮಾ ಚಂದ್ರಶೇಖರ ಕಡೆಗೋಳಿ, ಶಿವರಾಜ್ ಸುಜೀರು, ನವೀನ್ ಕುಮಾರ್ ಕೊಡ್ಮಾಣ್, ಜೀವನ್ ಪೂಜಾರಿ ಬಡ್ಡೂರು, ದಿವಾಕರ ಶೆಟ್ಟಿ ತೇವು, ಜತೆ ಕಾರ್ಯದರ್ಶಿಗಳಾಗಿ ಪ್ರಸಾದ್ ಕೇಶವಮೊಗರು, ಹರಿಕೃಷ್ಣ ಕೆ.ಕುಮ್ಡೇಲು, ವಿಕೇಶ್ ಪೂಜಾರಿ ಕುಟ್ಟಿಕಲ, ಆನಂದ ಶೆಟ್ಟಿ ಕುಂಪನಮಜಲು, ಪ್ರೀತಮ್ ರೊಟ್ಟಿಗುಡ್ಡೆ, ಸುಲೋಚನಾ ಶೆಟ್ಟಿ ಬೆಂಜನಪದವು, ಪುರುಷೋತ್ತಮ ದತ್ತನಗರ, ದಿನೇಶ್ ಪೂಜಾರಿ ಕೊಡಂಗೆ, ಪ್ರಕಾಶ್ ಬಾಬು ದೆಕ್ಕೆದು, ಚೇತನ್ ತುಂಬೆ, ಅನುಷ್ ಕರ್ಕೇರ, ಕೆ. ಅಶೋಕ ಕುಮ್ಡೇಲು ಆಯ್ಕೆಯಾಗಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಎನ್ಎಂಎಂಎಸ್ ಪರೀಕ್ಷೆ: ದ್ವಿತಿ ಉತ್ತೀರ್ಣ


ಸುಬ್ರಹ್ಮಣ್ಯ: ಬಿಳಿನೆಲೆ ಶ್ರೀ ಗೋಪಾಲಕೃಷ್ಣ ಪ್ರೌಢ ಶಾಲೆಯ 9ನೇ ತರಗತಿ ವಿದ್ಯಾರ್ಥಿನಿ ದ್ವಿತಿ ಎನ್



ಎಂಎಂಎಸ್ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ರಾಷ್ಟ್ರೀಯ ವಿದ್ಯಾರ್ಥಿ ವೇತನಕ್ಕೆ ಆಯ್ಕೆಯಾಗಿದ್ದಾರೆ. ಅವರು ಮುಜೂರು ಸುಂದರ ಗೌಡ ಹಾಗೂ ಯಶೋದಾ ದಂಪತಿ ಪುತ್ರಿ. ಅವರಿಗೆ ಶಾಲಾ ಶಿಕ್ಷಕರಾದ ಪ್ರವೀಣ್ ಕುಮಾರ್, ರಮ್ಯ ಮಾರ್ಗದರ್ಶನ ನೀಡಿದ್ದರು.

ಯಕ್ಷ ದೇಗುಲ ಸಂಸ್ಥೆಯ ಅಧ್ಯಕ್ಷರಾಗಿ ಪ್ರೇಮಲತಾ ಯೋಗೀಶ್ ಆಯ್ಕೆ

ಮುಲ್ಕಿ: ಯಕ್ಷ ದೇಗುಲ ಹತ್ತು ಸಮಸ್ತರು 10ನೇ ತೋಕೂರು ಸಂಸ್ಥೆಯ 7ನೇ ವರ್ಷದ ಮಹಾಸಭೆ ಯಕ್ಷ ದೇಗುಲದ ಅಧ್ಯಕ್ಷ ದಿನಕರ್ ಸಾಲ್ಯಾನ್ ರವರ ಅಧ್ಯಕ್ಷತೆಯಲ್ಲಿ ತೋಕೂರು ಶ್ರೀ ಓಂಕಾರೇಶ್ವರೀ ಮಂದಿರದಲ್ಲಿ ನಡೆಯಿತು. ನೂತನ ಅಧ್ಯಕ್ಷರಾಗಿ ಪ್ರೇಮಲತಾ ಯೋಗೀಶ್ ಅವರನ್ನು ಆಯ್ಕೆ ಮಾಡಲಾಯಿತು. ಗೌರವಾಧ್ಯಕ್ಷರಾಗಿ ಜಯಕೃಷ್ಣ ಕೋಟ್ಯಾನ್ ಆಯ್ಕೆಯಾದರು. ಉಪಾಧ್ಯಕ್ಷರಾಗಿ




ಪದ್ಮರಾಜ್ ಕರ್ಕೇರ ಪ್ರಧಾನ ಕಾರ್ಯದರ್ಶಿಯಾಗಿ ಭಾಸ್ಕರ್ ಅಮೀನ್ ತೋಕೂರು ಮತ್ತು ಕೋಶಾಧಿಕಾರಿಯಾಗಿ ನವೀನ್ ಚಂದ್ರ ಆಯ್ಕೆಯಾದರು. ಜೊತೆ ಕಾರ್ಯದರ್ಶಿಗಳಾಗಿ ಕುಸುಮ ಎಚ್. ಕೋಟ್ಯಾನ್, ಆಂತರಿಕ ಲೆಕ್ಕಪರಿಶೋಧಕರಾಗಿ ಹಿಮಕರ್ ಸುವರ್ಣ ಕಲ್ಲಾಡ, ಗೌರವ ಸಲಹೆಗಾರರಾಗಿ ಗುರುರಾಜ ಎಸ್. ಪೂಜಾರಿ, ದಿವಾಕರ್ ಕರ್ಕೇರ, ಸಂಜೀವ ಕರ್ಕೇರ, ಗಣೇಶ್ ಜಿ ಬಂಗೇರ, ಸುರೇಶ್ ಬಿ ದೇವಾಡಿಗ, ಸದಾಶಿವ ಸಾಲ್ಯಾನ್, ಮೋಹನ್ ಪೂಜಾರಿ, ದಿನಕರ್ ಸಾಲ್ಯಾನ್ ರವರನ್ನು ಆಯ್ಕೆ ಮಾಡಲಾಯಿತು. ಸಂಘಟನಾ ಸಮಿತಿಯ ಸದಸ್ಯರಾಗಿ ಮೋಹನ್ ದಾಸ್ ಶೆಟ್ಟಿಗಾರ್, ವಸಂತಾ ಕೆ. ಸನಿಲ್, ಶ್ರೀಮತಿ, ಭೋಜ ಕೋಟ್ಯಾನ್, ಮಹಮ್ಮದ್ ಶರೀಫ್, ಅಮ್ಮದ್, ಮೋಹನ್ ದಾಸ್ ದೇವಾಡಿಗ, ಸಂಪತ್ ಜೆ ಶೆಟ್ಟಿ ಸುನೀಲ್, ಶ್ರೀನಿವಾಸ ಸಮಿತಿಯ ಸದಸ್ಯರಾಗಿ ಸದಾಶಿವ ಕುಂದರ್, ರಾಜೇಶ್ ಪೂಜಾರಿ,, ಹಿಮಕರ್, ವಿಶ್ವಜಿತ್ ಆಚಾರ್ಯ, ರೋಹಿತಾಕ್ಷ, ಬಶೀರ್ ಅಹ್ಮದ್ ಕಲ್ಲಾಪು, ಶ್ರೀನಿವಾಸ, ವಿಶಾಲ್ ಮತ್ತು ಮನೋಜ್ ರವರನ್ನು ಆಯ್ಕೆ ಮಾಡಲಾಯಿತು.

ಕೆಸಿಇಟಿ ಫಲಿತಾಂಶ 2026: ಅಂಬಿಕಾ ವಿದ್ಯಾರ್ಥಿಗಳಿಂದ ದಾಖಲೆ | ಚಿತ್ರಾ ಕೆ.ಪಿ.ಗೆ 63ನೇ ರ್ಯಾಂಕ್

ಅಂಬಿಕಾ ಮಡಿಲಿಗೆ ತಾಲೂಕಿನಲ್ಲೇ ಅತ್ಯಧಿಕ ಟಾಪ್ ರ್ಯಾಂಕ್‌ಗಳು

ಪುತ್ತೂರು: ನಗರದ ನಟ್ಟೋಜ ಫೌಂಡೇಶನ್ ಟ್ರಸ್ಟ್ ಪ್ರವರ್ತಿತ ಬಪ್ಪಳಿಗೆ ಹಾಗೂ ನೆಲ್ಲಿಕಟ್ಟೆ ಅಂಬಿಕಾ ಪದವಿ ಪೂರ್ವ ವಿದ್ಯಾಲಯದ ವಿದ್ಯಾರ್ಥಿಗಳು 2026ನೇ ಶೈಕ್ಷಣಿಕ ವರ್ಷದ ಕೆಸಿಇಟಿ ಫಲಿತಾಂಶದಲ್ಲಿ ಉತ್ತಮ ಸಾಧನೆ ಮಾಡಿದ್ದಾರೆ. ಪುತ್ತೂರು ಸಾಮೆತ್ತಡ್ಕದ ಪ್ರಶಾಂತ್ ಕೆ.ಜಿ., ಪೂರ್ಣ ಚಂದ್ರಿಕಾ ದಂಪತಿ ಪುತ್ರಿ ಚಿತ್ರಾ ಕೆ.ಪಿ. ಬಿಟಿಟಿ, ಡಿ.ಫಾರ್ಮ ಮತ್ತು ಬಿಎಸ್ಸಿ ಎಚ್‌ಎಸ್‌ನಲ್ಲಿ 63ನೇ ರ್ಯಾಂಕ್ ಹಾಗೂ ಬಿಪಿಒಯಲ್ಲಿ 111ನೇ ರ್ಯಾಂಕ್ ಗಳಿಸಿದರೆ, ರಾಜ್ಯದಲ್ಲಿ ಮೊದಲ 100 ರ್ಯಾಂಕ್ ಒಳಗೆ 7 ರ್ಯಾಂಕ್‌ಗಳನ್ನು, 500ರ ಒಳಗೆ 25 ರ್ಯಾಂಕ್‌ಗಳನ್ನು ಹಾಗೂ 1000ದ ಒಳಗಿನ 42 ರ್ಯಾಂಕ್‌ಗಳನ್ನು ಪಡೆಯುವ ಮೂಲಕ ತಾಲೂಕಿನಲ್ಲೇ ಮೊದಲ 100, 500 ಹಾಗೂ ಸಾವಿರ ರ್ಯಾಂಕ್ ಒಳಗೆ ಅತ್ಯಧಿಕ ರ್ಯಾಂಕ್‌ಗಳನ್ನು ಪಡೆದ ಸಂಸ್ಥೆಯಾಗಿ ಅಂಬಿಕಾ ಹೊರಹೊಮ್ಮಿದೆ. ಪ್ರತಿ ವರ್ಷವೂ ಅಂಬಿಕಾ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ತಾಲೂಕಿನಲ್ಲೇ ಮೊದಲ ಸ್ಥಾನಿಯಾಗಿ ಹೊರಹೊಮ್ಮುತ್ತಿರುವ ಪರಂಪರೆ ಈ ವರ್ಷವೂ ಮುಂದುವರಿದಿದೆ.



ಪುತ್ತೂರು ನೈತಾಡಿ ಪ್ರಜ್ವಲ್ ಎಚ್. (ಇಂಜಿನಿಯರಿಂಗ್– 370 ರ್ಯಾಂಕ್), ಬೆಂಗಳೂರು ಜಿಲ್ಲೆಯ ಅನೇಕಲ್‌ನ ಅಖಿಲೇಶ್ ಅನಂತ ಶರ್ಮ (ಇಂಜಿನಿಯರಿಂಗ್–448, ಬಿಪಿಒ–305, ಬಿಎನ್‌ವೈಎಸ್–691), ಪುತ್ತೂರು ಆರ್ಯಾಪಿನ ಶ್ರೇಯಸ್ ಎಂ. (ಇಂಜಿನಿಯರಿಂಗ್–554, ಬಿಪಿಒ–935), ಗದಗ ಜಿಲ್ಲೆಯ ಬೂದಿಹಾಳದ ಪ್ರತೀಕ ಶಿವರುದ್ರಯ್ಯ ಹಿರೇಮಠ (ಇಂಜಿನಿಯರಿಂಗ್–946, ಬಿಟಿಟಿ, ಬಿಎಸ್ಸಿ ಎಚ್‌ಎಸ್, ಡಿ.ಫಾರ್ಮ–477, ಫುಡ್ ಸೈನ್ಸ್, ಅಗ್ರಿಕಲ್ಚರ್ ಬಿಎಸ್ಸಿ–276), ಬೆಳ್ಳಾರೆ ಇಂದಿರಾನಗರದ ಶಾರ್ವರಿ ಆರ್.ಎಸ್. (ಫುಡ್ ಸೈನ್ಸ್– 227, ಬಿಟಿಟಿ, ಬಿಎಸ್ಸಿ ಎಚ್‌ಎಸ್, ಡಿ.ಫಾರ್ಮ–363, ಬಿಎನ್‌ವೈಎಸ್– 619, ಬಿಪಿಒ–1024, ಇಂಜಿನಿಯರಿಂಗ್ –1164), ಪುತ್ತೂರು ಚಿಕ್ಕಮುಡ್ನೂರಿನ ಶ್ರೀನಿಧಿ (ಬಿಟಿಟಿ, ಡಿ.ಫಾರ್ಮ– 507, ಬಿಪಿಒ–748), ಪುತ್ತೂರು ಹಾರಾಡಿಯ ತ್ರಿಶೂಲ್ ಎನ್.ಡಿ. (ಡಿ.ಫಾರ್ಮ, ಬಿಟಿಟಿ, ಬಿಎಸ್ಸಿ ಎಚ್‌ಎಸ್ –548, ಅಗ್ರಿಕಲ್ಚರ್ ಬಿಎಸ್ಸಿ ಫುಡ್ ಸೈನ್ಸ್–943), ಬೆಂಗಳೂರಿನ ಶ್ರೀಲಕ್ಷ್ಮಿ ಸುರೇಶ್ (ಡಿ.ಫಾರ್ಮ, ಬಿಟಿಟಿ, ಬಿಎಸ್ಸಿ ಎಚ್‌ಎಸ್–442), ಪುತ್ತೂರು ದರ್ಬೆಯ ಸಿಂಚನಾ ಹರೀಶ್ ಪನಂಬು (ಬಿಟಿಟಿ, ಡಿ.ಫಾರ್ಮ, ಬಿಎಸ್ಸಿ ಎಚ್‌ಎಸ್–469), ಪುತ್ತೂರು ತೆಂಕಿಲ ಸಾಕ್ಷಿ ಕೃಷ್ಣ (ಬಿಪಿಒ–611), ಪುತ್ತೂರು ಭಕ್ತಕೋಡಿ ಪಿಲಿಗುಂಡಿಯ ಪಿ.ಕೆ. ರಕ್ಷಿತ್ (ಡಿ.ಫಾರ್ಮ, ಬಿಎಸ್ಸಿ ಎಚ್‌ಎಸ್, ಬಿಟಿಟಿ–624, ಅಗ್ರಿಕಲ್ಚರಲ್ ಪ್ರಾಕ್ಟಿಕಲ್, ಫುಡ್ ಸೈನ್ಸ್ ಪ್ರಾಕ್ಟಿಕಲ್ –28, ವೆಟರ್ನರಿ ಸೈನ್ಸ್ ಪ್ರಾಕ್ಟಿಕಲ್, ಸೆರಿಕಲ್ಚರ್ ಪ್ರಾಕ್ಟಿಕಲ್–50), ಪುತ್ತೂರು ಮೊಟ್ಟೆತ್ತಡ್ಕದ ಚಂದನಾ ಇ. (ಡಿ.ಫಾರ್ಮ, ಬಿಎಸ್ಸಿ ಎಚ್‌ಎಸ್, ಬಿಟಿಟಿ–865), ಕಾಸರಗೋಡು ಜಿಲ್ಲೆಯ ನೆಟ್ಟಣಿಗೆಯ ಶ್ರೀಶ ಎಂ. (ಬಿಪಿಒ–964, ಇಂಜಿನಿಯರಿಂಗ್–1821 ರ್ಯಾಂಕ್), ಪುತ್ತೂರು ಹಾರಾಡಿಯ ಅಭಿನವ್ ವಸಿಷ್ಠ (ಇಂಜಿನಿಯರಿಂಗ್–1620), ಬಂಟ್ವಾಳ ಮಾಣಿಯ ರಚಿತ್ ವಿ. ಪೂಜಾರಿ (ಇಂಜಿನಿಯರಿಂಗ್ –2326), ಬಂಟ್ವಾಳ ಮಾಣಿಯ ವೃದ್ಧಿ ಎ. ಕೊಂಡೆ (ಬಿಟಿಟಿ–1443), ಪುತ್ತೂರು ದರ್ಬೆಯ ಶ್ರೇಯಸ್ ಜೆ. ಶೆಟ್ಟಿ (ಇಂಜಿನಿಯರಿಂಗ್–2054), ಮೈಸೂರು ಎಚ್.ಡಿ. ಕೋಟೆಯ ಎಂ. ಶ್ರೀಶೈಲ್ (ಫುಡ್ ಸೈನ್ಸ್ ಅಗ್ರಿಕಲ್ಚರ್ ಬಿಎಸ್ಸಿ–1758, ನ್ಯಾಚುರೋಪತಿ ಮತ್ತು ಯೋಗ–2149), ಪುತ್ತೂರು ಮಾಡಾವಿನ ಸಂಹಿತಾ ಎನ್. (ಫುಡ್ ಸೈನ್ಸ್–1515, ಅಗ್ರಿಕಲ್ಚರ್ ಬಿಎಸ್ಸಿ–1864), ಸುಳ್ಯ ಕೆಳಗಿನ ನಾವೂರಿನ ಆಯುಷ್ ರಾವ್ ಕೆ. (ಬಿಪಿಒ–1206), ಪುತ್ತೂರು ಸಾಮೆತ್ತಡ್ಕದ ಚೈತ್ರಾ ಕೆ.ಪಿ. (ನರ್ಸಿಂಗ್–2121, ಫುಡ್ ಸೈನ್, ಅಗ್ರಿಕಲ್ಚರ್ ಬಿಎಸ್ಸಿ– 2353), ಕಡಬ ಆಲಂಕಾರಿನ ಗಗನ್ ಕೆ.ಆರ್. (ಬಿಪಿಒ–1364), ಪುತ್ತೂರು ಬೆಟ್ಟಂಪಾಡಿ ವಿನ್ಯಾಸ್ ಶರ್ಮ ಕೆ. (ವೆಟರ್ನರಿ ಸೈನ್ಸ್ ಪ್ರಾಕ್ಟಿಕಲ್–2186), ಕುಂಬ್ರದ ಸನ್ನಿಧಿ ಎನ್. (ಬಿಪಿಒ–2030), ಶಿರಸಿಯ ಪ್ರಮೋದ್ ಗಣಪತಿ ಭಟ್ (ಅಗ್ರಿಕಲ್ಚರಲ್ ಪ್ರಾಕ್ಟಿಕಲ್ –238, ವೆಟರ್ನರಿ ಸೈನ್ಸ್ ಪ್ರಾಕ್ಟಿಕಲ್–492, ಫುಡ್ ಸೈನ್ಸ್ ಪ್ರಾಕ್ಟಿಕಲ್/ ಸೆರಿಕಲ್ಚರ್ ಪ್ರಾಕ್ಟಿಕಲ್–238), ಸುಳ್ಯ ತಾಲೂಕಿನ ಅನನ್ಯ ಎ.ಎಸ್. (ಬಿಟಿಟಿ –2293, ಬಿಎಸ್ಸಿ ಎಚ್‌ಎಸ್–2293, ಡಿ.ಫಾರ್ಮ– 2293), ಸುಳ್ಯದ ಮೋಹಿತ್ ಕೆ.ಎನ್. (ಅಗ್ರಿಕಲ್ಚರಲ್ ಪ್ರಾಕ್ಟಿಕಲ್ –2411, ಫುಡ್ ಸೈನ್ಸ್ ಪ್ರಾಕ್ಟಿಕಲ್–2411 /ಸೆರಿಕಲ್ಚರ್ ಪ್ರಾಕ್ಟಿಕಲ್–2411 ರ್ಯಾಂಕ್, ವೆಟರ್ನರಿ ಸೈನ್ಸ್ ಪ್ರಾಕ್ಟಿಕಲ್–1410) ಸಂಸ್ಥೆಗೆ ಕೀರ್ತಿ ತಂದಿದ್ದಾರೆ.

ಬೆಳ್ತಂಗಡಿಯ ನಾಗರಿಕರ, ವಕೀಲರ ಬಹುದಿನದ ಬೇಡಿಕೆ ಈಡೇರಿಕೆಯತ್ತ

ಜೂ.14ಕ್ಕೆ ನ್ಯಾಯಾಲಯ ಸಂಕೀರ್ಣಕ್ಕೆ ಶಿಲಾನ್ಯಾಸ

ಬೆಳ್ತಂಗಡಿ: ತಾಲೂಕಿನ ಜನತೆ ಮತ್ತು ವಕೀಲರ ಸಂಘದ ಬಹುದಿನಗಳ ಬೇಡಿಕೆಯಾಗಿದ್ದ ನೂತನ ನ್ಯಾಯಾಲಯ ಸಂಕೀರ್ಣದ ಶಂಕುಸ್ಥಾಪನೆ ಜೂ. 14ರಂದು ಬೆಳಿಗ್ಗೆ 11 ಗಂಟೆಗೆ ಸರಿಯಾಗಿ ನ್ಯಾಯಾಲಯದ ಆವರಣದಲ್ಲಿ ನಡೆಯಲಿದೆ ಎಂದು ವಕೀಲರ ಸಂಘದ ಅಧ್ಯಕ್ಷ ಅಲೋಸಿಯಸ್ ಲೋಬೋ ಹೇಳಿದರು.



ಅವರು ಸೋಮವಾರ ಬೆಳ್ತಂಗಡಿ ವಕೀಲರ ಭವನದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, 'ಶಂಕುಸ್ಥಾಪನೆಯನ್ನು ಹೈಕೋರ್ಟ್ ನ್ಯಾಯಾಧೀಶ ಮಹಮ್ಮದ್ ನವಾಜ್ ಉಪಸ್ಥಿತಿಯಲ್ಲಿ ಹೈಕೋರ್ಟ್ ನ್ಯಾಯಮೂರ್ತಿ, ದ.ಕ. ಜಿಲ್ಲಾ ಆಡಳಿತಾತ್ಮಕ ನ್ಯಾಯಾಧೀಶ ಎಚ್.ಟಿ. ನರೇಂದ್ರಪ್ರಸಾದ್ ನೆರವೇರಿಸಲಿದ್ದಾರೆ. ಅಧ್ಯಕ್ಷತೆಯನ್ನು ಲೋಕೋಪಯೋಗಿ ಸಚಿವ ಸತೀಶ್ ಜಾರಕಿ ಹೊಳಿ ವಹಿಸಲಿದ್ದು ಆರೋಗ್ಯ ಸಚಿವ ಯು.ಟಿ ಖಾದರ್, ಕರ್ನಾಟಕ ಅಡ್ವಕೇಟ್ ಜನರಲ್ ಶಶಿಕಿರಣ್ ಶೆಟ್ಟಿ, ಹೈಕೋರ್ಟ್ ನ್ಯಾಯಮೂರ್ತಿಗಳಾದ ವಿಶ್ವಜಿತ್ ಶೆಟ್ಟಿ ರಾಜೇಶ್ ರೈ, ಕೆ, ತ್ಯಾಗರಾಜ್ ಎನ್. ಇನವಳ್ಳಿ, ಮುರಳೀಧರ ಪೈ, ಸಂಸದ ಬ್ರಿಜೇಶ್ ಚೌಟ, ಶಾಸಕ ಹರೀಶ್ ಪೂಂಜ, ವಿಧಾನ ಪರಿಷತ್ ಶಾಸಕರಾದ ಐವನ್ ಡಿಸೋಜ ಮತ್ತು ಪ್ರತಾಪಸಿಂಹ ನಾಯಕ್ ಹಾಗೂ ಕರ್ನಾಟಕ ಬಾರ್ ಕೌನ್ಸಿಲ್‌ನ ಸದಸ್ಯ ಪಿ.ಪಿ ಹೆಗ್ಡೆ ಮುಖ್ಯ ಅತಿಥಿಗಳಾಗಿರುವರು. ಕಾರ್ಯಕ್ರಮದ ಯಶಸ್ವಿಗಾಗಿ ದ.ಕ. ಜಿಲ್ಲಾ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶ ಬಸವರಾಜು, ವಕೀಲರ ಸಂಘದ ಅಧ್ಯಕ್ಷ ಅಲೋಸಿಯಸ್ ಎಸ್. ಲೋಬೊ, ಕಾರ್ಯದರ್ಶಿ ಪ್ರಶಾಂತ್ ಎಂ., ದಕ್ಷಿಣ ಕನ್ನಡ ಜಿಲ್ಲಾ ಲೋಕೋಪಯೋಗಿ ಇಲಾಖೆ ಅಧೀಕ್ಷಕ ಎಂಜಿನಿಯರ್ ಗೋಕುಲ್‌ದಾಸ್, ಪಿಡಬ್ಲ್ಯುಡಿಯ ಮಂಗಳೂರು ಕಾರ್ಯನಿರ್ವಾಹಕ ಎಂಜಿನಿಯರ್ ರಾಘವೇಂದ್ರ ನಾಯ್ಕ ಹಾಗೂ ಸಂಘದ ಪದಾಧಿಕಾರಿ, ಸದಸ್ಯರು ಶ್ರಮಿಸುತ್ತಿದ್ದಾರೆ. ನೂತನ ನ್ಯಾಯಾಲಯ ನಿರ್ಮಾಣಕ್ಕಾಗಿ ರಾಜ್ಯ ಸರ್ಕಾರಕ್ಕೆ ರೂ. 23 ಕೋಟಿ ಬೇಡಿಕೆಯನ್ನು ಈಗಾಗಲೇ ಸಲ್ಲಿಸಿದ್ದು ಮೊದಲ ಹಂತದಲ್ಲಿ 9 ಕೋಟಿ ಬಿಡುಗಡೆಯಾಗಿದೆ ಎಂದರು.

ಪತ್ರಿಕಾಗೋಷ್ಠಿಯಲ್ಲಿ ಸಂಘದ ಉಪಾಧ್ಯಕ್ಷ ಶ್ರೀನಿವಾಸ ಗೌಡ, ಪ್ರಧಾನ ಕಾರ್ಯದರ್ಶಿ ಪ್ರಶಾಂತ್, ಹಿರಿಯರ ಸಮಿತಿ ಅಧ್ಯಕ್ಷ ಶಿವಕುಮಾರ್, ಮಾಜಿ ಅಧ್ಯಕ್ಷ ವಸಂತ ಮರಕಡ, ಮಾಜಿ ಕಾರ್ಯದರ್ಶಿ ನವೀನ್ ಬಿ.ಕೆ., ಮಾಧ್ಯಮ ಸಂಚಾಲಕ ಮನೋಹರ್ ಕುಮಾರ್ ಇದ್ದರು.

ಶಾರದಾ ವಿದ್ಯಾನಿಕೇತನದಲ್ಲಿ ಓರಿಯೆಂಟೇಶನ್ | ಡಾ.ಪುರಾಣಿಕ್ ಸಲಹೆ

ವಿದ್ಯಾರ್ಥಿಗಳು ಅವಕಾಶ ಸದ್ಬಳಕೆ ಮಾಡಿಕೊಳ್ಳಬೇಕು

ಮಂಗಳೂರು: ತಲಪಾಡಿ ಶಾರದಾ ವಿದ್ಯಾನಿಕೇತನ ಪದವಿಪೂರ್ವ ಕಾಲೇಜಿನಲ್ಲಿ 2026–27ನೇ ಶೈಕ್ಷಣಿಕ ವರ್ಷದ ಪ್ರಥಮ ಪಿಯುಸಿ ವಿದ್ಯಾರ್ಥಿಗಳು ಹಾಗೂ ಅವರ ಪೋಷಕರಿಗಾಗಿ ಓರಿಯೆಂಟೇಶನ್ ಕಾರ್ಯಕ್ರಮವನ್ನು ಶಾರದಾ ವಿದ್ಯಾನಿಕೇತನ ಕ್ಯಾಂಪಸ್‌ನ ಭೂವರಾಹ ಸಭಾಂಗಣದಲ್ಲಿ ಯಶಸ್ವಿಯಾಗಿ ಆಯೋಜಿಸಲಾಯಿತು.



ಶಾರದಾ ಸಮೂಹ ಶಿಕ್ಷಣ ಸಂಸ್ಥೆಗಳ ಅಧ್ಯಕ್ಷ ಡಾ. ಎಂ.ಬಿ. ಪುರಾಣಿಕ್, ತಮ್ಮ ಶಾಲಾ ಜೀವನದ ಅನುಭವಗಳನ್ನು ಹಂಚಿಕೊಂಡು, ವಿದ್ಯಾರ್ಥಿಗಳು ಸಂಸ್ಥೆಯು ಒದಗಿಸುವ ಅವಕಾಶಗಳನ್ನು ಸದುಪಯೋಗ ಪಡಿಸಿಕೊಳ್ಳಬೇಕು ಎಂದರು.

ಶಾರದಾ ಸಮೂಹ ಶಿಕ್ಷಣ ಸಂಸ್ಥೆಗಳ ನಿರ್ದೇಶಕ ಸಮೀರ್ ಪುರಾಣಿಕ್, ವಿದ್ಯಾರ್ಥಿಗಳು ತಮ್ಮ ಗುರಿ ಸಾಧನೆಯತ್ತ ದೃಢ ಸಂಕಲ್ಪ ಮತ್ತು ಆತ್ಮವಿಶ್ವಾಸದಿಂದ ಮುನ್ನಡೆಯಬೇಕು ಎಂದು ತಿಳಿಸಿದರು. ತಾವು ಐದನೇ ತರಗತಿಯಿಂದಲೇ ವಸತಿ ನಿಲಯದಲ್ಲಿ ವಿದ್ಯಾಭ್ಯಾಸ ಮಾಡಿದ ಅನುಭವ ಹಂಚಿಕೊಂಡು, ಶಿಸ್ತು, ಸ್ವಾವಲಂಬನೆ ಮತ್ತು ಪರಿಶ್ರಮದ ಮಹತ್ವವನ್ನು ವಿವರಿಸಿದರು.

ಕಾಲೇಜಿನ ಪ್ರಾಂಶುಪಾಲ ವಿನಾಯಕ ಬಿ.ಜಿ. ಶೈಕ್ಷಣಿಕ ವರ್ಷದ ಕಾರ್ಯವಿಧಾನ, ಕಾಲೇಜಿನ ಶೈಕ್ಷಣಿಕ ವ್ಯವಸ್ಥೆ, ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿ, ಶೈಕ್ಷಣಿಕ ಮೇಲ್ವಿಚಾರಣಾ ವ್ಯವಸ್ಥೆ ಹಾಗೂ ವಿದ್ಯಾರ್ಥಿ ಬೆಂಬಲ ಕಾರ್ಯಕ್ರಮಗಳ ಕುರಿತು ವಿವರಿಸಿದರು. ಕಾರ್ಯಕ್ರಮದಲ್ಲಿ ಶಾರದಾ ವಿದ್ಯಾನಿಕೇತನ ಶಾಲೆಯ ಪ್ರಾಂಶುಪಾಲೆ ಸುಷ್ಮಾ ದಿನಕರ್, ಶಾರದಾ ವಿದ್ಯಾನಿಕೇತನ ಡೇ ಸ್ಕೂಲ್‌ನ ಪ್ರಾಂಶುಪಾಲ ಮೋಹನದಾಸ್, ಪ್ರವೇಶ ವಿಭಾಗದ ವ್ಯವಸ್ಥಾಪಕ ವಿವೇಕ್ ತಂತ್ರಿ, ಆಡಳಿತ ವ್ಯವಸ್ಥಾಪಕ ಪ್ರಫುಲ್, ಹಾಗೂ ಉಪ ಪ್ರಾಂಶುಪಾಲ ಸುರೇಶ್ ಭಟ್ ಉಪಸ್ಥಿತರಿದ್ದರು. ಜೀವಶಾಸ್ತ್ರ ವಿಭಾಗದ ಶ್ರೀಮತಿ ಸಹನಾ ಅವರ ಪ್ರಾರ್ಥನೆಯೊಂದಿಗೆ ಕಾರ್ಯಕ್ರಮ ಆರಂಭವಾಯಿತು. ಇಂಗ್ಲಿಷ್ ವಿಭಾಗದ ಅಶೋಕ್ ನಿರೂಪಿಸಿದರು. ರಸಾಯನಶಾಸ್ತ್ರ ವಿಭಾಗದ ಶರ್ಮಿಳಾ ವಂದಿಸಿದರು. ಈ ಓರಿಯೆಂಟೇಶನ್ ಕಾರ್ಯಕ್ರಮವು ವಿದ್ಯಾರ್ಥಿಗಳು ಹಾಗೂ ಪೋಷಕರಿಗೆ ಸಂಸ್ಥೆಯ ಶೈಕ್ಷಣಿಕ ವ್ಯವಸ್ಥೆ, ನಿರೀಕ್ಷೆಗಳು ಮತ್ತು ಅವಕಾಶಗಳ ಕುರಿತು ಸಮಗ್ರ ಮಾಹಿತಿ ನೀಡಲಾಯಿತು.

ಅಗ್ಗಿದಕಳಿಯದಲ್ಲಿ ವಿದ್ಯಾರ್ಥಿ ವೇತನ ವಿತರಣೆ, ಚಿಕಿತ್ಸೆಗೆ ನೆರವು



ಮುಲ್ಕಿ: ಸಸಿಹಿತ್ಲು ಅಗ್ಗಿದಕಳಿಯ ಕರಾವಳಿ ಫ್ರೆಂಡ್ಸ್, ಶ್ರೀ ಅಯ್ಯಪ್ಪ ಸ್ವಾಮಿ ಸೇವಾ ಸಮಿತಿ, ವತಿಯಿಂದ ಶೈಕ್ಷಣಿಕ ವರ್ಷದ ವಿಶೇಷ ಕಾರ್ಯಕ್ರಮ ವಿದ್ಯಾರ್ಥಿವೇತನ ವಿತರಣೆ ಮತ್ತು ಆರ್ಥಿಕವಾಗಿ ಹಿಂದುಳಿವರಿಗೆ ವೈದ್ಯಕೀಯ ನೆರವು ಹಾಗೂ ಉದ್ಯಮಿ ವೇದಪ್ರಕಾಶ್ ಶ್ರೀಯಾನ್ ಪ್ರಾಯೋಜಕತ್ವದಲ್ಲಿ ಲ್ಯಾಪ್‌ಟಾಪ್ ವಿತರಣೆ ಅಗ್ಗಿದಕಳಿಯ ಬ್ರಹ್ಮಶ್ರೀ ನಾರಾಯಣ ಗುರು ಸಭಾಭವನದಲ್ಲಿ ನಡೆಯಿತು.

ಶ್ರೀ ಭಗವತೀ ದೇವಸ್ಥಾನದ ಅಧ್ಯಕ್ಷ ವಾಮನ್ ಇಡ್ಯಾ ಮಾತನಾಡಿದರು. ಹಳೆಯಂಗಡಿ ಪಿಸಿಎ ಬ್ಯಾಂಕ್ ಅಧ್ಯಕ್ಷ ಎಸ್.ಎಸ್. ಸತೀಶ್ ಭಟ್, ಅಗ್ಗಿದಕಳಿಯದ ಬ್ರಹ್ಮಶ್ರೀ ನಾರಾಯಣಗುರು ಸೇವಾ ಸಂಘದ ಅಧ್ಯಕ್ಷ ಪ್ರಕಾಶ್ ಕುಮಾರ್ ಬಿ.ಎನ್., ಸಸಿಹಿತ್ಲು ನಾರಂತಾಯ ಗರೋಡಿಯ ಜಗನ್ನಾಥ ಕೋಟ್ಯಾನ್, ಕದಿಕೆ ಮೊಗವೀರ ಮಹಾಸಭಾದ ಕಿಶೋರ್ ಗುರಿಕಾರ್, ಕದಿಕೆ ಮೊಗವೀರ ಮಹಾಸಭಾದ ಅಧ್ಯಕ್ಷ ಗಿರೀಶ್ ಶ್ರೀಯಾನ್, ಉದ್ಯಮಿ ಪ್ರದೀಪ್ ಜಿ. ಪೂಜಾರಿ, ಲಚ್ಚಿಲ್ ಮೊಗವೀರ ಸಭಾದ ಅಧ್ಯಕ್ಷ ತಿಲಕ್ ಕರ್ಕೇರ, ಅಗ್ಗಿದಕಳಿಯ ಶ್ರೀ ಅಯ್ಯಪ್ಪ ಸ್ವಾಮಿ ಸೇವಾ ಸಮಿತಿ ಸ್ಥಾಪಕಾಧ್ಯಕ್ಷ ಧನ್‌ರಾಜ್ ಕೋಟ್ಯಾನ್, ಗೌರವಾಧ್ಯಕ್ಷ ಉದಯ ಬಿ. ಸುವರ್ಣ, ಕರಾವಳಿ ಫ್ರೆಂಡ್ಸ್ ಹಾಗೂ ಶ್ರೀ ಅಯ್ಯಪ್ಪ ಸ್ವಾಮಿ ಸೇವಾ ಸಮಿತಿ, ಸಂಸ್ಥೆ ಅಧ್ಯಕ್ಷ ತಾರಾನಾಥ ಕರ್ಕೇರ, ಸೂರ್ಯಕಾಂಚನ್, ಬ್ರಹ್ಮ ಶ್ರೀ ನಾರಾಯಣಗುರು ಮಹಿಳಾ ಸಂಘದ ಸರೋಜಿನಿ, ಮುಖೇಶ್ ಇದ್ದರು. ಡಾ. ಪ್ರಕೃತಿ ಪ್ರದೀಪ್ ಪೂಜಾರಿ ಅವರನ್ನು ಗೌರವಿಸಲಾಯಿತು. ಗೌರವಾಧ್ಯಕ್ಷ ಉದಯ ಸುವರ್ಣ ಸಸಿಹಿತ್ಲು ಸ್ವಾಗತಿಸಿ, ಕಾರ್ತಿಕ್ ಎಂ.ಎಸ್. ವಂದಿಸಿದರು. ರಾಜೇಂದ್ರ ಪ್ರಸಾದ್ ಎಕ್ಕಾರು ನಿರೂಪಿಸಿದರು.

ಎಸ್ಸೆಸ್ಸೆಲ್ಸಿ ಕನ್ನಡದಲ್ಲಿ ಶೇ. 100 ಅಂಕ: ವಿದ್ಯಾರ್ಥಿಗಳಿಗೆ ಕಸಾಪ ಗೌರವಾರ್ಪಣೆ



ಸುಳ್ಯ: ದಕ್ಷಿಣ ಕನ್ನಡ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಸುಳ್ಯ ತಾಲೂಕು ಘಟಕದ ಆಶ್ರಯದಲ್ಲಿ 2025–26ನೇ ಸಾಲಿನ 10ನೇ ತರಗತಿಯ ವಾರ್ಷಿಕ ಪರೀಕ್ಷೆಯಲ್ಲಿ ಕನ್ನಡ ವಿಷಯದಲ್ಲಿ ಶೇ.100 ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ ಗೌರವಾರ್ಪಣೆ ಕನ್ನಡ ಭವನದಲ್ಲಿ ನಡೆಯಿತು.

ಸುಳ್ಯ ಅಕಾಡೆಮಿ ಆಫ್ ಲಿಬರಲ್ ಎಜ್ಯುಕೇಶನ್ ಅಧ್ಯಕ್ಷ ಡಾ.ಕೆ.ವಿ. ಚಿದಾನಂದರು ವಿದ್ಯಾರ್ಥಿಗಳಿಗೆ ಗೌರವಾರ್ಪಣೆ ಮಾಡಿ ಮಾತನಾಡಿ, ಪ್ರತಿ ವರುಷವು ಶೇ.100 ಅಂಕ ಗಳಿಸಿದ ವಿದ್ಯಾರ್ಥಿಗಳನ್ನು ಕ.ಸಾ.ಪ. ವತಿಯಿಂದ ಅಭಿನಂದಿಸುವ ಕಾರ್ಯ ಶ್ಲಾಘನೀಯ ಮಹತ್ವದಾಗಿದೆ ಎಂದರು.

ಸುಳ್ಯ ತಾಲೂಕು ಕನ್ನಡ ಸಾಹಿತ್ಯ ಪರಿಷತ್ತು ಅಧ್ಯಕ್ಷ ಚಂದ್ರಶೇಖರ ಪೇರಾಲು ಅಧ್ಯಕ್ಷತೆ ವಹಿಸಿದ್ದರು. ಶ್ರೀ ಶಾರದಾ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲೆ ಸ್ವರ್ಣಕಲಾ ಎ.ಎಸ್., ಕ್ಷೇತ್ರ ಶಿಕ್ಷಣ ಸಂಯೋಜಕ ನಾರಾಯಣ ಮುಖ್ಯ ಅತಿಥಿಗಳಾಗಿದ್ದರು. ತಾಲೂಕಿಗೆ ಪ್ರಥಮ, ದ್ವಿತೀಯ ಸ್ಥಾನ ಗಳಿಸಿದ ವಿದ್ಯಾರ್ಥಿಗಳನ್ನು, ಕನ್ನಡ ಭಾಷಾ ವಿಷಯದಲ್ಲಿ ಶೇ.100 ಅಂಕ ಗಳಿಸಿದ ವಿದ್ಯಾರ್ಥಿಗಳನ್ನು, ಕನ್ನಡ ಭಾಷಾ ಶಿಕ್ಷಕರನ್ನು ಸನ್ಮಾನಿಸಲಾಯಿತು. ಸರಕಾರಿ ಶಾಲೆಗಳಲ್ಲಿ ಕನ್ನಡದಲ್ಲಿ 100 ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ ಚಂದ್ರಮತಿ ಕೆ. ನಿವೃತ್ತ ಪ್ರೌಢ ಶಾಲಾ ಶಿಕ್ಷಕಿ ತಾಯಿ ಕೊಡಪಾಲ ಯಶೋಧಾ ಚೆನ್ನಪ್ಪ ಗೌಡ ಸ್ಮರಣಾರ್ಥ ನೀಡುವ ದತ್ತಿನಿಧಿ ಪುರಸ್ಕಾರವನ್ನು ನೀಡಲಾಯಿತು. ವೇದಿಕೆಯಲ್ಲಿ ಕಸಾಪ ಸುಳ್ಯ ಹೋಬಳಿ ಘಟಕದ ಅಧ್ಯಕ್ಷೆ ಚಂದ್ರಾವತಿ ಬಡ್ಡಡ್ಕ, ಕಸಾಪ ಜಿಲ್ಲಾ ಪ್ರತಿನಿಧಿ ರಾಮಚಂದ್ರ ಪಲ್ಲತ್ತಡ್ಕ, ದಯಾನಂದ ಆಳ್ವ ಉಪಸ್ಥಿತರಿದ್ದರು. ಲತಾಶ್ರೀ ಸುಪ್ರೀತ್ ಮೋಂಟಡ್ಕ ಸನ್ಮಾನಿತರ ಪಟ್ಟಿ ವಾಚಿಸಿದರು. ತೇಜಸ್ವಿ ಕಡಪಳ ಸ್ವಾಗತಿಸಿ, ರಮೇಶ್ ನೀರಬಿದಿರೆ ವಂದಿಸಿದರು. ಚಂದ್ರಮತಿ ಕೆ. ಕಾರ್ಯಕ್ರಮ ನಿರ್ವಹಿಸಿದರು.

ಕಟೀಲು ಮೇಳದ ಕಲಾವಿದರಿಂದ ತಾಳಮದ್ದಲೆ, ನಿವೃತ್ತರಿಗೆ ಗೌರವಾರ್ಪಣೆ



ಕಟೀಲು: ಯಕ್ಷಗಾನ ಕಲಾವಿದನಲ್ಲಿ ಮಾತಿನ ಕೌಶಲ್ಯವೂ ಹೆಚ್ಚಿದಾಗ ಆತನ ಪಾತ್ರವೂ ಗೆಲ್ಲುತ್ತದೆ. ಪ್ರೇಕ್ಷಕರಿಗೂ ಇಷ್ಟವಾಗುತ್ತದೆ. ಹಾಗಾಗಿ ಕಟೀಲು ಮೇಳದ ಕಲಾವಿದರು ತಾಳಮದ್ದಳೆಯಲ್ಲಿ ಹೆಚ್ಚು ಹೆಚ್ಚು ತೊಡಗಿಸಿಕೊಳ್ಳಲು ಕಟೀಲು ದೇಗುಲದಲ್ಲಿ ಅವಕಾಶ ಕಲ್ಪಿಸಲಾಗುವುದು ಎಂದು ಕಟೀಲು ದೇಗುಲದ ಅರ್ಚಕ ಶ್ರೀಹರಿನಾರಾಯಣದಾಸ ಅಸ್ರಣ್ಣ ಹೇಳಿದರು.

ಅವರು ಕಟೀಲು ದೇಗುಲದಲ್ಲಿ ಕಟೀಲು ಯಕ್ಷಗಾನ ಮೇಳಗಳ ಆಸಕ್ತ ಕಲಾವಿದರಿಂದ ನಡೆಯುವ ತಾಳಮದ್ದಲೆ ಸಪ್ತಾಹದ ಉದ್ಘಾಟನೆ ಕಾರ್ಯಕ್ರಮದಲ್ಲಿ ಮಾತನಾಡಿದರು. ಇದೇ ಸಂದರ್ಭದಲ್ಲಿ, ಕಟೀಲು ಮೇಳದಲ್ಲಿ ಸುದೀರ್ಘ ಸೇವೆ ಸಲ್ಲಿಸಿ ನಿವೃತ್ತರಾದ ಕಲಾವಿದರನ್ನು ಗೌರವಿಸಲಾಯಿತು.

ಕಟೀಲು ದೇಗುಲದ ಅನುವಂಶಿಕ ಮೊಕ್ತೇಸರ ವಾಸುದೇವ ಅಸ್ರಣ್ಣ ಕಾರ್ಯವನ್ನು ಉದ್ಘಾಟಿಸಿದರು.

ನಿವೃತ್ತರಾದ ಹಿರಿಯ ಕಲಾವಿದರಿಗೆ ಗೌರವ

ಇದೇ ಸಂದರ್ಭ ಕಟೀಲು ಮೇಳದಲ್ಲಿ ಸುದೀರ್ಘ ಸೇವೆ ಸಲ್ಲಿಸಿ ನಿವೃತ್ತರಾದ ಬಾಯಾರು ರಘು ಶೆಟ್ಟಿ, ಕೈರಂಗಳ ಕೃಷ್ಣ ಮೂಲ್ಯ, ಲಕ್ಷ್ಮಣ ಕೋಟ್ಯಾನ್ ಇವರನ್ನು ರೂಪಾಯಿ ಒಂದು ಲಕ್ಷ ನಗದಿನೊಂದಿಗೆ ಗೌರವಿಸಲಾಯಿತು.

ಪುತ್ತೂರು ಶ್ರೀ ಮಹಾಲಿಂಗೇಶ್ವರ ದೇವಸ್ಥಾನದ ವಠಾರದಲ್ಲಿ ಸಾಮೂಹಿಕ ಸರಸ್ವತಿ ವಂದನೆ, ವಿದ್ಯಾಸಂಕಲ್ಪ ಕಾರ್ಯಕ್ರಮ

175 ಮಕ್ಕಳಿಗೆ ಸರಸ್ವತಿ ಅಷ್ಟೋತ್ತರ, ಶ್ಲೋಕ ಬೋಧನೆ, ಪುಸ್ತಕಕ್ಕೆ ಪುಷ್ಪಾರ್ಚನೆ

ಪುತ್ತೂರು: ದೇವಾಲಯ ಸಂವರ್ಧನಾ ಸಮಿತಿ ಕರ್ನಾಟಕ (ಪುತ್ತೂರು ತಾಲೂಕು ಮತ್ತು ಗ್ರಾಮಾಂತರ) ಮತ್ತು ಮಹತೋಭಾರ ಶ್ರೀ ಮಹಾಲಿಂಗೇಶ್ವರ ದೇವಸ್ಥಾನದ ಜಂಟಿ ಆಯೋಜಕತ್ವದಲ್ಲಿ ಹಿಂದೂ ಧಾರ್ಮಿಕ ಶಿಕ್ಷಣ ಪ್ರಕಲ್ಪ ಕೇಂದ್ರಗಳ ಸಹಯೋಗದೊಂದಿಗೆ 'ಸಾಮೂಹಿಕ ಸರಸ್ವತೀ ವಂದನೆ' ಮತ್ತು 'ವಿದ್ಯಾ ಸಂಕಲ್ಪ' ಕಾರ್ಯಕ್ರಮ ಶ್ರೀ ಮಹಾಲಿಂಗೇಶ್ವರ ದೇವಸ್ಥಾನದ ವಠಾರದಲ್ಲಿ ನಡೆಯಿತು.



ಬೆಳಗ್ಗೆ ದೇವಳದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಈಶ್ವರ ಭಟ್ ಪಂಜಿಗುಡ್ಡೆ, ನಿಕಟಪೂರ್ವ ಅಧ್ಯಕ್ಷ ಕೇಶವಪ್ರಸಾದ ಮುಳಿಯ ಹವನದ ಸಂಕಲ್ಪ ನೆರವೇರಿಸಿದರು. ಜಯರಾಮ ಜೋಯಿಸ್ ಮತ್ತು ತಂಡವು ಸರಸ್ವತೀ ಸೂಕ್ತ ಹವನವನ್ನು ನಡೆಸಿಕೊಟ್ಟರು. ದೇವಾಲಯ ಸಂವರ್ಧನ ಸಮಿತಿ ವಿಭಾಗ ಪ್ರಮುಖ್ ಕೇಶವ್ ಪ್ರಸಾದ್ ಮುಳಿಯ ಅವರು ವಿದ್ಯಾರ್ಥಿಗಳಿಗೆ ಈ ಶೈಕ್ಷಣಿಕ ವರ್ಷದ ಪ್ರತಿಜ್ಞಾ ಪೂರ್ವಕ ಸಂಕಲ್ಪವನ್ನು ಭೋದಿಸಿದರು. ಪೂರ್ಣಾಹುತಿ ಸಂದರ್ಭದಲ್ಲಿ ಮಹಾಲಿಂಗೇಶ್ವರ ದೇವಾಲಯ ವ್ಯವಸ್ಥಾಪನ ಸಮಿತಿ ಸದಸ್ಯ ಸುಭಾಷ್ ರೈ ಬೆಳ್ಳಿಪ್ಪಾಡಿ, ದೇವಾಲಯ ಸಂವರ್ಧನಾ ಸಮಿತಿಯ ಪ್ರಮುಖರಾದ ರವೀಂದ್ರನಾಥ್ ರೈ, ರಾಮ್‌ದಾಸ್ ಗೌಡ, ರಾಧಾಕೃಷ್ಣ ನಂದಿಲ, ಕೃಷ್ಣಕುಮಾರ್ ಅತ್ರಿಜಾಲು, ಸಂಪತ್ ಕುಮಾರ್, ಹಿಂದೂ ಧಾರ್ಮಿಕ ಶಿಕ್ಷಣ ಪ್ರಕಲ್ಪದ ಸಂಯೋಜಕಿ ಕೃಷ್ಣವೇಣಿ ಪ್ರಸಾದ್ ಮುಳಿಯ, ಧಾರ್ಮಿಕ ಶಿಕ್ಷಣ ಕೇಂದ್ರದ ಬೋಧಕರಾದ ವಿ. ಪ್ರಭಾವತಿ, ಸುಧಾ ಹೆಬ್ಬಾರ್, ಚಂದ್ರಪ್ರಭಾ, ಶಂಕರಿ ಶರ್ಮ, ವಿಜಯ ಸರಸ್ವತಿ, ಸುಮಂಗಲ, ಕವಿತಾ ಕೊಳತ್ತಾಯ, ವತ್ಸಲ ರಾಜ್ಞಿ, ವೀಣಾ ಬಿ.ಕೆ, ತೇಜಸ್ವಿ ಪ್ರಶಾಂತ್ ದೊಡ್ಡಡ್ಕ ಹಾಗೂ ನಿತ್ಯಕರಸೇವಕರ ಅಧ್ಯಕ್ಷ ವಾದಿರಾಜ್ ಮತ್ತು ತಂಡದವರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

175 ವಿದ್ಯಾರ್ಥಿಗಳು

175 ವಿದ್ಯಾರ್ಥಿಗಳು ಮೊದಲಿಗೆ ಭಕ್ತಿಪೂರ್ವಕ ಭಜನೆಯೊಂದಿಗೆ, ಸರಸ್ವತಿ ಅಷ್ಟೋತ್ತರ ಪಠಿಸುತ್ತಾ, ಪುಸ್ತಕಕ್ಕೆ ಪುಷ್ಪಾರ್ಚನೆ ಮಾಡಿದರು. ಮಂಜುಳಗಿರಿ ವೆಂಕಟರಮಣ ಭಟ್ ಸರಸ್ವತಿ ಅಷ್ಟೋತ್ತರ ಮತ್ತು ಶ್ಲೋಕಗಳನ್ನು ಮಕ್ಕಳಿಗೆ ಬೋಧಿಸಿದರು. ವಿದ್ಯಾರ್ಥಿಗಳ ಜೊತೆಗೆ ಜೊತೆಗೆ ಬೋಧಕರು, ಪೋಷಕರು ಹಾಗೂ ಭಕ್ತಾದಿಗಳು ಸೇರಿ ಸುಮಾರು 275 ಮಂದಿ ಭಾಗವಹಿಸಿದರು. ವಿದ್ಯಾರ್ಥಿಗಳಲ್ಲಿ ವಿದ್ಯಾಭ್ಯಾಸದ ಬಗ್ಗೆ ಆಸಕ್ತಿ, ಸಂಸ್ಕಾರ ಮತ್ತು ಆಧ್ಯಾತ್ಮಿಕ ಮೌಲ್ಯಗಳನ್ನು ಬೆಳೆಸುವ ಉದ್ದೇಶದಿಂದ ಕಾರ್ಯಕ್ರಮ ಆಯೋಜಿಸಲಾಗಿತ್ತು. ಮಹಾತೋಭಾರ ಶ್ರೀ ಮಹಾಲಿಂಗೇಶ್ವರ ದೇವಸ್ಥಾನ ಪುತ್ತೂರು, ಶ್ರೀ ಮುಂಡ್ಯತ್ತಾಯ ದೈವಸ್ಥಾನ ಪಾಂಗಳಾಯಿ, ಮುಳಿಯ ದೇವರಕಟ್ಟೆ ಕೋರ್ಟ್ ರಸ್ತೆ, ಅಟಲ್ ಉದ್ಯಾನ ಕೊಂಬೆಟ್ಟು, ಮಾಸ್ಟರ್ ಪ್ಲಾನರಿ ಕಲ್ಲೇಗ, ಶ್ರೀ ಷಣ್ಮುಖ ಸುಬ್ರಹ್ಮಣ್ಯ – ಶ್ರೀ ಮಹಾ ವಿಷ್ಣು ದೇವಸ್ಥಾನ ಕೆಮ್ಮಿಂಜೆ, ಶ್ರೀ ರಾಘವೇಂದ್ರ ಮಠ ಕಲ್ಲಾರೆ ಕೇಂದ್ರಗಳಲ್ಲಿ ಹಿಂದೂ ಧಾರ್ಮಿಕ ಶಿಕ್ಷಣ ನಡೆಯುತ್ತಿದೆ.

ಸುತ್ತಮುತ್ತ

ರೈತರಿಗೆ ಸಬ್ಸಿಡಿಯಲ್ಲಿ ಡೀಸೆಲ್ ವಿತರಣೆಗೆ ರೈತ ಸಂಘ ಆಗ್ರಹ



ಕೈಕಂಬ: ಪಶ್ಚಿಮ ಏಷ್ಯಾದಲ್ಲಿನ ಯುದ್ಧದ ಪರಿಣಾಮ ದೇಶದಲ್ಲಿ ಪೆಟ್ರೋಲ್ ಹಾಗೂ ಡೀಸೆಲ್ ಬೆಲೆ ಏರಿಕೆಯಾಗಿದ್ದು, ಇದರಿಂದಾಗಿ ಕೃಷಿ ವಲಯಕ್ಕೆ ದೊಡ್ಡ ಹೊಡೆತ ಉಂಟಾಗಿದ್ದು, ರೈತರಿಗೆ ಸಬ್ಸಿಡಿಯಲ್ಲಿ ಡೀಸೆಲ್ ನೀಡಬೇಕು ಎಂದು ಕರ್ನಾಟಕ ರಾಜ್ಯ ರೈತ ಸಂಘ ಆಗ್ರಹಿಸಿದೆ.

ಈಗಾಗಲೇ ಗದ್ದೆ ಉಳುಮೆ,ಅಡಿಕೆ ತೋಟಗಳಿಗೆ ಔಷಧಿ ಸಿಂಪಡಣೆ, ಅಡಿಕೆ ತೋಟಗಳಲ್ಲಿ ಹಾಗೂ ಇತರ ಕಡೆ ಕಳೆನಾಶ ಸಿಂಪಡಣೆ ಹಾಗೂ ಇತರ ಕೆಲಸಗಳು ಪೆಟ್ರೋಲ್ ಹಾಗೂ ಡಿಸೇಲ್ ಚಾಲಿತ ಯಂತ್ರಗಳ ಮೇಲೆ ಅವಲಂಬಿತವಾಗಿದ್ದು, ತೈಲ ಬೆಲೆ ಏರಿಕೆಯಿಂದಾಗಿ ರೈತರಿಗೆ ಹಾಗೂ ಕೃಷಿ ವಲಯಕ್ಕೆ ನಷ್ಟ ಉಂಟಾಗಿದೆ. ಕೂಲಿಯಾಳುಗಳ ಕೊರತೆಯಿಂದ ಕೃಷಿ ಚಟುವಟಿಕೆಗಳು ಹಿನ್ನಡೆಗೊಂಡಿದ್ದರೂ, ರೈತರು ಯಾಂತ್ರಿಕ ಕೃಷಿ ಚಟುವಟಿಕೆಯತ್ತ ಗಮನ ಹರಿಸಿದ್ದರು. ಕೃಷಿ ಸರಕು ಸಾಗಣೆಯ ವಾಹನಗಳಿಗೆ ದುಬಾರಿ ಖರ್ಚು ತಗುಲಿದ್ದು ರೈತರಿಗೆ ಗಾಯದ ಮೇಲೆ ಬರೆ ಎಳೆದಂತಾಗಿದೆ.ಆದ್ದರಿಂದ ಕೃಷಿ ಯಂತ್ರೋಪಕರಣ ಹಾಗೂ ವಾಹನಗಳಿಗೆ ಡಿಸೇಲ್ ಸಬ್ಸಿಡಿ ನೀಡಬೇಕೆಂದು ದ.ಕ ಜಿಲ್ಲೆಯ ಸಂಸದರು ಹಾಗೂ ಶಾಸಕರಿಗೆ ಮತ್ತು ರಾಜ್ಯದ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರಿಗೆ ಮನವಿ ನೀಡಲಾಗುವುದು ಎಂದು ಕ.ರಾ.ರೈತ ಸಂಘದ ರಾಜ್ಯ ಕಾರ್ಯದರ್ಶಿ ಮನೋಹರ್ ಶೆಟ್ಟಿ ನಡಿಕಂಬಳಗುತ್ತು ಹಾಗೂ ಕ.ರಾ. ರೈತ ಸಂಘ ದ.ಕ ಜಿಲ್ಲಾಧ್ಯಕ್ಷ ಶ್ರೀಧರ ಶೆಟ್ಟಿ ಬೈಲುಗುತ್ತು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬಂಟ್ವಾಳ ಜಿಪಿಟಿ ಪ್ರವೇಶಕ್ಕೆ ಅಧಿಸೂಚನೆ

ಬಂಟ್ವಾಳ: ಬಂಟ್ವಾಳ ಸರಕಾರಿ ಪಾಲಿಟೆಕ್ನಿಕ್‌ನಲ್ಲಿ ಆನ್ ಲೈನ್ ಪ್ರವೇಶ ಪ್ರಕ್ರಿಯೆ ಮುಗಿದ ಬಳಿಕ ಉಳಿಕೆಯಾದ ಸೀಟುಗಳಿಗೆ ಪ್ರಿನ್ಸಿಪಾಲ್ ಹಂತದಲ್ಲಿ ಪ್ರವೇಶ ಪ್ರಕ್ರಿಯೆ ನಡೆಸುವ ಸಲುವಾಗಿ ಅಧಿಸೂಚನೆ ಹೊರಡಿಸಲಾಗಿದೆ. ಎಸ್.ಎಸ್.ಎಲ್.ಸಿ, ತತ್ಸಮಾನ ಪರೀಕ್ಷೆಯಲ್ಲಿ ಪಾಸಾಗಿರುವ ಅರ್ಹ ಅಭ್ಯರ್ಥಿಗಳು ಅರ್ಜಿಯನ್ನು ಸಲ್ಲಿಸಲು ಜೂ.10ರೊಳಗೆ ಅವಧಿಯನ್ನು ನಿಗದಿಪಡಿಸಲಾಗಿದೆ. ಜೂ.11ರಂದು ಸಂಸ್ಥೆಯಲ್ಲಿ ಮೆರಿಟ್ ಮತ್ತು ರೋಸ್ಟರ್‌ಗನುಗುಣವಾಗಿ ಸೀಟು ಹಂಚಿಕೆಯಾದ ಅಭ್ಯರ್ಥಿಗಳು, ಶುಲ್ಕ ಪಾವತಿಸಿ ಪ್ರವೇಶ ಪಡೆಯಬಹುದಾಗಿದೆ. ಆಸಕ್ತ ಅಭ್ಯರ್ಥಿಗಳು ಸಂಸ್ಥೆಯ ಕಚೇರಿಯನ್ನು ಬೆಳಿಗ್ಗೆ 10ರಿಂದ ಸಂಜೆ 5.30ರ ವರೆಗೆ ಸಂಪರ್ಕಿಸಿ ಅರ್ಜಿ ಸಲ್ಲಿಸಬಹುದು ಎಂದು ಪ್ರಕಟಣೆ ತಿಳಿಸಿದೆ. ಅಭ್ಯರ್ಥಿಗಳು ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆಯ ವೆಬ್‌ಸೈಟ್ dtek.karnataka.gov.in & dtetech.karnataka.gov.in/kea/ ಪ್ರಚುರಪಡಿಸುವ ಮಾಹಿತಿ ಪುಸ್ತಕವನ್ನು ಡೌನ್ ಲೋಡ್ ಮಾಡಿಕೊಳ್ಳಲು ಹಾಗೂ ಮಾಹಿತಿ ಪುಸ್ತಕದಲ್ಲಿರುವ ಸೂಚನೆಗಳನ್ವಯ ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ಜೂನ್ 10ರ ಸಂಜೆ 5.30ರವರೆಗೆ ಅವಧಿಯನ್ನು ನಿಗಧಿಪಡಿಸಲಾಗಿದೆ. ಹಾಗೂ ಹೆಚ್ಚಿನ ಮಾಹಿತಿಗಾಗಿ ಸಂಸ್ಥೆಯ ಕಚೇರಿ ಮೊಬೈಲ್ ಸಂಖ್ಯೆ : 9448835521 2 8762328660 ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ನಾಳೆ ವಿವಿಧೆಡೆ ವಿದ್ಯುತ್ ವ್ಯತ್ಯಯ

ಉಡುಪಿ: ಮಲ್ಪೆ ಹಾಗೂ ಉದ್ಯಾವರ ವಿದ್ಯುತ್ ಉಪಕೇಂದ್ರದ ಎಲ್ಲಾ ಫೀಡರ್‌ಗಳಲ್ಲಿ ತುರ್ತು ನಿರ್ವಹಣೆ ಕಾಮಗಾರಿ ಹಮ್ಮಿಕೊಂಡಿರುವುದರಿಂದ ಮಲ್ಪೆ, ಹಾರ್ಬರ್, ಬೈಲಕೆರೆ, ಲಕ್ಮೀನಗರ, ಸುಬ್ರಹ್ಮಣ್ಯ ನಗರ, ಕೊಡವೂರು, ಆದಿ ಉಡುಪಿ, ಪಂದುಬೆಟ್ಟು ಕಲ್ಮಾಡಿ, ಕಟಪಾಡಿ, ಮಲ್ಪೇಟೆ, ಪಿತ್ರೋಡಿ, ಬಲಾಯಿಪಾದೆ, ಗುಡ್ಡೆಯಂಗಡಿ, ಕುತ್ಪಾಡಿ, ಕಡೇಕಾರು, ಕಿದಿಯೂರು, ಪಡುಕರೆ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಜೂ.10ಕ್ಕೆ ಬೆಳಿಗ್ಗೆ 9.30ರಿಂದ ಸಂಜೆ 5.30ರ ವರೆಗೆ ವಿದ್ಯುತ್ ಸರಬರಾ ಜಿನಲ್ಲಿ ವ್ಯತ್ಯಯವಾಗಲಿದೆ ಎಂದು ಪ್ರಕಟಣೆ ತಿಳಿಸಲಾಗಿದೆ.

ನಾಳೆ ಜನ ಸಂಪರ್ಕ ಸಭೆ

ಕಾರ್ಕಳ: ಮೆಸ್ಕಾಂ ಕಾರ್ಕಳ ಉಪವಿಭಾಗ ಕಚೇರಿಯಲ್ಲಿ ಜೂ.10ರಂದು ಬೆಳಿಗ್ಗೆ 10.30ರಿಂದ 12ರವರೆಗೆ ಸಂಪರ್ಕ ಸಭೆ ನಡೆಯಲಿದ್ದು, ಮೆಸ್ಕಾಂನ ಅಧಿಕಾರಿಗಳು ಭಾಗವಹಿಸಲಿದ್ದಾರೆ. ಈ ಸಭೆಯಲ್ಲಿ ಸಂಬಂಧಪಟ್ಟ ಪ್ರದೇಶದ ಗ್ರಾಹಕರ ಅಹವಾಲು ಸ್ವೀಕರಿಸುವುದರಿಂದ, ಈ ಅವಕಾಶವನ್ನು ಗ್ರಾಹಕರು ಸದುಪಯೋಗಿಸಿ ಕೊಳ್ಳಲು ಕೋರಲಾಗಿದೆ. ದೂ.ಸಂ. 08258-230648 ಮೂಲಕ ಸಂಪರ್ಕಿಸುವಂತೆ ಮೆಸ್ಕಾಂ ಪ್ರಕಟಣೆಯಲ್ಲಿ ತಿಳಿಸಿದೆ.

ಕೊಲ್ಯದಲ್ಲಿ ಆರೋಗ್ಯ ಸಚಿವ ಯು.ಟಿ.ಖಾದರ್‌ಗೆ ಅದ್ದೂರಿ ಸಾರ್ವಜನಿಕ ಅಭಿನಂದನೆ

ವಿದೇಶಕ್ಕೆ ತೆರಳಿ ಮತ್ತೆ ತವರು ಮನೆಗೆ ಮರಳಿದ ಅನುಭವ



ಉಳ್ಳಾಲ: ಕಳೆದ ಮೂರು ವರ್ಷಗಳಿಂದ ಸಾಂವಿಂಧಾನಿಕ ಸ್ಪೀಕರ್ ಹುದ್ದೆ ನಿರ್ವಹಿಸಿದ್ದರಿಂದ ಪಕ್ಷದ ಧ್ವಜ ಹಿಡಿದು, ಕಾರ್ಯಕರ್ತರೊಂದಿಗೆ ಬೆರೆಯುವ ಅವಕಾಶ ಸಿಕ್ಕಿರಲಿಲ್ಲ, ಇದೀಗ ಮತ್ತೆ ತಾನು ಸಚಿವನಾಗಿದ್ದು ವಿದೇಶಕ್ಕೆ ಕೆಲಸಕ್ಕೆ ತೆರಳಿ ಊರಿಗೆ ಮರಳಿದ ಅನುಭವವಾಗಿದೆಯೆಂದು ಆರೋಗ್ಯ ಸಚಿವ ಯು.ಟಿ.ಖಾದರ್ ಅಭಿಪ್ರಾಯಪಟ್ಟರು.

ಯಾರು ನಿಂತರೂ ಗೆಲ್ಲಿಸಿ

ಉಳ್ಳಾಲ ಮತ್ತು ಮುಡಿಪು ಬ್ಲಾಕ್ ಕಾಂಗ್ರೆಸ್ ವತಿಯಿಂದ ಭಾನುವಾರದಂದು ಕೊಲ್ಯದಲ್ಲಿ ನಡೆದ ಸಾರ್ವಜನಿಕ ಅಭಿನಂದನೆಯನ್ನು ಸ್ವೀಕರಿಸಿ ಅವರು ಮಾತನಾಡಿದರು. ಪಕ್ಷದಲ್ಲಿ ಪ್ರಾಮಾಣಿಕತೆ ಮತ್ತು ತಾಳ್ಮೆಯಿಂದ ಕೆಲಸ ಮಾಡಿದರೆ ಹುದ್ದೆಗಳು ನಮ್ಮನ್ನು ಅರಸಿ ಬರುತ್ತದೆ ಎನ್ನುವುದಕ್ಕೆ ನಾನೇ ಉದಾಹರಣೆ. ನಮ್ಮ ಕ್ಷೇತ್ರದಲ್ಲಿ ಕಾಂಗ್ರೆಸ್ ಪಕ್ಷದ ಚಿಹ್ನೆಯಲ್ಲಿ ಯಾರು ನಿಂತರೂ ಗೆಲ್ಲಿಸುವ ಜವಬ್ದಾರಿ ಪಕ್ಷದ ಕಾರ್ಯಕರ್ತರದ್ದಾಗಿಯೆಂದು ಹೇಳಿದರು.

ಮಾಜಿ ತಾ.ಪಂ ಸದಸ್ಯ ಮುಸ್ತಫಾ ಹರೇಕಳ ಮಾತನಾಡಿ, ಯು.ಟಿ ಖಾದರ್ ಅವರು ವಿದಾನ ಸಭೆಯ ಸಭಾಧ್ಯಕ್ಷರಾಗಿದ್ದ ಸಂದರ್ಭದಲ್ಲಿ ಉಳ್ಳಾಲ ಮತ್ತು ಮುಡಿಪು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರು ಹಾಗೂ ಕಾರ್ಯಕರ್ತರು ಮಂಗಳೂರು ವಿದಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಪಕ್ಷ ಸಂಘಟನೆಗಾಗಿ ಅವಿರತವಾಗಿ ದುಡಿದಿದ್ದಾರೆ. ಪಕ್ಷಕ್ಕಾಗಿ ದುಡಿದ ನಿಷ್ಠಾವಂತ ಕಾರ್ಯಕರ್ತರಿಗೆ ಮುಂದಿನ ದಿನಗಳಲ್ಲಿ ಸೂಕ್ತ ಸ್ಥಾನ ಮಾನಗಳು ಲಭಿಸುವಂತಾಗಬೇಕು. ನಮ್ಮೆಲ್ಲರ ನೆಚ್ಚಿನ ಶಾಸಕರಾದ ಯು.ಟಿ.ಖಾದರ್ ಸ್ಪೀಕರ್ ಹುದ್ದೆಯಿಂದ ಆರೋಗ್ಯ ಸಚಿವರಾಗಿರುವುದು ಕ್ಷೇತ್ರದ ಕಾಂಗ್ರೆಸ್ ಕಾರ್ಯಕರ್ತರ ಕೈ ಬಲಪಡಿಸಿದಂತಾಗಿದೆ ಎಂದು ಹೇಳಿದರು.

ಉಳ್ಳಾಲ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರಮೇಶ್ ಶೆಟ್ಟಿ ಬೋಳಿಯಾರ್ ಅಧ್ಯಕ್ಷತೆ ವಹಿಸಿದ್ದರು. ಉಪಾಧ್ಯಕ್ಷರಾದ ದಿನೇಶ್ ರೈ ಉಳ್ಳಾಲ ಗುತ್ತು, ಜಿಲ್ಲಾ ಧಾರ್ಮಿಕ ಪರಿಷತ್ ಸದಸ್ಯ ಸುರೇಶ್ ಭಟ್ನಗರ, ಮೂಡ ಅಧ್ಯಕ್ಷ ಸದಾಶಿವ ಉಳ್ಳಾಲ್, ಗ್ಯಾರಂಟಿ ಅನುಷ್ಠಾನ ಸಮಿತಿ ಜಿಲ್ಲಾ ಉಪಾಧ್ಯಕ್ಷ ಸುರೇಖಾ ಚಂದ್ರಹಾಸ್, ತಾಲೂಕು ಸಮಿತಿ ಅಧ್ಯಕ್ಷ ರಫೀಕ್ ಅಂಬ್ಲಮೊಗರು, ಉಳ್ಳಾಲ ನಗರ ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಅಮಿತಾ ಅಶ್ವಿನ್ ಬಂಡಿಕೊಟ್ಯ, ಕಣಚೂರು ಸಮೂಹ ಸಂಸ್ಥೆಗಳ ಅಧ್ಯಕ್ಷ ಯು.ಕೆ.ಮೋನು,ಮುಖಂಡರಾದ ಶಾಹುಲ್ ಹಮೀದ್, ದಿನೇಶ್ ಕುಂಪಲ ಮೊದಲಾದವರು ಉಪಸ್ಥಿತರಿದ್ದರು. ಎ.ಕೆ.ರಹ್ಮಾನ್ ಕೋಡಿಜಾಲ್ ಸ್ವಾಗತಿಸಿದರು. ಮುಸ್ತಫಾ ಹರೇಕಳ ನಿರೂಪಿಸಿದರು.

> **ಮಕ್ಕಳ ಶಿಕ್ಷಣಕ್ಕೆ ಒತ್ತು ನೀಡಿ**
>
> ಮಕ್ಕಳ ಶಿಕ್ಷಣಕ್ಕಾಗಿ ಪಕ್ಷದ ಕಾರ್ಯಕರ್ತರು ವಿಶೇಷ ಒತ್ತು ನೀಡಬೇಕು. ಮಂಗಳೂರು ವಿದಾನಸಭಾ ಕ್ಷೇತ್ರದಲ್ಲಿ ಎಸ್ಸೆಸ್ಸೆಲ್ಸಿ ಮುಗಿಸಿ ಕಾಲೇಜಿಗೆ ಸೇರದ ಮಕ್ಕಳಿದ್ದರೆ ಅಂತವರನ್ನ ಹುಡುಕಿ ಕಾಲೇಜಿಗೆ ಸೇರಿಸುವ ಜವಬ್ದಾರಿ ಕಾರ್ಯಕರ್ತರದ್ದಾಗಿದೆ.
>
> ● ಯು.ಟಿ.ಖಾದರ್, ಆರೋಗ್ಯ ಸಚಿವರು

- ಉಳ್ಳಾಲ ಮತ್ತು ಮುಡಿಪು ಬ್ಲಾಕ್ ಕಾಂಗ್ರೆಸ್ ವತಿಯಿಂದ ಅಭಿನಂದನೆ
- ಆರೋಗ್ಯ ಸಚಿವ ಯು.ಟಿ.ಖಾದರ್ ಕಂಡು ಕ್ಷೇತ್ರದ ಕಾಂಗ್ರೆಸ್ ಕಾರ್ಯಕರ್ತರಲ್ಲಿ ಸಂಭ್ರಮ
- ಪಕ್ಷದಲ್ಲಿ ಪ್ರಾಮಾಣಿಕತೆ ಮತ್ತು ತಾಳ್ಮೆಯಿಂದ ಕೆಲಸ ಮಾಡಿದರೆ ಉತ್ತಮ ಹುದ್ದೆ ಸಿಗುವುದು ನಿಶ್ಚಿತ
- ಪಕ್ಷಕ್ಕಾಗಿ ದುಡಿದ ನಿಷ್ಠಾವಂತ ಕಾರ್ಯಕರ್ತರಿಗೆ ಮುಂದಿನ ದಿನಗಳಲ್ಲಿ ಸೂಕ್ತ ಸ್ಥಾನಮಾನ ಸಿಗಲಿ

ಗಮಕ ಕಲಾ ಪರಿಷತ್‌ನಿಂದ 'ಅಧಿಕ ಗಮಕ ಅಷ್ಟಾಹ' ಕಾರ್ಯಕ್ರಮ

ಕಲೆಯ ಬೆಳವಣಿಗೆಗೆ ಪ್ರೋತ್ಸಾಹ ಅಗತ್ಯ: ಶರತ್‌ಕೃಷ್ಣ



ಬೆಳ್ತಂಗಡಿ: ಕರ್ನಾಟಕ ಗಮಕ ಕಲಾ ಪರಿಷತ್, ದ.ಕ. ಜಿಲ್ಲೆ ಗಮಕ ಕಲಾ ಪರಿಷತ್ ಹಾಗು ಬೆಳ್ತಂಗಡಿ ತಾಲೂಕು ಗಮಕ ಕಲಾ ಪರಿಷತ್ ವತಿಯಿಂದ ಅಧಿಕ ಮಾಸದ ಪ್ರಯುಕ್ತ ಉಜಿರೆ ಶ್ರೀ ಜನಾರ್ದನ ದೇವಸ್ಥಾನದ ಆಶ್ರಯದಲ್ಲಿ ದೇವಸ್ಥಾನದ ನೂತನ ವಿಜಯ ಗೋಪುರದಲ್ಲಿ ಎಂಟು ದಿನಗಳ 'ಅಧಿಕ ಗಮಕ ಅಷ್ಟಾಹ' ಕಾರ್ಯಕ್ರಮಕ್ಕೆ ಭಾನುವಾರದಂದು ದೇವಸ್ಥಾನದ ಅನುವಂಶಿಕ ಆಡಳಿತ ಮೊಕ್ತೇಸರ ಶರತ್ ಕೃಷ್ಣ ಪಡುವೆಟ್ನಾ ಅವರು ದೀಪ ಪ್ರಜ್ವಲಿಸಿ ಚಾಲನೆ ನೀಡಿದರು.

ಬಳಿಕ ಮಾತನಾಡಿದ ಅವರು, ನಶಿಸಿ ಹೋಗುತ್ತಿರುವ ವಿಶಿಷ್ಟ ಕಲಾ ಪ್ರಕಾರವಾದ ಗಮಕ ಕಲೆಗೆ ಪ್ರೋತ್ಸಾಹ ಅಗತ್ಯ. ನಮ್ಮ ಸಂಸ್ಕೃತಿಯನ್ನು ಪೋಷಿಸುವ ಗಮಕ ಕಲೆಯ ಬೆಳವಣಿಗೆಗೆ ಅಧಿಕ ಮಾಸ ಅತ್ಯಂತ ಸೂಕ್ತವಾಗಿದ್ದು, ಅಧಿಕ ಫಲದಾಯಕ. ಸರಸ್ವತಿಯ ಸಾನಿಧ್ಯವೆಂದು ವಾಸ್ತು ತಜ್ಞರಿಂದ ಉಲ್ಲೇಖಿಸಲ್ಪಟ್ಟ ಜನಾರ್ದನ ದೇವಸ್ಥಾನ ಕಲೆ, ಸಾಹಿತ್ಯ, ಸಂಸ್ಕೃತಿಯ ಕಾರ್ಯಕ್ರಮಗಳಿಗೆ ನಿರಂತರ ಪ್ರೋತ್ಸಾಹ ನೀಡುತ್ತಿದೆ ಎಂದು ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ಗಮಕ ಕಲಾ ಪರಿಷತ್ ಜಿಲ್ಲಾಧ್ಯಕ್ಷ ಗಮಕ ಕಲಾಶ್ರೀ ಮಧೂರು ಮೋಹನ ಕಲ್ಲೂರಾಯ ಮಾತನಾಡಿ, ಹಾಸನ ಜಿಲ್ಲೆ ಬಿಟ್ಟರೆ ಗಮಕಕ್ಕೆ ಹೆಚ್ಚಿನ ಪ್ರೋತ್ಸಾಹ ದೊರೆಯುತ್ತಿರುವುದು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ. ವಾಲ್ಮೀಕಿ, ಲವ ಕುಶರಿಂದ ಪ್ರಾರಂಭಗೊಂಡ ಆರಾಧನಾ ಕಲೆಯಾದ ಗಮಕ ಕಲೆಯ ಜಿಲ್ಲಾ ಸಮ್ಮೇಳನ ಉಜಿರೆಯಲ್ಲಿ ನಡೆಯಲಿರುವುದು ಸ್ವಾಗತಾರ್ಹ. ಹಳೆಗನ್ನಡ ಕವಿಗಳ ನಾಂದಿಪದ್ಯ, ಸ್ಮರಣ ಸಂಚಿಕೆ ಹಾಗು ಕಾವ್ಯ ಭಾಗದ ಕೃತಿಯ ವಾಚನ, ವ್ಯಾಖ್ಯಾನವನ್ನು ಪ್ರಕಟಿಸುವ ಮೂಲಕ ಯಶಸ್ಸಿಗೆ ಎಲ್ಲರ ಸಹಕಾರವಿರಲಿ ಎಂದರು.

ಜಿಲ್ಲಾ ಸಮ್ಮೇಳನಕ್ಕೆ ಸಹಕಾರಿಸಿ

ಉಜಿರೆ ಗ್ರಾ.ಪಂ. ಮಾಜಿ ಅಧ್ಯಕ್ಷೆ ಉಷಾಕಿರಣ್ ಕಾರಂತ್ ಶುಭಾ ಶಂಸನೆಗೈದರು. ಗಮಕ ಕಲಾ ಪರಿಷತ್ ತಾಲೂಕು ಅಧ್ಯಕ್ಷ ರಾಮಕೃಷ್ಣ ಭಟ್ ಕಾರ್ಯಕ್ರಮ ನಿರೂಪಿಸಿ, ಗಮಕ ಕಲಾ ಪರಿಷತ್ ಜಿಲ್ಲಾ ಸಮ್ಮೇಳನವನ್ನು ಉಜಿರೆಯಲ್ಲಿ ನಡೆಸಲು ಯೋಚಿಸಿದ್ದುತಾಲೂಕಿನಲ್ಲಿಅನೇಕಹಿರಿಯ ವಿದ್ವಾಂಸರು, ಗಮಕಿಗಳು,ಕಲಾವಿದರಿದ್ದು ಎಲ್ಲರಿಗೆ ಅವಕಾಶ ನೀಡಿ ಅವರ ಸಹಕಾರದಿಂದ ನಡೆಸಲು ಚಿಂತಿಸಲಾಗಿದೆ. ಜನಾರ್ದನ ದೇವಸ್ಥಾನದ ಆಶ್ರಯದಲ್ಲಿ ನಡೆಯಲಿರುವ ಗಮಕ ಅಷ್ಟಾಹಕ್ಕೆ ಎಲ್ಲರ ಸಹಕಾರ ಕೋರುತ್ತೇವೆ ಎಂದರು.

ಕೋಶಾಧಿಕಾರಿ ಸುವರ್ಣಕುಮಾರಿ ಕಲ್ಲೂರಾಯ ಸ್ವಾಗತಿಸಿ, ರಮೇಶ್ ಮಯ್ಯ ವಂದಿಸಿದರು.

ಜೂ 14ರವರೆಗೆ ಕಾರ್ಯಕ್ರಮ

ಜೂ 14ರವರೆಗೆ ಪ್ರತಿ ಸಂಜೆ 6 ರಿಂದ 7.30ರವರೆಗೆ ತಾಲೂಕಿನ ವಿವಿಧ ವಿದ್ವಾಂಸರಿಂದ ಪೌರಾಣಿಕ ಕಾವ್ಯ ಭಾಗದ ವಾಚನ ಹಾಗು ವ್ಯಾಖ್ಯಾನ ನಡೆಯಲಿದೆ. ಮೊದಲ ದಿನ ಹರಿನಿಂದಾಸ್ತುತಿ ಕಾವ್ಯವನ್ನು ಉಪನ್ಯಾಸಕಿ ಶ್ರೀವಿದ್ಯಾ ಐತಾಳ್ ಸುಶ್ರಾವ್ಯವಾಗಿ ವಾಚಿಸಿ, ಮಧೂರು ಮೋಹನ ಕಲ್ಲೂರಾಯ ವ್ಯಾಖ್ಯಾನಿಸಿದರು. ಗಮಕ ಕಲಾಸಕ್ತರು ಉಪಸ್ಥಿತರಿದ್ದರು.

'ಆತ್ಮಶಕ್ತಿ' ಯಿಂದ ಉಚಿತ ವೈದ್ಯಕೀಯ, ನೇತ್ರ ತಪಾಸಣೆ, ದಂತ ಚಿಕಿತ್ಸಾ ಶಿಬಿರ

ಉತ್ತಮ ಆರೋಗ್ಯ ವ್ಯಕ್ತಿಯ ನಿಜವಾದ ಶ್ರೀಮಂತಿಕೆ



ಅಳದಂಗಡಿ: ಆತ್ಮಶಕ್ತಿ ವಿವಿಧೋದ್ದೇಶ ಸಹಕಾರಿ ಸಂಘದ ಅಳದಂಗಡಿ ಶಾಖೆಯ ವತಿಯಿಂದ ಉಚಿತ ವೈದ್ಯಕೀಯ, ನೇತ್ರ ತಪಾಸಣಾ, ದಂತ ಚಿಕಿತ್ಸಾ ಮತ್ತು ರಕ್ತದಾನ ಶಿಬಿರವು ಇಲ್ಲಿನ ಶ್ರೀ ಗುರು ಸಭಾ ಭವನದಲ್ಲಿ ನಡೆಯಿತು.

ಶಿಬಿರವನ್ನು ಉದ್ಘಾಟಿಸಿ ಮಾತನಾಡಿದ ಬಳಂಜದ ಬ್ರಹ್ಮಶ್ರೀ ನಾರಾಯಣ ಗುರು ಸೇವಾ ಸಂಘದ ಅಧ್ಯಕ್ಷ ಸಂತೋಷ್ ಪಿ. ಕೋಟ್ಯಾನ್, ಸಮಾಜದಲ್ಲಿ ಶ್ರೀಮಂತ ವ್ಯಕ್ತಿ ಎಂದರೆ ಹಣ ಇರುವವನಲ್ಲ, ಒಳ್ಳೆಯ ಆರೋಗ್ಯ ಇರುವ ವ್ಯಕ್ತಿ ಶ್ರೀಮಂತ. ಈ ನಿಟ್ಟಿನಲ್ಲಿ ನಿರಂತರವಾಗಿ ಶಿಬಿರಗಳನ್ನು ಆಯೋಜಿಸಿ ಉತ್ತಮ ಆರೋಗ್ಯಪೂರ್ಣ ಸಮಾಜ ನಿರ್ಮಿಸುವಲ್ಲಿ ಆತ್ಮಶಕ್ತಿ ಸಹಕಾರ ಸಂಘದ ಪಾತ್ರ ಹೆಚ್ಚಿದೆ ಎಂದು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಆತ್ಮಶಕ್ತಿ ಸಂಘದ ಅಧ್ಯಕ್ಷ ಚಿತ್ತರಂಜನ್ ಬೋಳಾರ್ ಮಾತನಾಡಿ, ಸಂಘವು 14 ವರ್ಷಗಳಿಂದ ಆರೋಗ್ಯ ಶಿಬಿರವನ್ನು ನಿರಂತರವಾಗಿ ನಡೆಸಿಕೊಂಡು ಬರುತ್ತಿದೆ. ಇದು ಸಂಘದ 110ನೇ ಉಚಿತ ವೈದ್ಯಕೀಯ ಶಿಬಿರವಾಗಿದೆ. ಹಣ ಕಾಸಿನಲ್ಲಿ ನಾವು ಎಷ್ಟೆ ಸದೃಢರಿದ್ದರೂ, ಆರೋಗ್ಯವು ನಮಗೆ ಮುಖ್ಯ. ಇಂತಹ ಉಚಿತ ಆರೋಗ್ಯ ಶಿಬಿರಗಳಲ್ಲಿ ತಪಾಸಣೆ ಮಾಡಿಸುವುದರ ಮೂಲಕ ಆರೋಗ್ಯದ ಬಗ್ಗೆ ಹೆಚ್ಚಿನ ಕಾಳಜಿ ವಹಿಸಬಹುದು ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಸಂಘದ ಅಳದಂಗಡಿ ಶಾಖೆಯ ಕಟ್ಟಡದ ಮಾಲೀಕ ವಿಶ್ವನಾಥ ಕುದ್ಯಾಡಿ, ಬೆಳ್ತಂಗಡಿ ಜೆಸಿಐ ಕಾರ್ಯದರ್ಶಿ ರಕ್ಷಿತ್ ಅಂಡಿಂಜೆ, ಸಮುದಾಯ ದಂತ ಆರೋಗ್ಯ ವಿಭಾಗ, ದೇರಳಕಟ್ಟೆಯ ಯೆನೆಪೋಯ ದಂತ ಕಾಲೇಜು ಮತ್ತು ಆಸ್ಪತ್ರೆಯ ಸಾರ್ವಜನಿಕ ಸಂಪರ್ಕ ಅಧಿಕಾರಿ ಭರತ್ ಕುಮಾರ್, ಸಂಘದ ನಿರ್ದೇಶಕರಾದ ರಮಾನಾಥ್ ಸನಿಲ್, ಗೋಪಾಲ್ ಎಂ., ಶಿರ್ಲಾಲು ನಾರಾಯಣ ಗುರು ಸೇವಾ ಸಂಘದ ಉಪಾಧ್ಯಕ್ಷ ಹರೀಶ್ಚಂದ್ರ ಕಲ್ಲಾಜೆ, ಗ್ರಾಮೀಣ ಆರೋಗ್ಯ ರಕ್ಷಣೆ ಮತ್ತು ಅಭಿವೃದ್ಧಿ ಕೇಂದ್ರದ ಮೆಡಿಕಲ್ ಆಫಿಸರ್ ಡಾ. ಶಿರಿಶ್, ಸಮುದಾಯ ದಂತ ವಿಭಾಗದ ಉಪಾನ್ಯಾಸಕ ಡಾ. ಮಿಥ್ರಾ, ಹಿರಿಯ ವೈದಕೀಯ ಸಮಾಜ ಸೇವಾ ಅಧಿಕಾರಿ ಡಾ. ಸ್ಮಿತಾ ಮತ್ತಿತರರು ಉಪಸ್ಥಿತರಿದ್ದರು.

ಬಳಂಜ ನಾರಾಯಣ ಗುರು ಸೇವಾ ಸಂಘ, ಜೆಸಿಐ ಬೆಳ್ತಂಗಡಿ, ಶಿರ್ಲಾಲು ನಾರಾಯಣ ಗುರು ಸೇವಾ ಸಂಘ ಹಾಗೂ ನಾವಾರ ಯುವಶಕ್ತಿ ಜಂಟಿ ಸಹಯೋಗದೊಂದಿಗೆ ಶಿಬಿರ ಆಯೋಜನೆ ಮಾಡಲಾಗಿತ್ತು. ಈ ಶಿಬಿರದಲ್ಲಿ ಬಸವ ಆಕ್ಯೂ ಅಕಾಡೆಮಿಯ ಡಾ. ಬಸವರಾಜ್ ಕೆ. ಅವರ ವಿದ್ಯಾರ್ಥಿಯಾದ ಸುಕೇಶ್ ಜೈನ್ ತಂಡದಿಂದ ಕಲರ್ ಥೆರಪಿಯನ್ನು ಆಯೋಜಿಸಲಾಗಿತ್ತು. ಸುಮಾರು 150ಕ್ಕೂ ಮಿಕ್ಕಿ ಶಿಬಿರಾರ್ಥಿಗಳು ಪ್ರಯೋಜನವನ್ನು ಪಡೆದುಕೊಂಡರು.

ಸಂಘದ ಅಳದಂಗಡಿ ಶಾಖೆಯ ಗುಮಾಸ್ತೆ ಸ್ವಾತಿ ಎಸ್. ಸ್ವಾಗತಿಸಿ, ಮೂಡಬಿದಿರೆ ಶಾಖೆಯ ಹಿರಿಯ ಶಾಖಾಧಿಕಾರಿ ರವಿಕಲಾ ವಂದಿಸಿದರು. ಸಂಘದ ಅಳದಂಗಡಿ ಶಾಖೆಯ ಶಾಖಾಧಿಕಾರಿ ಕಾವ್ಯಶ್ರೀ ಕಾರ್ಯಕ್ರಮ ನಿರೂಪಿಸಿದರು.

ವಿದ್ಯಾರ್ಥಿ ಜೀವನದಲ್ಲಿ ಎದುರಾಗುವ ಸವಾಲು ಮೆಟ್ಟಿನಿಂತರೆ ಯಶಸ್ಸು ನಿಶ್ಚಿತ



ಮಂಗಳೂರು: ಕಾಲೇಜು ಜೀವನ ಗೋಲ್ಡನ್ ಲೈಫ್ ಎಂದು ಉಲ್ಲೇಖಿಸುತ್ತೇವೆ ಯಾದರೂ ಈ ಅವಧಿಯಲ್ಲೇ ನಮ್ಮ ಭವಿಷ್ಯ ರೂಪಿಸಿಕೊಳ್ಳುವ ನಿರ್ಧಾರ ಮಾಡಬೇಕಿದೆ. ವಿದ್ಯಾರ್ಥಿ ಜೀವನದಲ್ಲಿ ಎದುರಾಗುವ ಸವಾಲುಗಳನ್ನು ಮೆಟ್ಟಿನಿಂತರೆ ಯಶಸ್ಸು ನಿಶ್ಚಿತ ಎಂದು ಕಾವೂರು ಸ. ಪ್ರ. ದರ್ಜೆ ಕಾಲೇಜಿನ ಪ್ರಾಂಶುಪಾಲೆ ಮಮತಾ ಎ. ಹೇಳಿದರು.

ಕಾವೂರು ಕಾಲೇಜಿನ ಆಡಿಟೋರಿಯಂನಲ್ಲಿ ವಿದ್ಯಾರ್ಥಿ ಪರಿಷತ್ ಉದ್ಘಾಟನೆ, ಹೊಸ ವಿದ್ಯಾರ್ಥಿಗಳ ಆಗಮನ, ಸಾಧಕ ವಿದ್ಯಾರ್ಥಿ ಗಳಿಗೆ ಗೌರವಾರ್ಪಣೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಹಿರಿಯ ಪತ್ರಕರ್ತ ವಿಜಯ್ ಕೋಟ್ಯಾನ್ ಮಾತನಾಡಿ, ನಮ್ಮ ಪೋಷಕರು, ಗುರುಗಳ ಮಾರ್ಗದರ್ಶನದೊಂದಿಗೆ ನಾವು ಮುನ್ನಡೆದಲ್ಲಿ ನಮ್ಮ ನಿರೀಕ್ಷೆ, ಕನಸು ಸಾಕಾರಗೊಳ್ಳಲು ಸಾಧ್ಯ ಎಂದು ಹೇಳಿದರು.

ಪ್ಯಾರದೀಪ್ ಫಾಸ್ಪಟೇಸ್ ಲಿಮಿಟೆಡ್‌ನ ಸಾರ್ವಜನಿಕ ಸಂಪರ್ಕಾಧಿಕಾರಿ ವಿವೇಕ್ ಕೋಟ್ಯಾನ್ ಮಾತನಾಡಿ, ಇಂದು ಉನ್ನತ ಸ್ಥಾನದಲ್ಲಿರುವ ಗಣ್ಯರಲ್ಲಿ ಬಹುತೇಕ ಮಂದಿ ಸರಕಾರಿ ಶಾಲೆಯಲ್ಲಿ ಕಲಿತವರೇ ಎನ್ನುವ ಸತ್ಯವನ್ನು ಅರಿಯಬೇಕು ಎಂದರು.

ಕಾಲೇಜಿನ ನಿರ್ಗ ಮನ ವಿದ್ಯಾರ್ಥಿಗಳು ನೀಡಿದ ಫ್ಯಾನ್ ಹಸ್ತಾಂತರ, ಸಾಧಕ ವಿದ್ಯಾರ್ಥಿಗಳಿಗೆ ಅಭಿನಂದನೆ ನಡೆಯಿತು. ಈ ವೇಳೆ ಪ್ಯಾರದೀಪ್ ಫಾಸ್ಪಟೇಸ್ ಲಿಮಿಟೆಡ್ ನೀಡಿದ ನೀರು ಶುದ್ಧೀಕರಣದ ಯಂತ್ರದ ಉದ್ಘಾಟನೆ ನೆರವೇರಿತು.

ಹಿರಿಯ ಉಪನ್ಯಾಸಕರಾದ ಸರಿತಾ, ಸುಽೀರ್ ಕುಮಾರ್ ಉಚ್ಚಿಲ, ವಿದ್ಯಾರ್ಥಿ ಪರಿಷತ್ ನಾಯಕಿ ಭೂಮಿಕಾ, ಉಪನಾಯಕ ಪ್ರದೀಪ್, ಹಳೇ ವಿದ್ಯಾರ್ಥಿ ಹಾಗೂ ದಾನಿ ಫರ್ಹಾಜ್ ಉಪಸ್ಥಿತರಿದ್ದರು.

ವಿದ್ಯಾರ್ಥಿಗಳ ಉತ್ತಮ ಶೈಕ್ಷಣಿಕ ಸಾಧನೆಗೆ ಆತ್ಮವಿಶ್ವಾಸ ದಾರಿದೀಪ: ಪ್ರೊ. ಮಾಧವ



ಬಂಟ್ವಾಳ: ವಿದ್ಯಾರ್ಥಿಗಳು ಆತ್ಮವಿಶ್ವಾಸವನ್ನು ಹೊಂದಿದ್ದರೆ ಉತ್ತಮ ಶೈಕ್ಷಣಿಕ ಸಾಧನೆಯನ್ನು ಮಾಡಲು ಸಾಧ್ಯ ಎಂದು ಪುಂಜಾಲಕಟ್ಟೆ ಸರಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲ ಪ್ರೊ. ಮಾಧವ ಹೇಳಿದರು.

ಬಂಟ್ವಾಳದ ಸಿದ್ಧಕಟ್ಟೆಯ ಸರಕಾರಿ ಪ್ರಥಮ ದರ್ಜೆ ಕಾಲೇಜಿನ ವಾರ್ಷಿಕೋತ್ಸವ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿ ಅವರು ಮಾತನಾಡಿದರು.

ಈಗ ಸರಕಾರಿ ಕಾಲೇಜುಗಳಲ್ಲಿ ಉತ್ತಮ ಸೌಲಭ್ಯಗಳಿವೆ. ಅವುಗಳನ್ನು ಉಪಯೋಗಿಸಿಕೊಂಡು ಇಂದಿನ ಉದ್ಯೋಗ ಮಾರುಕಟ್ಟೆಗೆ ಬೇಕಾದ ಕೌಶಲಗಳನ್ನು ರೂಢಿಸಿಕೊಂಡರೆ ಸುಲಭವಾಗಿ ಸ್ಪರ್ಧಾತ್ಮಕವಾದ ಉದ್ಯೋಗ ಕ್ಷೇತ್ರಕ್ಕೆ ಪ್ರವೇಶಿಸಬಹುದಲ್ಲದೆ ಉದ್ಯೋಗ ದಾತರೂ ಆಗಬಹುದು. ಹೆತ್ತವರು ಇಟ್ಟಿರುವ ಭರವಸೆಯನ್ನು ಮಕ್ಕಳು ಹುಸಿ ಮಾಡಬಾರದು ಎಂದು ಅವರು ತಿಳಿಸಿದರು.

ಕಾಲೇಜು ಅಭಿವೃದ್ಧಿ ಸಮಿತಿಯ ಸದಸ್ಯ, ಬದನಡಿ ಶ್ರೀ ನಾಗಬ್ರಹ್ಮೇಶ್ವರ ದೇವಸ್ಥಾನದ ವ್ಯವಸ್ಥಾಪನ ಸಮಿತಿಯ ಅಧ್ಯಕ್ಷ ಜಗದೀಶ ಕೊಯಿಲ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿ, ಇಂದಿನ ಸಮಾಜದಲ್ಲಿ ಸಮಸ್ಯೆಗಳಿವೆಯಾದರೂ ಯುವಜನತೆಯು ಜಾಗೃತರಾಗಿದ್ದರೆ ಸಮಾಜದಲ್ಲಿರುವ ಅರೆ ಕೊರೆ ಗಳನ್ನು ನಿವಾರಿಸಿ ಸಮೃದ್ಧವಾದ ದೇಶವನ್ನು ಕಟ್ಟಲು ಸಾಧ್ಯ ಎಂದು ಹೇಳಿದರು.

ಪ್ರಾಂಶುಪಾಲ ಡಾ. ಗಿರೀಶ ಭಟ್ ಅಧ್ಯಕ್ಷತೆ ವಹಿಸಿದ್ದರು.ವಿದ್ಯಾರ್ಥಿ ಕ್ಷೇಮ ಪಾಲನಾಧಿಕಾರಿ ಪ್ರೊ. ಹರಿಪ್ರಸಾದ್ ಶೆಟ್ಟಿ ಪ್ರಾಸ್ತಾವಿಕವಾಗಿ ಮಾತನಾಡಿದರು. ನಿವೃತ್ತ ಶಿಕ್ಷಕ ನಾರಾಯಣ ನಾಯಕ್ ಅವರನ್ನು ಸನ್ಮಾನಿಸಲಾಯಿತು. ಹಿರಿಯ ವಿದ್ಯಾರ್ಥಿ ಸಂಘದ ಅಧ್ಯಕ್ಷ ಶಿವರಾಜ್ ಕುಮಾರ್, ವಿದ್ಯಾರ್ಥಿವೇದಿಕೆಯ ಅಧ್ಯಕ್ಷ ಯಶೋಧರ ಮತ್ತಿತರರು ವೇದಿಕೆಯಲ್ಲಿದ್ದರು.

ಅರ್ತಿಪೊಡಲು ಶ್ರೀ ವಿಷ್ಣುಮೂರ್ತಿ ಕ್ಷೇತ್ರದಲ್ಲಿ ಸರಸ್ವತಿ ವಂದನ ಕಾರ್ಯಕ್ರಮ



ಮಂಗಳೂರು: ದೇವಾಲಯ ಸಂವರ್ಧನಾ ಸಮಿತಿ ಕರ್ನಾಟಕ, ಮಂಗಳೂರು ಮಹಾನಗರ, ಕಾವೂರು ನಗರ ಸಹಯೋಗದೊಂದಿಗೆ ಕುಂಜತ್ತಬೈಲು ಅರ್ತಿಪೊಡಲು ಶ್ರೀ ವಿಷ್ಣು ಮೂರ್ತಿ ದೇವಸ್ಥಾನದಲ್ಲಿ ಸರಸ್ವತಿ ವಂದನ ಕಾರ್ಯಕ್ರಮ ನೆರವೇರಿತು.

ಆಗಮಿಸಿದ ಎಲ್ಲ ವಿದ್ಯಾರ್ಥಿಗಳಿಂದ ಸಂಕಲ್ಪ ಮಾಡಿಸಿ ದೇವರ ಪೂಜೆ, ಸರಸ್ವತಿ ವಂದನ ಕಾರ್ಯಕ್ರಮ ನಡೆಯಿತು. ಕಾರ್ಯಕ್ರಮದ ಉದ್ದೇಶ, ಮಹತ್ವ ಹಾಗೂ ದೇವಾಲಯ ಕಾರ್ಯದ ಬಗ್ಗೆ ನವಭಾರತ ಪ್ರೌಢಶಾಲೆಯ ಮುಖ್ಯೋಪಾಧ್ಯಾಯ ರವಿ ಅಲೆವೂರಾಯ ತಿಳಿಸಿದರು.

ದೇವಸ್ಥಾನದ ಪ್ರದಾನ ಅರ್ಚಕ ವಿದ್ವಾನ್ ನಾರಾಯಣ ಮಯ್ಯ ಸರಸ್ವತಿ ಪೂಜೆಯನ್ನು ನೆರವೇರಿಸಿದರು. ದೇವಸ್ಥಾನದ ಅಧ್ಯಕ್ಷ ವಿಠ್ಠಲ ಆಳ್ವ, ಆಡಳಿತ ಮೊಕ್ತೇಸರ ಡಾ.ನರೇಶ್ ರೈ ಡೆಪ್ಪುಣಿಗುತ್ತು ಹಾಗೂ ಆಡಳಿತ ಮಂಡಳಿಯ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಮಂಗಳೂರು ಸಮಿತಿ ಸಂಯೋ ಜಕ ಸುಂದರ್ ಆಚಾರ್ಯ ಪ್ರಾಸ್ತಾವಿ ಕವಾಗಿ ಮಾತನಾಡಿದರು. ವಿಭಾಗ ಸಂಯೋಜಕ ಗಣೇಶ್ ಪ್ರಸಾದ್ ಭಾಗವಹಿಸಿದ್ದರು. ಮೋಹನದಾಸ್ ನಿರೂಪಿಸಿದರು. ನಗರ ಸಂಯೋಜಕ ರಮೇಶ್ ಶೆಟ್ಟಿ ವಿವೇಕನಗರ ಪುಸ್ತಕ ವಿತರಣೆ ಕಾರ್ಯವನ್ನು ಸಂಯೋಜಿಸಿದರು. ವಿದ್ಯಾರ್ಥಿಗಳು, ಪೋಷಕರು ಭಾಗವಹಿಸಿದ್ದರು. ಹಿರಿಯರಾದ ಶೇಖರ್ ಕೋಟ್ಯಾನ್ ಕುಳ, ಭಾಸ್ಕರ್ ಶೇಖ, ಚಂದ್ರರಾಜ್ ಶೆಟ್ಟಿ ದೋಣಿಂಜೆಗುತ್ತು ಸಹಕರಿಸಿದರು. ಎಲ್ಲರಿಗೂ ಪುಸ್ತಕ ಹಾಗೂ ಪೆನ್ಸಿಲ್, ಪೆನ್‌ಗಳನ್ನು ವಿತರಿಸಲಾಯಿತು.

ಕಲ್ಲಾಪು ಮಾಗಂದಡಿ ಬಳಿ ರಸ್ತೆಗೆ ಅವೈಜ್ಞಾನಿಕ ಮೋರಿ ಅಳವಡಿಕೆ

ಗುತ್ತಿಗೆದಾರರ ಎಡವಟ್ಟು: ವಾಹನ ಸಂಚಾರ ದುಸ್ತರ!

ಮುಲ್ಕಿ: ಪಡುಪಣಂಬೂರು ತೋಕೂರು ಎಸ್ ಕೋಡಿ ಪ್ರಧಾನ ರಸ್ತೆಯ ಕಲ್ಲಾಪು ಮಾಗಂದಡಿ ಬಳಿ ಪಡು ಪಣಂಬೂರು ಗ್ರಾ. ಪಂ. ವತಿಯಿಂದ ಗುತ್ತಿಗೆದಾರರ ಮೂಲಕ ಮೋರಿ ಅಳವಡಿಕೆ ಕಾಮಗಾರಿ ಅವೈಜ್ಞಾನಿಕವಾಗಿ ನಡೆಯುತ್ತಿದ್ದು ಸಂಚಾರ ದುಸ್ತರವಾಗಿ ಪರಿಣಮಿಸಿದೆ.

ಪಡುಪಣಂಬೂರು ಗ್ರಾ. ಪಂ. ವ್ಯಾಪ್ತಿಯ ಕಲ್ಲಾಪು ಮಾಗಂದಡಿ ಬಳಿ ಕಳೆದ ಹಲವಾರು ವರ್ಷಗಳಿಂದ ಮಳೆ ನೀರು ಸರಿಯಾಗಿ ಹರಿದು ಹೋಗದೆ ಕೃತಕ ನೆರೆ ಉಂಟಾಗಿ ಕೃಷಿ ಹಾನಿ ಸಂಭವಿಸುತ್ತಿದ್ದು, ಸ್ಥಳೀಯ ಕೃಷಿಕರ ಬೇಡಿಕೆಗೆ ಮಣಿದು ಪಂಚಾಯತ್ ಈ ಭಾಗದಲ್ಲಿರುವ ಹಳೆ ಮೋರಿ ತೆಗೆದು ಹೊಸ ಮೋರಿ ಅಳವಡಿಕೆ ಕಾಮಗಾರಿಗೆ ಗುತ್ತಿಗೆದಾರರಿಗೆ ಅನುಮತಿ ನೀಡಲಾಗಿತ್ತು. ಆದರೆ ಗುತ್ತಿಗೆದಾರರ ಅವೈಜ್ಞಾನಿಕ ಕಾಮಗಾರಿಯಿಂದ ಹಾಗೂ ಶುಕ್ರವಾರ ಬೆಳಿಗ್ಗೆ ಸುರಿದ ಭಾರೀ ಮಳೆಗೆ ರಸ್ತೆಯಲ್ಲಿ ಹೊಂಡ ಬಿದ್ದು ವಾಹನ ಸಂಚಾರ ದುಸ್ತರವಾಗಿ ಪರಿಣಮಿಸಿದೆ.



ಇದಕ್ಕೆ ಸಾಕ್ಷಿ ಎಂಬಂತೆ ಶುಕ್ರವಾರ ಬೆಳಿಗ್ಗೆ ಟಿಪ್ಪರ್ ಹಾಗೂ ಆಟೋ ರಸ್ತೆ ನಡುವಿನ ಹೊಂಡಕ್ಕೆ ಬಿದ್ದು ವಾಹನ ಸಂಚಾರ ಅಸ್ತವ್ಯಸ್ತಗೊಂಡಿತು. ಕೂಡಲೇ ಸ್ಥಳೀಯರು ವಾಹನವನ್ನು ಮೇಲಕ್ಕೆತ್ತಿ ವಾಹನ ಸಂಚಾರ ಸುಗಮಗೊಳಿಸಿದ್ದಾರೆ.

> **ರಸ್ತೆ ಮತ್ತಷ್ಟು ಕಿರಿದು**
>
> ರಸ್ತೆಗೆ ಮೋರಿ ಅಳವಡಿಕೆ ಕಾಮಗಾರಿ ಅವೈಜ್ಞಾನಿಕವಾಗಿ ನಡೆಯುತ್ತಿದ್ದು, ಕೂಡಲೇ ಸರಿಪಡಿ ಸಬೇಕು. ಇದರಿಂದಾಗಿ ರಸ್ತೆ ಮತ್ತಷ್ಟು ಕಿರಿದಾಗಿ ಕಾಣಿಸುತ್ತಿದ್ದು, ಭಾರೀ ಗಾತ್ರದ ವಾಹನಗಳ ಸಂಚಾರಕ್ಕೆ ಅಪಾ ಯವಾಗುವ ಸಾಧ್ಯತೆ ಇದೆ. ಈ ಸಂಬಂಧ ಕೂಡಲೇ ಪಂಚಾಯತ್ ಆಡಳಿತ ಅಧಿಕಾರಿಗಳು ಎಚ್ಚೆತ್ತು ಗುತ್ತಿಗೆದಾರರಿಗೆ ಸರಿಯಾದ ಕಾಮಗಾರಿ ನಡೆಸುವಂತೆ ನಿರ್ದೇಶನ ನೀಡಬೇಕು.
>
> ● ವಿಜಯ್ ಕುಮಾರ್ ರೈ, ಸ್ಥಳೀಯ ಕೃಷಿಕ

ತೆಕ್ಕಟ್ಟೆ 'ಯಶಸ್ವಿ' ಯಕ್ಷಗಾನ ಕೇಂದ್ರದ ತರಗತಿ ಶುಭಾರಂಭ

ಅತ್ಯುತ್ತಮ ಗುರುವಿದ್ದಲ್ಲಿ ಉತ್ತಮ ಶಿಕ್ಷಣ ನಿಶ್ಚಿತ: ಗುಂಡ್ಮಿ



ಕೋಟ: ವೇಷ ಮಾಡುವ ತುರ್ತಿನಿಂದ ಯಕ್ಷಗಾನ ಕಲಿಯುವ ಅನಿವಾರ್ಯತೆ ಆರೋಗ್ಯಕರವಾದ ಬೆಳವಣಿಗೆಯಲ್ಲ, ಸಮರ್ಥ ಗುರುಗಳಿಂದ ಅಭ್ಯಾಸ ಮಾಡದೇ ರಂಗಕ್ಕಿಳಿಯುವುದು ಯಕ್ಷ ಶಿಕ್ಷಣಕ್ಕೆ ಅಪಚಾರ. ಯಕ್ಷಗಾನದಲ್ಲಿ ಅಪಸವ್ಯಗಳು ದೂರವಾಗಬೇಕು. ಕ್ರಮಬದ್ಧವಾದ ಯಕ್ಷ ಶಿಕ್ಷಣವನ್ನು ಕಲಿಯಬೇಕಾದರೆ ಇಂತಹ ಕೇಂದ್ರವನ್ನು ಆಯ್ಕೆ ಮಾಡಿಕೊಳ್ಳಬೇಕು. ಅತ್ಯುತ್ತಮ ಗುರುವಿದ್ದಲ್ಲಿ ಉತ್ತಮ ಶಿಕ್ಷಣ ನಡೆಯುತ್ತದೆ ಎಂಬುವುದಕ್ಕೆ ತೆಕ್ಕಟ್ಟೆ ಯಶಸ್ವಿ ಕಲಾವೃಂದ ಸಾಕ್ಷಿ ಎಂದು ಯಕ್ಷಗಾನ ವಿದ್ವಾಂಸ ಪ್ರಾಚಾರ್ಯ ಗುಂಡ್ಮಿ ಸದಾನಂದ ಐತಾಳ್ ಹೇಳಿದರು.

ತೆಕ್ಕಟ್ಟೆ ಹಯಗ್ರೀವದಲ್ಲಿ ಯಶಸ್ವಿ ಕಲಾವೃಂದ ಕೊಮೆ ತೆಕ್ಕಟ್ಟೆ ಇದರ ಯಕ್ಷಗಾನ ಕೇಂದ್ರದ ಆರು ತಿಂಗಳ ಕಾಲ ನಿರಂತರ ನಡೆಯುವ ಭಾಗವತಿಗೆ, ಚೆಂಡೆ, ಮದ್ದಳೆ, ಹೆಜ್ಜೆ ತರಗತಿಯನ್ನು ಉದ್ಘಾಟಿಸಿ ಮಾತನಾಡಿದರು.

ಮುಖ್ಯ ಅಭ್ಯಾಗತರಾದ ಸಾಲಿಗ್ರಾಮ ಶ್ರೀಗುರು ನರಸಿಂಹ ದೇಗುಲದ ಆಡಳಿತ ಮಂಡಳಿಯ ಸದಸ್ಯ ಕೆ. ತಾರಾನಾಥ ಹೊಳ್ಳ ಮಾತನಾಡಿ, ಯಶಸ್ಸಿನ ಹಾದಿಯಲ್ಲೇ ಹಲವು ವರ್ಷಗಳಿಂದ ಯಕ್ಷಗಾನ ತರಗತಿಯನ್ನು ಮಾಡುತ್ತಾ ಅನೇಕ ವಿದ್ಯಾರ್ಥಿಗಳನ್ನು ರಂಗಕ್ಕೆ ತಯಾರು ಮಾಡುವುದು ಸುಲಭವಲ್ಲ ಎಂದು ಶ್ಲಾಘಿಸಿದರು.

ಪ್ರಾಚಾರ್ಯ ದೇವದಾಸ್ ರಾವ್ ಕೂಡ್ಲಿ, ಗುರು ಲಂಬೋದರ ಹೆಗಡೆ ಪ್ರಾಸ್ತಾವಿಕ ಮಾತನಾಡಿದರು. ಗುರು ರೋಹಿತ್ ತೀರ್ಥಹಳ್ಳಿ ಉಪಸ್ಥಿತರಿದ್ದರು.

ಸುತ್ತಮುತ್ತ

ಇಂದು ವಿವಿಧೆಡೆ ವಿದ್ಯುತ್ ವ್ಯತ್ಯಯ

ಕುಂದಾಪುರ: ಹಾಲಾಡಿ ವಿದ್ಯುತ್ ಉಪಕೇಂದ್ರದಿಂದ ಹೊರಡುವ 11 ಕೆ.ವಿ ಬಿದ್ಕಲ್ ಕಟ್ಟೆ ಮತ್ತು ಹೈಕಾಡಿ ಮಾರ್ಗಗಳಲ್ಲಿ ಪಾಲನಾ ಕಾಮಗಾರಿ ಹಮ್ಮಿಕೊಂಡಿಸುವುದರಿಂದ ಬಿದ್ಕಲ್ ಕಟ್ಟೆ, ಮೊಳಹಳ್ಳಿ, ಸೌಡ, ಹಾರ್ದಳ್ಳಿ–ಮಂಡಳ್ಳಿ, ಯಡಾಡಿ–ಮತ್ಯಾಡಿ, ಹೈಕಾಡಿ, ಗೋಳಿಯಂಗಡಿ ಮತ್ತು ಶೇಡಿಮನೆ ಗ್ರಾಮಗಳ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಜೂ.9ರಂದು ಬೆಳಗ್ಗೆ 9ರಿಂದ ಮಧ್ಯಾಹ್ನ 2ರವರೆಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯ ಮಾಡಲಾಗುತ್ತದೆ ಎಂದು ಪ್ರಕಟಣೆ ತಿಳಿಸಲಾಗಿದೆ.

ಪುರಸಭೆ ವ್ಯಾಪ್ತಿಯಲ್ಲಿ ಸಮರ್ಪಕ ಕಸ ವಿಲೇವಾರಿಗೆ ಆಗ್ರಹ

ಕಾರ್ಕಳ: ಪುರಸಭಾ ವ್ಯಾಪ್ತಿಯಲ್ಲಿ ಮನೆಗಳಿಂದ ಮತ್ತು ವಾಣಿಜ್ಯ ಸಂಕೀರ್ಣಗಳಿಂದ ಕಸ ಸಂಗ್ರಹ ಮಾಡದ ಪರಿಣಾಮ ಎಲ್ಲಾ ಕಡೆಯಲ್ಲಿಯೂ ಕಸದ ರಾಶಿಯಿಂದಾಗಿ ಪರಿಸರ ದುರ್ನಾತ ಬೀರುತ್ತಿದೆ. ಸಾರ್ವಜನಿಕರು ನಡೆದಾಡದಂತ ಪರಿಸ್ಥಿತಿ ನಿರ್ಮಾಣವಾಗಿದೆ. ಪುರಸಭೆ ತಕ್ಷಣ ಕ್ರಮ ಜರುಗಿಸಬೇಕು ಎಂದು ಪುರಸಭೆಯ ನಿಕಟಪೂರ್ವ ಸದಸ್ಯ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಶುಭದರಾವ್ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಈ ಹಿಂದೆ ಖಾಸಗಿ ಸಂಸ್ಥೆಯವರು ಕಸ ವಿಂಗಡೆಯ ಜವಾಬ್ದಾರಿ ವಹಿಸಿಕೊಂಡಿದ್ದ ಪರಿಣಾಮ ಸಮರ್ಪಕವಾಗಿ ಕಸ ವಿಲೇವಾರಿಯಾಗುತ್ತಿತ್ತು. ಅವರು ಯಾವುದೇ ಫಲಾಪೇಕ್ಷೆ ಇಲ್ಲದೆ ಉತ್ತಮ ಸೇವೆ ಮಾಡುತ್ತಿದ್ದರು ಆದರೆ ಅವರಿಗೆ ನೀಡಿದ ರಾಜಕೀಯ ಪ್ರೇರಿತ ಕಿರುಕುಳ ಪರಿಣಾಮ ಅವರು ಅರ್ಧದಲೇ ಬಿಟ್ಟು ಹೋದ ಪರಿಣಾಮ ಸಾರ್ವಜನಿಕರು ಈ ಸಮಸ್ಯೆ ಅನುಭವಿಸುವಂತಾಗಿದೆ. ನಮ್ಮ ಆಡಳಿತದ ಅವಧಿಯಲ್ಲಿ ಕಸ ವಿಲೇವಾರಿಯಲ್ಲಿ ಕಾರ್ಕಳ ಪುರಸಭೆಯು ರಾಷ್ಟ್ರ ಮತ್ತು ರಾಜ್ಯ ಪ್ರಶಸ್ತಿಗೆ ಪಾತ್ರವಾಗಿತ್ತು. ಆದರೆ ಈಗಿನ ಪರಿಸ್ಥಿತಿ ಚಿಂತಾಜನಕವಾಗಿದೆ. ಈ ಬಗ್ಗೆ ಶಾಸಕರು ತಕ್ಷಣ ಕಾಳಜಿ ವಹಿಸಿ ಕ್ರಮ ಜರುಗಿಸಲು ಪ್ರಯತ್ನಿಸಬೇಕು ಎಂದು ಶುಭದರಾವ್ ಆಗ್ರಹಿಸಿದ್ದಾರೆ.

ಪರ್ಲಡ್ಕ ಶಾಲೆಯಲ್ಲಿ ಪರಿಸರ ದಿನಾಚರಣೆ, ಸ್ವಚ್ಛತಾ ಅಭಿಯಾನ

ಪುತ್ತೂರು: ಪುತ್ತೂರು ನಗರಸಭೆ ಸಹಯೋಗದೊಂದಿಗೆ ಸಾಹಸ ಸಂಸ್ಥೆ ಬೆಂಗಳೂರು ಹಾಗೂ ಎಚ್‌ಡಿಬಿ ಫೈನಾನ್ಶಿಯಲ್ ಸರ್ವೀಸಸ್ ಆರ್ಥಿಕ ನೆರವಿನೊಂದಿಗೆ ಮಾನ್ಯ ಪೌರಾಯುಕ್ತರ ಮಾರ್ಗದರ್ಶನದಂತೆ ಪುತ್ತೂರು ಪರ್ಲಡ್ಕ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯ ಎದುರು ಪರಿಸರ ದಿನಾಚರಣೆ ಪ್ರಯುಕ್ತ ಸ್ವಚ್ಛ ಅಭಿಯಾನ ಮತ್ತು ತ್ಯಾಜ್ಯ ಬಿಸಾಡಿರುವ ಪ್ರದೇಶವನ್ನು ಸ್ವಚ್ಛಗೊಳಿಸಿ ಕೈತೋಟ ನಿರ್ಮಿಸಿ ಗಿಡಗಳನ್ನು ನೆಡಲಾಯಿತು. ಮತ್ತು ಮಕ್ಕಳಿಗೆ ತ್ಯಾಜ್ಯದ ಅರಿವು ಮೂಡಿಸಲಾಯಿತು. ಪೌರಾಯುಕ್ತೆ ವಿದ್ಯಾ ಎಂ. ಕಾಳೆ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಪುತ್ತೂರು ನಗರಸಭೆ ಸಹಾಯಕ ಕಾರ್ಯಪಾಲಕ ಅಭಿಯಂತರ ಶ್ರೀ ಶರೀಂತನಾಥ್ ಗೈ, ಹಿರಿಯ ಆರೋಗ್ಯ ನಿರೀಕ್ಷಕ ಶ್ರೀಮತಿ ಶ್ವೇತಾ ಕಿರಣ್, ಎಚ್‌ಡಿಬಿ ಫೈನಾನ್ಶಿಯಲ್ ಸರ್ವೀಸಸ್ ಶಾಖಾ ವ್ಯವಸ್ಥಾಪಕ ಶ್ರೀ ಅಭಿಷೇಕ್, ಹಾಗೂ ಸಹೋದ್ಯೋಗಿಗಳು, ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ಪರ್ಲಡ್ಕ ಮುಖ್ಯ ಶಿಕ್ಷಕರು, ಸಹ ಶಿಕ್ಷಕರು ಹಾಗೂ ವಿದ್ಯಾರ್ಥಿಗಳು, ಸಾಹಸ್ ಸಂಯೋಜಕ ಶ್ರೀ ಅನಂತ ದೇಶಭಂಡಾರಿ ಹಾಗೂ ಮೇಲ್ವಿಚಾರಕರು ಶ್ರೀ ಗಣೇಶ, ಶ್ರೀ ಇರ್ಫಾನ್ ಉಪಸ್ಥಿತರಿದ್ದರು.

ಬಿಜೂರು ಶಾಲೆಯಲ್ಲಿ ವಿಶ್ವ ಪರಿಸರ ದಿನಾಚರಣೆ

ಬೈಂದೂರು: ಬಿಜೂರು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಶಾಲಾ ವಿದ್ಯಾರ್ಥಿಗಳು ಎಸ್‌ಡಿಎಂಸಿ ಸದಸ್ಯರು ಶಿಕ್ಷಕರು, ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಸಹಕಾರದೊಂದಿಗೆ ಶಾಲಾ ತೋಟದಲ್ಲಿ ಶಾಲಾ ಅಭಿವೃದ್ಧಿ ಅಧ್ಯಕ್ಷ ರಮೇಶ ಪಿ. ದೇವಾಡಿಗ ಸಸಿ ನೆಡುವ ಮೂಲಕ ಚಾಲನೆ ನೀಡಿದರು. ಶಿಕ್ಷಣ ಸಂಯೋಜಕ ರಾಜೇಶ್ ಶುಭಹಾರೈಸಿದರು. ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಮೇಲ್ವಿಚಾರಕಿ ಪರಿಸರದ ಬಗ್ಗೆ ಮಾಹಿತಿ ನೀಡಿದರು. ಮುಖ್ಯ ಶಿಕ್ಷಕ ಮಂಜುನಾಥ ಎಸ್. ಬಿಜೂರ್ ಇದ್ದರು.

ಹಟ್ಟಿಯಂಗಡಿ ವಸತಿ ಶಾಲೆ

ಕುಂದಾಪುರ ಹಟ್ಟಿಯಂಗಡಿ ಶ್ರೀ ಸಿದ್ಧಿವಿನಾಯಕ ವಸತಿ ಶಾಲೆಯ ಪ್ರಾಥಮಿಕ ಶಾಲಾ ವಿಭಾಗದಲ್ಲಿ ವಿಶ್ವ ಪರಿಸರ ದಿನಾಚರಣೆ ಆಚರಿಸಲಾಯಿತು. ಶಾಲಾ ಶೈಕ್ಷಣಿಕ ಸಲಹೆಗಾರ ಸುಜಾತಾ ಸದಾರಾಮ್, ಮುಖ್ಯೋಪಾಧ್ಯಾಯಿನಿ ಹೇಮಮಾಲಿನಿ, ಮೊದಲಾದವರು ಉಪಸ್ಥಿತರಿದ್ದರು.

ವಿವೇಕಾನಂದ ಪಿಯು ಕಾಲೇಜಿನಲ್ಲಿ ವಿವೇಕ ಸಂಕಲ್ಪ | ಡಾ. ವಿರೂಪಾಕ್ಷ ಸಲಹೆ

ಮಾದರಿ ಕುಟುಂಬದಿಂದ ಜೀವನದಲ್ಲಿ ಶಿಸ್ತು



ಪುತ್ತೂರು: ನಗರದ ವಿವೇಕಾನಂದ ಪದವಿ ಪೂರ್ವ ಕಾಲೇಜಿನ ವೈದೇಹಿ ಸಭಾಂಗಣದಲ್ಲಿ ಪ್ರಥಮ ಪಿಯುಸಿ ವಾಣಿಜ್ಯ ಹಾಗೂ ಕಲಾ ವಿಭಾಗದ ವಿದ್ಯಾರ್ಥಿ–ಪೋಷಕರ ಸಮಾವೇಶ 'ವಿವೇಕ ಸಂಕಲ್ಪ–2026' ನಡೆಯಿತು.

ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಆಡಳಿತ ಮಂಡಳಿ ಅಧ್ಯಕ್ಷ ರವೀಂದ್ರ ಪಿ., 65 ವರ್ಷಗಳ ಇತಿಹಾಸವಿರುವ ವಿವೇಕಾನಂದ ಶಿಕ್ಷಣ ಸಂಸ್ಥೆ ಸ್ಥಾಪನೆಯ ಉದ್ದೇಶ ಭಾರತೀಯ ಸಂಸ್ಕೃತಿ, ಹಿಂದು ಜೀವನ ಮೌಲ್ಯಗಳನ್ನು ನಿರ್ಮಾಣ ಮಾಡುವುದಾಗಿದೆ. ಈ ದೇಶ ವಿಕಸಿತ ಭಾರತ ಆಗಬೇಕಾದರೆ ಇಂದಿನ ಯುವಜನಾಂಗ ಶಕ್ತಿ ತುಂಬಬೇಕಾಗಿದೆ. ವಿದ್ಯಾರ್ಥಿಗಳಿಗೆ ಶಿಕ್ಷಣ ಜೊತೆಗೆ ಜವಾಬ್ದಾರಿಯುತ, ಪ್ರಜ್ಞಾವಂತ ನಾಗರಿಕರಾಗಿ ಬೆಳೆಯಬೇಕು. ಸಮಾಜದಲ್ಲಿ ಎಲ್ಲವನ್ನು ಪಡೆದು ಮರಳಿ ಸಮಾಜಕ್ಕೆ ಋಣ ಸಂದಾಯ ಮಾಡುವ ಕರ್ತವ್ಯ ವಿದ್ಯಾರ್ಥಿಗಳು ಪಾಲಿಸಬೇಕು ಎಂದರು.

ಸಂಪನ್ಮೂಲ ವ್ಯಕ್ತಿಯಾಗಿದ್ದ ಉಡುಪಿಯ ಡಾ.ಎ.ವಿ. ಬಾಳಿಗ ಸ್ಮಾರಕ ಆಸ್ಪತ್ರೆಯ ಖ್ಯಾತ ಮನೋವೈದ್ಯ ಹಾಗೂ ಲೇಖಕ ಡಾ. ವಿರೂಪಾಕ್ಷ ದೇವರಮನೆ, ಮಕ್ಕಳಿಗೆ ತಂದೆ ತಾಯಿಯರೇ ಬಹು ದೊಡ್ಡ ಮಾದರಿ. ಇಂತಹ ಮಾದರಿ ಕುಟುಂಬದಿಂದ ಮಕ್ಕಳಲ್ಲಿ ಶಿಸ್ತಿನ ಜೀವನ ಶೈಲಿಯನ್ನು ರೂಪಿಸಿ ಅವರನ್ನು ಉನ್ನತ ಮಟ್ಟಕ್ಕೆ ಏರಲು ಸಹಾಯ ಮಾಡುತ್ತದೆ. ಹಾಗಾಗಿ ವಿದ್ಯಾರ್ಥಿಗಳು ಕೆಟ್ಟ ಚಟಗಳಿಗೆ ಬಲಿ ಆಗದಂತಹ ವಾತಾವರಣ ನಿರ್ಮಾಣ ಮಾಡುವ ಬಹುದೊಡ್ಡ ಜವಾಬ್ದಾರಿ ಪೋಷಕರ ಮುಂದಿದೆ. ಅವರ ಪ್ರೀತಿ, ಕಾಳಜಿ ಮಕ್ಕಳಲ್ಲಿ ಆತ್ಮವಿಶ್ವಾಸ ಹೆಚ್ಚಿಸುತ್ತದೆ ಎಂದು ಹೇಳಿದರು.

ಬಳಿಕ ಕಾಲೇಜಿನಲ್ಲಿ ಲಭ್ಯವಿರುವ ಸಿ.ಎ. ಪ್ರವೇಶ ಪರೀಕ್ಷೆಗಳ ತರಬೇತಿ, ಷೇರು ಮಾರುಕಟ್ಟೆ ಹಾಗೂ ಟ್ಯಾಲಿ ಸರ್ಟಿಫಿಕೇಟ್ ಕೋರ್ಸ್‌ಗಳ ಕುರಿತಾದ ಮಾಹಿತಿ ಹಾಗೂ ವಿದ್ಯಾರ್ಥಿಗಳ ಅಂಕಗಳನ್ನು ದಾಖಲಿಸುವ ಕುರಿತ ಮಾಹಿತಿಗಳನ್ನು ಉಪನ್ಯಾಸಕರಾದ ದೇವಿಪ್ರಸಾದ್ ಹಾಗೂ ಶ್ಯಾಮ್ ಪ್ರಸಾದ್ ನೀಡಿದರು. ವಸತಿ ನಿಲಯದ ಮುಖ್ಯ ನಿಲಯ ಪಾಲಕ ಚೇತನ್ ವಸತಿ ನಿಲಯದ ನಿಯಮಗಳ ಕುರಿತು ಮಾಹಿತಿ ನೀಡಿದರು. ಈ ಸಂದರ್ಭ ಸಂಸ್ಥೆ ಸಂಸ್ಥಾಪಕ ದಿ. ಉರಿಮಜಲು ರಾಮ ಭಟ್ ಜನ್ಮಾಚರಣೆಯ ಪ್ರಯುಕ್ತ ಪುಷ್ಪ ನಮನ ಸಲ್ಲಿಸಲಾಯಿತು. ವೇದಿಕೆಯಲ್ಲಿ ಕಾಲೇಜಿನ ಆಡಳಿತ ಮಂಡಳಿಯ ಕೋಶಾಧಿಕಾರಿ ಸಚಿನ್ ಶೆಣೈ ಉಪಸ್ಥಿತರಿದ್ದರು.

ಪ್ರಾಂಶುಪಾಲ ದೇವಿಚರಣ್ ರೈ ಎಂ. ಸ್ವಾಗತಿಸಿ, ಉಪನ್ಯಾಸಕಿಯರಾದ ಯಶಮಂತಿ ಡಿ. ವಂದಿಸಿದರು. ಉಷಾ ಎ.ಎಂ. ಕಾರ್ಯಕ್ರಮ ನಿರ್ವಹಿಸಿದರು.

ವಿದ್ಯಾರ್ಥಿಗಳಿಗೆ ಸನ್ಮಾನ

ಬಳಿಕ ಭಾರತೀಯ ಸೇನೆಗೆ ಆಯ್ಕೆಯಾದ ಕಾಲೇಜಿನ ಹಿರಿಯ ವಿದ್ಯಾರ್ಥಿ ತಿಲಕ್ ಎಚ್‌ವಿ ಹಾಗೂ ವಾರ್ಷಿಕ ಪರೀಕ್ಷೆಯಲ್ಲಿ ಅತ್ಯಧಿಕ ಅಂಕ ಗಳಿಸಿದ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು.

ಅಲ್ಲಲ್ಲಿ ಪರಿಸರ ದಿನಾಚರಣೆ



ಕುಂಬಳೆ ಸಮೀಪದ ಸೂರಂಬೈಲು ಸರಕಾರಿ ಪ್ರೌಢಶಾಲೆಯಲ್ಲಿ ವಿಶ್ವ ಪರಿಸರ ದಿನ ಆಚರಿಸಲಾಯಿತು. ಮುಖ್ಯೋಪಾಧ್ಯಾಯಿನಿ ಸುನೀತಾ ಎ. ಗಿಡ ನೆಡುವುದರ ಮೂಲಕ ಕಾರ್ಯಕ್ರಮ ಉದ್ಘಾಟಿಸಿದರು. ಪೋಸ್ಟರ್ ರಚನೆ, ರಸಪ್ರಶ್ನೆ ಮುಂತಾದ ಸ್ಪರ್ಧೆಗಳನ್ನು ನಡೆಸಲಾಯಿತು.



ಪುತ್ತೂರು ತಾಲೂಕಿನ ಆದ್ಯನಡ್ಕದ ಜನತಾ ಪ್ರೌಢ ಶಾಲೆಯ ಶ್ಯಾಮಲ ಇಕೋ ಕ್ಲಬ್ ಹಾಗೂ ಜನತಾ ಆಂಗ್ಲ ಮಾಧ್ಯಮ ಪ್ರೌಢ ಶಾಲೆಯ ಸಂಯುಕ್ತ ಆಶ್ರಯದಲ್ಲಿ ವಿಶ್ವ ಪರಿಸರ ದಿನಾಚರಣೆ ನಡೆಯಿತು. ಜನತಾ ಕನ್ನಡ ಮಾಧ್ಯಮ ಅನುದಾನಿತ ಪ್ರೌಢ ಶಾಲೆಯ ಮುಖ್ಯೋಪಾಧ್ಯಾಯ ಟಿ.ಆರ್. ನಾಯ್ಕ್, ಜನತಾ ಆಂಗ್ಲ ಮಾಧ್ಯಮ ಪ್ರೌಢ ಶಾಲೆಯ ಮುಖ್ಯ ಶಿಕ್ಷಕಿ ಅನಿತಾ ಬಿ., ಶ್ಯಾಮಲ ಇಕೋ ಕ್ಲಬ್ ಮಾರ್ಗದರ್ಶಕ ಶಿಕ್ಷಕಿ ಕುಸುಮಾವತಿ, ಜನತಾ ಪದವಿ ಪೂರ್ವ ಕಾಲೇಜಿನ ಅರ್ಥಶಾಸ್ತ್ರ ಉಪನ್ಯಾಸಕಿ ವೀಣಾ ಟಿ., ಹಿಂದಿ ಉಪನ್ಯಾಸಕ ಪ್ರಶಾಂತ್, ಕಚೇರಿ ಸಹಾಯಕ ತಿರುಮಲೇಶ್ವರ ನಾಯ್ಕ್ ಸಹಕರಿಸಿದರು.

ಪೌಷ್ಟಿಕತೆ, ನೈರ್ಮಲ್ಯ ಕುರಿತು ಜನರಲ್ಲಿ ಜಾಗೃತಿ ಮೂಡಿಸಿ: ಗೀತಾ ಹೆಗಡೆ ಸಲಹೆ



ಬಂಟ್ವಾಳ: ದೀನ್ ದಯಾಳ್ ಅಂತ್ಯೋದಯ ಯೋಜನೆ, ಕೌಶಲ್ಯಾಭಿವೃದ್ಧಿ ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ, ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನ (ಎನ್ ಆರ್‌ಎಲ್‌ಎಂ), ಸಂಜೀವಿನಿ ಕರ್ನಾಟಕ ರಾಜ್ಯ ಗ್ರಾಮೀಣ ಜೀವನೋಪಾಯ ಸಂವರ್ಧನ ಸಂಸ್ಥೆ ದಕ್ಷಿಣ ಕನ್ನಡ ಜಿಲ್ಲಾ ಪಂಚಾಯತ್, ತಾ.ಪಂ. ಬಂಟ್ವಾಳ ಹಾಗೂ ಬೆಳಕು ಸಂಜೀವಿನಿ ಗ್ರಾ.ಪಂ. ಮಟ್ಟದ ಒಕ್ಕೂಟ ಪಿಲಾತಬೆಟ್ಟು ಗ್ರಾ.ಪಂ. ಇವರ ಆಶ್ರಯದಲ್ಲಿ ಆಹಾರ ಪೌಷ್ಟಿಕತೆ, ಆರೋಗ್ಯ ಹಾಗೂ ನೀರು ಮತ್ತು ನೈರ್ಮಲ್ಯದ ಕುರಿತು ಎರಡು ದಿನಗಳ ತರಬೇತಿ ಕಾರ್ಯಾಗಾರವು ಪಿಲಾತಬೆಟ್ಟು ಗ್ರಾಮ ಪಂಚಾಯತ್‌ನ ಸಂಜೀವಿನಿ ಸಭಾಂಗಣದಲ್ಲಿ ನಡೆಯಿತು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಬೆಳಕು ಸಂಜೀವಿನಿ ಗ್ರಾಮ ಪಂಚಾಯತ್ ಮಟ್ಟದ ಒಕ್ಕೂಟದ ಅಧ್ಯಕ್ಷೆ ಶಶಿಕಲಾ ಪಿ. ರಾವ್ ವಹಿಸಿದ್ದರು. ಪಿಲಾತಬೆಟ್ಟು ಗ್ರಾ.ಪಂ. ಅಭಿವೃದ್ಧಿ ಅಧಿಕಾರಿ ಗೀತಾ ಹೆಗಡೆ ಕಾರ್ಯಕ್ರಮ ಉದ್ಘಾಟಿಸಿ, ಒಕ್ಕೂಟದ ಸದಸ್ಯರು ಸಾರ್ವಜನಿಕರಿಗೆ ಆರೋಗ್ಯ ಮತ್ತು ನೈರ್ಮಲ್ಯದ ಬಗ್ಗೆ ಜಾಗೃತಿ ಮೂಡಿಸಬೇಕೆಂದರು.

ಸಂಜೀವಿನಿ ತಾಲೂಕು ಕಾರ್ಯಕ್ರಮ ವ್ಯವಸ್ಥಾಪಕಿ ಸುಧಾ ಮಾತನಾಡಿ, ಆಹಾರ, ಪೌಷ್ಟಿಕತೆ, ಆರೋಗ್ಯ ಹಾಗೂ ನೀರು ನೈರ್ಮಲ್ಯದ ಕುರಿತು ಸಮುದಾಯದಲ್ಲಿ ಹೆಚ್ಚಿನ ಅರಿವು ಮೂಡಿಸುವ ಅಗತ್ಯವಿದೆ ಎಂದು ತಿಳಿಸಿದರು. ತಾಲೂಕು ಕೃಷಿಯೇತರ ವ್ಯವಸ್ಥಾಪಕ ಪ್ರದೀಪ್ ಕಾಮತ್, ಜಿಲ್ಲಾ ಸಂಪನ್ಮೂಲ ವ್ಯಕ್ತಿಗಳಾದ ಮೌನೇಶ್ ವಿಶ್ವಕರ್ಮ ಹಾಗೂ ಸುನೀತಾ ನಾಯ್ಕ್ ಉಪಸ್ಥಿತರಿದ್ದರು. ರಮ್ಯಾ ಸ್ವಾಗತಿಸಿ, ಗೀತಾ ವಂದಿಸಿದರು. ಸೀತಾ ನಿರೂಪಿಸಿದರು.

ರಾಮಕೃಷ್ಣ ಮಿಷನ್: ಶೈಕ್ಷಣಿಕ ವರ್ಷದ ಶುಭಾರಂಭ, ಕಲಿಕಾ ಸಾಮಗ್ರಿ ವಿತರಣೆ



ಮಂಗಳೂರು: ರಾಮಕೃಷ್ಣ ಮಿಷನ್ ಮಂಗಳೂರು ವತಿಯಿಂದ 2026–27ನೇ ಶೈಕ್ಷಣಿಕ ವರ್ಷದ ಶುಭಾರಂಭದ ಅಂಗವಾಗಿ ವಿದ್ಯಾರ್ಥಿಗಳಿಗೆ ಶಾಲಾ ಸಾಮಗ್ರಿಗಳ ವಿತರಣಾ ಕಾರ್ಯಕ್ರಮ ಮಂಗಳೂರಿನ ರಾಮಕೃಷ್ಣ ಮಠದಲ್ಲಿ ನೆರವೇರಿತು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ರಾಮಕೃಷ್ಣ ಮಠ ಅಧ್ಯಕ್ಷರಾದ ಸ್ವಾಮಿ ಜಿತಕಾಮಾನಂದಜಿ ವಹಿಸಿದ್ದರು. ಉದ್ಭವ್ ಡೆವಲಪರ್ಸ್ ಮಂಗಳೂರು ಸಂಸ್ಥಾಪಕ ಬಿ. ಕೆ. ಕಿರಣ್ ಮುಖ್ಯ ಅತಿಥಿಯಾಗಿ ಭಾಗವಹಿಸಿ ವಿದ್ಯಾರ್ಥಿಗಳಿಗೆ ಶಾಲಾ ಸಾಮಗ್ರಿಗಳನ್ನು ವಿತರಿಸಿದರು. ವಿದ್ಯಾರ್ಥಿಗಳಲ್ಲಿ ಶಿಕ್ಷಣದ ಬಗ್ಗೆ ಆಸಕ್ತಿ, ಆತ್ಮವಿಶ್ವಾಸ ಮತ್ತು ಸಕಾರಾತ್ಮಕ ಜೀವನ ಮೌಲ್ಯಗಳನ್ನು ಬೆಳೆಸುವ ನಿಟ್ಟಿನಲ್ಲಿ ಇಂತಹ ಕಾರ್ಯಕ್ರಮಗಳು ಮಹತ್ವದ ಪಾತ್ರವಹಿಸುತ್ತವೆ ಎಂದು ಅವರು ಅಭಿಪ್ರಾಯಪಟ್ಟರು.

ರಾಮಕೃಷ್ಣ ಮಿಷನ್ ಮಂಗಳೂರು ಹಲವು ವರ್ಷಗಳಿಂದ 'ವಿವೇಕಾನಂದ ತರಬೇತಿ ಕೇಂದ್ರ'ದ ಮೂಲಕ ಆರ್ಥಿಕ ಹಾಗೂ ಸಾಮಾಜಿಕವಾಗಿ ಹಿಂದುಳಿದ ವಿದ್ಯಾರ್ಥಿಗಳ ಶೈಕ್ಷಣಿಕ ಸಬಲೀಕರಣಕ್ಕಾಗಿ ಕಾರ್ಯನಿರ್ವಹಿಸುತ್ತಿದ್ದು ಅವರಿಗೆ ಶೈಕ್ಷಣಿಕ ನೆರವು, ಮೌಲ್ಯ ಶಿಕ್ಷಣ ಹಾಗೂ ವ್ಯಕ್ತಿತ್ವ ವಿಕಸನಕ್ಕೆ ಪೂರಕವಾದ ತರಬೇತಿಗಳನ್ನು ನೀಡುತ್ತಿದೆ. ಗೋ ಡಿಜಿಟ್ ಜನರಲ್ ಇನ್ಶೂರೆನ್ಸ್ ಲಿಮಿಟೆಡ್ ಸಂಸ್ಥೆಯ ಸಿಎಸ್ ಆರ್ ಸಹಯೋಗದಲ್ಲಿ ಆಯೋಜಿಸಲಾದ ಈ ಕಾರ್ಯಕ್ರಮದ ಅಂಗವಾಗಿ ವಿದ್ಯಾರ್ಥಿಗಳಿಗೆ ಶಾಲಾ ಬ್ಯಾಗ್, ಸಮವಸ , ಕೊಡೆ, ನೋಟ್ ಪುಸ್ತಕಗಳು ಹಾಗೂ ಇತರಅಗತ್ಯ ಶೈಕ್ಷಣಿಕ ಸಾಮಗ್ರಿಗಳನ್ನು ವಿತರಿಸಲಾಯಿತು. ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳು, ಪೋಷಕರು, ಶಿಕ್ಷಕರು ಹಾಗೂ ಸಾರ್ವಜನಿಕರು ಭಾಗವಹಿಸಿದ್ದರು.

ಒಂಟಿಕಟ್ಟೆ: ಪರಿಸರ ದಿನಾಚರಣೆ



ಮೂಡುಬಿದಿರೆ: ವಿಶ್ವ ಪರಿಸರ ದಿನದ ಅಂಗವಾಗಿ ಮೂಡುಬಿದಿರೆ ಅರಣ್ಯ ಇಲಾಖೆಯ ವತಿಯಿಂದ ಮಾರ್ಪಾಡಿ ಗ್ರಾಮದ ದ.ಕ. ಜಿ.ಪಂ. ಸ.ಹಿ. ಪ್ರಾ. ಶಾಲೆ ಒಂಟಿಕಟ್ಟೆಯಲ್ಲಿ ಗಿಡ ನೆಡುವ ಮೂಲಕ ಆಚರಿಸಲಾಯಿತು.

ಅತಿಥಿಯಾಗಿ ವಲಯಾರಣ್ಯಾಧಿಕಾರಿ ಕಿರಣ್ ಕುಮಾರ್ ಜಿ. ಭಾಗ ವಹಿಸಿ, ಇಂದು ಪರಿಸರವು ನಾಶದ ಅಂಚಿನಲ್ಲಿದ್ದು ಅದನ್ನು ಉಳಿಸಿ ಬೆಳೆಸುವ ಜವಾಬ್ದಾರಿ ನಮ್ಮ ಮೇಲಿದೆ. ನಾವು ಪರಿಸರಕ್ಕೆ ನಮ್ಮಿಂದ ಏನಾದರೂ ಕೊಡುಗೆಯನ್ನುನೀಡಬೇಕೆಂದರೆಅದು ನಾವು ಗಿಡಗಳನ್ನು ನೆಡುವುದರಿಂದ ಮಾತ್ರ ಸಾಧ್ಯ. ಪರಿಸರದ ಬಗ್ಗೆ ಕಾಳಜಿ ಮೂಡಬೇಕೆಂದರೆ ಮಕ್ಕಳು ತಮ್ಮ ಹುಟ್ಟಿದ ದಿನದಂದು ಗಿಡಗಳನ್ನು ನೆಡುವ ಮೂಲಕ ಬರ್ತ್‌ಡೇಯನ್ನು ಆಚರಿಸಬೇಕೆಂದು ಸಲಹೆ ನೀಡಿದರು.

ಶಾಲಾಭಿವೃದ್ಧಿಸಮಿತಿ ಅಧ್ಯಕ್ಷರಾಜೇಶ್ ಮತ್ತು ಮುಖ್ಯ ಶಿಕ್ಷಕಿ ಎಲ್ವೀರಾ ಪಿಂಟೋ ಗಿಡಗಳನ್ನು ನೆಟ್ಟು ಮಕ್ಕಳಲ್ಲಿ ಪರಿಸರದಬಗ್ಗೆಜಾಗೃತಿಮೂಡಿಸಿದರು. ಉಪ ವಲಯಾರಣ್ಯಾಧಿಕಾರಿ ಗುರುಮೂರ್ತಿ, ಗಸ್ತು ಅರಣ್ಯ ಪಾಲಕರಾದ ಶಂಕರ್ ಗೌಡ, ಭರತೇಶ್ ಸುವರ್ಣ, ಸ್ಮಿತಾ, ಅರಣ್ಯ ವೀಕ್ಷಕ ನಾರಾಯಣ, ವಾಹನ ಚಾಲಕ ಮಿಥುನ್, ಶಿಕ್ಷಕ ವೃಂದದವರು ಈ ಸಂದರ್ಭದಲ್ಲಿದ್ದರು. ನೆಲ್ಲಿಕಾಯಿ, ನೇರಳೆ, ಮಾವು ಹಲಸು ಹಾಗೂ ಪುನರ್ ಪುಳಿ ಗಿಡ ನೆಡಲಾಯಿತು.

ಸಂಪತ್ತಿಗಿಂತ ಜೀವನ ಮೌಲ್ಯಗಳಿಗೆ ಆದ್ಯತೆ ನೀಡಿ: ಡಾ. ಆಂಟನಿ ಪ್ರಕಾಶ್



ಪುತ್ತೂರು: ನಗರದ ಸಂತ ಫಿಲೋಮಿನಾ (ಸ್ವಾಯತ್ತ) ಕಾಲೇಜಿನ ಸಸ್ಯಶಾಸ್ತ್ರ ಹಾಗೂ ಪ್ರಾಣಿಶಾಸ್ತ್ರ ವಿಭಾಗಗಳು ಮತ್ತು ಇಕೋ ಕ್ಲಬ್ ಸಂಯುಕ್ತವಾಗಿ ವಿಶ್ವ ಪರಿಸರ ದಿನವನ್ನು ಪರಿಸರದತ್ತ ಬದ್ಧತೆಯೊಂದಿಗೆ ಆಯೋಜಿಸಿತು.

ಬಂಟ್ವಾಳದ ಎಸ್‌ವಿಎಸ್ ಕಾಲೇಜಿನ ಸಸ್ಯಶಾಸ್ತ್ರ ವಿಭಾಗದ ಸಹಾಯಕ ಪ್ರಾಧ್ಯಾಪಕರೂ ವಿಭಾಗಾಧ್ಯಕ್ಷ ಡಾ. ವಿನಾಯಕ ಕೆ.ಎಸ್. ಅವರು ಸಂಪನ್ಮೂಲ ವ್ಯಕ್ತಿಯಾಗಿ ಮೈಕ್ರೋಪ್ಲಾಸ್ಟಿಕ್ ಮಾಲಿನ್ಯದಿಂದ ಉಂಟಾ ಗುತ್ತಿರುವ ಸವಾಲುಗಳನ್ನು ವಿವರಿಸಿ, ಪರಿಸರ ಸಂರಕ್ಷಣೆಗೆ ಶಾಶ್ವತ ಅಭಿವೃದ್ಧಿ ಅವಶ್ಯಕತೆ, ಮೈಕ್ರೋಪ್ಲಾಸ್ಟಿಕ್ ಎಂಬ ಗಂಭೀರ ಮತ್ತು ಹೆಚ್ಚಾಗಿ ಗಮನಕ್ಕೆ ಬಾರದ ಪರಿಸರ ಸಮಸ್ಯೆ ಕುರಿತು ಬೆಳಕು ಚೆಲ್ಲಿದರು. ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಪ್ರಾಚಾರ್ಯ ಫಾ.ಡಾ. ಆಂಟನಿ ಪ್ರಕಾಶ್ ಮೊಂತೇರೊ, ಹೆಚ್ಚುತ್ತಿರುವ ಭೌತಿಕ ಮನೋಭಾವಗಳು ಯುವ ಪೀಳಿಗೆ ಮೇಲೆ ದುಷ್ಪರಿಣಾಮ ಬೀರುತ್ತಿದೆ. ಸಂಪತ್ತಿಗಿಂತ ಜೀವನ ಮೌಲ್ಯಗಳಿಗೆ ಆದ್ಯತೆ ನೀಡಬೇಕು. ಸಾಲು ಮರದ ತಿಮ್ಮಕ್ಕ ಅವರಂತಹ ಮಹನೀಯರಿಂದ ಪ್ರೇರಣೆ ಪಡೆಯಬೇಕು ಎಂದು ತಿಳಿಸಿದರು. ಸಂದೀಪ್ ಶೆಟ್ಟಿ ಅರಿಯಡ್ಕ ಅವರು ಆರ್ ಆರ್–38 ಜಾತಿಯ ಹಲಸು ಸಸಿಯನ್ನು ದೇಣಿಗೆಯಾಗಿ ನೀಡಿದ್ದು, ಅದನ್ನು ಕಾಲೇಜಿನ ಆವರಣದಲ್ಲಿ ನೆಡಲಾಯಿತು. ಈ ಕಾರ್ಯಕ್ರಮದಲ್ಲಿ ಕಾಲೇಜಿನ ಪರೀಕ್ಷಾಂಗ ಕುಲಸಚಿವ ಡಾ. ವಿನಯಚಂದ್ರ ಭಾಗವಹಿಸಿದ್ದರು. ಕಾರ್ಯಕ್ರಮವನ್ನು ಸಸ್ಯಶಾಸ್ತ್ರ ವಿಭಾಗದ ಮುಖ್ಯಸ್ಥೆ ಶಶಿಪ್ರಭಾ ಬಿ. ಹಾಗೂ ಇಕೋ ಕ್ಲಬ್ ಸಂಯೋಜಕಿ ಸ್ಮಿತಾ ವಿವೇಕ್ ಸಂಯೋಜಿಸಿದರು. ರಚನಾ ಮತ್ತು ಅಖಿಲಾ ಅವರು ಪ್ರಾರ್ಥಿಸಿದರು. ನಿಫಾನಾ ಸ್ವಾಗತಿಸಿ, ಯಜ್ಞೇಶ್ ವಂದಿಸಿದರು. ಹಿಬಾ ಶೇಖ್ ಕಾರ್ಯಕ್ರಮ ನಿರ್ವಹಿಸಿದರು.

ಜ್ಞಾನ ವಿಕಾಸ ಕೇಂದ್ರದ ಕ್ರಿಯಾ ಯೋಜನೆ ಬಜೆಟ್ ಮಂಡನಾ ಸಭೆ



ಬಂಟ್ವಾಳ: ಜ್ಞಾನ ವಿಕಾಸ ಕೇಂದ್ರದ 2026–2027ನೇ ಸಾಲಿನ ಕ್ರಿಯಾಯೋಜನೆ ಬಜೆಟ್ ಮಂಡನಾ ಸಭೆಯು ಬಂಟ್ವಾಳದಲ್ಲಿರುವ ಉನ್ನತಿ ಸೌಧ ನಡೆಸಲಾಯಿತು.

ಯೋಜನೆಯ ಜಿಲ್ಲಾ ನಿರ್ದೇಶಕ ದಿನೇಶ್ ಅವರು ಸಭೆ ಉದ್ಘಾಟಿಸಿ, ಸೇವಾ ಪ್ರತಿನಿಧಿಗಳು ಪಾದರಸದಂತೆ ಆಸಕ್ತಿಯಿಂದ ಉತ್ತಮ ಕೆಲಸ ಮಾಡಬೇಕೆಂದರು.

ಅತಿಥಿಯಾಗಿ ಭಾಗವಹಿಸಿದ್ದ ಜ್ಞಾನ ವಿಕಾಸ ಕಾರ್ಯಕ್ರಮ ನಿರ್ದೇಶಕರಾದ ದಿನೇಶ್ ಅವರು ಮಾತನಾಡಿ ಸೇವಾಪ್ರತಿನಿಧಿ ಕರ್ತವ್ಯ ನಿರ್ವಹಿಸುವಾಗ ಆತ್ಮವಿಶ್ವಾಸ, ನಾಯಕತ್ವ ನಮ್ಮಲ್ಲಿರುವ ಪ್ರತಿಭೆಯನ್ನು ಕಾರ್ಯಕ್ಷೇತ್ರದಲ್ಲಿ ಅಳವಡಿಸಿ ಉತ್ತಮ ಸೇವಾಪ್ರತಿನಿಧಿ ಆಗಬೇಕು ಎಂದರು.

ಉಡುಪಿ ಪ್ರಾದೇಶಿಕ ವಿಭಾಗ ಜ್ಞಾನ ವಿಕಾಸ ಯೋಜನಾಧಿಕಾರಿ ಅಮೃತ ಅವರು ಜ್ಞಾನ ವಿಕಾಸ ಕಾರ್ಯಕ್ರಮದ ಹಿನ್ನಲೆ ಹಾಗೂ ಮಹತ್ವದ ಬಗ್ಗೆ ಮಾಹಿತಿ ನೀಡಿದರು ತಾಲೂಕಿನಲ್ಲಿ 25 ಜ್ಞಾನ ವಿಕಾಸ ಕೇಂದ್ರಗಳಿದ್ದು ಪ್ರತಿ ತಿಂಗಳಿಗೊಂದರಂತೆ ಅನುದಾನ, ಅನುದಾನ ರಹಿತ ಕಾರ್ಯಕ್ರಮಗಳನ್ನು ಮಾಡುವ ನಿಟ್ಟಿನಲ್ಲಿ ಕ್ರಿಯಾಯೋಜನೆ ಗುರಿಯನ್ನು ನೀಡಿದರು.

ಆರೋಗ್ಯ ತಪಾಸಣಾ ಶಿಬಿರ, ಮಹಿಳಾ ವಿಚಾರಗೋಷ್ಠಿ ಕೇಂದ್ರದ ವಾರ್ಷಿಕೋತ್ಸವ ಸ್ವಉದ್ಯೋಗ ಗಪ್ರೇರಣಾ ಶಿಬಿರ, ಅಧ್ಯಯನ ಪ್ರವಾಸ, ಬೀದಿ ನಾಟಕ, ಸೃಜನಶೀಲ ಕಾರ್ಯಕ್ರಮ, ಟ್ಯೂಷನ್ ಕ್ಲಾಸ್, ಹೊಲಿಗೆ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲು ನಿರ್ಣಯಿಸಲಾಯಿತು

ಬಂಟ್ವಾಳ ತಾಲೂಕಿನ ಯೋಜನಾಧಿಕಾರಿಗಳಾದ ಜಯಾನಂದ ಪಿ. ಅವರು ಕೇಂದ್ರದ ಹಾಜರಾತಿ ಹಾಗೂ ಕ ಬಾಕಿ ಕಂತು ಪಾವತಿ ಕಡಿಮೆ ಸದಸ್ಯರಿರುವ ತಂಡಕ್ಕೆ ಸದಸ್ಯರನ್ನು ಸೇರ್ಪಡೆಗೊಳಿಸುವುದು, ದಾಖಲಾತಿಗಳನ್ನು ಉತ್ತಮ ರೀತಿಯಲ್ಲಿ ಇರಿಸಿಕೊಳ್ಳುವುದು, ಗುಣಮಟ್ಟದ ಕೇಂದ್ರ ನಿರ್ವಹಣೆ ಕಾರ್ಯಕ್ರಮ ಅನುಷ್ಠಾನದ ಬಗ್ಗೆ ಮಾಹಿತಿ ನೀಡಿದರು. ಜ್ಞಾನವಿಕಾಸಸಮನ್ವಯ ಅಧಿಕಾರಿಯ ಅಶ್ವಿನಿ ನಿರೂಪಿಸಿದರು. ಸೇವಾ ಪ್ರತಿನಿಧಿ ಶೇಖರ್ ವಂದಿಸಿದರು.



ಕುಂದಾಪುರದ ಮೂಡ್ಲಕಟ್ಟೆ ಕಾಲೇಜ್ ಆಫ್ ನರ್ಸಿಂಗ್, ಕುಂದಾಪುರದ ರಾಷ್ಟ್ರೀಯ ಸೇವಾ ಯೋಜನೆ ಹಾಗೂ ವಿದ್ಯಾರ್ಥಿ ನರ್ಸ್ ಅಸೋಸಿಯೇಷನ್ ಸಮಿತಿಯಿಂದ ಬಸ್ರೂರು ಅಂಗನವಾಡಿಯಲ್ಲಿ ವಿಶ ಪರಿಸರ ದಿನವನ್ನು ಗುರುವಾರ ಆಚರಿಸಲಾಯಿತು. ಅಂಗನವಾಡಿ ಶಿಕ್ಷಕಿ ಕಮಲಾ ಅವರು ಸಸಿಯನ್ನು ನೆಡುವ ಮೂಲಕ ಉದ್ಘಾಟಿಸಿದರು. ನರ್ಸಿಂಗ್ ವಿದ್ಯಾರ್ಥಿನಿ ಆಯಿಷಾ ರಫೀದಾ , ಹಾಗೂ ಮೂಡ್ಲಕಟ್ಟೆ ಕಾಲೇಜ್ ಆಫ್ ನರ್ಸಿಂಗ್‌ನ ಅಧ್ಯಾಪಕರು ಭಾಗವಹಿಸಿದ್ದರು.



ತಲಪಾಡಿಯ ಶಾರದಾ ವಿದ್ಯಾನಿಕೇತನ ಪಬ್ಲಿಕ್ ಸ್ಕೂಲ್‌ನಲ್ಲಿ ವಿಶ್ವ ಪರಿಸರ ದಿನಾಚರಣೆ ನಡೆಯಿತು.ಶಾಲೆಯ ಪ್ರಾಂಶುಪಾಲೆ ಸುಧಾ ದಿನಕರ್ ಭಾಗವಹಿಸಿ, ಪರಿಸರ ಮಹತ್ವದ ಬಗ್ಗೆ ವಿದ್ಯಾರ್ಥಿಗಳಿಗೆ ತಿಳಿಸಿದರು. ಶಾರದಾ ಆಯುರ್ಧಾಮದ ಚರ್ಮ ವೈದ್ಯರಾದ ಡಾ. ಟೋನಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿದರು. ಈ ಸಂದರ್ಭ ಶಿಕ್ಷಕ – ಶಿಕ್ಷಕೇತರ ವರ್ಗದವರು, ಶಾಲಾ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಮಡಿಕೇರಿ ನಗರ ಸಭೆಯಲ್ಲಿ ಸಾಮಾನ್ಯ ಸಭೆ | ಮಳೆಗಾಲ ನಿರ್ವಹಣೆಗೆ ಎಲ್ಲಾ ವಾರ್ಡ್‌ಗಳಿಗೂ ಸಿಬ್ಬಂದಿಗಳ ನೇಮಿಸಿ ಟಾಸ್ಕ್‌ಫೋರ್ಸ್ ರಚನೆ

ರಾಜಕಾಲುವೆ, ಚರಂಡಿಯ ಸ್ವಚ್ಛತೆಗೆ 10 ಲಕ್ಷ ರೂ. ವೆಚ್ಚ: ಪೌರಾಯುಕ್ತ ರಮೇಶ್ ಮಾಹಿತಿ

ಮಡಿಕೇರಿ: ಕೊಡಗು ಜಿಲ್ಲೆಯಲ್ಲಿ ಮಳೆಗಾಲ ಆರಂಭವಾಗಿದ್ದು, ಮಡಿಕೇರಿ ನಗರದಲ್ಲಿ ಮಳೆ ನೀರು ಸರಾಗವಾಗಿ ಹರಿಯಲು ಅನುಕೂಲವಾಗುವಂತೆ ರಾಜಕಾಲುವೆ ಮತ್ತು ಚರಂಡಿಗಳ ಶುಚಿತ್ವಕ್ಕೆ 10 ಲಕ್ಷ ರೂ.ಗಳನ್ನು ಖರ್ಚು ಮಾಡಲಾಗುತ್ತಿದೆ ಎಂದು ನಗರ ಸಭೆಯ ಪೌರಾಯುಕ್ತ ಕೆ.ಆರ್. ರಮೇಶ್ ತಿಳಿಸಿದರು.

ನಗರಸಭಾ ಅಧ್ಯಕ್ಷೆ ಪಿ. ಕಲಾವತಿ ಅಧ್ಯಕ್ಷತೆಯಲ್ಲಿ ನಗರಸಭಾ ಸಭಾಂಗಣದಲ್ಲಿ ನಡೆದ ಸಾಮಾನ್ಯ ಸಭೆಯಲ್ಲಿ ವಿಷಯ ಪ್ರಸ್ತಾಪಿಸಿದ ಸದಸ್ಯರಿಗೆ ಉತ್ತರ ನೀಡಿದ ಅವರು, ಎಲ್ಲಾ ವಾರ್ಡ್ ಗಳಿಗೂ ಸಿಬ್ಬಂದಿ ನೇಮಿಸಿ ಟಾಸ್ಕ್ ಫೋರ್ಸ್ ರಚನೆ ಮಾಡಲಾಗಿದೆ. ರಾಜ ಕಾಲುವೆ ಮತ್ತು ಚರಂಡಿ ಶುಚಿತ್ವಕ್ಕೆ 10 ಲಕ್ಷ ರೂ. ವೆಚ್ಚದಲ್ಲಿ ಟೆಂಡರ್ ಕರೆದು ಕಾಮಗಾರಿ



ನಡೆಸಲಾಗುತ್ತಿದೆ ಎಂದು ವಿವರಿಸಿದರು.

ನಿವಾಸಿಗಳಿಗೆ ನೋಟೀಸ್

ನಗರದ ಇಂದಿರಾನಗರ, ಮಂಗಳಾದೇವಿ ನಗರ, ಚಾಮುಂಡೇಶ್ವರಿ ನಗರ ಹಾಗೂ ಆರ್ಷಾದ್ ನಗರಗಳಲ್ಲಿ ಅಪಾಯಕಾರಿ ಪ್ರದೇಶಗಳಲ್ಲಿರುವ ಮನೆಗಳಿಗೆ ನೋಟಿಸ್ ನೀಡಲಾಗುತ್ತಿದ್ದು, ಒಟ್ಟು 6 ಸಮುದಾಯ ಭವನಗಳಲ್ಲಿ ಕಾಳಜಿ ಕೇಂದ್ರ ತೆರೆಯಲು ಕ್ರಮ ಕೈಗೊಳ್ಳಲಾಗಿದೆ ಎಂದು ರಮೇಶ್ ಮಾಹಿತಿ ನೀಡಿದರು.

ನಗರಸಭೆಯ ಹಿರಿಯ ಸದಸ್ಯ ಕೆ.ಎಸ್.ರಮೇಶ್ ಅವರು ಮಾತನಾಡಿ, ಮಳೆ ಜೋರಾಗುವ ಮೊದಲು ರಾಜ ಕಾಲುವೆಗಳು, ಎಲ್ಲಾ ವಾರ್ಡ್‌ಗಳ ಚರಂಡಿಗಳು ಮತ್ತು ರಸ್ತೆ ಬದಿಯ ಕುರುಚಲು ಕಾಡುಗಳನ್ನು ಕಡಿದು ಸ್ವಚ್ಛಗೊಳಿಸಬೇಕು. ಇದರಿಂದ ರಸ್ತೆಗಳು ಹಾಳಾಗುವುದನ್ನು ತಡೆಯಬಹುದು. ನಗರಸಭೆ ಹೆಚ್ಚುವರಿಯಾಗಿ ಜೆಸಿಬಿ ಮತ್ತು ಹಿಟಾಚಿ ಯಂತ್ರ ಸಹಿತ ಅಗತ್ಯ ಕಾರ್ಮಿಕರನ್ನು ಬಳಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಸಿಬ್ಬಂದಿ ಕೊರತೆ ಕಾರಣ

ಮಡಿಕೇರಿ ನಗರಸಭೆಯ ಕೆಲಸ ಕಾರ್ಯಗಳು ಸುಗಮವಾಗಿ ನಡೆಯದಿರಲು ಮುಖ್ಯವಾಗಿ ಸಿಬ್ಬಂದಿಗಳ ಕೊರತೆಯೇ ಕಾರಣ ಎಂದು ಆರೋಪಿಸಿದರು. ಹೆಚ್ಚುವರಿ ಸಿಬ್ಬಂದಿಗಳನ್ನು ನೇಮಿಸಿ ಕೆಲಸಗಳು ಸುಸೂತ್ರವಾಗಿ ನಡೆಯುವಂತೆ ನೋಡಿಕೊಳ್ಳಬೇಕು ಎಂದರು.

ಆಸ್ತಿ ಒತ್ತುವರಿ ಆರೋಪ

ನಗರಸಭೆಯ ವ್ಯಾಪ್ತಿಗೆ ಒಳಪಡುವ ಆಸ್ತಿ ಒತ್ತುವರಿಯಾಗುತ್ತಿದೆ. ಪೊಲೀಸ್ ಅಧೀಕ್ಷಕರ ಕಚೇರಿ ಪಕ್ಕದಲ್ಲೇ ಜಾಗ ಒತ್ತುವರಿ ಮಾಡಲಾಗಿದೆ. ಅಲ್ಲಿರುವ ಶೆಡ್ ಅನ್ನು ತೆರವು ಮಾಡುವಂತೆ ಎಸ್‌ಡಿಪಿಐ ಸದಸ್ಯ ಅಮೀನ್ ಮೊಹಿಸಿನ್ ಆಗ್ರಹಿಸಿದರು. ಇದಕ್ಕೆ ಧ್ವನಿಗೂಡಿಸಿದ ಸ್ಥಾಯಿ ಸಮಿತಿ ಅಧ್ಯಕ್ಷ ಎಸ್.ಸಿ.ಸತೀಶ್ ಶೆಡ್ ಅನ್ನು ತಕ್ಷಣ ತೆರವು ಮಾಡಬೇಕು. ಈ ಕುರಿತು ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು. ನಗರ ವ್ಯಾಪ್ತಿಯಲ್ಲಿ ಅನಧಿಕೃತ ಕಟ್ಟಡಗಳು ತಲೆ ಎತ್ತುತ್ತಿದ್ದು, ಗಾಂಧಿ ಮೈದಾನದ ಸಮೀಪದ ಕಟ್ಟಡ ನಿರ್ಮಾಣದಲ್ಲಿ ಸಂಪೂರ್ಣ ಕಾನೂನು ಉಲ್ಲಂಘನೆಯಾಗಿದೆ. ಹಿಂದಿನ ಸಾಮಾನ್ಯ ಸಭೆಯ ನಿರ್ಣಯದಂತೆ ಕಾಮಗಾರಿ ಸ್ಥಗಿತಕ್ಕೆ ಯಾವುದೇ ಕ್ರಮ ಕೈಗೊಂಡಿಲ್ಲ ಎಂದು ಅಮೀನ್ ಮೊಹಿಸಿನ್ ಆರೋಪಿಸಿದರು. ಈ ಸಂದರ್ಭ ಆಡಳಿತ ಪಕ್ಷ ಬಿಜೆಪಿ ಹಾಗೂ ವಿರೋಧ ಪಕ್ಷ ಎಸ್‌ಡಿಪಿಐ ಸದಸ್ಯರ ನಡುವೆ ತೀವ್ರ ಮಾತಿನ ಚಕಮಕಿ ನಡೆಯಿತು. ಕೆಲವು ಸದಸ್ಯರು ಸದನದ ಬಾವಿಗೆ ಇಳಿದು ಅಸಮಾಧಾನ ವ್ಯಕ್ತಪಡಿಸಿದರು.

ಕಾಮಗಾರಿ ಆರಂಭ

ನಗರೋತ್ಥಾನದ 4ನೇ ಹಂತದ ಕಾಮಗಾರಿ ಕುರಿತು ಮುಂದಿನ ಒಂದು ವಾರದೊಳಗೆ ಕ್ಷೇತ್ರದ ಶಾಸಕರ ನೇತೃತ್ವದಲ್ಲಿ ಸಭೆ ನಡೆಸಿ ಗುತ್ತಿಗೆದಾರರಿಗೆ ಕಾಮಗಾರಿ ಪ್ರಾರಂಭಿಸಲು ಸೂಚನೆ ನೀಡಲು ಸಭೆ ನಿರ್ಧರಿಸಿತು.

ಉಪಾಧ್ಯಕ್ಷ ಮಹೇಶ್ ಜೈನಿ, ಆರೋಗ್ಯ ಇಲಾಖೆ, ಇಂಜಿನಿಯರಿಂಗ್ ವಿಭಾಗ, ಕಂದಾಯ ವಿಭಾಗದ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗ ಉಪಸ್ಥಿತರಿದ್ದರು.

ಸುತ್ತಮುತ್ತ

ಇಂದು ಶಿಕ್ಷಕರ ಹುದ್ದೆಗೆ ಸಂದರ್ಶನ

ಕಾಸರಗೋಡು: ಕಾಸರಗೋಡು ಸರ್ಕಾರಿ ಹೈಯರ್ ಸೆಕೆಂಡರಿ ಶಾಲೆಯಲ್ಲಿ ಯುಪಿಎಸ್‌ಟಿ ಅಧ್ಯಾಪಕ ಹುದ್ದೆಗೆ ದಿನವೇತನ ಆಧಾರದ ಮೇಲೆ ನೇಮಕ ಮಾಡಿಕೊಳ್ಳಲು ನಿರ್ಧರಿಸಿದ್ದು, ಈ ಹಿನ್ನಲೆಯಲ್ಲಿ ಅಭ್ಯರ್ಥಿಗಳು ಮೂಲ ಪ್ರಮಾಣಪತ್ರಗಳೊಂದಿಗೆ ಜೂ.9ರಂದು ಮಧ್ಯಾಹ್ನ 2 ಗಂಟೆಗೆ ಶಾಲಾ ಕಚೇರಿಯಲ್ಲಿ ಸಂದರ್ಶನಕ್ಕೆ ಹಾಜರಾಗಬಹುದು ಎಂದು ಶಾಲಾ ಆಡಳಿತವು ಪ್ರಕಟಣೆಯಲ್ಲಿ ತಿಳಿಸಿದೆ.

ಅಪಾಯಕಾರಿ ಮರಗಳ ತೆರವಿಗೆ ಗ್ರಾ.ಪಂ. ಸೂಚನೆ

ಕಾಸರಗೋಡು: ಮಡಿಕೈ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿರುವ ಖಾಸಗಿ ವ್ಯಕ್ತಿಗಳ ಜಮೀನುಗಳಲ್ಲಿ ಅಪಾಯಕಾರಿ ಸ್ಥಿತಿಯಲ್ಲಿರುವ ಮರಗಳ ಮಾಲಕರು ತಮ್ಮ ಸ್ವಂತ ಖರ್ಚಿನಲ್ಲಿ ಅವುಗಳನ್ನು ತೆರವುಗೊಳಿಸಬೇಕು ಎಂದು ಪಂಚಾಯತ್ ಕಾರ್ಯದರ್ಶಿ ತಿಳಿಸಿದ್ದಾರೆ. ಅಪಾಯಕಾರಿ ಮರಗಳು ಬೀಳುವುದರಿಂದ ಜೀವಹಾನಿ ಅಥವಾ ಆಸ್ತಿಪಾಸ್ತಿಗೆ ಹಾನಿಯಾಗದಂತೆ ಮುನ್ನೆಚ್ಚರಿಕೆ ಕ್ರಮವಾಗಿ ಈ ಸೂಚನೆ ನೀಡಲಾಗಿದೆ. ಅಪಾಯಕಾರಿ ಮರಗಳನ್ನು ಕಡಿಯದಿದ್ದರೆ ವಿಪತ್ತು ನಿರ್ವಹಣಾ ಕಾಯ್ದೆ 2005ರ ಸೆಕ್ಷನ್ 30 (2)(ವಿ) ರ ಪ್ರಕಾರ ಮರಗಳ ಮಾಲಕರು ಆದರಿಂದ ಉಂಟಾಗುವ ಎಲ್ಲಾ ಹಾನಿಗಳಿಗೆ ಸಂಪೂರ್ಣ ಜವಾಬ್ದಾರರಾಗಿರುತ್ತಾರೆ ಎಂದು ಪಂಚಾಯತ್ ಕಾರ್ಯದರ್ಶಿ ಸ್ಪಷ್ಟ ಪಡಿಸಿದ್ದಾರೆ. ಹೆಚ್ಚಿನ ವಿವರಗಳಿಗೆ 04672 240680 ಕರೆ ಮಾಡಬಹುದು ಎಂದು ಪ್ರಕಟಣೆ ತಿಳಿಸಿದೆ.

ತಜ್ಞ ವೈದ್ಯರ ಹುದ್ದೆಗಳ ನೇಮಕಾತಿಗೆ ಸಂದರ್ಶನ

ಕಾಸರಗೋಡು: ಜಿಲ್ಲೆಯ ರಾಷ್ಟ್ರೀಯ ಆರೋಗ್ಯ ಮಿಷನ್ (ಎನ್‌ಎಚ್‌ಎಂ) ಅಧೀನದಲ್ಲಿ ನಗರ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಗುತ್ತಿಗೆ ಮತ್ತು ದಿನ ವೇತನ ಆಧಾರದ ಮೇಲೆ ತಜ್ಞ ವೈದ್ಯರ ನೇಮಕಾತಿಗಾಗಿ ಜೂ.11ರಂದು ಬೆಳಗ್ಗೆ 10 ಗಂಟೆಗೆ ಸಂದರ್ಶನ ನಡೆಯಲಿದೆ. ಆಸಕ್ತ ಅಭ್ಯರ್ಥಿಗಳು ನಿಗದಿತ ದಿನಾಂಕದಂದು ಮೂಲ ಪ್ರಮಾಣಪತ್ರಗಳೊಂದಿಗೆ ಜಿಲ್ಲಾ ಕಾರ್ಯಕ್ರಮ ಮಾನಿಟರಿಂಗ್ ಮತ್ತು ಬೆಂಬಲ ಘಟಕ, ಹೊಸದುರ್ಗ, ಕಾಞಂಗಾಡಿಗೆ ವರದಿ ಮಾಡಬೇಕು. ಹೆಚ್ಚಿನ ವಿವರಗಳಿಗೆ 0467 2209466 ಕರೆ ಮಾಡಬಹುದು.

ಬೇಡಡ್ಕ ಆಸ್ಪತ್ರೆಯ ಖಾಲಿ ಹುದ್ದೆಗಳಿಗೆ ನೇಮಕಾತಿ

ಕಾಸರಗೋಡು: ಬೇಡಡ್ಕ ತಾಲೂಕು ಪ್ರಧಾನ ಆಸ್ಪತ್ರೆಯು ಎಚ್‌ಎಂಸಿ ಮೂಲಕ ಫಾರ್ಮಸಿಸ್ಟ್ ಮತ್ತು ಭದ್ರತಾ ಸಿಬ್ಬಂದಿ ಹುದ್ದೆಗಳಿಗೆ ತಾತ್ಕಾಲಿಕ ನೇಮಕಾತಿ ನಡೆಸಲಿದೆ. ಹೆಚ್ಚಿನ ಮಾಹಿತಿಗಾಗಿ ಬೇಡಡ್ಕ ತಾಲೂಕು ಪ್ರಧಾನ ಆಸ್ಪತ್ರೆಯನ್ನು 9188943523 ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಐಎಚ್‌ಆರ್‌ಡಿ ಪದವಿ ಪ್ರವೇಶ

ಕಾಸರಗೋಡು: ಕುಂಬಳೆಯಲ್ಲಿರುವ ಮಂಜೇಶ್ವರ ಐಎಚ್‌ಆರ್‌ಡಿ ಕಾಲೇಜಿನಲ್ಲಿ ಬಿಎಸ್‌ಸಿ ಕಂಪ್ಯೂಟರ್ ಸಯನ್ಸ್, ಬಿಕಾಂ, ಕಂಪ್ಯೂಟರ್ ಅಪ್ಲಿಕೇಶನ್ ನೊಂದಿಗೆ ಬಿಎ ಇಂಗ್ಲಿಷ್, ಪತ್ರಿಕೋದ್ಯಮದೊಂದಿಗೆ ಬಿಎ ಇಂಗ್ಲಿಷ್ ಮತ್ತು ಎಂಕಾಂ ಫೈನಾನ್ಸ್ ಪಿಜಿ ಕೋರ್ಸ್‌ಗಳ ಪ್ರವೇಶಕ್ಕಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಕಣ್ಣೂರು ವಿಶ್ವವಿದ್ಯಾಲಯದ ವೆಬ್‌ಸೈಟ್ ಮೂಲಕ ಶೇಕಡಾ 50ರಷ್ಟು ಸೀಟುಗಳಿಗೆ ಮತ್ತು ಐಎಚ್‌ಆರ್‌ಡಿ ವೆಬ್‌ಸೈಟ್ ಮೂಲಕ ಕಾಲೇಜಿಗೆ ಹಂಚಿಕೆಯಾದ ಶೇಕಡಾ 50ರಷ್ಟು ಸೀಟುಗಳಿಗೆ ಅರ್ಜಿಗಳನ್ನು ಸಲ್ಲಿಸಬಹುದು. ಕಾಲೇಜಿಗೆ ಹಂಚಿಕೆಯಾದ ಸೀಟುಗಳಿಗೆ ಅರ್ಜಿ ಸಲ್ಲಿಸುವವರು ವಿಶ್ವವಿದ್ಯಾಲಯದ ವೆಬ್‌ಸೈಟ್ ನಲ್ಲಿಯೂ ನೋಂದಾಯಿಸಿಕೊಳ್ಳಬೇಕು. ಹೆಚ್ಚಿನ ವಿವರಗಳಿಗೆ 04998 215615, 8495008079 ಕರೆ ಮಾಡಬಹುದು ಎಂದು ಪ್ರಕಟಣೆ ತಿಳಿಸಿದೆ.

ಡೇಟಾ ಎಂಟ್ರಿ ಆಪರೇಟರ್ ನೇಮಕಾತಿ

ಕುಂಬಳೆ: ಪುತ್ತಿಗೆ ಗ್ರಾ.ಪಂ.ನಲ್ಲಿ ಡಿಜಿಟಲೀಕರಣ ಕಾರ್ಯಕ್ಕಾಗಿ ಡೇಟಾ ಎಂಟ್ರಿ ಆಪರೇಟರ್ ನೇಮಕ ಮಾಡುವ ನಿಟ್ಟಿನಲ್ಲಿ ಸಂದರ್ಶನವು ಜೂ.11ಕ್ಕೆ ಬೆಳಗ್ಗೆ 10.30ಕ್ಕೆ ಪುತ್ತಿಗೆ ಗ್ರಾ.ಪಂ. ಕಚೇರಿಯಲ್ಲಿ ನಡೆಯಲಿದೆ. 10ನೇ ತರಗತಿ ಅಥವಾ ತತ್ಸಮಾನ, ಕಂಪ್ಯೂಟರ್ ಡೇಟಾ ಎಂಟ್ರಿ, ಡಿಟಿಪಿ ಕೆಲಸದಲ್ಲಿ ಪ್ರಾವೀಣ್ಯತೆ, ಮಲೆಯಾಳ, ಇಂಗ್ಲಿಷ್ ಮತ್ತು ಕನ್ನಡ ಟೈಪ್ ಮಾಡಲು ತಿಳಿದಿರಬೇಕು. ಹೆಚ್ಚಿನ ವಿವರಗಳಿಗೆ 04998 245043 ಸಂಪರ್ಕಿಸಬಹುದು ಎಂದು ಗ್ರಾ.ಪಂ. ಆಡಳಿತ ಪ್ರಕಟಣೆಯಲ್ಲಿ ತಿಳಿಸಿದೆ.

ಮಾರ್ಕೆಟಿಂಗ್ ಎಕ್ಸಿಕ್ಯೂಟಿವ್ ಹುದ್ದೆಗೆ ಅರ್ಜಿ ಆಹ್ವಾನ

ಕಾಸರಗೋಡು: ಜಿಲ್ಲೆಯ ಕುಟುಂಬಶ್ರೀ ಬ್ರಾಯ್ಲರ್ ಫಾರ್ಮರ್ಸ್ ಉತ್ಪಾದಕ ಕಂಪೆನಿಯ ಮಾರ್ಕೆಟಿಂಗ್ ಕಾರ್ಯನಿರ್ವಾಹಕ ಹುದ್ದೆಗೆ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಮಾನ್ಯತೆ ಪಡೆದ ವಿಶ್ವವಿದ್ಯಾಲಯದಿಂದ ಪದವಿ, ಎರಡು ವರ್ಷಗಳ ಕೆಲಸದ ಅನುಭವ, ಮಾನ್ಯತೆ ಪಡೆದ ವಿಶ್ವವಿದ್ಯಾಲಯದಿಂದ ಎಂಬಿಎ ಮಾರ್ಕೆಟಿಂಗ್ ವಿದ್ಯಾರ್ಹತೆಯಾಗಿದೆ. ವಯೋಮಿತಿ 30 ವರ್ಷಗಳು. ಅಭ್ಯರ್ಥಿಗಳು ಪ್ರಮಾಣಪತ್ರಗಳ ಪ್ರತಿಗಳೊಂದಿಗೆ ಅಂಚೆ ಮೂಲಕ ಅಥವಾ ಖುದ್ದಾಗಿ ಜಿಲ್ಲಾ ಮಿಷನ್ ಸಂಯೋಜಕರು, ಕುಟುಂಬಶ್ರೀ ಜಿಲ್ಲಾ ಮಿಷನ್ ಕಚೇರಿ, ಸಿವಿಲ್ ಸ್ಟೇಷನ್, ವಿದ್ಯಾನಗರ, ಕಾಸರಗೋಡು – 671123 ಈ ವಿಳಾಸಕ್ಕೆ ಜೂ.15 ಅಥವಾ ಆದಕ್ಕಿಂತ ಮೊದಲು ಅರ್ಜಿ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗೆ 7012766725 ಅಥವಾ 04994256111 ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಉದ್ದಿಮೆ ಪಾರ್ಕ್ ಬಳಿಯೇ ಪೊಲೀಸರಿಂದ ತಡೆ | ಘಟಕಗಳ ಶಾಶ್ವತ ಬಂದ್‌ಗೆ ಹೋರಾಟಗಾರರ ಒತ್ತಾಯ

ಅನಂತಪುರ ಕಾರ್ಖಾನೆಗಳ ವಿರುದ್ಧ ಪ್ರತಿಭಟನಾ ಮೆರವಣಿಗೆ

ಕಾಸರಗೋಡು: ಕುಂಬಳೆ ಸಮೀಪದ ಅನಂತಪುರ ಕೈಗಾರಿಕಾ ಪಾರ್ಕ್‌ನ ವಿವಿಧ ಕಾರ್ಖಾನೆಗಳಿಂದ ಉಂಟಾಗುತ್ತಿರುವ ಪರಿಸರ ಮಾಲಿನ್ಯ ತಡೆಗಟ್ಟುವ ನಿಟ್ಟಿನಲ್ಲಿ ತುರ್ತು ಕ್ರಮಗಳನ್ನು ಕೈಗೊಳ್ಳಬೇಕು, ಜನರ ಜೀವ ಹಾಗೂ ಆಸ್ತಿಪಾಸ್ತಿಗೆ ಬೆದರಿಕೆಯೊಡ್ಡುವ ಉದ್ದಿಮೆಗಳನ್ನು ಮುಚ್ಚಬೇಕು ಎಂಬ ಬೇಡಿಕೆಗಳನ್ನು ಮುಂದಿರಿಸಿ ಅನಂತಪುರ ಕ್ರಿಯಾ ಸಮಿತಿ (ಸೇವ್ ಅನಂತಪುರ)ಯ ನೇತೃತ್ವದಲ್ಲಿ ಸೋಮವಾರ ಬೆಳಗ್ಗೆ ಅನಂತಪುರ ಕೈಗಾರಿಕಾ ಪಾರ್ಕ್‌ಗೆ ಬೃಹತ್ ಪ್ರತಿಭಟನಾ ಮಾರ್ಚ್ ನಡೆಸಲಾಯಿತು.

ನೂರಾರು ಮಂದಿ ಪಾಲ್ಗೊಂಡಿದ್ದ ಪ್ರತಿಭಟನಾ ಮೆರವಣಿಗೆಯು ನಾಯ್ಕಾಪು ಜಂಕ್ಷನ್‌ನಿಂದ ಆರಂಭವಾಯಿತು. ಮಂಜೇಶ್ವರ ಶಾಸಕ ಎ.ಕೆ.ಎಂ.ಅಶ್ರಫ್ ಪ್ರತಿಭಟನೆ ಉದ್ಘಾಟಿಸಿ, ಪರಿಸರ ಮಾಲಿನ್ಯವನ್ನು ಮತ್ತು ಜಲ ಮೂಲಗಳನ್ನು ಹಾನಿಗೊಳಿಸುವ ಕೈಗಾರಿಕೆಗಳು ನಮಗೆ ಅಗತ್ಯವಿಲ್ಲ, ಅಂತಹ ಕೈಗಾರಿಕೆಗಳನ್ನು ಬಂದ್ ಮಾಡಿಸುವ ನಿಟ್ಟಿನಲ್ಲಿ ಕಾಸರಗೋಡು ಜಿಲ್ಲಾಡಳಿತ ಮತ್ತು ಕೇರಳ ಸರಕಾರದೊಂದಿಗೆ ಮಾತುಕತೆ ನಡೆಸುವುದಾಗಿ ಭರವಸೆ ನೀಡಿದರು.



ಜನರ ಆಸ್ತಿಪಾಸ್ತಿಗಳಿಗೆ ಹಾಗೂ ಸುತ್ತಮುತ್ತಲ ಪ್ರದೇಶಗಳಿಗೆ ಹಾನಿಯನ್ನುಂಟು ಮಾಡುವ ಉದ್ದಿಮೆಗಳು ಕಾಸರಗೋಡು ಜಿಲ್ಲೆಯಲ್ಲಿ ಸ್ಥಾಪಿಸಲು ಬಿಡೆವು. ಮಂಜೇಶ್ವರ ವಿಧಾನಸಭಾ ಕ್ಷೇತ್ರವು ವಿಶಿಷ್ಟತೆ ಮತ್ತು ಸಮೃದ್ಧತೆಗೆ ಹೆಸರುವಾಸಿಯಾಗಿದ್ದು, ಅನಂತಪುರದಂತಹ ವಿಶಾಲವಾದ ಭೂಭಾಗವು ಪ್ರಕೃತಿ ರಮಣೀಯ ಮತ್ತು ವೈಶಿಷ್ಟ್ಯತೆಗೆ ಸಾಕ್ಷಿಯಾಗಿದೆ ಎಂದು ಮಂಜೇಶ್ವರ ಶಾಸಕರು ನುಡಿದರು.

ಕ್ರಿಯಾ ಸಮಿತಿ ಅಧ್ಯಕ್ಷ ಶರೀಫ್ ಟಿ. ಅಧ್ಯಕ್ಷತೆ ವಹಿಸಿದ್ದರು. ಸಮಿತಿಯ ಸಂಚಾಲಕ ಸುನೀಲ್ ಕುಮಾರ್ ಅನಂತಪುರ, ಉಪಾಧ್ಯಕ್ಷ ಎ.ಕೆ.ಅಶ್ರಫ್, ಜಿಲ್ಲಾ ಪಂಚಾಯತ್ ಸದಸ್ಯ ಸೋಮಶೇಖರ ಜೆ.ಎಸ್., ಪುತ್ತಿಗೆ ಗ್ರಾ.ಪಂ. ಅಧ್ಯಕ್ಷೆ ಫಿದಾ, ಉಪಾಧ್ಯಕ್ಷ ಇ.ಕೆ. ಮೊಹಮ್ಮದ್ ಕುಂಞಿ, ಕುಂಬಳೆ ಗ್ರಾ.ಪಂ. ಸ್ಥಾಯೀ ಸಮಿತಿ ಅಧ್ಯಕ್ಷ ಎ.ಕೆ.ಆರೀಫ್, ಬ್ಲಾಕ್ ಪಂಚಾಯತ್ ಸ್ಥಾಯೀ ಸಮಿತಿ ಅಧ್ಯಕ್ಷ ಅಶ್ರಫ್ ಕಾರ್ಳೆ, ಗ್ರಾ.ಪಂ.ಸದಸ್ಯ ಶಕೀನಾ, ಸತೀಶ್ ಭಂಡಾರಿ ಮೊದಲಾದವರಿದ್ದರು.

ಹೋರಾಟ ಮುಂದುವರಿಸಲು ಸಮಿತಿಯಿಂದ ನಿರ್ಧಾರ

ಅನಂತಪುರ ಕೈಗಾರಿಕಾ ಪ್ರಾಂಗಣದಲ್ಲಿರುವ ಕೋಳಿ ಮತ್ತು ಎಣ್ಣೆ ಕಾರ್ಖಾನೆಗಳಿಂದ ಹೊರಹೊಮ್ಮುತ್ತಿರುವ ದುರ್ವಾಸನೆಯಿಂದ ಸ್ಥಳೀಯರಿಗೆ ಬದುಕಲು ಅಸಾಧ್ಯವಾಗಿದೆ. ಕೊಳಚೆನೀರು ಹರಿದು ಸುತ್ತಮುತ್ತಲಿನ ಕುಡಿಯುವ ನೀರಿನ ಬಾವಿಗಳ ನೀರು ಕಲುಷಿತಗೊಳ್ಳಲು ಕಾರಣವಾಗುತ್ತಿದೆ ಎಂದು ಸಮಿತಿ ಪ್ರಮುಖರು ಆರೋಪಿಸಿದ್ದಾರೆ. ಅಲ್ಲದೇ ಈ ಸಮಸ್ಯೆ ಅಂತ್ಯ ಕಾಣುವ ವರೆಗೂ ದೀರ್ಘ ಕಾಲ ಪ್ರತಿಭಟನೆ ಮುಂದುವರಿಸಲು ಸಮಿತಿ ಪ್ರಮುಖರು ತೀರ್ಮಾನಿಸಿದ್ದಾರೆ.

ಮೆರವಣಿಗೆಗೆ ತಡೆ

ಪ್ರತಿಭಟನಾ ಮೆರವಣಿಗೆಯನ್ನು ಉದ್ದಿಮೆ ಪಾರ್ಕ್ ಬಳಿಯಲ್ಲಿ ಪೊಲೀಸರು ತಡೆದು ನಿಲ್ಲಿಸಿದರು. ಬಳಿಕ ಅಲ್ಲೇ ಕುಳಿತು ಪ್ರತಿಭಟನಾಕಾರರು ಧರಣಿ ಸತ್ಯಾಗ್ರಹ ನಡೆಸಿದರು. ಅಪಾರ ಸಂಖ್ಯೆಯಲ್ಲಿ ಸ್ಥಳೀಯರು, ನಾಗರಿಕರು ಭಾಗವಹಿಸಿದ್ದರು.

ಪರಿಸರ ವಿರೋಧಿ ಉದ್ದಿಮೆ ಬೇಡ

ಪರಿಸರ ವಿರೋಧಿ ಕೈಗಾರಿಕೆಗಳನ್ನು ತಾತ್ಕಾಲಿವಾಗಿ ಮುಚ್ಚುಗಡೆಗೊಳಿಸುವಂತೆ ಪುತ್ತಿಗೆ ಗ್ರಾ.ಪಂ. ಆಡಳಿತವು ಇತ್ತೀಚೆಗೆ ಆದೇಶ ಹೊರಡಿಸಿತ್ತು. ಮಾತ್ರವಲ್ಲದೆ ಕಾನೂನು ವಿರುದ್ಧವಾಗಿ ಕಾರ್ಯವೆಸಗುವ ಉದ್ದಿಮೆಗಳನ್ನು ಬಂದ್ ಮಾಡುವಂತೆ ಹಾಗೂ ಮಾನದಂಡಗಳನ್ನು ಪಾಲಿಸಿದೆಯೇ ಇಲ್ಲವೇ ಬಗ್ಗೆ ಪರಿಶೀಲನೆ ನಡೆಸುವಂತೆ ಜಿಲ್ಲಾಡಳಿತವು ಇತ್ತೀಚೆಗೆ ನಿರ್ದೇಶಿಸಿತ್ತು. ಈ ನಿಟ್ಟಿನಲ್ಲಿ ವಿಶೇಷ ಗಮನ ಹರಿಸಿರುವ ಜಿಲ್ಲಾಧಿಕಾರಿ ಅರ್ಜುನ್ ಪಾಂಡ್ಯನ್ ಅವರು ಜನರ ಜೀವ ಮತ್ತು ಆಸ್ತಿಪಾಸ್ತಿಗಳಿಗೆ ತೊಂದರೆಯಾಗುವಂತಹ ಕಾರ್ಖಾನೆ ನಡೆಸಲು ಅವಕಾಶ ನೀಡುವುದಿಲ್ಲವೆಂದು ಸ್ಪಷ್ಟಪಡಿಸಿದ್ದರು. ಆದರೂ ತಾತ್ಕಾಲಿಕವಾಗಿ ಮುಚ್ಚುಗಡೆ ಆದೇಶವಿರುವ ಪರಿಸರ ವಿರೋಧಿ ಕಾರ್ಖಾನೆಗಳನ್ನು ಶಾಶ್ವತವಾಗಿ ಬಂದ್ ಮಾಡಿಸುವಂತೆ ಕ್ರಿಯಾ ಸಮಿತಿಯ ಪದಾಧಿಕಾರಿಗಳು ಜಿಲ್ಲಾಡಳಿತವನ್ನು ಆಗ್ರಹಿಸಿದ್ದಾರೆ.

ಕಾಸರಗೋಡು ಜಿಲ್ಲಾಡಳಿತದಿಂದ ಕಾಲೇಜಿನಲ್ಲಿ ಜನಗಣತಿ 'ರಸಪ್ರಶ್ನೆ ಸ್ಪರ್ಧೆ'



ಕಾಸರಗೋಡು: ಜಿಲ್ಲೆಯಲ್ಲಿ ಜನಗಣತಿ 2026ರ ಅಂಗವಾಗಿ ರಸಪ್ರಶ್ನೆ ಸ್ಪರ್ಧೆಯನ್ನು ಆಯೋಜಿಸಲಾಗಿದೆ. ಜನಗಣತಿ 2026 ಅಭಿಯಾನದ ಭಾಗವಾಗಿ ಜನಗಣತಿ ಕಾರ್ಯಾಚರಣೆ ನಿರ್ದೇಶನಾಲಯ ಮತ್ತು ಜಿಲ್ಲಾಡಳಿತವು ಕಾಞಂಗಾಡಿನ ನೆಹರೂ ಕಲಾ ಮತ್ತು ವಿಜ್ಞಾನ ಕಾಲೇಜಿನಲ್ಲಿ ಸೋಮವಾರ ರಸಪ್ರಶ್ನೆ ಸ್ಪರ್ಧೆಯನ್ನು ಹಮ್ಮಿಕೊಂಡಿತ್ತು. 18 ಮಂದಿ ವಿದ್ಯಾರ್ಥಿಗಳು ಸ್ಪರ್ಧೆಯಲ್ಲಿ ಭಾಗವಹಿಸಿದ್ದರು. ಜನಗಣತಿ ಮಾಸ್ಟರ್ ತರಬೇತುದಾರರಾದ ಟಿ.ರಾಜ್‌ಕುಮಾರ್ ಮತ್ತು ಡಾ.ಪಿ.ವಿ.ಜಿಶಾ ರಸಪ್ರಶ್ನೆ ಸ್ಪರ್ಧೆಯನ್ನು ನಡೆಸಿಕೊಟ್ಟರು. ಎಂಎಸ್‌ಸಿ ವಿದ್ಯಾರ್ಥಿನಿ ಕೆ.ವಿ.ಸುಪ್ರಿಯಾ ಪ್ರಥಮ ಸ್ಥಾನ ಮತ್ತು ಎಂಎಸ್‌ಸಿ ಭೌತಶಾಸ್ತ್ರ ವಿದ್ಯಾರ್ಥಿನಿ ರಕ್ಷಿತಾ ಎರಡನೇ ಸ್ಥಾನ ಪಡೆದರು.

ವಿವಿಧ ಕಾಲೇಜುಗಳಲ್ಲಿ ಆಯೋಜನೆ

ಮುಂದಿನ ದಿನಗಳಲ್ಲಿ ಜನಗಣತಿಯ ಭಾಗವಾಗಿ ಕಾಸರಗೋಡು ಸರಕಾರಿ ಕಾಲೇಜು, ಎಳೇರಿತ್ತಟ್ಟು ಇ.ಕೆ.ನಾಯನಾರ್ ಸ್ಮಾರಕ ಸರಕಾರಿ ಕಾಲೇಜು, ರಾಜಪುರ ಸೈಂಟ್ ಪಯಸ್ ಕಾಲೇಜಿನಲ್ಲಿಯೂ ರಸಪ್ರಶ್ನೆ ಸ್ಪರ್ಧೆಗಳನ್ನು ಆಯೋಜಿಸಲು ನಿರ್ಧರಿಸಲಾಯಿತು.

ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾ.ಯೋ. ಟ್ರಸ್ಟ್‌ನಿಂದ ಪೆರ್ಲದಲ್ಲಿ ಪರಿಸರ ಜಾಗೃತಿ



ಪೆರ್ಲ: ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ.ಸಿ. ಟ್ರಸ್ಟ್ ಮಂಜೇಶ್ವರ ತಾಲೂಕು ಪೆರ್ಲ ವಲಯದ ವತಿಯಿಂದ ಪರಿಸರ ಜಾಗೃತಿ ಮತ್ತು ಗಿಡ ನಾಟಿ ವನಮಹೋತ್ಸವ ಕಾರ್ಯಕ್ರಮವನ್ನು ಪೆರ್ಲ ಶ್ರೀ ಶಾರದಾ ಮರಾಟಿ ಬೋರ್ಡಿಂಗ್ ಹಾಲ್‌ನಲ್ಲಿ ನಡೆಸಲಾಯಿತು.

ಕಾರ್ಯಕ್ರಮದ ಅಧ್ಯಕ್ಷೆ ಪುಷ್ಪಾ ಅಮೆಕ್ಕಳ ದೀಪ ಬೆಳಗಿಸಿ ಉದ್ಘಾಟಿಸಿದರು. ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಪೆರ್ಲ ವಲಯದ ಮೇಲ್ವಿಚಾರಕಿ ಜಯಶ್ರೀ, ಶ್ರೀ ಶಾರದಾ ಮರಾಟಿ ಚಾರಿಟೇಬಲ್ ಟ್ರಸ್ಟ್‌ನ ಗೌರವಾಧ್ಯಕ್ಷ ಡಾ.ಬಿ.ಜಿ.ನಾಯ್ಕ ಮತ್ತು ಶ್ರೀ ಶಾರದಾ ಮರಾಟಿ ಚಾರಿಟೇಬಲ್ ಟ್ರಸ್ಟ್‌ನ ಅಧ್ಯಕ್ಷ ಡಾ.ನಾರಾಯಣ ನಾಯ್ಕ, ಶ್ರೀ ಶಾರದಾ ಮರಾಟಿ ಮಹಿಳಾ ವೇದಿಕೆ ಅಧ್ಯಕ್ಷೆ ಪೂರ್ಣಿಮಾ ಹಾಗೂ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಪೆರ್ಲ ವಲಯದ ಶೌರ್ಯ ವಿಪತ್ತು ನಿರ್ವಹಣಾ ಘಟಕದ ಮಂಜೇಶ್ವರ ತಾಲೂಕು ಮಾಸ್ಟರ್ ಸುರೇಂದ್ರ, ಕಾಟುಕುಕ್ಕೆ ಒಕ್ಕೂಟದ ಅಧ್ಯಕ್ಷೆ ರೇವತಿ, ಬೇಂಗಪದವು ಒಕ್ಕೂಟದ ಅಧ್ಯಕ್ಷ ಉದಯಕುಮಾರ್, ಬೇಂಗಪದವು ಒಕ್ಕೂಟದ ಸೇವಾ ಪ್ರತಿನಿಧಿ ಲತಾಕುಮಾರಿ ಇದ್ದರು. ಶ್ರೀ ಶಾರದಾ ಮರಾಟಿ ಮಹಿಳಾ ವೇದಿಕೆ ಸದಸ್ಯೆಯರು, ಶ್ರೀ ಶಾರದಾ ಮರಾಟಿ ಚಾರಿಟೇಬಲ್ ಟ್ರಸ್ಟ್‌ನ ಸದಸ್ಯರು, ಶ್ರೀ ಶಾರದಾ ಮರಾಟಿ ಸಮಾಜ ಸೇವಾ ಸದಸ್ಯರು ಹಾಗೂ ಧರ್ಮಸ್ಥಳ ಗ್ರಾ. ಯೋ. ಪೆರ್ಲ ವಲಯದ ಶೌರ್ಯ ಘಟಕದ ಸದಸ್ಯರು, ಒಕ್ಕೂಟದ ಪದಾಧಿಕಾರಿಗಳು ಮತ್ತು ಸದಸ್ಯರು ಭಾಗವಹಿಸಿದ್ದರು. ಶ್ರೀ ಶಾರದಾ ಮರಾಟಿ ಮಹಿಳಾ ವೇದಿಕೆ ಸದಸ್ಯೆ ಗೋಪಿ ಕೃಷ್ಣ ಸ್ವಾಗತಿಸಿ, ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾ.ಯೋ. ಪೆರ್ಲ ಒಕ್ಕೂಟದ ಸೇವಾ ಪ್ರತಿನಿಧಿ ರೇಖಾ ಜ್ಯೋತಿ ವಂದಿಸಿದರು. ಶ್ರೀ ಶಾರದಾ ಮರಾಟಿ ಮಹಿಳಾ ವೇದಿಕೆ ಸದಸ್ಯೆ ಲಕ್ಷ್ಮಿ ನಿರೂಪಿಸಿದರು.

'ವಿಶ್ವ ತಂಬಾಕು ವಿರೋಧಿ ದಿನ, ವಿಶೇಷ ಮಾಹಿತಿ ಕಾರ್ಯಾಗಾರ




ಬದಿಯಡ್ಕ: ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ.ಸಿ. ಟ್ರಸ್ಟ್ ಕಾಸರಗೋಡು ಹಾಗೂ ಅಖಿಲ ಕರ್ನಾಟಕ ಜನಜಾಗೃತಿ ವೇದಿಕೆ ಇವುಗಳ ಸಹಭಾಗಿತ್ವದಲ್ಲಿ ಬದಿಯಡ್ಕ ವಲಯದ ಪ್ರಗತಿ ಬಂಧು ಸ್ವಸಹಾಯ ಸಂಘಗಳ ಒಕ್ಕೂಟದ ನೇತೃತ್ವದಲ್ಲಿ ಕನ್ನೆಪಾಡಿಯಲ್ಲಿ 'ವಿಶ್ವ ತಂಬಾಕು ವಿರೋಧಿ ದಿನ'ದ ಅಂಗವಾಗಿ ಮಾಹಿತಿ ಕಾರ್ಯಾಗಾರ ಹಮ್ಮಿಕೊಳ್ಳಲಾಯಿತು.

ಅಖಿಲ ಕರ್ನಾಟಕ ಜನಜಾಗೃತಿ ನಿಕಟಪೂರ್ವ ಅಧ್ಯಕ್ಷ ಅಖಿಲೇಶ್ ನಗುಮುಗಂ ಕಾರ್ಯಕ್ರಮ ಉದ್ಘಾಟಿಸಿ, ಮಾತನಾಡಿದರು.

ತಾಲೂಕಿನ ಅಖಿಲ ಕರ್ನಾಟಕ ಜನಜಾಗೃತಿ ವೇದಿಕೆ ಅಧ್ಯಕ್ಷ ಜಯರಾಮ ಪಾಟಾಳಿ ಪಡುಮಲೆ ಸಭಾಧ್ಯಕ್ಷತೆ ವಹಿಸಿದ್ದರು. ಜನಜಾಗೃತಿ ಸದಸ್ಯ ಹರೀಶ ಗೋಸಾಡ ತಂಬಾಕು ಸೇವನೆಯ ದುಷ್ಪರಿಣಾಮಗಳ ಬಗ್ಗೆ ಮಾಹಿತಿ ನೀಡಿದರು. ಈ ಸಂದರ್ಭ ಜನಜಾಗೃತಿ ಸದಸ್ಯ ಶ್ಯಾಮ ಆಳ್ವ, ವಲಯ ಮೇಲ್ವಿಚಾರಕಿ ಸುಗುಣ ಓ. ಹವಲ್ದಾರ್, ಒಕ್ಕೂಟದ ಅಧ್ಯಕ್ಷೆ ಶಾರದಾ, ಸೇವಾಪ್ರತಿನಿಧಿ ಬೇಬಿ, ಒಕ್ಕೂಟದ ಪದಾಧಿಕಾರಿಗಳು ಹಾಗೂ ಸದಸ್ಯರು ಉಪಸ್ಥಿತರಿದ್ದರು.

ಶ್ರೀ ಕ್ಷೇತ್ರದ ಧರ್ಮಸ್ಥಳದಿಂದ ಆರ್ಥಿಕ ನೆರವು



ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ.ಸಿ. ಟ್ರಸ್ಟ್ ಮಂಜೇಶ್ವರ ತಾಲೂಕಿನ ಕುಂಬಳೆ ವಲಯದ ಕಿದೂರು ಗ್ರಾಮದ ಗಂಗಾಧರ ಅವರ ಪುತ್ರಿ ಅಕ್ಷಿತಾ ಅವರ ಚಿಕಿತ್ಸೆಗಾಗಿ ಧರ್ಮಸ್ಥಳ ಶ್ರೀಕ್ಷೇತ್ರದಿಂದ ಮಂಜೂರು ಮಾಡಿರುವ 40,000 ರೂ. ಮೊತ್ತದ ಮಂಜೂರಾತಿ ಪತ್ರವನ್ನು ವಿತರಣೆ ಮಾಡಲಾಯಿತು. ತಾಲೂಕು ಜನಜಾಗೃತಿ ವೇದಿಕೆ ಅಧ್ಯಕ್ಷರು ಮಂಜುನಾಥ ಆಳ್ವ ಮಡ್ವ, ತಾಲೂಕಿನ ಯೋಜನಾಧಿಕಾರಿ ಶಶಿಕಲಾ ಸುವರ್ಣ, ವಲಯ ಜನಜಾಗೃತಿ ವೇದಿಕೆ ಅಧ್ಯಕ್ಷರು ಮಹೇಶ್ ಪುಣೆಯೂರು, ಮೇಲ್ವಿಚಾರಕರು ಅಭಿಷೇಕ್, ಸೇವಾ ಪ್ರತಿನಿಧಿ ಸರಿತಾ ಉಪಸ್ಥಿತರಿದ್ದರು.

ಪ್ಲಸ್ ವನ್ ದಾಖಲಾತಿ: ಕ್ರೀಡಾ ಕೋಟಾ ಆನ್‌ಲೈನ್ ನೋಂದಣಿ ಆರಂಭ

ಕಾಸರಗೋಡು: ಪ್ಲಸ್ ವನ್ ಕ್ರೀಡಾ ಕೋಟಾ ಆನ್‌ಲೈನ್ ನೋಂದಣಿ ಮತ್ತು ಪರಿಶೀಲನೆ ಪ್ರಾರಂಭವಾಗಿದೆ. ಪ್ಲಸ್ ವನ್ ಕ್ರೀಡಾ ಕೋಟಾಕ್ಕೆ ನೋಂದಾಯಿಸಲು ಬಯಸುವ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಿದ ನಂತರವೇ ತಮ್ಮ ಕ್ರೀಡಾ ಕೋಟಾ ಪ್ರಮಾಣಪತ್ರಗಳನ್ನು ಅಪ್‌ಲೋಡ್ ಮಾಡಬೇಕು. ಆನ್‌ಲೈನ್ ನೋಂದಣಿಯನ್ನು ಪೂರ್ಣಗೊಳಿಸಿದ ನಂತರ ಆನ್‌ಲೈನ್ ನೋಂದಣಿಯ ಪ್ರತಿ, ಮೂಲ ಕ್ರೀಡಾ ಪ್ರಮಾಣಪತ್ರಗಳು ಮತ್ತು ಪ್ರತಿಗಳೊಂದಿಗೆ ಜೂ.10 ರಿಂದ 17ರ ವರೆಗೆ ಉದಯಗಿರಿಯಲ್ಲಿರುವ ಕಾಸರಗೋಡು ಜಿಲ್ಲಾ ಕ್ರೀಡಾ ಮಂಡಳಿ ಕಚೇರಿಗೆ ಆಗಮಿಸಬೇಕು. ಪ್ರಮಾಣಪತ್ರ ಪರಿಶೀಲನೆಯನ್ನು ಪೂರ್ಣಗೊಳಿಸಿ ಅಂಕಪಟ್ಟಿ ಪಡೆದ ನಂತರ ಮತ್ತೆ ಲಾಗಿನ್ ಆಗಬೇಕು ಮತ್ತು ಶಾಲೆಯನ್ನು ಆಯ್ಕೆ ಮಾಡಬೇಕು. 2024ನೇ ಏಪ್ರಿಲ್ 1ರಿಂದ 2026ನೇ ಮಾರ್ಚ್ 31ರ ವರೆಗಿನ ಪ್ರಮಾಣಪತ್ರಗಳನ್ನು ಪ್ರವೇಶಕ್ಕಾಗಿ ಪರಿಗಣಿಸಲಾಗುತ್ತದೆ. ಶಾಲಾ ಮಟ್ಟದ ಸ್ಪರ್ಧೆಗಳ ಜೊತೆಗೆ ರಾಜ್ಯ ಮತ್ತು ಜಿಲ್ಲಾ ಅನುಮೋದಿತ ಕ್ರೀಡಾ ಸಂಘಗಳು ನಡೆಸುವ ಸ್ಪರ್ಧೆಗಳ ಪ್ರಮಾಣಪತ್ರಗಳು, ಸಂಬಂಧಪಟ್ಟ ಕ್ರೀಡಾ ಮಂಡಳಿ ವೀಕ್ಷಕರ ಸಹಿ, ಪ್ರಮಾಣಪತ್ರ ಸಂಖ್ಯೆ, ನೀಡಿದ ದಿನಾಂಕ ಮತ್ತು ನೀಡುವ ಪ್ರಾಧಿಕಾರವನ್ನು ಹೊಂದಿರಬೇಕು. ಹೆಚ್ಚಿನ ಮಾಹಿತಿಗಾಗಿ 9645627333, 9946049004 ಸಂಪರ್ಕಿಸಬಹುದು.

ಕುಣಿತ ಭಜನಾ ತಂಡದ ಸಾಧಕ ಎಸ್ಸೆಸ್ಸೆಲ್ಸಿ ವಿದ್ಯಾರ್ಥಿಗಳಿಗೆ ಅಭಿನಂದನೆ



ಉಪ್ಪಳ: ದುರ್ಗಾ ಶಕ್ತಿ ಕುಣಿತ ಭಜನಾ ತಂಡ ಪರಂಬಳ ಕಯ್ಯಾರು ಇದರ ವತಿಯಿಂದ ಅಭಿನಂದನಾ ಸಮಾರಂಭವು ಪರಂಬಳ ಕಯ್ಯಾರು ಶ್ರೀ ಭಾರತ ಮಾತಾ ಸೇವಾ ಟ್ರಸ್ಟ್‌ನ ಸಭಾಂಗಣದಲ್ಲಿ ನಡೆಯಿತು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ದುರ್ಗಾ ಶಕ್ತಿ ಕುಣಿತ ಭಜನಾ ತಂಡದ ಗೌರವ ಮಾರ್ಗದರ್ಶಕಿ ರಮ್ಯಾ ಎನ್. ದರ್ಬೆತಡ್ಕ ವಹಿಸಿ, ಶುಭಹಾರೈಸಿ ಮಾತನಾಡಿದರು.

ಸಮಾರಂಭವನ್ನು ಕುಂಬಳೆ ಅಬಕಾರಿ ಅಧಿಕಾರಿ ಪ್ರಜಿತ್ ಉದ್ಘಾಟಿಸಿದರು. ಮುಖ್ಯ ಅತಿಥಿಗಳಾಗಿ ವಸುದೈವ ಭಜನಾ ಕುಟುಂಬ ಅಖಂಡ ಭಾರತ ಇದರ ಸದಸ್ಯ ರವಿ ಮಂಜನಾಡಿ, ಪದ್ಮಶಾಲಿ ಸಮಾಜ ಸೇವಾ ಸಮಿತಿ ಪೈವಳಿಕೆ ಇದರ ಅಧ್ಯಕ್ಷ ಉಮೇಶ್ ಕುಂಡೇರಿ, ಐಲ ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನದ ಸೇವಕ ಪುರುಷೋತ್ತಮ ಪ್ರತಾಪನಗರ, ಕೊಂಡೆವೂರು ಶ್ರೀ ನಿತ್ಯಾನಂದ ಯೋಗಾಶ್ರಮದ ಭಜನಾ ಪ್ರಮುಖ್ ಪ್ರಮೋದ್ ಕಯ್ಯಾರು, ಛಾಯಸುತ ಕುಣಿತ ಭಜನಾ ತಂಡದ ಶಿಕ್ಷಕಿ, ಕುಣಿತ ಭಜನಾ ತೀರ್ಪುಗಾರ್ತಿ ಮೇಘಶ್ರೀ ಮಂಜೇಶ್ವರ, ಶ್ರೀ ಭಾರತ ಮಾತಾ ಸೇವಾ ಟ್ರಸ್ಟ್‌ನ ಅಧ್ಯಕ್ಷ ಗಿರೀಶ್‌ಕುಮಾರ್ ಕಯ್ಯಾರು ಅತಿಥಿಗಳಾಗಿ ಭಾಗವಹಿಸಿದ್ದರು. ಕಾರ್ಯಕ್ರಮದ ಅಂಗವಾಗಿ ಕುಣಿತ ಭಜನೆ ಜರಗಿತು.

2025–26ನೇ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಶೇಕಡಾ 80ಕ್ಕಿಂತ ಹೆಚ್ಚು ಅಂಕ ಪಡೆದ ಭಜನಾ ವಿದ್ಯಾರ್ಥಿಗಳನ್ನು ಅಭಿನಂದಿಸಲಾಯಿತು ಮತ್ತು ಭಜನಾ ಕ್ಷೇತ್ರದಲ್ಲಿ ಸಾಧನೆ ಮಾಡಿದ ವಿದ್ಯಾರ್ಥಿಗಳನ್ನು ಗೌರವಿಸಲಾಯಿತು. ದುರ್ಗಾ ಶಕ್ತಿ ಕುಣಿತ ಭಜನಾ ತಂಡದ ಪ್ರಧಾನ ಸಂಚಾಲಕ ಸತೀಶ್‌ಕುಮಾರ್ ಕಾಪು ಪ್ರಾಸ್ತಾವಿಕ ಮಾತನಾಡಿ ಸ್ವಾಗತಿಸಿದರು. ಕುಣಿತ ಭಜನಾ ತಂಡದ ಸಂಚಾಲಕ ಮಂಜುನಾಥ ಪರಂಬಳ ವಂದಿಸಿದರು.

ಸಾಧಕಿಗೆ ಬಿಜೆಪಿಯಿಂದ ಅಭಿನಂದನೆ



ಬದಿಯಡ್ಕ: ಪೆರಡಾಲ ಹದಿಮೂರನೇ ವಾರ್ಡ್ ಬಿಜೆಪಿ ಸಮಿತಿಯ ವತಿಯಿಂದ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಎಲ್ಲಾ ವಿಷಯಗಳಲ್ಲಿ ಎ ಪ್ಲಸ್ ಪಡೆದ ಬೀಜಂತಡ್ಕ ಇಳಂತೋಡಿ ಕಿರಣ ಮತ್ತು ರೇಖಾ ದಂಪತಿಯ ಪುತ್ರಿ, ಪೆರಡಾಲ ನವಜೀವನ ಹೈಸ್ಕೂಲ್‌ನ ವಿದ್ಯಾರ್ಥಿನಿ ರೋಷಿಕಾ ಕಿರಣ್ ಅವರನ್ನು ಅಭಿನಂದಿಸಲಾಯಿತು.

ವಾರ್ಡ್ ಸಮಿತಿ ಅಧ್ಯಕ್ಷ, ಹಿರಿಯ ಬಿಜೆಪಿ ಕಾರ್ಯಕರ್ತ ಎಂ.ನಾರಾಯಣ ಭಟ್ ಮೈರ್ಕಳ ಹಾಗೂ ಬದಿಯಡ್ಕ ಗ್ರಾಮ ಪಂಚಾಯತ್ ಉಪಾಧ್ಯಕ್ಷೆ, ವಾರ್ಡ್ ಪ್ರತಿನಿಧಿ ಅಶ್ವಿನಿ ಕೆ.ಎಂ. ಜಂಟಿಯಾಗಿ ವಿದ್ಯಾರ್ಥಿನಿಯನ್ನು ಶಾಲು ಹೊದೆಸಿ ಗೌರವಿಸಿದರು. ವಾರ್ಡ್ ಸಮಿತಿ ಪ್ರಧಾನ ಕಾರ್ಯದರ್ಶಿ ನಾರಾಯಣ ಪಿ. ಪೆರಡಾಲ, ಬಾಲಸುಬ್ರಹ್ಮಣ್ಯ ಭಟ್ ಉಪಸ್ಥಿತರಿದ್ದರು. ರಾಮಚಂದ್ರ ಮಣಿಯಾಣಿ ಸ್ವಾಗತಿಸಿ, ನಾರಾಯಣ ಮಣಿಯಾಣಿ ಇಳಂತೋಡಿ ಕಾರ್ಯಕ್ರಮ ವಂದಿಸಿದರು.



ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ.ಸಿ. ಟ್ರಸ್ಟ್ ಕಾಸರಗೋಡು ಬದಿಯಡ್ಕ ವಲಯದ ನೇತೃತ್ವದಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳದಿಂದ ಬದಿಯಡ್ಕದ ಕನ್ನೆಪಾಡಿ ಕಾರ್ಯಕ್ಷೇತ್ರದ ಶ್ರೀ ವಿದ್ಯಾಲಕ್ಷ್ಮಿ ತಂಡದ ಸದಸ್ಯೆ ಮೀನಾಕ್ಷಿ ಅವರಿಗೆ ವೈದ್ಯಕೀಯ ಚಿಕಿತ್ಸೆಗಾಗಿ ಮಂಜೂರುಗೊಂಡ 30,000 ರೂ.ವನ್ನು ತಾಲೂಕು ಯೋಜನಾಧಿಕಾರಿ ದಿನೇಶ್ ಬಿ. ಹಸ್ತಾಂತರಿಸಿದರು. ಬದಿಯಡ್ಕ ವಲಯ ಮೇಲ್ವಿಚಾರಕಿ ಸುಗುಣ ಓ. ಹವಲ್ದಾರ್, ಕುಟುಂಬದ ಸದಸ್ಯರು ಈ ಸಂದರ್ಭ ಉಪಸ್ಥಿತರಿದ್ದರು.

ನಾಡೋಜ ಡಾ. ಕಯ್ಯಾರ ಕಿಂಞಣ್ಣ ರೈಯವರ 111ನೇ ಹುಟ್ಟುಹಬ್ಬದಲ್ಲಿ ಶಾಸಕ ಕಲ್ಲಟ್ರ ಮಾಹಿನ್ ಭರವಸೆ

ಸ್ಮಾರಕ ಭವನ ಪೂರ್ಣಗೊಳಿಸಲು ಎದುರಾದ ಅಡೆತಡೆ ನಿವಾರಿಸಲು ಕ್ರಮ

ಬದಿಯಡ್ಕ: ನಾಡೋಜ ಡಾ.ಕಯ್ಯಾರ ಕಿಂಞಣ್ಣ ರೈ ಅವರ ಸ್ಮಾರಕ ಭವನ ನಿರ್ಮಾಣ ಕಾರ್ಯ ಅರ್ಧದಲ್ಲಿ ನಿಂತಿದೆ. ಇದರ ಕಾರ್ಯ ಪೂರ್ಣಗೊಳಿಸಲು ಈ ಭಾಗದ ಪಂಚಾಯತ್ ಅಧ್ಯಕ್ಷರು ಹಾಗೂ ಅಧಿಕಾರಿಗಳೊಂದಿಗೆ ಚರ್ಚಿಸುತ್ತೇನೆ ಎಂದು ಕಾಸರಗೋಡು ಶಾಸಕ ಕಲ್ಲಟ್ರ ಮಾಹಿನ್ ಹಾಜಿ ಭರವಸೆ ನೀಡಿದರು.

ಬದಿಯಡ್ಕ ಕವಿತಾ ಕುಟೀರದಲ್ಲಿ ಗಡಿನಾಡ ಸಾಹಿತ್ಯ ಸಾಂಸ್ಕೃತಿಕ ಅಕಾಡೆಮಿಯ ನೇತೃತ್ವದಲ್ಲಿ ಸೋಮವಾರ ನಡೆದ ನಾಡೋಜ ಡಾ.ಕಯ್ಯಾರ ಕಿಂಞಣ್ಣ ರೈಯವರ 111ನೇ ಹುಟ್ಟುಹಬ್ಬದ ಕಾರ್ಯಕ್ರಮದಲ್ಲಿ ಭಾಗವಹಿಸಿದ ಅವರು ಭಾವಚಿತ್ರಕ್ಕೆ ಪುಷ್ಪಾರ್ಚನೆ ನೆರವೇರಿಸಿ, ಮಾತನಾಡಿದರು.

ಸ್ಮಾರಕ ಭವನ ನಿರ್ಮಾಣ ಕಾಸರಗೋಡು ಜಿಲ್ಲೆಯ ಜನರ ಬೇಡಿಕೆ. ಇದನ್ನು ಈಡೇರಿಸಲು ಪ್ರಾಮಾಣಿಕ ಪ್ರಯತ್ನ ಮಾಡಲಾಗುವುದು ಎಂದರು.



ಬದಿಯಡ್ಕ ಗ್ರಾಮ ಪಂಚಾಯತ್ ಅಧ್ಯಕ್ಷ ಶಂಕರ ಡಿ., ಕರ್ನಾಟಕ ಗಡಿಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಸದಸ್ಯ ಎ.ಆರ್.ಸುಬ್ಬಯ್ಯಕಟ್ಟೆ, ಪಂಚಾಯತ್ ಮಾಜಿ ಅಧ್ಯಕ್ಷ ಮಾಹಿನ್ ಕೇಳೋಟ್, ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಚನಿಯಪ್ಪ ನಾಯ್ಕ, ಕಾರ್ಯದರ್ಶಿ ಅಖಿಲೇಶ್ ನಗುಮುಗಂ, ಕಾಸರಗೋಡು ಬ್ಲಾಕ್ ಪಂಚಾಯತ್ ಸದಸ್ಯರಾದ ಮಹೇಶ್ ವಳಕ್ಕುಂಜ, ಅನ್ವರ್, ಪ್ರೊ.ಎ.ಶ್ರೀನಾಥ್, ಗಮಕ ಪರಿಷತ್‌ನ ಟಿ.ಶಂಕರನಾರಾಯಣ ಭಟ್, ಕನ್ನಡ ಪತ್ರಕರ್ತರ ಕ್ಷೇಮಾಭಿವೃದ್ಧಿ ಸಂಘದ ಕಾರ್ಯದರ್ಶಿ ಗಂಗಾಧರ ತೆಕ್ಕೆಮೂಲೆ, ಕುಂಬ್ಡಾಜೆ ಪಂಚಾಯತ್ ಮಾಜಿ ಅಧ್ಯಕ್ಷ ಆನಂದ ಮವ್ವಾರು, ಕುಂಬ್ಡಾಜೆ ಸೇವಾ ಸಹಕಾರಿ ಬ್ಯಾಂಕ್ ನಿರ್ದೇಶಕ ಜಯಪ್ರಕಾಶ್ ಶೆಟ್ಟಿ, ಕಿಂಞಣ್ಣ ರೈ ಅವರ ಮಕ್ಕಳಾದ ರವಿರಾಜ ರೈ, ದುರ್ಗಾಪ್ರಸಾದ್ ರೈ, ರಂಗನಾಥ ರೈ, ಪ್ರಸನ್ನ ರೈ, ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿಯೋಜನೆಯ ಜಯರಾಮ ಪಾಟಾಳಿ ಇದ್ದರು. ಇದೇ ವೇಳೆ ಕೇಂದ್ರೀಯ ವಿ.ವಿಯಿಂದ ರ್‍ಯಾಂಕ್ ಪಡೆದ ಜ್ಯೋತಿರ್ಲಕ್ಷ್ಮಿ ಅವರನ್ನು ಗೌರವಿಸಲಾಯಿತು. ಗಾಯಕ ವಸಂತ ಬಾರಡ್ಕರು ಕಯ್ಯಾರ ಕವಿತೆ ಹಾಡಿದರು. ಹರೀಶ್ ಗೋಸಾಡ ಸ್ವಾಗತಿಸಿ, ವಂದಿಸಿದರು.

ತೊಡಕು ನಿವಾರಣೆ

ಕಯ್ಯಾರ ಸ್ಮಾರಕ ಭವನದ ದಾರಿಯನ್ನು ಅಗಲಗೊಳಿಸಿ ಉದ್ಘಾಟನೆಗಾಗಿ ಸಿದ್ಧಗೊಳಿಸಲಾಗುವುದು. ಅಲ್ಲದೆ ಗ್ರಾಮಾಧಿಕಾರಿ ಹಾಗೂ ಪಂಚಾಯತ್‌ನಿಂದ ಕಾನೂನಾತ್ಮಕ ತೊಡಕುಗಳ ಪರಿಹಾರೋಪಾಯ ಕೈಗೊಳ್ಳಲಾಗುವುದು. ಪಂಚಾಯತ್ ಅಧ್ಯಕ್ಷರ ಜೊತೆ ಮಾತನಾಡಿ ನಿವಾರಣೆಗಳ ಬಗ್ಗೆ ಪರಿಶೀಲಿಸಿ ಸುಗಮಗೊಳಿಸಲಾಗುವುದು.

● ಕಲ್ಲಟ್ರ ಮಾಹಿನ್ ಹಾಜಿ, ಶಾಸಕರು

website hosadigantha.com | E-paper epaper.hosadigantha.com | Email diganthamlr@gmail.com | Twitter HosadiganthaWeb
ಮಂಗಳವಾರ 09, ಜೂನ್ 2026

ಸುತ್ತ ಮುತ್ತ

ಚಿತ್ರಕಲೆ ಸ್ಪರ್ಧೆ: ಸಂಜಿತ್ ಪ್ರಥಮ



ಕುಂದಾಪುರ: ಸುರಭಿ ಬೈಂದೂರು ಮತ್ತು ಚಿತ್ತಾರ ಹಳ್ಳಿಹೊಳೆ ಇವರ ಸಂಯುಕ್ತ ಆಶಯದಲ್ಲಿ ಬೈಂದೂರು ಜಾತ್ರೆಯ ಪ್ರಯುಕ್ತ ಇತ್ತೀಚಿಗೆ ನಡೆದ ತಾಲೂಕು ಮಟ್ಟದ ಚಿತ್ರಕಲಾ ಸ್ಪರ್ಧೆಯಲ್ಲಿ ಗಂಗೊಳ್ಳಿಯ ಸಂಜಿತ್ ಎಂ. ದೇವಾಡಿಗ ಪ್ರಥಮ ಸ್ಥಾನ ಪಡೆದಿದ್ದಾನೆ. ಈತ ಗಂಗೊಳ್ಳಿಯ ಚಿತ್ರ ಕಲಾವಿದ ಮಾಧವ ದೇವಾಡಿಗ ಹಾಗೂ ಉಪನ್ಯಾಸಕಿ ಸಾವಿತ್ರಿ ಎಸ್. ದಂಪತಿ ಪುತ್ರ

ಜು.11: ಕೃಷಿಕ ಸಮಾಜದ ಚುನಾವಣೆ

ಉಡುಪಿ: ಕರ್ನಾಟಕ ಪ್ರದೇಶ ಕೃಷಿಕ ಸಮಾಜದ 5 ವರ್ಷಗಳ ಅವಧಿಗೆ ಉಡುಪಿ ತಾಲೂಕು ಮಟ್ಟದ ಕೃಷಿಕ ಸಮಾಜದ ಚುನಾವಣೆ ಜುಲೈ 11 ರಂದು ಉಡುಪಿ ಸಹಾಯಕ ಕೃಷಿ ನಿರ್ದೇಶಕರ ಕಚೇರಿಯಲ್ಲಿ ಬೆಳಿಗ್ಗೆ 8 ರಿಂದ ಅಪರಾಹ್ನ 3ರವರೆಗೆ ನಿಗದಿಪಡಿಸಲಾಗಿದೆ. ಸದರಿ ಚುನಾವಣೆಗೆ ನಾಮಪತ್ರ ಸಲ್ಲಿಸುವ ಉಮೇದುದಾರರಿಗೆ ಜೂ.30ರಿಂದ ಸಹಾಯಕ ಕೃಷಿ ನಿರ್ದೇಶಕರ ಕಚೇರಿ, ಉಡುಪಿ ತಾಲೂಕು ಇಲ್ಲಿ ನಾಮಪತ್ರ ವಿತರಿಸಲಾಗುವುದು. ಆಕಾಂಕ್ಷಿಗಳು ಚುನಾವಣಾಧಿಕಾರಿಗಳಿಗೆ ಅರ್ಜಿ ಮೂಲಕ ರೂ. 250ಗಳನ್ನು ಠೇವಣಿಯಾಗಿ ಪಾವತಿಸಿದ ಮೂಲ ರಶೀದಿ ಹಾಗೂ ಸಂಬಂಧಿಸಿದ ತಹಶೀಲ್ದಾರರಿಂದ ದೃಢೀಕೃತ ಪಹಣಿ ಪತ್ರಿಯೊಂದಿಗೆ ನಾಮಪತ್ರ ಸಲ್ಲಿಸಲು ಜು.4 ರ ಬೆಳಿಗ್ಗೆ 11 ರಿಂದ ಸಂಜೆ 5ವರೆಗೆ ಅವಕಾಶವಿರುತ್ತದೆ ಎಂದು ಉಡುಪಿ ತಾಲೂಕು ಸಹಾಯಕ ಕೃಷಿ ನಿರ್ದೇಶಕರ ಕಚೇರಿ ಪ್ರಕಟಣೆ ತಿಳಿಸಿದೆ.

ಜೂ.12ರಂದು ಅಖಂಡ ಭಜನಾ ಕಾರ್ಯಕ್ರಮ

ಕುಂದಾಪುರ: ಬಸ್ರೂರು ಶ್ರೀ ಮಹಾಲಸಾ ನಾರಾಯಣಿ ದೇವಸ್ಥಾನದಲ್ಲಿ ಅಧಿಕ ಮಾಸದ ಪ್ರಯುಕ್ತ ಅಖಂಡ ಭಜನಾ ಕಾರ್ಯಕ್ರಮ ಜೂ.12ರಂದು ನಡೆಯಲಿದೆ. ಬೆಳಿಗ್ಗೆ 8 ಗಂಟೆಗೆ ದೀಪ ಪ್ರಜ್ವಲನೆಯೊಂದಿಗೆ ಅಖಂಡ ಭಜನಾ ಕಾರ್ಯಕ್ರಮ ಆರಂಭಗೊಳ್ಳಲಿದ್ದು, ವಿವಿಧ ಭಜನಾ ಮಂಡಳಿಗಳು ಹಾಗೂ ಭಜನಾ ಕಲಾವಿದರಿಂದ ಭಜನಾ ಸೇವೆ ನಡೆಯಲಿದೆ. ಮಧ್ಯಾಹ್ನ 12.30ಕ್ಕೆ ಮಹಾಪೂಜೆ, ಸಂತರ್ಪಣೆ ಮೊದಲಾದ ಧಾರ್ಮಿಕ ಕಾರ್ಯಕ್ರಮಗಳು, ರಾತ್ರಿ 8 ಗಂಟೆಗೆ ರಾತ್ರಿ ಪೂಜೆ ಹಾಗೂ ಪ್ರಸಾದ ವಿತರಣೆಯೊಂದಿಗೆ ಅಖಂಡ ಭಜನಾ ಕಾರ್ಯಕ್ರಮ ಸಮಾಪನಗೊಳ್ಳಲಿದೆ. ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ದೇವಿಯ ಕೃಪೆಗೆ ಪಾತ್ರರಾಗುವಂತೆ ದೇವಸ್ಥಾನದ ಧರ್ಮದರ್ಶಿ ಮಂಡಳಿ ಪ್ರಕಟಣೆಯಲ್ಲಿ ತಿಳಿಸಿದೆ.

ಆಕ್ಷೇಪಣೆ ಆಹ್ವಾನ

ಉಡುಪಿ: ಉಡುಪಿ ನಗರಸಭಾ ವ್ಯಾಪ್ತಿಯ ಕಲ್ಮಾಡಿ ವಾರ್ಡಿನ ಮಾರಿಗುಡಿ ಜಂಕ್ಷನ್ ರಸ್ತೆಗೆ ಕಲ್ಮಾಡಿ ಮಾರಿಗುಡಿ ಜಂಕ್ಷನ್ ಎಂದು ನಾಮಕರಣ ಮಾಡುವ ಬಗ್ಗೆ ಸಾರ್ವಜನಿಕರಿಂದ ಯಾವುದೇ ಆಕ್ಷೇಪಣೆ / ಸಲಹೆಗಳು ಇದ್ದಲ್ಲಿ 30 ದಿನಗಳ ಒಳಗಾಗಿ ಉಡುಪಿ ನಗರಸಭೆಗೆ ಸಲ್ಲಿಸಬಹುದಾಗಿದೆ. ನಂತರ ಬರುವ ಆಕ್ಷೇಪಣೆ/ ಸಲಹೆಗಳನ್ನು ಪರಿಗಣಿಸಲಾಗುವುದಿಲ್ಲ ಎಂದು ನಗರಸಭೆ ಪೌರಾಯುಕ್ತರ ಕಚೇರಿ ಪ್ರಕಟಣೆ ತಿಳಿಸಿದೆ.

ಪರಿಸರ ದಿನಾಚರಣೆ

ಬೈಂದೂರು: ಕಾಲ್ತೋಡು ಸರ್ಕಾರಿ ಆಯುರ್ವೇದ ಚಿಕಿತ್ಸಾಲಯ ಆಯುಷ್ಮಾನ್ ಆರೋಗ್ಯ ಮಂದಿರದ ಆವರಣದಲ್ಲಿ ಕಾಲ್ತೋಡು ಗ್ರಾಪಂ ಕಲಾರ್ಯದರ್ಶಿ ಆನಂದ ಬಿಲ್ಲವ ಇವರು ಔಷಧಿ ಸಸ್ಯ ನೆಡುವ ಮೂಲಕ ಪರಿಸರ ದಿನಾಚರಣೆಗೆ ಚಾಲನೆ ನೀಡಿದರು. ವೈದ್ಯಾಧಿಕಾರಿ ಡಾ. ವೀಣಾ ಕಾರಂತ್ ಪ್ಲಾಸ್ಟಿಕ್ ನಿರ್ಮೂಲನೆ ಮತ್ತು ಔಷಧಿ ಸಸ್ಯಗಳ ಬಳಕೆ, ಉಳಿಸುವ ಬಗ್ಗೆ ಮಾಹಿತಿ ನೀಡಿದರು.

ಮೊದಲನೇ ಪುಟದಿಂದ

ಕಹಿ ಉಣಿಸಿತು 'ಋತು'

ಸಾಲ ಮತ್ತು ಬಡ್ಡಿಯನ್ನು ಮರುಪಾವತಿಸಲು ಸಾಧ್ಯವಾಗದೆ ಒದ್ದಾಡುವಂತಾಗಿದೆ. ಸೀಮೆ ಎಣ್ಣೆ, ಡೀಸೆಲ್‌ಗೆ ಖರ್ಚಾದ ಹಣವೂ ಮೀನುಗಾರಿಕೆಯಿಂದ ದೊರಕುತ್ತಿಲ್ಲ ಎಂದು ಮೀನು ಕಾರ್ಮಿಕರು ಅಸಹಾಯಕತೆ ತೋಡಿಕೊಂಡಿದ್ದಾರೆ. ಇನ್ನೊಂದೆಡೆ ಕಾಸರಗೋಡು ಜಿಲ್ಲೆಯ ಸಮುದ್ರ ಕಿನಾರೆಯಲ್ಲಿ ಕಡಲ್ಕೊರೆತವು ಈ ವರ್ಷವೂ ಸಂಭವಿಸುವ ಸಾಧ್ಯತೆಯಿದ್ದು, ಪ್ರತೀ ವರ್ಷ ಅಪಾರ ನಾಶನಷ್ಟಗಳು ಈ ಮೂಲಕ ತಲೆದೋರುತ್ತವೆ.

ಮಲ್ಪೆ ಬಂದರಿನಲ್ಲಿ ಲಂಗರು ಹಾಕಿವೆ ಸಾವಿರಕ್ಕೂ ಅಧಿಕ ಸಾಂಪ್ರದಾಯಿಕ ಬೋಟ್‌ಗಳು

ನಾಡದೋಣಿ ಮೀನುಗಾರರಿಗೆ ಇಂಧನ ದರ ಏರಿಕೆ ಬಿಸಿ



ಉಡುಪಿ: ಮಳೆಗಾಲದ ಹಿನ್ನೆಲೆಯಲ್ಲಿ ಆಳಸಮುದ್ರದ ಯಾಂತ್ರೀಕೃತ ಮೀನುಗಾರಿಕೆ ನಿಷೇಧದ ಅವಧಿ ಆರಂಭವಾಗಿದ್ದರೂ, ಕರಾವಳಿಯ ಜೀವನಾಡಿಯಾಗಿರುವ ಸಾಂಪ್ರದಾಯಿಕ ನಾಡದೋಣಿ ಮೀನುಗಾರರು ಈ ಬಾರಿ ಸಮುದ್ರಕ್ಕಿಳಿಯಲು ತೀವ್ರ ಮೀನಾಮೇಷ ಎಣಿಸುತ್ತಿದ್ದಾರೆ. ಸೀಮೆಎಣ್ಣೆ (ಕೆರೋಸಿನ್) ದರ ಗಗನಕ್ಕೇರಿರುವುದು ಮತ್ತು ಭೀಕರ ಇಂಧನ ವೆಚ್ಚದ ಕಾರಣದಿಂದಾಗಿ ಮಲ್ಪೆ ಭಾಗದ ಸುಮಾರು 1,000ಕ್ಕೂ ಹೆಚ್ಚು ಸಾಂಪ್ರದಾಯಿಕ ಮೀನುಗಾರಿಕೆ ಬೋಟ್‌ಗಳು ಕಡಲಿಗೆ ಮುಖ ಮಾಡಬೇಕೋ ಬೇಡವೋ ಎಂಬ ಗೊಂದಲದಲ್ಲಿ ದಂಡೆಯಲ್ಲೇ ನಿಂತಿವೆ.

ದುಪ್ಪಟ್ಟಾದ ಸೀಮೆಎಣ್ಣೆ ದರ

ಕೆಲವೇ ವರ್ಷಗಳ ಹಿಂದೆ ಪ್ರತಿ ಲೀಟರ್‌ಗೆ 65 ರೂ.ಇದ್ದ ಸೀಮೆಎಣ್ಣೆ ದರ ಪ್ರಸ್ತುತ ಭೀಕರವಾಗಿ ಏರಿಕೆಯಾಗಿದ್ದು, ಲೀಟರ್‌ಗೆ ಬರೋಬ್ಬರಿ 150 ರೂ. ತಲುಪಿದೆ. ಸದ್ಯ ಇದಕ್ಕೆ ರಾಜ್ಯ ಸರ್ಕಾರದಿಂದ ಕೇವಲ 35 ರೂ. ಸಬ್ಸಿಡಿ ಸಿಗುತ್ತಿದೆಯಾದರೂ, ಮುಕ್ತ ಮಾರುಕಟ್ಟೆಯ ದರಕ್ಕೆ ಹೋಲಿಸಿದರೆ ಈ ಸಬ್ಸಿಡಿ ಏನೇನಿಗೂ ಸಾಲದಾಗಿದೆ.

1000 ಬೋಟ್‌ಗಳ ಸ್ಥಿತಿ ಅತಂತ್ರ

ಮಲ್ಪೆ ಬಂದರು ವ್ಯಾಪ್ತಿಯಲ್ಲಿ ಒಟ್ಟು 1,000ಕ್ಕೂ ಹೆಚ್ಚು ಸಾಂಪ್ರದಾಯಿಕ ಬೋಟ್‌ಗಳಿದ್ದರೂ, ಇಂಧನ ವೆಚ್ಚ ಭರಿಸಲಾಗದೆ ಬಹುತೇಕರು ಬೋಟ್‌ಗಳನ್ನು ಕಡಲಿಗಿಳಿಸದೆ ಮೌನಕ್ಕೆ ಶರಣಾಗಿದ್ದಾರೆ.

ಪ್ರಕೃತಿ ಮುನಿಸು, ಸರ್ಕಾರದ ಸಬ್ಸಿಡಿಗೆ ಆಗ್ರಹ

ಕಳೆದ ಫೆಬ್ರವರಿಯಿಂದಲೇ ಕರಾವಳಿಯಲ್ಲಿ ಕಾಡಿದ್ದ ಅತಿಯಾದ ಬಿಸಿಲಿನ ಝಳದಿಂದ ಮೀನಿನ ಸಂಗ್ರಹ ತೀವ್ರವಾಗಿ ಕುಸಿದಿತ್ತು. ಈಗ ಮಳೆಗಾಲದ ಅವಧಿಯಲ್ಲಿ ವಾಯುಭಾರ ಕುಸಿತ, ನಿರಂತರ ಚಂಡಮಾರುತದ ಭೀತಿ ಮತ್ತು 'ರೆಡ್ ಅಲರ್ಟ್' ಸವಾಲುಗಳೂ ಇವೆ. ಮೀನುಗಳು ಯಥೇಚ್ಛವಾಗಿ ಸಿಗಬೇಕೆಂದರೆ ಆಳ ಸಮುದ್ರಕ್ಕೆ ಹೋಗಲೇಬೇಕು, ಆದರೆ ಅದಕ್ಕೆ ಇಂಧನ ಹೆಚ್ಚಬೇಕು.

ನಷ್ಟದ ಭೀತಿಗೆ ದೂಡಿದೆ

ಒಂದು ನಾಡದೋಣಿ ಒಂದು ಬಾರಿ ಸಮುದ್ರಕ್ಕಿಳಿದು, ಮೀನುಗಾರಿಕೆ ಮುಗಿಸಿ ದಡ ಸೇರಬೇಕಾದರೆ ಕನಿಷ್ಠ 100ರಿಂದ 200 ಲೀಟರ್ ವರೆಗೂ ಸೀಮೆಎಣ್ಣೆ ಬೇಕಾಗುತ್ತದೆ. ಅಂದರೆ, ಕೇವಲ ಇಂಧನಕ್ಕೇ ಪ್ರತಿ ಟ್ರಿಪ್‌ಗೆ 15,000 ದಿಂದ 30,000 ರೂ.ವರೆಗೆ ವೆಚ್ಚ ಮಾಡಬೇಕಾದ ಅನಿವಾರ್ಯತೆ ಇದೆ. ಇಷ್ಟೊಂದು ದೊಡ್ಡ ಮೊತ್ತದ ಹಣ ಹೂಡಿ ಸಮುದ್ರಕ್ಕೆ ಹೋದರೂ, ಸೀಸನ್‌ನಲ್ಲಿ ಇಂತಿಷ್ಟೇ ಮೀನು ಸಿಗುತ್ತದೆಂಬ ಗ್ಯಾರಂಟಿ ಇಲ್ಲದಿರುವುದು ಮೀನುಗಾರರನ್ನು ತೀವ್ರ ನಷ್ಟದ ಭೀತಿಗೆ ದೂಡಿದೆ.

ಮಾರುಕಟ್ಟೆಯ ಮೇಲಾಗುವ ಪರಿಣಾಮ

ಜೂನ್ 1ರಿಂದ ಜು. 31ರವರೆಗಿನ ಈ ಎರಡು ತಿಂಗಳ ಮಳೆಗಾಲದ ಅವಯಲ್ಲಿ ಕರಾವಳಿ ಜನರಿಗೆ ತಾಜಾ ಮೀನು ಸಿಗುವುದೇ ಈ ನಾಡದೋಣಿಗಳಿಂದ. ಆದರೆ ಇಂಧನ ದರದ ಹೊರೆಯಿಂದಾಗಿ ನಾಡದೋಣಿಗಳು ಕಡಲಿಗಿಳಿಯದಿದ್ದರೆ, ಮುಂಬರುವ ದಿನಗಳಲ್ಲಿ ಮಾರುಕಟ್ಟೆಗೆ ಮೀನಿನ ಪೂರೈಕೆಯಲ್ಲಿ ತೀವ್ರ ವ್ಯತ್ಯಯ ಉಂಟಾಗಲಿದ್ದು, ಮೀನಿನ ದರ ಮತ್ತಷ್ಟು ಗಗನಕ್ಕೇರಲಿದೆ. ಆಗಸ್ಟ್ 1ರಿಂದ ಯಾಂತ್ರೀಕೃತ ಮೀನುಗಾರಿಕೆ ಮರು ಆರಂಭವಾಗುವ ಮುನ್ನ ಸಿಗುವ ಈ ಸೀಮಿತ ಅವಧಿಯಲ್ಲೂ ವ್ಯವಸ್ಥೆಯ ಮತ್ತು ಪ್ರಕೃತಿಯ ಹೊಡೆತಕ್ಕೆ ಸಿಲುಕಿರುವ ಸಾಂಪ್ರದಾಯಿಕ ಮೀನುಗಾರರ ಬದುಕು ಸದ್ಯಕ್ಕೆ ದಾರಿ ತಪ್ಪಿದ ಹಡಗಿನಂತಾಗಿದೆ.

ವೃತ್ತಿ ಜೀವನದಲ್ಲಿ ಯಶಸ್ಸು ಸಾಧಿಸಲು ಸೃಜನಶೀಲತೆ, ಸಂವಹನ ಕೌಶಲ್ಯ ಅಗತ್ಯ



ಕುಂದಾಪುರ: ತಂತ್ರಜ್ಞಾನ ಕ್ಷೇತ್ರದಲ್ಲಿನ ಅವಕಾಶಗಳನ್ನು ಸದುಪಯೋಗಪಡಿಸಿಕೊಳ್ಳಬೇಕು. ಸೃಜನಶೀಲತೆ, ನವೀನ ಚಿಂತನೆ, ತಾಂತ್ರಿಕ ಕೌಶಲ್ಯ ಹಾಗೂ ಪರಿಣಾಮಕಾರಿ ಸಂವಹನ ಕೌಶಲ್ಯಗಳು ವೃತ್ತಿ ಜೀವನದಲ್ಲಿ ಯಶಸ್ಸು ಸಾಧಿಸಲು ಅತ್ಯಗತ್ಯ ಎಂದು ಮಣಿಪಾಲದ ಸ್ಕೂಲ್ ಆಫ್ ಐಟಿ ಸ್ಕಿಲ್ಸ್ ಎಂಎಸ್‌ಡಿಸಿ ಇದರ ಸೆಂಟರ್ ಹೆಡ್ ರಾಜಲಕ್ಷ್ಮೀ ಆನಂದನ್ ಹೇಳಿದ್ದಾರೆ.

ಅವರು ಕುಂದಾಪುರದ ಡಾ.ಬಿ.ಬಿ. ಹೆಗ್ಡೆ ಪ್ರಥಮ ದರ್ಜೆ ಕಾಲೇಜಿನ ಗಣಕ ವಿಜ್ಞಾನ ವಿಭಾಗ ಎಂಎಸ್‌ಡಿಸಿ, ಮಣಿಪಾಲ ಸಹಯೋಗದಲ್ಲಿ ಕಾಲೇಜಿನ ಮೂಕಾಂಬಿಕಾ ಸಭಾಂಗಣದಲ್ಲಿ ಆಯೋಜಿಸಿದ್ದ 'ಪ್ರಾಜೆಕ್ಟ್ ಎಕ್ಸ್ಪೋ- ಸೃಜನಶೀಲತೆ , ತಂತ್ರಜ್ಞಾನದ ಸಂಗಮ' ಕಾರ್ಯಕ್ರಮದ ಸಮಾರೋಪದಲ್ಲಿ ಅತಿಥಿಯಾಗಿ ಮಾತನಾಡಿದರು.

ಕಾಲೇಜಿನ ಪ್ರಾಂಶುಪಾಲ ಪ್ರೊ. ಡಾ. ಕೆ. ಉಮೇಶ ಶೆಟ್ಟಿ ಅಧ್ಯಕ್ಷತೆ ವಹಿಸಿದ್ದರು.

> **ಜ್ಞಾನ ಹೆಚ್ಚಿಸಿಕೊಳ್ಳಿ**
> ವಿದ್ಯಾರ್ಥಿಗಳು ನಿರಂತರ ಕಲಿಕೆ ಮೂಲಕ ತಮ್ಮ ಜ್ಞಾನ ನವೀಕರಿಸಿಕೊಳ್ಳಬೇಕು , ಉದ್ಯಮಶೀಲ ಮನೋಭಾವ ಬೆಳೆಸಿಕೊಳ್ಳಬೇಕು
> • ರಾಜಲಕ್ಷ್ಮೀ ಆನಂದನ್

ಸಾಲಿಗ್ರಾಮದ ಸಾನ್ವಿ ಟೆಕ್ನಾಲಜೀಸ್‌ನ ಶ್ರೇಯಸ್ ಸುವರ್ಣ, ಸಂಯೋಜಕ ಪ್ರಣಂ ಆರ್. , ಮೇಘಾ ಉಪಸ್ಥಿತರಿದ್ದರು.

ಎಕ್ಸ್ಪೋದಲ್ಲಿ ಅತ್ಯುತ್ತಮ ಪ್ರದರ್ಶನ ನೀಡಿದ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಲಾಯಿತು.

ಸಹ ಪ್ರಾಧ್ಯಾಪಕ ಗಿರಿರಾಜ ಭಟ್ , ವಿಭಾಗದ ಮುಖ್ಯಸ್ಥ ಮಹೇಶಕುಮಾರ್ , ಸಹಾಯಕ ಪ್ರಾಧ್ಯಾಪಕ ರಾದ ಜಯಲಕ್ಷ್ಮೀ ಕೆ. , ಹರೀಶ ಕಾಂಚನ್ , ವಿಲ್ಮಾ ಶೆರಲ್ , ನಿರ್ಮಲ ಬಿಲ್ಲವ , ರಿಶಿತಾ ಉಪಸ್ಥಿತರಿದ್ದರು.

108 ಆ್ಯಂಬುಲೆನ್ಸ್ ಸೇವೆ ಸರಿಪಡಿಸಲು ಆಗ್ರಹಿಸಿ ಬೈಂದೂರಿನಲ್ಲಿ ಪ್ರತಿಭಟನೆ



ಬೈಂದೂರು: 108 ಆ್ಯಂಬುಲೆನ್ಸ್ ಸೇವೆ ಸರಿಪಡಿಸಲು ಆಗ್ರಹಿಸಿ ಸೋಮವಾರ ಬೈಂದೂರು ತಾಲೂಕು ಆಡಳಿತದ ಸೌಧದ ಎದುರು ಸಮಾಜಕೀಯ ಸೇನೆಯ ನೇತೃತ್ವ ವಿವಿಧ ಸಂಘ ಸಂಸ್ಥೆಗಳ ಬೆಂಬಲದಲ್ಲಿ ಪ್ರತಿಭಟನೆ ನಡೆಸಲಾಯಿತು.

ಬೈಂದೂರು ರೈತ ಸಂಘದ ಅಧ್ಯಕ್ಷ ನೆಲ್ಯಾಡಿ ದೀಪಕ್ ಕುಮಾರ್ ಶೆಟ್ಟಿ ಬೈಂದೂರಿ ನಲ್ಲಿ ಸರ್ಕಾರಿ ಸೇವೆ ಹಳಿ ತಪ್ಪಿದ್ದು, ಆ್ಯಂಬುಲೆನ್ಸ್ ಸೇವೆ ಹಳ್ಳಿಭಾಗದ ಜನರಿಗೆ ಸಿಗುತ್ತಿಲ್ಲ. ಈ ವ್ಯವಸ್ಥೆ ಸರಿಪಡಿಸಬೇಕೆಂದು ಆಗ್ರಹಿಸಿದರು.

ಸಮಾಜಕೀಯ ಸೇನೆ ಸ್ಥಾಪಕ, ನಿವೃತ್ತ ಯೋಧ ಕೃಷ್ಣಪೂಜಾರಿ, ಸರ್ಕಾರಿ ಅಧಿಕಾರಿಗಳು ಜನರ ಸೇವೆ ಮಾಡಲು ನಿಯುಕ್ತಿಗೊಂಡಿದ್ದಾರೆ. ತುರ್ತು ಪರಿಸ್ಥಿತಿಯಲ್ಲಿ ಅಪಘಾತ ಸಂಭವಿಸಿದಾಗ ಆ್ಯಂಬುಲೆನ್ಸ್ ಬಹುಮುಖ್ಯ. ಆದರೆ ಬೈಂದೂರು ವ್ಯಾಪ್ತಿ ಯಲ್ಲಿ ಖಾಸಗಿ ಲಾಬಿಗೆ ಸರ್ಕಾರಿ ಆಸ್ಪತ್ರೆ ಕೈಜೋಡಿಸುತ್ತಿದೆ. ತಕ್ಷಣ ಈ ವ್ಯವಸ್ಥೆ ಸರಿಪಡಿಸಬೇಕೆಂದು ಒತ್ತಾಯಿಸಿದರು ಸ್ಥಳದಲ್ಲಿದ್ದ ಜಿಲ್ಲಾ ಆರೋಗ್ಯಾಧಿಕಾರಿ ಮಾತನಾಡಿ, ಎರಡು ದಿನದ ಹಿಂದೆ ಈ ವ್ಯವಸ್ಥೆ ಸರಿಯಾಗಿದೆ ಎಂದರು.

ಈ ಸಂದರ್ಭ ಪರೀಕ್ಷಿಸಲು ಪ್ರತಿಭಟನಾಕಾರರು ಸ್ಥಳದಲ್ಲಿ 108ಕ್ಕೆ ಕರೆ ಮಾಡಿದರು. ಕೂಗಳತೆ ದೂರದಲ್ಲಿ ಆಸ್ಪತ್ರೆ ಇದ್ದರೂ ಸ್ಥಳಕ್ಕೆ ಬರಲು ಆ್ಯಂಬುಲೆನ್ಸ್‌ಗೆ 20 ನಿಮಿಷವಾಯಿತು. ಇದರಿಂದ ಸ್ಥಳದಲ್ಲಿದ್ದ ಅಧಿಕಾರಿಗಳು ಮುಜುಗರಕ್ಕೊಳಗಾದರು. ಸಮಸ್ಯೆ ಸರಿಪಡಿಸಲು ಆಗ್ರಹಿಸಲಾಯಿತು.

ಮನವಿ ಸಲ್ಲಿಕೆ

ಬೈಂದೂರು ತಹಶೀಲ್ದಾರ ಡಿ. ಜಿ. ಮಹಾತ, ಕರ್ನಾಟಕ ಕಾರ್ಮಿಕ ಪರಿಷತ್ ರಾಜ್ಯಾಧ್ಯಕ್ಷ ಡಾ. ರವಿ ಶೆಟ್ಟಿ, ಸಮಾಜಕೀಯ ಸೇನೆ ಸದಸ್ಯರಾದ ವೇದನಾಥ್ ಶೆಟ್ಟಿ ಹೇರಂಜಾಲು, ರಾಘವೇಂದ್ರ ಹೇರಂಜಾಲು, ಗೌರಿ ದೇವಾಡಿಗ, ಗಣೇಶ ಪೂಜಾರಿ ಮತ್ತಿತರರಿದ್ದರು. ಬಳಿಕ ಜಿಲ್ಲಾ ಆರೋಗ್ಯಾಧಿಕಾರಿ ಬಸವರಾಜ್ ಹುಬ್ಬಳ್ಳಿ ಮನವಿ ಸ್ವೀಕರಿಸಿದರು.

ಉಡುಪಿ ಸರ್ವೀಸ್ ಬಸ್ ನಿಲ್ದಾಣ ತುರ್ತು ಕಾಮಗಾರಿ: ಅಧಿಕಾರಿಗಳಿಗೆ ಶಾಸಕರ ಸೂಚನೆ



ಉಡುಪಿ: ನಗರದ ಸರ್ವೀಸ್ ಬಸ್ ನಿಲ್ದಾಣದಲ್ಲಿ ಸೂಕ್ತ ನಿರ್ವಹಣೆ ಇಲ್ಲದೇ ಮಳೆ ಬರುವ ಸಂದರ್ಭ ಮೇಲ್ಚಾವಣಿ ಮಳೆ ನೀರು ಸೋರಿ ಪ್ರಯಾಣಿಕರು ಕೊಡೆ ಹಿಡಿದು ನಿಲ್ದಾಣದಲ್ಲಿ ಕಾಯುವ ಸ್ಥಿತಿ ಬಗ್ಗೆ ಮಾಧ್ಯಮಗಳ ವರದಿ ಹಿನ್ನಲೆ ಉಡುಪಿ ಶಾಸಕ ಯಶ್‌ಪಾಲ್ ಸುವರ್ಣ ಅಧಿಕಾರಿಗಳೊಂದಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಬಸ್ ನಿಲ್ದಾಣದ ಮೇಲ್ಚಾವಣಿಯ ಶೀಟುಗಳು ಶಿಥಿಲಗೊಂಡು ಗಾಳಿ, ಮಳೆ, ಬಿಸಿಲಿಗೆ ಪ್ರಯಾಣಿಕರು ತೊಂದರೆ ಅನುಭವಿಸುತ್ತಿದ್ದು 2 ದಿನಗಳಲ್ಲಿ ತುರ್ತು ಕಾಮಗಾರಿ ನಡೆಸುವಂತೆ ನಗರಸಭೆ ಪೌರಾಯುಕ್ತರಿಗೆ ಸೂಚನೆ ನೀಡಿದರು.

ಬಸ್ ನಿಲ್ದಾಣದಲ್ಲಿ ಕುಡುಕರ ಹಾವಳಿ ಬಗ್ಗೆ ಪ್ರಯಾಣಿಕರಿಂದ ದೂರುಗಳು ಕೇಳಿ ಬರುತ್ತಿದ್ದು, ತಕ್ಷಣ ಕ್ರಮ ಕೈಗೊಳ್ಳುವಂತೆ ಸೂಚನೆ ನೀಡಿದರು.

ವಿಶೇಷ ಆದ್ಯತೆ ನೀಡಲಾಗುವುದು

ಈ ಸಂದರ್ಭ ಮಾತನಾಡಿದ ಶಾಸಕರು, ಈಗಾಗಲೇ ಬಸ್ ನಿಲ್ದಾಣ ಅವ್ಯವಸ್ಥೆ ಬಗ್ಗೆ ಜಿಲ್ಲಾಧಿಕಾರಿಗಳ ಗಮನಕ್ಕೂ ತರಲಾಗಿದ್ದು, ಬಸ್ ನಿಲ್ದಾಣ ಸಮಗ್ರ ಅಭಿವೃದ್ಧಿ ಬಗ್ಗೆ ಪ್ರಸ್ತಾವನೆ ಸಲ್ಲಿಸುವಂತೆ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ. ನಗರ ಸಭೆ -ರಾಜ್ಯ ಸರ್ಕಾರದ ಅನುದಾನ ಕೊರತೆಯಿಂದ ಅಭಿವೃದ್ಧಿ ಕಾರ್ಯಕ್ಕೆ ಹಿನ್ನಡೆಯಾಗಿದ್ದು ಮುಂದಿನ ದಿನಗಳಲ್ಲಿ ಬಸ್ ನಿಲ್ದಾಣ ಅಭಿವೃದ್ಧಿಗೆ ವಿಶೇಷ ಆದ್ಯತೆ ನೀಡುವುದಾಗಿ ತಿಳಿಸಿದರು.

ನಗರಸಭೆ ಪೌರಾಯುಕ್ತ ಮಹಾಂತೇಶ ಹಂಗರಗಿ, ನಗರಸಭೆ ಮಾಜಿ ಸದಸ್ಯರಾದ ಬಾಲಕೃಷ್ಣ ಶೆಟ್ಟಿ, ಗಿರೀಶ್ ಅಂಚನ್, ಗಿರಿಧರ ಆಚಾರ್ಯ, ಉಡುಪಿ ನಗರ ಬಿಜೆಪಿ ಅಧ್ಯಕ್ಷ ದಿನೇಶ್ ಅಮೀನ್, ಮಂಜು ಕೊಳ, ಲಕ್ಷ್ಮಣ್ ಮಲ್ಪೆ ಮತ್ತಿತರರಿದ್ದರು.

ಅಂಡಾರು ಶಾಲೆಗೆ ಮುಖ್ಯ ಶಿಕ್ಷಕರಾಗಿ ಬಡ್ತಿ ಪಡೆದ ಶ್ರೀಪತಿ ಬಡ್ಕಿಲ್ಲಾಯರಿಗೆ ಸನ್ಮಾನ



ಹೆಬ್ರಿ: ಇಲ್ಲಿನ ಮುದ್ರಾಡಿ ಗ್ರಾಮದ ಬಲ್ಲಾಡಿ ಕಿ.ಪ್ರಾ. ಶಾಲೆಯಲ್ಲಿ ಸುದೀರ್ಘ 30 ವರ್ಷಗಳ ಕಾಲ ಸೇವೆ ಸಲ್ಲಿಸಿದ ಅಂಡಾರು ಹಿ.ಪ್ರಾ.ಶಾಲೆಗೆ ಮುಖ್ಯ ಶಿಕ್ಷಕರಾಗಿ ಪದೋನ್ನತಿಗೊಂಡ ಶ್ರೀಪತಿ ಬಡ್ಕಿಲ್ಲಾಯ ಅವರನ್ನು ಸನ್ಮಾನಿಸಿ ಬೀಳ್ಕೊಡಲಾಯಿತು.

ಮುದ್ರಾಡಿಯ ಹಿರಿಯ ಸಮಾಜ ಸೇವಕ ಗಣಪತಿ ಎಂ., ಮುದ್ರಾಡಿ ಪ್ರೌಢಶಾಲೆ ಮುಖ್ಯ ಶಿಕ್ಷಕ ಬಲ್ಲಾಡಿ ಚಂದ್ರಶೇಖರ ಭಟ್, ನಿವೃತ್ತ ಪ್ರಿನ್ಸಿಪಾಲ್ ಹೆಬ್ರಿ ವಾಸುದೇವ ಭಟ್, ಶಾಲಾ ಹಳೆ ವಿದ್ಯಾರ್ಥಿ ಸಂಘದ ಅಧ್ಯಕ್ಷ ಸಂತೋಷ್ ಪೂಜಾರಿ ನೆಕ್ಕರ್ ಬೆಟ್ಟು ಅವರು ಶ್ರೀಪತಿ ಬಡ್ಕಿಲ್ಲಾಯರ ಸೇವೆ ಸ್ಮರಿಸಿಕೊಂಡರು. ಹಿರಿಯರಾದ ಬಲ್ಲಾಡಿ ಗೋಪಾಲ ಆಚಾರ್ಯ ಉದ್ಘಾಟಿಸಿದರು. ಈ ಸಂದರ್ಭ ಎಸ್ಸೆಸ್ಸೆಲ್ಸಿಯಲ್ಲಿ ಉತ್ತಮ ಸಾಧನೆಗೈದ ಶಾಲೆ ಹಳೆ ವಿದ್ಯಾರ್ಥಿಗಳಾದ ಪ್ರತೀಕ್ಷಾ ಕುಲಾಲ್, ಸಮೀಕ್ಷಾ ಕುಲಾಲ್, ಸೃಜನ್ ಅವರನ್ನು ಸನ್ಮಾನಿಸಲಾಯಿತು. ದಾನಿಗಳು ನೀಡಿದ ಉಚಿತ ನೋಟ್ ಬುಕ್‌ಗಳನ್ನು ಗಣಪತಿ ಎಂ. ಶಾಲಾ ಮಕ್ಕಳಿಗೆ ವಿತರಿಸಿದರು. ಸನ್ಮಾನಿತರಾದ ಶ್ರೀಪತಿ ಬಡ್ಕಿಲ್ಲಾಯರು ತನ್ನ ಸೇವೆಯಲ್ಲಿ ಸಹಕರಿಸಿದವರನ್ನು ಸ್ಮರಿಸಿ ಕೃತಜ್ಞತೆ ಸಲ್ಲಿಸಿದರು.

ಬಲ್ಲಾಡಿ ದೇವಳ ವ್ಯವಸ್ಥಾಪನಾ ಸಮಿತಿ ಮಾಜಿ ಅಧ್ಯಕ್ಷ ಗುರುಪ್ರಸಾದ್ ಹೆಗ್ಡೆ ಕೊಳಂಬೆ, ಗ್ರಾಮಾಭಿವೃದ್ಧಿ ಯೋಜನೆ ಮುದ್ರಾಡಿ ವಲಯ ಮೇಲ್ವಿಚಾರಕ ಉಮೇಶ್ ಬಿ. ಕೆ., ಉಪನ್ಯಾಸಕ ವಿನಾಯಕ ಪೂಜಾರಿ, ಶಾಲಾಭಿವೃದ್ಧಿ ಸಮಿತಿ ಅಧ್ಯಕ್ಷ ಸತೀಶ್ ಆಚಾರ್ಯ, ಗಣೇಶೋತ್ಸವ ಸಮಿತಿ ಅಧ್ಯಕ್ಷ ಪ್ರವೀಣ್ ಪೂಜಾರಿ, ಅಂಗನವಾಡಿ ಶಿಕ್ಷಕಿ ಶಾಂತಾ, ರತ್ನಾ ಪೂಜಾರಿ, ಸೇವಾಪ್ರತಿನಿಧಿ ಮಮತಾ, ಶಾಲೆಯ ಉಪಸ್ಥಿತರಿದ್ದರು.

ಸಾಧಕ ವಿದ್ಯಾರ್ಥಿಗಳಿಗೆ ಸಂಸ್ಥೆ ಹಳೆ ವಿದ್ಯಾರ್ಥಿ ದಾಮೋದರ ಆಚಾರ್ಯ ನಗದು ಬಹುಮಾನ ನೀಡಿದರು. ಮುಖ್ಯ ಶಿಕ್ಷಕ ಗಣಪತಿ ನಾಯಕ್ ನಿರೂಪಿಸಿ, ಗೌರವ ಶಿಕ್ಷಕರಾದ ಚಿತ್ರಾ ಸಮ್ಮಾನ ಪತ್ರ ವಾಚಿಸಿದರು. ರೇಖಾ ವಂದಿಸಿದರು.

'ಪಡುಬಿದ್ರಿ ಮಹಾಲಿಂಗೇಶ್ವರ ಮಹಾ ಗಣಪತಿ' ಕ್ಷೇತ್ರ ಪರಿಚಯ ಪುಸ್ತಕ ಬಿಡುಗಡೆ



ಪಡುಬಿದ್ರಿ: ಇತಿಹಾಸ ಪ್ರಸಿದ್ಧ ಪಡುಬಿದ್ರಿ ಶ್ರೀ ಮಹಾಲಿಂಗೇಶ್ವರ ಮಹಾಗಣಪತಿ ದೇವಳದಲ್ಲಿ ಸೋಮವಾರ ಪಡುಬಿದ್ರಿ ಕ್ಷೇತ್ರ ಪರಿಚಯದ ಪುಸ್ತಕ 'ಪಡುಬಿದ್ರಿ ಮಹಾಲಿಂಗೇಶ್ವರ ಮಹಾಗಣಪತಿ' ಯನ್ನು ಶ್ರೀ ದೇಗುಲದ ಆನುವಂಶಿಕ ಮೊಕ್ತೇಸರರು , ಗಣ್ಯರ ಸಮ್ಮುಖದಲ್ಲಿ ಅನಾವರಣಗೊಳಿಸಲಾಯಿತು.

ಜಾನಪದ ವಿದ್ವಾಂಸರಾದ ಕೆ. ಎಲ್. ಕುಂಡಂತಾಯರು ಸಂಪಾದಿಸಿ ಮುದ್ರಿಸಿರುವ ಈ ಪುಸ್ತಕವು ಪಡುಬಿದ್ರಿ ಕುರಿತಾದ ಪೌರಾಣಿಕ, ಐತಿಹಾಸಿಕ ಹಾಗೂ ಜಾನಪದ ಹಿನ್ನೆಲೆಗಳನ್ನು ಒಳಗೊಂಡಿವೆ. ಇದು ಕುಂಡಂತಾಯರ 112ನೇ ಕ್ಷೇತ್ರ ಪರಿಚಯ , 33ನೇ ಕೃತಿಯಾಗಿದೆ ಎಂದು ಜಾನಪದ ವಿದ್ವಾಂಸ ಡಾ. ವೈ. ಎನ್. ಶೆಟ್ಟಿ ಹೇಳಿದರು. ಸಂಪಾದಕ ಕೆ. ಎಲ್. ಕುಂಡಂತಾಯ ಮಾತನಾಡಿದರು. ಶ್ರೀ ಕ್ಷೇತ್ರದ ಅರ್ಚಕ ಎಚ್. ಪದ್ಮನಾಭ ಭಟ್ ಪ್ರಾರ್ಥಿಸಿದರು.

> **ಹೆಮ್ಮೆ ಎನಿಸಿದೆ**
> ತಾನು ಆಡಿ ಬೆಳೆದ ಪರಿಸರದ ದೇವಾಲಯವು ಇದಾಗಿದೆ. ಅದರ ಕುರಿತಾದ ಪರಿಚಯ ಲೇಖನವು ತನ್ನ ಮೂಲಕ ಆಗಿರುವುದೂ ತನಗೆ ಹೆಮ್ಮೆ ಎನಿಸಿದೆ.
> • ಕೆ. ಎಲ್. ಕುಂಡಂತಾಯ

ಈ ಸಂದರ್ಭ ಶ್ರೀ ದೇವಳದ ಆನುವಂಶಿಕ ಮೊಕ್ತೇಸರರಾದ ಪಡುಬಿದ್ರಿ ಬೀಡು ರತ್ನಾಕರ ರಾಜ್ ಅರಸ್ ಕಿನ್ಯಕ್ಕ ಬಲ್ಲಾಳರು, ಪಡುಬಿದ್ರಿ ಪೇಟೆಮನೆ ಭವಾನಿಶಂಕರ ಹೆಗ್ಡೆ ಅವರು ಕುಂಡಂ ತಾಯ ಅವರನ್ನು ಸನ್ಮಾನಿಸಿದರು. ನಡ್ಸಾಲುಗುತ್ತು ಶ್ರೀನಾಥ್ ಹೆಗ್ಡೆ ಪೇಟೆಮನೆ ಅನಿಲ್ ಶೆಟ್ಟಿ ಪಿ. ರಾಘವೇಂದ್ರ ನಾವಡ, ಬಾಲಕೃಷ್ಣ ಕೊರ್ನಾಯ, ರಮಾಕಾಂತ ರಾವ್, ಶ್ರೀ ಕ್ಷೇತ್ರದ ಕಚೇರಿಯ ದ್ವಿತೀಯ ದರ್ಜೆ ಸಹಾಯಕ ಕೃಷ್ಣ ಕೆ. ಮತ್ತಿತರರಿದ್ದರು.

ಕೋಟ ಮೊಗವೀರ ಯುವ ಸಂಘಟನೆ: ಸಮುದ್ರ ತೀರಾ ಸ್ವಚ್ಛತಾ ಕಾರ್ಯಕ್ರಮ



ಕೋಟ: ಮೊಗವೀರ ಯುವ ಸಂಘಟನೆ ಉಡುಪಿ ಜಿಲ್ಲೆ ಕೋಟ ಘಟಕ ಮತ್ತು ಮಹಿಳಾ ಸಂಘಟನೆ, ಜಿ.ಶಂಕರ್ ಫ್ಯಾಮಿಲಿ ಟ್ರಸ್ಟ್ ಅಂಬಲಪಾಡಿ ಉಡುಪಿ, ಗೀತಾನಂದ ಫೌಂಡೇಶನ್ ಮಣೂರು ಪಡುಕರೆ, ಕೋಟ ಗ್ರಾಮ ಪಂಚಾಯತ್ ಸಹಯೋಗದೊಂದಿಗೆ ವಿಶ್ವ ಪರಿಸರ ದಿನಾಚರಣೆ ಪ್ರಯುಕ್ತ ಕೋಟ ಪಡುಕರೆ ಸಮುದ್ರ ತೀರಾ ಸ್ವಚ್ಛತಾ ಕಾರ್ಯಕ್ರಮ ಇತ್ತೀಚೆಗೆ ಜರಗಿತು.

ಕೋಟದ ಗೀತಾನಂದ ಫೌಂಡೇಶನ ಪ್ರವರ್ತಕ ಆನಂದ ಸಿ.ಕುಂದರ್ ಈ ಅಭಿಯಾನಕ್ಕೆ ಚಾಲನೆ ನೀಡಿದರು.

ಮೊಗವೀರ ಯುವ ಸಂಘಟನೆ ಉಡುಪಿ ಜಿಲ್ಲೆಯ ಮಾಜಿ ಜಿಲ್ಲಾಧ್ಯಕ್ಷರಾದ ಎಂ.ಎಸ್. ಸಂಜೀವ, ಶಿವರಾಮ ಕೆ.ಎಂ., ಕೋಟ ಘಟಕದ ಅಧ್ಯಕ್ಷರಾದ ರಂಜಿತ್ ಕುಮಾರ್ ಬಾರಿಕೆರೆ, ಮಾಜಿ ಅಧ್ಯಕ್ಷರಾದ ರಮೇಶ್ ವಿ. ಕುಂದರ್, ಗಿರೀಶ್ ಬಂಗೇರ ಗೌರವ ಸಲಹೆಗಾರರಾದ ಸುರೇಶ್ ಕಾಂಚನ್ ಬಾರಿಕೆರೆ, ರಾಮ ಬಂಗೇರ, ದೇವದಾಸ್ ಕಾಂಚನ್, ಉಪಾಧ್ಯಕ್ಷರಾದ ಮಹೇಶ್ ಕಂಬಳಗದ್ದೆ, ಪದಾಧಿಕಾರಿಗಳಾದ ಪ್ರಶಾಂತ್ ಮಠಪಾಡಿ, ಕೇಶವ, ನಿಖಿಲ್ ಮಾಜಿ ಜಿಲ್ಲಾ ಪಂಚಾಯತ ಸದಸ್ಯರಾದ ರಾಘವೇಂದ್ರ ಕಾಂಚನ್ ಬಾರಿಕೆರೆ ಕೋಟ ಗ್ರಾಮ ಪಂಚಾಯತ್ ಮಾಜಿ ಉಪಾಧ್ಯಕ್ಷರಾದ ಪಾಂಡು ಪೂಜಾರಿ ಮಾಜಿ ಸದಸ್ಯರಾದ ಪ್ರದೀಪ್ ಪಡುಕರೆ, ಮಹಿಳಾ ಸಂಘಟನೆ ಅಧ್ಯಕ್ಷೆ ಲಲಿತಾ, ಮಾಜಿ ಅಧ್ಯಕ್ಷರಾದ ಸುಮತಿ, ಪದಾಧಿಕಾರಿಗಳಾದ ಸುಹಾಸಿನಿ, ಯಶೋದಾ, ಗೀತಾನಂದ ಫೌಂಡೇಶನ ಶ್ರೀನಿವಾಸ, ರವಿಕಿರಣ್, ಮಿಥುನ್ ಮೊದಲಾದವರು ಉಪಸ್ಥಿತರಿದ್ದರು.

ಕರ್ನಾಟಕ ಬ್ಯಾಂಕ್‌ನಿಂದ ಅದಮಾರು ಕಾಲೇಜಿಗೆ ಶಾಲಾ ಬಸ್ ಕೊಡುಗೆ



ಪಡುಬಿದ್ರಿ: ಅದಮಾರು ಪೂರ್ಣಪ್ರಜ್ಞ ಪದವಿ ಪೂರ್ವ ಕಾಲೇಜಿಗೆ ಕರ್ನಾಟಕ ಬ್ಯಾಂಕ್ ನಿಂದ ಶಾಲಾ ಬಸ್ ಕೊಡುಗೆ ಯಾಗಿ ನೀಡಿದ್ದು ಅದರ ಕೀ ಹಸ್ತಾಂತರ ಕಾರ್ಯಕ್ರಮ ಸೋಮವಾರ ಜರಗಿತು.

ಕರ್ನಾಟಕ ಬ್ಯಾಂಕ್‌ನ ಮಹಾಪ್ರಬಂಧಕ ರಾಘವೇಂದ್ರ ಭಟ್ ಬಸ್‌ನ ಕೀ ಯನ್ನು ಉಡುಪಿ ಶ್ರೀ ಅದಮಾರು ಮಠ ಶಿಕ್ಷಣ ಮಂಡಳಿ ಅಧ್ಯಕ್ಷರಾದ ಶ್ರೀ ಈಶಪ್ರಿಯತೀರ್ಥ ತೀರ್ಥ ಶ್ರೀಪಾದರಿಗೆ ಹಸ್ತಾಂತರ ಮಾಡುವ ಮೂಲಕ ಸಂಸ್ಥೆಗೆ ನೀಡಿದರು. ಬಳಿಕ ನಡೆದ ಸಭಾ ಕಾರ್ಯಕ್ರಮದಲ್ಲಿ ಶ್ರೀ ಈಶಪ್ರಿಯ ತೀರ್ಥ ಶ್ರೀಪಾದರು ಆಶೀರ್ವಚನ ನೀಡಿದರು.

ಉದ್ಯೋಗ ಪಡೆದು ಸತ್ಪ್ರಜೆಗಳಾಗಿ

ಕರ್ನಾಟಕ ಬ್ಯಾಂಕ್ ಮಹಾಪ್ರಬಂಧಕ ರಾಘವೇಂದ್ರ ಭಟ್ ಪೂರ್ಣಪ್ರಜ್ಞ ಶಿಕ್ಷಣ ಸಂಸ್ಥೆ ಒಂದು ಪ್ರತಿಷ್ಠಿತ ವಿದ್ಯಾ ಸಂಸ್ಥೆ. ಇಲ್ಲಿಯ ಶಿಸ್ತುಬದ್ಧವಾಗಿ ಕಲಿತು ಉತ್ತಮ ಉದ್ಯೋಗ ಪಡೆದು ಸತ್ಪ್ರಜೆಗಳಾಗಿ ಬಾಳಲಿ ಎಂದು ಅವರು ಹೇಳಿದರು.

ಕರ್ನಾಟಕ ಬ್ಯಾಂಕ್‌ನ ಉಪ ಪ್ರಬಂಧಕ ರಮೇಶ್ ವೈದ್ಯ ಕರ್ನಾಟಕ ಬ್ಯಾಂಕ್‌ನ ಸಾರ್ವಜನಿಕ ಸಂಪರ್ಕ ಅಧಿಕಾರಿ ಪಲ್ಲವಿ ಅದಮಾರು ಪೂರ್ಣಪ್ರಜ್ಞ ಪ.ಪೂ. ಕಾಲೇಜಿನ ಗೌರವ ಕೋಶಾಧಿಕಾರಿ ಗಣೇಶ್ ಹೆಬ್ಬಾರ್ ಪೂರ್ಣಪ್ರಜ್ಞ ಪ.ಪೂ. ಕಾಲೇಜಿನ ಪ್ರಾಂಶುಪಾಲರಾದ ಸಂಜೀವ ನಾಯ್ಕ ಪೂರ್ಣಪ್ರಜ್ಞ ಕನ್ನಡ ಮಾಧ್ಯಮ ಪ್ರೌಢಶಾಲೆ ಮುಖ್ಯ ಶಿಕ್ಷಕ ಶ್ರೀಕಾಂತ್ ರಾವ್ , ಪೂರ್ಣಪ್ರಜ್ಞ ಆಂಗ್ಲ ಮಾಧ್ಯಮ ಪ್ರೌಢಶಾಲೆ ಮುಖ್ಯೋಪಾಧ್ಯಾಯನೀ ಕಾಂತಿ ಭಟ್ ಉಪಸ್ಥಿತರಿದ್ದರು.

ರಾಘವೇಂದ್ರ ಭಟ್‌ಗೆ ಸನ್ಮಾನ

ಈ ಸಂದರ್ಭ ಶ್ರೀ ಈಶಪ್ರಿಯ ಸ್ವಾಮೀಜಿಯವರು ಕರ್ನಾಟಕ ಬ್ಯಾಂಕ್ ನ ಮಹಾಪ್ರಬಂಧಕ ರಾಘವೇಂದ್ರ ಭಟ್ ಅವರನ್ನು ಸ್ಮರಣಿಕೆ ನೀಡಿ ಸನ್ಮಾನಿಸಿದರು. ಅದಮಾರು ಪೂರ್ಣಪ್ರಜ್ಞ ಪದವಿ ಪೂರ್ವ ಕಾಲೇಜಿನ ಆಡಳಿತ ಮಂಡಳಿ ಪ್ರತಿನಿಧಿಯಾದ ನಿತ್ಯಾನಂದ ಸ್ವಾಗತಿಸಿ, ವಂದಿಸಿದರು.

> **ಕೊಡುಗೆ ಹೆಮ್ಮೆ ಎನಿಸಿದೆ**
> ವಿದ್ಯಾದೇಗುಲ ಎಲ್ಲಾ ರೀತಿಯಿಂದ ಪರಿಪೂರ್ಣವಾಗಬೇಕಾದರೆ ಅದಕ್ಕೆ ಬ್ಯಾಂಕ್‌ಗಳ ಸಹಕಾರ ಬೇಕಾಗುತ್ತದೆ. ಇಂದು ಮಕ್ಕಳಿಗೆ ಶಾಲಾದಿನಗಳಿಂದಲೇ ಹೋಗಿ ಬರಲು ಶಾಲಾ ಬಸ್ ಅನಿವಾರ್ಯವಾಗಿದೆ ಅದಮಾರು ಗ್ರಾಮೀಣ ಪ್ರದೇಶ. ಇಲ್ಲಿ ಸರಿಯಾಗಿ ಖಾಸಗಿ ಬಸ್‌ಗಳಿಲ್ಲ, ಹೀಗಾಗಿ ಶಾಲಾ ಬಸ್ ಗಳ ಅಗತ್ಯ ತುಂಬಾ ಇದೆ. ಆದರೆ ಬಸ್‌ನ ಖರ್ಚು ವೆಚ್ಚ ಇಂದು ದುಬಾರಿಯಾಗಿರುವುದರಿಂದ ಕರ್ನಾಟಕ ಬ್ಯಾಂಕ್ ನ ಬಸ್ ಕೊಡುಗೆ ತುಂಬಾ ಅನನ್ಯವಾದುದು. ಕರ್ನಾಟಕ ಬ್ಯಾಂಕ್ ಅಂದು ಅತ್ಯುತ್ತಮ ಸೇವೆ ಕೊಡುವ ಖಾಸಗಿ ಬ್ಯಾಂಕ್ ಈ ಬ್ಯಾಂಕ್‌ನ ಕೊಡುಗೆ ತುಂಬಾ ಹೆಮ್ಮೆ ಎನಿಸುತ್ತದೆ.
> • ಅದಮಾರು ಶ್ರೀ

ಪಿಯುಸಿ ವಾಣಿಜ್ಯ ವಿಭಾಗದಲ್ಲಿ ಜಿಲ್ಲೆಗೇ 4ನೇ ರ್‍ಯಾಂಕ್ ಗಳಿಸಿದ ಅನನ್ಯಾಗೆ ಸನ್ಮಾನ



ಶಿರ್ವ: ಬಲ್ಲಾಡಿ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯ ಹಳೆವಿದ್ಯಾರ್ಥಿನಿ ಹಾಗೂ ಶಿರ್ವ ಹಿಂದೂ ಪದವಿ ಪೂರ್ವ ಕಾಲೇಜಿನ ವಾಣಿಜ್ಯ ವಿಭಾಗದ ವಿದ್ಯಾರ್ಥಿನಿ ಅನನ್ಯಾ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ವಾಣಿಜ್ಯ ವಿಭಾಗದಲ್ಲಿ ಶೇ.98 ಅಂಕಗಳಿಸಿ ಉಡುಪಿ ಜಿಲ್ಲೆಯಲ್ಲಿ 4ನೇ ರ್‍ಯಾಂಕ್ ಗಳಿಸಿದ್ದಾರೆ. ಇವರ ಸಾಧನೆ ಗುರುತಿಸಿ ಶಾಲಾ ಹಳೆವಿದ್ಯಾರ್ಥಿ ಸಂಘದ ನೇತೃತ್ವದಲ್ಲಿ ಊರಿನ ಸಹಸಂಘಟನೆಗಳ ಸಹಭಾಗಿತ್ವದಲ್ಲಿ ಬಲ್ಲಾಡಿ ಶಾಲೆಯಲ್ಲಿ ಏರ್ಪಡಿಸಿದ ಸಮಾರಂಭದಲ್ಲಿ ಸನ್ಮಾನಿಸಲಾಯಿತು.

ಈ ಸಂದರ್ಭದಲ್ಲಿ ಶಿರ್ವ ಸಿ.ಎ.ಬ್ಯಾಂಕ್ ಅಧ್ಯಕ್ಷ ಕುತ್ಯಾರು ಪ್ರಸಾದ್ ಶೆಟ್ಟಿ, ಶಿರ್ವ ಗ್ರಾ.ಪಂ. ಮಾಜಿ ಅಧ್ಯಕ್ಷ ರತನ್ ಶೆಟ್ಟಿ, ಶ್ರೀ ವಿಷ್ಣುಮೂರ್ತಿ ದೇವಳದ ಪ್ರಧಾನ ಅರ್ಚಕ ವೇದ ಮೂರ್ತಿ ರಘುಪತಿ ಗುಂಡು ಭಟ್, ನಿವೃತ್ತ ಶಿಕ್ಷಕ ರವೀಂದ್ರ ಶೆಟ್ಟಿ ಸಾನದಮನೆ, ಪ್ರಭಾರ ಮುಖ್ಯ ಶಿಕ್ಷಕಿ ಅನಿತಾ ಡಿಸೋಜ, ಶಿರ್ವ ವಿಷ್ಣುಮೂರ್ತಿ ಭಜನಾ ಮಂಡಳಿ ಅಧ್ಯಕ್ಷ ಅಜಿತ್ ಶೆಟ್ಟಿ ಶಾಲಾ ಹಳೆವಿದ್ಯಾರ್ಥಿ ಸಂಘದ ಕಾರ್ಯದರ್ಶಿ ಶೇಖರ ಶೆಟ್ಟಿ , ಶಾಲಾ ಎಸ್‌ಡಿಎಂಸಿ ಅಧ್ಯಕ್ಷೆ ಶಕುಂತಲಾ ನಾಯ್ಕ್, ಸಿಆರ್‌ಪಿ ಸರಿತಾರಾಣಿ, ಶಿಕ್ಷಕ ಶಿವಣ್ಣ, ಶಾಲಾ ಹಳೆ ವಿದ್ಯಾರ್ಥಿ ಸಂಘದ ಅಧ್ಯಕ್ಷ ಉಮೇಶ ಆಚಾರ್ಯ, ಪ್ರೀತಮ್ ಆಚಾರ್ಯ ಮತ್ತಿತರರು ಉಪಸ್ಥಿತರಿದ್ದರು.

ಮಂಗಳೂರು
ಮಂಗಳವಾರ, 9 ಜೂನ್ 2026
ಸಂಪುಟ 48, ಸಂಚಿಕೆ 82 ಪುಟಗಳು 12+6
■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ■ ಹುಬ್ಬಳ್ಳಿ
₹5
REG.No.MNG /121/2024-26 Posted at kodialbail P.O / RNI:29813/78/ Daily
hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ



ತಿಂಡಿ ಪೊಟ್ಟಣಕ್ಕೆ ಸುದ್ದಿ ಪತ್ರಿಕೆ ಬಳಸುವಂತಿಲ್ಲ | ೦೭ | ಪಿಒಕೆ ಸಂಘರ್ಷದಲ್ಲಿ 11 ಸಾವು | ೦೭ | ಅಫ್ಘಾನ್ ವಿರುದ್ಧ ಭಾರತಕ್ಕೆ ಬೃಹತ್ ಗೆಲುವು ೧೧

ಶುಭ ದಿನ

ಕಲಿಯುಗಾಬ್ದ 5128, ಪರಾಭವ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಅಧಿಕ ಜ್ಯೇಷ್ಠ ಮಾಸ, ಕೃಷ್ಣ ಪಕ್ಷ, ತಿಥಿ: ನವಮಿ, ನಕ್ಷತ್ರ: ಪೂರ್ವಭಾದ್ರ

ದಿನದ ಮಾತು

ನೀವು ಸುಖ ಪಡುವುದು ನಿಮ್ಮ ಅರಿವಿನಿಂದ, ಉಳಿದವರನ್ನೂ ಸುಖ ಪಡುವಂತೆ ಮಾಡುವುದು ನಿಮ್ಮ ಸದ್ಗುಣಗಳಿಂದ.
▲ನಾಣ್ನುಡಿ

ಬಕ್ರೀದ್ ಮತ್ತು ವಿವಿಧ ರಾಜ್ಯಗಳ ಗೋಹತ್ಯಾ ನಿಷೇಧ ಕಾನೂನುಗಳು
ಧರಣಿ ಮಂಡಲ
• ಕೆ.ಎನ್.ಶೈಲೇಶ್ ಹೊಳ್ಳ
• ಪುಟ ೬

ಕಿರುಸುದ್ದಿ

ಸಿನಿ ತಾರೆಯರಿಂದ ಮಾಹಿತಿ ಸಂಗ್ರಹಿಸಲು ಸಿಐಡಿ ನಿರ್ಧಾರ

ಶಿವಂ ಅಸೋಸಿಯೇಟ್ಸ್ ಬಹುಕೋಟಿ ವಂಚನೆ ಪ್ರಕರಣ

• **ಬೆಳಗಾವಿ:** ಶಿವಂ ಅಸೋಸಿಯೇಟ್ಸ್ ಬಹುಕೋಟಿ ರೂಪಾಯಿ ಠೇವಣಿ ವಂಚನೆ ಪ್ರಕರಣದ ತನಿಖೆಯನ್ನು ಸಿಐಡಿ ಚುರುಕುಗೊಳಿಸಿದೆ. ಪ್ರಕರಣದ ವಿವಿಧ ಆಯಾಮಗಳ ಕುರಿತು ಪರಿಶೀಲನೆ ನಡೆಸುತ್ತಿರುವ ಅಧಿಕಾರಿಗಳು, ಹಣದ ಹರಿವು ಹಾಗೂ ಹೂಡಿಕೆದಾರರ ಹಣದ ಬಳಕೆಯ ಕುರಿತ ಮಾಹಿತಿ ಸಂಗ್ರಹಿಸಲಾಗುತ್ತಿದೆ.ಕಳೆದ ಡಿಸೆಂಬರ್ 27ರಂದು ಬೆಳಗಾವಿಯಲ್ಲಿ ನಡೆದಿದ್ದ ಕನ್ನಡ ಉತ್ಸವ ಕಾರ್ಯಕ್ರಮವೂ ತನಿಖೆಯ ವ್ಯಾಪ್ತಿಗೆ ಬಂದಿದ್ದು, ಈ ಕಾರ್ಯಕ್ರಮಕ್ಕೆ ವೆಚ್ಚವಾದ ಹಣದ ಮೂಲದ ಕುರಿತು ಅಧಿಕಾರಿಗಳು ಪರಿಶೀಲನೆ ನಡೆಸುತ್ತಿದ್ದಾರೆ ಎನ್ನಲಾಗಿದೆ. ➡ಪುಟ ೪

ಕಾದ ಕಬ್ಬಿಣ ಸೋರಿ ಒಂಬತ್ತು ಜನ ಸಾವು

• **ವಿಶಾಖಪಟ್ಟಣಂ:** ಆಂಧ್ರಪ್ರದೇಶದ ವಿಶಾಖಪಟ್ಟಣಂನಲ್ಲಿರುವ ರಾಷ್ಟ್ರೀಯ ಇಸ್ಪಾತ್ ನಿಗಮ್ ಲಿಮಿಟೆಡ್ (ವಿಜಾಗ್ ಸ್ಟೀಲ್ ಪ್ಲಾಂಟ್)ನಲ್ಲಿ ಸೋಮವಾರ ಸಂಭವಿಸಿದ ಭೀಕರ ಕೈಗಾರಿಕಾ ದುರಂತದಲ್ಲಿ ಕನಿಷ್ಠ ಒಂಬತ್ತು ಕಾರ್ಮಿಕರು ಮೃತಪಟ್ಟಿದ್ದು, ಆರು ಮಂದಿ ಗಾಯಗೊಂಡಿದ್ದಾರೆ.

ಫಿಲಿಪ್ಪೀನ್ಸ್‌ನಲ್ಲಿ ಪ್ರಬಲ ಕಂಪನಕ್ಕೆ 32 ಮಂದಿ ಸಾವು
• ಪುಟ ೦೭

ನೇಪಾಳ ಗಡಿಯ ಬಳಿ ಅಭಿಷೇಕ್ ಆಪ್ತನ ಸೆರೆ
• ಪುಟ ೦೭

24 ಭಾರತೀಯ ನಾವಿಕರಿದ್ದ ತೈಲ ಹಡಗಿನಲ್ಲಿ ಅಗ್ನಿ ಅವಘಡ
• ಪುಟ ೦೭



ಮೋದಿ ಪ್ರಧಾನಿಯಾಗಿ ಜೂನ್ 10ಕ್ಕೆ ಹೊಸ ದಾಖಲೆ

ಬಡವರ ಕಲ್ಯಾಣ, ದೇಶದ ಸಮಗ್ರ ಅಭಿವೃದ್ಧಿಗೆ ಆದ್ಯತೆ



• **ಹೊಸದಿಲ್ಲಿ:** ಪ್ರಧಾನಿ ನರೇಂದ್ರ ಮೋದಿಯವರು ದೇಶದ ಪ್ರಧಾನಿಯಾಗಿ ಅಧಿಕಾರ ವಹಿಸಿಕೊಂಡು ಜೂ.10ಕ್ಕೆ ಹೊಸ ದಾಖಲೆ ಬರೆಯುವ ಹಿನ್ನೆಲೆಯಲ್ಲಿ ಬಡವರ ಕಲ್ಯಾಣ, ಯುವ ಜನತೆ, ಮಹಿಳೆಯರಿಗೆ ಉಜ್ವಲ ಅವಕಾಶ ನೀಡಿಕೆ, ವಿಶ್ವದರ್ಜೆಯ ಮೂಲಸೌಕರ್ಯಗಳ ಅಭಿವೃದ್ಧಿ, ಭಾರತೀಯರ ಜೀವನಮಟ್ಟ ಸುಧಾರಣೆ ಸೇರಿದಂತೆ ಭಾರತದ ಸಮಗ್ರ ಅಭಿವೃದ್ಧಿಗೆ ಅವರ ಸರಕಾರ ಆದ್ಯತೆ ನೀಡಿರುವುದನ್ನು ಇಡಿ ವಿಶ್ವವೇ ಗುರುತಿಸುವಂತೆ ಮಾಡಿದೆ.

ಬ್ಯಾಂಕಿಂಗ್ ವ್ಯವಹಾರವನ್ನೇ ಕಾಣದೆ ಖಾಸಗಿ ವಲಯದ ಸಾಲ, ಬಡ್ಡಿಯ ಹೊರೆಗಳಿಂದ ನಲುಗಿಹೋಗಿದ್ದ ದೇಶದ 45 ಕೋಟಿಗೂ ಅಧಿಕ ಬಡವರಿಗೆ ಜನಧನ್ ಯೋಜನೆಯ ಮೂಲಕ ಬ್ಯಾಂಕಿಂಗ್ ಕ್ಷೇತ್ರಕ್ಕೆ ಪ್ರವೇಶ ಕಲ್ಪಿಸಿ, ನೇರ ಲಾಭ ವರ್ಗಾವಣೆ(ಡಿಬಿಟಿ) ಯೋಜನೆಯ ಮೂಲಕ ಒಂದು ರೂಪಾಯಿ ಲಂಚವಿಲ್ಲದೆ ತಮ್ಮ ಖಾತೆಗಳಿಗೇ ನೇರವಾಗಿ ಸರಕಾರದ ಯೋಜನೆಗಳ ಲಾಭ ಪಡೆಯುವಂತೆ ಮಾಡಿರುವುದು, ಸ್ವಚ್ಛ ಭಾರತ್, ಪಿಎಂ ಆವಾಜ್, ಜಲ್‌ಜೀವನ್ ಮಿಷನ್, ಆಯುಷ್ಮಾನ್ ಭಾರತ್, ಜನೌಷಧಿ ದೇಶದಲ್ಲಿ ಕೋಟ್ಯಂತರ ಶೌಚಾಲಯಗಳ ನಿರ್ಮಾಣ ಮೂಲಕ ಮಹಿಳೆಯರು, ಬಡವರಿಗೆ ಘನತೆಯ ಬದುಕು ಕಲ್ಪಿಸಿಕೊಡುವ ಜೊತೆಗೆ ವೈಜ್ಞಾನಿಕ, ತಂತ್ರಜ್ಞಾನ ಕ್ಷೇತ್ರಗಳಲ್ಲೂ ಅಭೂತಪೂರ್ವ ಪ್ರಗತಿ ಸಾಧಿಸುವ ಮೂಲಕ ಯುವಜನತೆಗೆ ವಿಪುಲ ಅವಕಾಶಗಳನ್ನು ಕಲ್ಪಿಸಿಕೊಡುವ ಮೂಲಕ ಜನತೆಯ ಜೀವನಮಟ್ಟ ಸುಧಾರಣೆಗೈದ ಹಿರಿಮೆ ಮೋದಿ ಸರಕಾರದ್ದಾಗಿದೆ. ➡ಪುಟ ೪

ನೆಹರು ದಾಖಲೆ ಮುರಿಯಲಿರುವ ಮೋದಿ

4,399 ದಿನಗಳ ಆಡಳಿತದ ಐತಿಹಾಸಿಕ ಮೈಲುಗಲ್ಲು

ಇದೇ ಜೂನ್ 10ರಂದು ಮೋದಿ ಅವರು ಪ್ರಧಾನಿಯಾಗಿ ನಿರಂತರವಾಗಿ 4,399 ದಿನಗಳ ಸೇವೆ ಸಲ್ಲಿಸಿ, ಭಾರತದ ಮೊದಲ ಪ್ರಧಾನಿ ಜವಾಹರಲಾಲ್ ನೆಹರು ಅವರ ದಾಖಲೆಯನ್ನು ಮುರಿದ ಅತ್ಯಂತ ದೀರ್ಘಾವಧಿ ಸೇವೆ ಸಲ್ಲಿಸಿದ ಚುನಾಯಿತ ಪ್ರಧಾನಿಯಾಗಿ ಹೊರಹೊಮ್ಮಲಿದ್ದಾರೆ. ಮೈಲುಗಲ್ಲುಗಳು ಸಾಮಾನ್ಯವಾಗಿ ಸಾಂಕೇತಿಕ ಮಹತ್ವ ಹೊಂದಿದ್ದರೂ, ಒಂದು ಸರ್ಕಾರದ ನಿಜವಾದ ಮೌಲ್ಯಮಾಪನ ಅದು ದೇಶವನ್ನು ಎಷ್ಟರಮಟ್ಟಿಗೆ ಬದಲಾಯಿಸಿದೆ ಎಂಬುದರ ಮೇಲೆ ಅವಲಂಬಿತವಾಗಿರುತ್ತದೆ. ಆ ದೃಷ್ಟಿಯಿಂದ ನೋಡಿದರೆ, ಮೋದಿ ಯುಗವು ಸ್ವತಂತ್ರ ಭಾರತದ ಇತಿಹಾಸದಲ್ಲಿ ಅತ್ಯಂತ ಪರಿಣಾಮಕಾರಿ ಹಾಗೂ ನಿರ್ಣಾಯಕ ಅವಧಿಗಳಲ್ಲೊಂದಾಗಿ ಗುರುತಿಸಿಕೊಂಡಿದೆ. ಕಳೆದ 12 ವರ್ಷಗಳಲ್ಲಿ ಭಾರತವು ಜಾಗತಿಕ ವೇದಿಕೆಯಲ್ಲಿ ತನ್ನ ಪ್ರಭಾವವನ್ನು ವಿಸ್ತರಿಸಿಕೊಂಡಿದ್ದು, ದೇಶದ ಆಡಳಿತ ವ್ಯವಸ್ಥೆಯಲ್ಲಿಯೂ ಮಹತ್ವದ ಪರಿವರ್ತನೆಗಳು ನಡೆದಿವೆ. ➡ಪುಟ ೪

ವಯಸ್ಸಿನ ದಾಖಲೆ ನೀಡಿದರೆ ಅವಕಾಶ

ಐಡಿ ಇದ್ದರಷ್ಟೆ ಪಬ್ ಪ್ರವೇಶ: ಗೃಹ ಸಚಿವ

• **ಬೆಂಗಳೂರು:** ಯಾವುದೇ ವ್ಯಕ್ತಿಗೆ ವಯಸ್ಸಿನ ಅಧಿಕೃತ ಪುರಾವೆ (ಐಡಿ ಕಾರ್ಡ್) ಇಲ್ಲದೆ ಪಬ್, ಬ್ರೂವರೀಸ್, ಬಾರ್, ಕ್ಲಬ್ ಅಥವಾ ಮದ್ಯ ಸರಬರಾಜು ಮಾಡುವ ಸಂಸ್ಥೆಗಳ ಒಳಗೆ ಪ್ರವೇಶ ನೀಡಬಾರದು ಎಂದು ಗೃಹ ಸಚಿವ ಪ್ರಿಯಾಂಕ್ ಖರ್ಗೆ ಅವರು ಹಿರಿಯ ಪೊಲೀಸ್ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದ್ದಾರೆ.



ಸೋಮವಾರ ನಡೆದ ಹಿರಿಯ ಪೊಲೀಸ್ ಅಧಿಕಾರಿಗಳ ಸಭೆಯಲ್ಲಿ ಈ ಸೂಚನೆ ನೀಡಿದ ಅವರು, ಸಂಸ್ಥೆಗಳು ಗ್ರಾಹಕರಿಗೆ ಪ್ರವೇಶ ನೀಡುವ ಮೊದಲು ಅಥವಾ ಮದ್ಯವನ್ನು ಸರಬರಾಜು ಮಾಡುವ ಮುನ್ನ ಸರ್ಕಾರ ನೀಡಿದ ಅಧಿಕೃತ ಗುರುತಿನ ಚೀಟಿಯನ್ನು ಕಡ್ಡಾಯವಾಗಿ ಪರಿಶೀಲಿಸಿ ವಯಸ್ಸನ್ನು ದೃಢೀಕರಿಸಿಕೊಳ್ಳಬೇಕು. ಒಂದು ವೇಳೆ, ಅಪ್ರಾಪ್ತ ವಯಸ್ಕರಿಗೆ ಮದ್ಯ ಸರಬರಾಜು ಮಾಡುವ ಅಥವಾ ಅಪ್ರಾಪ್ತರ ಮದ್ಯಪಾನಕ್ಕೆ ಪ್ರಚೋದನೆ ನೀಡುವ ಯಾವುದೇ ಸಂಸ್ಥೆಯ ವಿರುದ್ಧ ಅನ್ವಯವಾಗುವ ಕಾನೂನಿನ ಅಡಿಯಲ್ಲಿ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದರು. ➡ಪುಟ ೪

ನಿರ್ಧಾರಕ್ಕೆ ಕಾರಣ

ಬೆಂಗಳೂರಿನಲ್ಲಿ ಹದಿಹರೆಯದವರು ಮತ್ತು ಯುವಜನರಲ್ಲಿ ಹೆಚ್ಚುತ್ತಿರುವ ಮದ್ಯಪಾನ ಹಾಗೂ ಮಾದಕ ದ್ರವ್ಯಗಳ ಬಳಕೆಯ ಬಗೆಗಿನ ಆತಂಕದ ಹಿನ್ನೆಲೆಯಲ್ಲಿ ಈ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಾಗಿದೆ. ಬೆಂಗಳೂರಿನ ಸೇಂಟ್ ಜಾನ್ಸ್ ಮೆಡಿಕಲ್ ಕಾಲೇಜು, ಕ್ರೈಸ್ಟ್ ವಿಶ್ವವಿದ್ಯಾಲಯ ಮತ್ತು ಮಣಿಪಾಲದ ಕಸ್ತೂರ್ ಬಾ ಮೆಡಿಕಲ್ ಕಾಲೇಜಿನ ಸಂಶೋಧಕರು ನಡೆಸಿದ ಸಂಶೋಧನೆಯಲ್ಲಿ ನಗರದ ಪ್ರತಿ ಮೂವರು ಹದಿಹರೆಯದವರಲ್ಲಿ ಒಬ್ಬರು ಮದ್ಯ ಅಥವಾ ತಂಬಾಕು ಬಳಕೆಯಿಂದಾಗಿ ಆರೋಗ್ಯ ಸಮಸ್ಯೆಗಳನ್ನು ಎದುರಿಸುವ ಅಪಾಯದಲ್ಲಿದ್ದಾರೆ ಎಂಬ ಆಘಾತಕಾರಿ ವಿಷಯ ಬೆಳಕಿಗೆ ಬಂದಿದೆ. ಈ ಹಿನ್ನೆಲೆಯಲ್ಲಿ ಸಚಿವರು ಈ ನಿರ್ಧಾರ ಕೈಗೊಂಡಿದ್ದಾರೆ.

ಮದ್ಯ ಪೂರೈಕೆಗೂ ನಿರ್ಬಂಧ



ಪ್ರಮುಖ ನಿರ್ದೇಶನಗಳು

1. ಯಾವುದೇ ವ್ಯಕ್ತಿಗೆ ವಯಸ್ಸಿನ ಅಧಿಕೃತ ಪುರಾವೆ (ಐಡಿ ಕಾರ್ಡ್) ಇಲ್ಲದೆ ಪಬ್, ಬ್ರೂವರೀಸ್, ಬಾರ್, ಕ್ಲಬ್ ಅಥವಾ ಮದ್ಯ ಸರಬರಾಜು ಮಾಡುವ ಸಂಸ್ಥೆಗಳ ಒಳಗೆ ಪ್ರವೇಶ ನೀಡಬಾರದು.
2. ಸಂಸ್ಥೆಗಳು ಗ್ರಾಹಕರಿಗೆ ಪ್ರವೇಶ ನೀಡುವ ಮೊದಲು ಅಥವಾ ಮದ್ಯವನ್ನು ಸರಬರಾಜು ಮಾಡುವ ಮುನ್ನ ಸರ್ಕಾರ ನೀಡಿದ ಅಧಿಕೃತ ಗುರುತಿನ ಚೀಟಿಯನ್ನು ಕಡ್ಡಾಯವಾಗಿ ಪರಿಶೀಲಿಸಿ ವಯಸ್ಸನ್ನು ದೃಢೀಕರಿಸಿಕೊಳ್ಳಬೇಕು.
3. ಅಪ್ರಾಪ್ತ ವಯಸ್ಕರಿಗೆ ಮದ್ಯ ಸರಬರಾಜು ಮಾಡುವ ಅಥವಾ ಅಪ್ರಾಪ್ತರ ಮದ್ಯಪಾನಕ್ಕೆ ಪ್ರಚೋದನೆ ನೀಡುವ ಯಾವುದೇ ಸಂಸ್ಥೆ ವಿರುದ್ಧ ಅನ್ವಯವಾಗುವ ಕಾನೂನಿನ ಅಡಿಯಲ್ಲಿ ಕಠಿಣ ಕ್ರಮ ಕೈಗೊಳ್ಳಲಾಗುವುದು. ➡ಪುಟ ೪

ಕೈನಿಂದ ಖರ್ಗೆ, ಖೇರಾ, ಮನ್ಸೂರ್, ಬಿಜೆಪಿಯಿಂದ ನಾಗರಾಜ್

ರಾಜ್ಯಸಭೆಗೆ ನಾಲ್ವರ ಅವಿರೋಧ ಆಯ್ಕೆ?

ಜೂ.11ಕ್ಕೆ ಫಲಿತಾಂಶ ಪ್ರಕಟ

• **ಬೆಂಗಳೂರು:** ಕರ್ನಾಟಕ ವಿಧಾನಸಭೆಯಿಂದ ರಾಜ್ಯಸಭೆಯ 4 ಸದಸ್ಯ ಸ್ಥಾನಗಳಿಗೆ ನಡೆಯುವ ಚುನಾವಣೆಯಲ್ಲಿ ಕಾಂಗ್ರೆಸ್ ಹಾಗೂ ಬಿಜೆಪಿ ಅಭ್ಯರ್ಥಿಗಳು ಅವಿರೋಧವಾಗಿ ಆಯ್ಕೆಯಾಗುವುದು ಬಹುತೇಕ ಖಚಿತವಾಗಿದೆ.

ಕಾಂಗ್ರೆಸ್ ಪಕ್ಷದ ಅಭ್ಯರ್ಥಿಗಳಾದ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಪವನ್ ಖೇರಾ ಹಾಗೂ ಮನ್ಸೂರ್ ಅಲಿ ಖಾನ್ ಹಾಗೂ ಬಿಜೆಪಿ ಅಭ್ಯರ್ಥಿ ಪ್ರೊ. ಎಂ.ನಾಗರಾಜ್ ಅವಿರೋಧವಾಗಿ ಆಯ್ಕೆಯಾಗಿ ರಾಜ್ಯಸಭೆ ಪ್ರವೇಶಿಸಲಿದ್ದಾರೆ. ವಿಧಾನಸಭೆಯಲ್ಲಿ ಶಾಸಕರ ಸಂಖ್ಯಾಬಲದಲ್ಲಿ ಕಾಂಗ್ರೆಸ್ ಪಕ್ಷದ ಮೂವರು ಅಭ್ಯರ್ಥಿಗಳು ಗೆಲ್ಲಲು ಸಾಧ್ಯವಿದೆ. ಬಿಜೆಪಿಯ ಒಬ್ಬ ಅಭ್ಯರ್ಥಿ ಗೆಲ್ಲಬಹುದಾಗಿದೆ. ಈ ಹಿನ್ನೆಲೆಯಲ್ಲಿ ಎರಡೂ ರಾಷ್ಟ್ರೀಯ ಪಕ್ಷಗಳು ತಮ್ಮ ಅಭ್ಯರ್ಥಿಗಳನ್ನು ಕಣಕ್ಕಿಳಿಸಿವೆ. ಗೆಲ್ಲಲು ಸಾಧ್ಯವಾಗುವಷ್ಟು ಶಾಸಕರ ಸಂಖ್ಯಾಬಲ ಇಲ್ಲದಿರುವ ಹಿನ್ನೆಲೆ ಜೆಡಿಎಸ್ ಈ ಚುನಾವಣೆಯಲ್ಲಿ ಸ್ಪರ್ಧಿಸಲಿಲ್ಲ. ➡ಪುಟ ೪



ರಾಜ್ಯಸಭೆಗೆ ಬಿಜೆಪಿ ಅಭ್ಯರ್ಥಿಯಾಗಿ ಪ್ರೊ. ಎಂ. ನಾಗರಾಜ್ ಸೋಮವಾರ ನಾಮಪತ್ರ ಸಲ್ಲಿಸಿದರು. ಬಿ.ಎಸ್. ಯಡಿಯೂರಪ್ಪ, ಬಿ.ವೈ.ವಿಜಯೇಂದ್ರ, ಛಲವಾದಿ ನಾರಾಯಣಸ್ವಾಮಿ ಇದ್ದರು.

5 ಸ್ಥಾನ ಗೆಲ್ಲಲು ಕೈ ರಣತಂತ್ರ • ಪುಟ ೪

ಲೋಕಸಭಾ ಸ್ಪೀಕರ್‌ಗೆ ಬೆಂಬಲ ಪತ್ರ: ಸಂಸದೆ ಕಾಕೋಲಿ

20 ಟಿಎಂಸಿ ಸಂಸದರು ಎನ್‌ಡಿಎಗೆ?

• **ಹೊಸದಿಲ್ಲಿ:** ಟಿಎಂಸಿ ವರಿಷ್ಠರಾದ ಮಮತಾ ಬ್ಯಾನರ್ಜಿ ಅವರು ಇಂಡಿ ಕೂಟದ ಸಭೆಗೆ ಹಾಜರಾಗಿ ಮತ್ತೆ ಕೂಟದ ಜತೆ ಕೈಜೋಡಿಸಲು ಯತ್ನಿಸುತ್ತಿರುವಾಗಲೇ, ಇತ್ತ ಪಶ್ಚಿಮ ಬಂಗಾಳದ 20 ಸಂಸದರು ಎನ್‌ಡಿಎ ಸೇರಲು ಬಯಸಿದ್ದು, ಈ ಬಗ್ಗೆ ಲೋಕಸಭಾಧ್ಯಕ್ಷರಿಗೆ ಪತ್ರವನ್ನೂ ಬರೆದಿರುವುದಾಗಿ ಟಿಎಂಸಿ ಸಂಸದೆ ಕಾಕೋಲಿ ಘೋಷ್ ಡಾಸ್ತಿದಾರ್ ಸೋಮವಾರ ಹೇಳಿದ್ದಾರೆ.

ಕಾಕೋಲಿದಾಸ್ ಅವರನ್ನು ಇತ್ತೀಚೆಗೆ ಟಿಎಂಸಿ ಸಚೇತಕ ಸ್ಥಾನದಿಂದ ವಜಾಗೊಳಿಸಲಾಗಿತ್ತು. ಟಿಎಂಸಿ ಸಂಸದರು ಮಮತಾ ಬ್ಯಾನರ್ಜಿ ಅವರ ಅಳಿಯ ಅಭಿಷೇಕ್ ಭಟ್ಟಾಚಾರ್ಯ ಅವರ ವಿರುದ್ಧ 60ಕ್ಕೂ ಅಧಿಕ ಟಿಎಂಸಿ ಶಾಸಕರು ತಿರುಗಿಬಿದ್ದ ಬಳಿಕ , ಮಮತಾ ಬ್ಯಾನರ್ಜಿ ಅವರು ಅಭಿಷೇಕ್ ಭಟ್ಟಾಚಾರ್ಯ ಅವರ ಅನಿಯಂತ್ರಿತ ಅಧಿಕಾರಕ್ಕೆ ಒಂದಷ್ಟು ಕತ್ತರಿ ಹಾಕಿದ್ದರು. ಆದರೆ ಅನಂತರವೂ ಭಟ್ಟಾಚಾರ್ಯ ಅವರ ನಿಕಟವರ್ತಿ ಡೆರೆಕ್ ಒಬ್ರೀನ್ ಮತ್ತು ಡೋಲಾ ಸೇನ್ ಅವರನ್ನೇ ಜಂಟಿ ಕಾರ್ಯದರ್ಶಿಗಳನ್ನಾಗಿಸಿದ್ದರು. ಇದೀಗ ಟಿಎಂಸಿ ಸಂಸದರೂ ತಿರುಗಿಬಿದ್ದಿರುವುದು ಟಿಎಂಸಿಗೆ ತೀವ್ರ ಆಘಾತವುಂಟು ಮಾಡಿದೆ.



ಸುಮಾರು 20 ತೃಣಮೂಲ ಕಾಂಗ್ರೆಸ್ ಸಂಸದರು ಲೋಕಸಭಾಧ್ಯಕ್ಷ ಓಂ ಬಿರ್ಲಾ ಅವರಿಗೆ ಔಪಚಾರಿಕವಾಗಿ ಪತ್ರ ಬರೆದು ನಾವು ಎನ್‌ಡಿಎಯ ಭಾಗವಾಗಿರಲು ಬಯಸುವುದಾಗಿ ತಿಳಿಸಿದ್ದಾರೆಂದು ಕಾಕೋಲಿದಾಸ್ ಘೋಷ್ ಸುದ್ದಿಗಾರರಿಗೆ ತಿಳಿಸಿದರು. ಇನ್ನೊಬ್ಬ ಟಿಎಂಸಿ ಸಂಸದೆ ಶರ್ಮಿಳಾ ಸರ್ಕಾರ್ ಸುದ್ದಿಜಾಲವೊಂದರ ಜತೆ ಮಾತನಾಡಿ, ನಾವು 20 ಮಂದಿ ಟಿಎಂಸಿ ಸಂಸದರು ಪ್ರತ್ಯೇಕ ಗುಂಪನ್ನು ರಚಿಸಿಕೊಂಡಿದ್ದು, ಎನ್‌ಡಿಎಗೆ ಬೆಂಬಲ ನೀಡಲಿದ್ದೇವೆ. ಕಾಕೋಲಿ ಘೋಷ್ ಅವರು ನಮ್ಮ ಮುಖ್ಯ ಸಚೇತಕರಾಗಿದ್ದು, ಶತಾಬ್ದಿ ರಾಯ್ ನಮ್ಮ ಉಪನಾಯಕ ಎಂದರು. ➡ಪುಟ ೪

ಮಧ್ಯಪ್ರಾಚ್ಯ: ಮತ್ತೆ ಸಂಘರ್ಷ

ಇಸ್ರೇಲ್-ಇರಾನ್ ದಾಳಿ-ಪ್ರತಿದಾಳಿ, ಇನ್ನು ಪ್ರಾದೇಶಿಕ ಕದನ ವಿರಾಮ?

• **ದುಬೈ:** ಪೂರ್ಣ ಪ್ರಮಾಣದ ಪ್ರಾದೇಶಿಕ ಯುದ್ಧದ ಬೆದರಿಕೆಯೊಡ್ಡಿದ ಇಸ್ರೇಲ್ ಜತೆಗಿನ ದಾಳಿ ಪ್ರತಿದಾಳಿಯ ನಂತರ ಇರಾನಿನ ಮಿಲಿಟರಿ ಜಂಟಿ ಕಮಾಂಡ್ ಸೋಮವಾರ ಆಕ್ರಮಣಕಾರಿ ಕಾರ್ಯಾಚರಣೆಗಳನ್ನು ಸ್ಥಗಿತಗೊಳಿಸುವುದಾಗಿ ಘೋಷಿಸಿದೆ.

ಅಮೆರಿಕ ಎರಡು ತಿಂಗಳ ಹಿಂದೆ ಟೆಹ್ರಾನ್‌ನೊಂದಿಗೆ ಕದನ ವಿರಾಮ ಏರ್ಪಡಿಸಿದ ನಂತರ ಉಭಯ ದೇಶಗಳ ನಡುವೆ ನಡೆದ ಮೊದಲ ನೇರ ದಾಳಿ ಇದಾಗಿದೆ. ಫೆ.28ರಂದು ಇರಾನ್ ಮೇಲಿನ ದಾಳಿಯೊಂದಿಗೆ ಅಮೆರಿಕ ಮತ್ತು ಇಸ್ರೇಲ್ ಪ್ರಾರಂಭಿಸಿದ ಈ ಯುದ್ಧ, ಜಾಗತಿಕ ಇಂಧನ ಮತ್ತು ಆಹಾರದ ಬೆಲೆಗಳನ್ನು ಹೆಚ್ಚಿಸುವ ಮೂಲಕ ಜಾಗತಿಕ ಆರ್ಥಿಕತೆಯನ್ನು ಅಲುಗಾಡಿಸಿದೆ. ಏಪ್ರಿಲ್ ತಿಂಗಳ ಕದನ ವಿರಾಮವನ್ನು ಕಾಯಂ ಶಾಂತಿ ಒಪ್ಪಂದವಾಗಿ ಪರಿವರ್ತಿಸಲು ಅಧಿಕಾರಿಗಳಿಗೆ ಸಾಧ್ಯವಾಗಿಲ್ಲ. ➡ಪುಟ ೪

ದೆಹಲಿ ಬಿಸಿಲಿಗೆ ಜಿರಳೆಗಳು ಒಣಗಿದವೇ?

ರಾಘವಾಂಕಣ
• ರಾಘವೇಂದ್ರ ಸುಬ್ರಹ್ಮಣ್ಯ
raghavaankana@gmail.com



ಕಾಕ್ರೋಚ್ ಜನತಾ ಪಾರ್ಟಿಯವರು ದೆಹಲಿಯ ಜಂತರ್ ಮಂತರ್‌ನಲ್ಲಿ ನಡೆಸಲು ಕರೆಕೊಟ್ಟಿದ್ದ ಜನಾಂದೋಲನ ಕೊನೆಗೂ ಯಶಸ್ವಿಯಾಗಿ ನಡೆದಿದೆ. ಈ ಪ್ರದರ್ಶನ ಹಿಂಸಾಚಾರ ಗಲಭೆ ಇತ್ಯಾದಿಗಳಿಲ್ಲದೆ ಶಾಂತಿಯುತವಾಗಿಯೇ ನಡೆಯಲಿದೆ ಎಂದು ಪಕ್ಷದ ಅಧ್ಯಕ್ಷ ಸೇರಿದಂತೆ ಹಲವಾರು ಪದಾಧಿಕಾರಿಗಳು ಕೊಟ್ಟ ಹೇಳಿಕೆಯಂತೆಯೇ, ಯಾವುದೇ ಅಹಿತಕರ ಘಟನೆಗಳಿಲ್ಲದೇ ಅತ್ಯಂತ ಶಾಂತಿಪೂರ್ವಕವಾಗಿ ನಡೆಯಿತು ಎಂಬುದು ಸಂತೋಷದ ವಿಷಯವೇ ಹೌದು. ಮಾತ್ರವಲ್ಲದೇ, ಈ ಆಂದೋಲನದ ದಿನ ದೇಶದ ಜನತೆಗೆ ಸಿಕ್ಕ ನಗೆಬುಗ್ಗೆಗಳು ಜನರ ಆರೋಗ್ಯವನ್ನು ಇನ್ನೂ ಹೆಚ್ಚಿಸಿವೆ ಎಂಬುದೇ ನನ್ನ ಅಭಿಪ್ರಾಯ. ನೀಟ್ ಪರೀಕ್ಷೆಯ ಪ್ರಶ್ನೆಪತ್ರಿಕೆ ಸೋರಿಕೆಯಾದ ಹಿನ್ನೆಲೆಯಲ್ಲಿ ಸರ್ಕಾರವನ್ನು ತರಾಟೆಗೆ ತೆಗೆದುಕೊಂಡು, ಶಿಕ್ಷಣಮಂತ್ರಿಯ ರಾಜೀನಾಮೆ ಪಡೆಯುವ ಉದ್ದೇಶದಿಂದ ಪ್ರಾರಂಭವಾದ ಈ ಆಂದೋಲನ ಮತ್ತು ಪ್ರತಿಭಟನೆ ನಿಜಕ್ಕೂ ನಡೆಯಬೇಕಾದದ್ದೇ. ಆದರೆ ಇವರುಗಳು ಪ್ರತಿಭಟನೆಯ ಹೆಸರಿನಲ್ಲಿ ನಡೆಸಿದ ರಾಜಕೀಯ, ಅವರುಗಳ ಅನಾನುಭವ ಮತ್ತು ಉದ್ವೇಗದಲ್ಲಿ ಬಹುಶಃ ಸ್ವಲ್ಪ ಹೆಚ್ಚೇ ಆಯಿತು. ಇದೇ ಕಾರಣಕ್ಕೆ ಇವರುಗಳ ಮೊನ್ನೆಯ ಪ್ರತಿಭಟನೆ ಮುಚ್ಚಳ ತೆರೆದ ಎರಡೇ ಸೆಕೆಂಡಿಗೆ ಮಾಯವಾಗುವ ಗೋಲಿಸೋಡಾದ ಗುಳ್ಳೆಗಳಂತೆ ಹೇಳಹೆಸರಿಲ್ಲದಂತೆ ಕಾಣೆಯಾಯಿತು. ಮಾತ್ರವಲ್ಲ, ನೀಟ್ ಪರೀಕ್ಷೆಯ ವಿಷಯವೊಂದನ್ನು ಬಿಟ್ಟು, ನಿರುದ್ಯೋಗ,



ಎಲ್ಜಿಬಿಟಿಕ್ಯೂ, ರೈತರ ಹೋರಾಟ, ಗ್ಲೋಬಲ್ ವಾರ್ಮಿಂಗ್, ಇವಿಎಂ, ಹಿಂದೂ ಮುಸ್ಲಿಂ, ಬಾಬ್ರಿ ಮಸೀದಿ, ಕಾಶ್ಮೀರ, ಆರ್ಯೂಬಿ ಸೇರಿದಂತೆ ಬೇರೆಲ್ಲಾ ವಿಷಯಗಳೂ ಚರ್ಚೆಯಾದವು. ಅಷ್ಟೆಲ್ಲಾ ಚರ್ಚೆ ಹುಟ್ಟುಹಾಕಿ, ಕೊನೆಗೂ ಇವರುಗಳು ಸಾಧಿಸಿದ್ದು ಪೂರ್ತಿ ಶೂನ್ಯವಷ್ಟೇ. ಆದರೆ ಮುಖವುಳಿಸಿಕೊಳ್ಳಲಿಕ್ಕೆ ಧರ್ಮೇಂದ್ರ ಪ್ರಧಾನ್ ರಾಜಿನಾಮೆಗೆ ಏಳುದಿನಗಳ ಗಡುವು ಕೊಟ್ಟು, ಜಿರಳೆಗಳು ತಮ್ಮ ಬಿಲ ಸೇರಿಕೊಂಡವು. ದೆಹಲಿಯ ಪೊಲೀಸರು ಈ ಸಂಭಾವ್ಯ ಗಲಭೆಯನ್ನು ಪಳಗಿಸಿದ ರೀತಿ ನಿಜಕ್ಕೂ ಒಂದು ಹಂತದ ಮಟ್ಟಿಗೆ ರಾಜಕೀಯದ ಮಾಸ್ಟರ್ ಕ್ಲಾಸ್ ಎನ್ನಬಹುದು. ಪ್ರತಿಭಟನೆಗೆ ಅನುಮತಿಯನ್ನೇ ಕೋರದೆ, ಲಕ್ಷಾಂತರ ಜನರನ್ನು ಸೇರಿಸಿ ಬಿಡುತ್ತೇವೆ ಎಂದು ಹೇಳಿ ಪ್ರಚಾರ ನಡೆಸಿ, ಅನುಮತಿ ಕೊಟ್ಟರೆ ಗಲಭೆ ನಡೆಸುವ, ಅನುಮತಿ ಕೊಡದಿದ್ದರೂ ಗಲಭೆ ನಡೆಸುವಂತಹ ಮಾಸ್ಟರ್ ಪ್ಲಾನ್ ಹಾಕಿಕೊಂಡು ಸಿಜೆಪಿಯ ಸದಸ್ಯರು ಕುಳಿತಿದ್ದರು. ಅವರ ಪ್ರಕಾರ, ಪ್ರಜಾಪ್ರಭುತ್ವದಲ್ಲಿ ಹೀಗೆಲ್ಲಾ ಅನುಮತಿ ಕೋರಬೇಕಾಗಿರುವುದೇ ದೊಡ್ಡ ದುರಂತ ಹಾಗೂ ತಪ್ಪಂತೆ! ಕೋರಿದರೂ, ಹತ್ತು ದಿನದ ಮುಂಚೆಯಲ್ಲ, ಕೇಳಿದ ಕೂಡಲೇ ಅನುಮತಿ ಕೊಡಬೇಕಂತೆ! ➡ಪುಟ ೬

ಹೊಸ ದಿಗಂತ
ರಾಷ್ಟ್ರ ಜಾಗೃತಿಯ ದೈನಿಕ
ಮಂಗಳವಾರ 9 ಜೂನ್ 2026, ಮಂಗಳೂರು

ನಮೋ ನೇತೃತ್ವದ ನವ ಭಾರತ




ಭಾರತದ ಮೊದಲ ಪ್ರಧಾನಿ ನೆಹರು ಮತ್ತು ಮೋದಿ ಯುಗ: ಎರಡು ಕಾಲಘಟ್ಟಗಳ ನಡುವಿನ ವ್ಯತ್ಯಾಸ ಅಜಗಜಾಂತರ

ಭಾರತದ ರಾಜಕೀಯ ಇತಿಹಾಸದಲ್ಲಿ ಜೂ.10 ಒಂದು ಸುವರ್ಣ ಅಕ್ಷರಗಳಲ್ಲಿ ಬರೆಯುವಂತಹ ದಿನ. ಪ್ರಧಾನಿ ನರೇಂದ್ರ ಮೋದಿ ಅವರು ಭಾರತದ ಪ್ರಥಮ ಪ್ರಧಾನಿ ಜವಾಹರಲಾಲ್ ನೆಹರು ಅವರ ಹೆಸರಲ್ಲಿದ್ದ ಸತತವಾಗಿ ಸುದೀರ್ಘ ಅವಧಿಗೆ ದೇಶವನ್ನು ಮುನ್ನಡೆಸಿದ ಪ್ರಜಾಸತ್ತಾತ್ಮಕ ಪ್ರಧಾನಿ ಎಂಬ ದಾಖಲೆಯನ್ನು ದಾಟಿ ಮುನ್ನಡೆಯಲಿದ್ದಾರೆ. ಈ ಮೈಲಿಗಲ್ಲು ಸ್ವಾಭಾವಿಕವಾಗಿಯೇ ಇಬ್ಬರು ನಾಯಕರ ಆಡಳಿತ ಶೈಲಿ, ಸಿದ್ಧಾಂತ, ಹೋರಾಟ ಹಾಗೂ ಸಾಮ್ಯತೆಗಳನ್ನು ಚರ್ಚಿಸುವಂತೆ ಮಾಡಿದೆ. ಆ ಕುರಿತ ವಿವರ ಇಲ್ಲಿದೆ.

ಒಂದು ದೇಶದ ಇತಿಹಾಸದ ಪುಟಗಳನ್ನು ತಿರುವಿಹಾಕುವಾಗ, ಆಯಾ ಕಾಲಘಟ್ಟದಲ್ಲಿ ಪ್ರಧಾನಿಯಾಗಿದ್ದರು ಎನ್ನುವುದಕ್ಕಿಂತ ಆ ಪ್ರಧಾನಿ ಯಾವ ರಾಜಕೀಯ, ಸಾಮಾಜಿಕ ಮತ್ತು ಜಾಗತಿಕ ವಾತಾವರಣದಲ್ಲಿ ಆಡಳಿತ ನಡೆಸಿದರು ಎನ್ನುವುದು ಅತ್ಯಂತ ಮುಖ್ಯವಾಗುತ್ತದೆ. ನಾಯಕನೊಬ್ಬನ ಸಾಧನೆ ಅಥವಾ ವೈಫಲ್ಯವನ್ನು ಅಳೆಯುವ ಮುನ್ನ, ಆ ನಾಯಕ ಭದ್ರವಾಗಿ ನಿಂತ ನೆಲವನ್ನು, ಅವನ ಸುತ್ತ ಬೀಸುತ್ತಿದ್ದ ಬಿರುಗಾಳಿಯ ತೀವ್ರತೆಯನ್ನು ಮತ್ತು ಅವನ ಹೆಗಲ ಮೇಲೆ ತೂಗುತ್ತಿದ್ದ ಸವಾಲುಗಳ ಆಕಾಶವನ್ನು ಅಳೆಯಬೇಕಾಗುತ್ತದೆ. ಜವಾಹರಲಾಲ್ ನೆಹರು ಮತ್ತು ನರೇಂದ್ರ ಮೋದಿಯವರನ್ನು ಭಾರತದ ರಾಜಕೀಯ ಇತಿಹಾಸ ಸತತ ಮೂರು ಬಾರಿ ದೇಶದ ಚುಕ್ಕಾಣಿ ಹಿಡಿಯುವ ಅಪರೂಪದ ಐತಿಹಾಸಿಕ ಗೌರವಕ್ಕೆ ಪಾತ್ರವಾಗಿಸಿದೆ. ಹೀಗಾಗಿ ಇಂದಿನ ಸಾರ್ವಜನಿಕ ಹಾಗೂ ಬೌದ್ಧಿಕ ಚರ್ಚೆಗಳಲ್ಲಿ ಇವರಿಬ್ಬರನ್ನೂ ಪಕ್ಕಪಕ್ಕದಲ್ಲಿಟ್ಟು ಹೋಲಿಸುವ, ವಿಶ್ಲೇಷಿಸುವುದು ತೀರಾ ಸಾಮಾನ್ಯ. ಆದರೆ, ಆ ಹೋಲಿಕೆ ವೈಜ್ಞಾನಿಕವಾಗಿ ಮತ್ತು ಬೌದ್ಧಿಕವಾಗಿ ಪ್ರಾಮಾಣಿಕವಾಗಿರಬೇಕಾದರೆ, ಮೊದಲು ಇಬ್ಬರೂ ಆಡಳಿತ ನಡೆಸಿದ ಕಾಲಘಟ್ಟಗಳ ನಡುವಿನ ಅಂತರವನ್ನು ಅರ್ಥಮಾಡಿಕೊಳ್ಳಬೇಕು. ಆ ಅಂತರ ಸಣ್ಣದೇನಲ್ಲ, ಅದು ನಿಜಕ್ಕೂ ಅಜಗಜಾಂತರ.

ನೆಹರು ಪ್ರಧಾನಿಯಾದದ್ದು 1947ರಲ್ಲಿ. ಒಂದು ಹೊಸ ರಾಷ್ಟ್ರ ಬ್ರಿಟಿಷ್ ದಾಸ್ಯದಿಂದ ಬಿಡುಗಡೆಯಾದ ಕಾಲ. ಅದೇ ನರೇಂದ್ರ ಮೋದಿ ಪ್ರಧಾನಿಯಾದದ್ದು 2014ರಲ್ಲಿ, ಈಗಾಗಲೇ ದಶಕಗಳ ಇತಿಹಾಸವಿರುವ ಹಳೆಯ ರಾಷ್ಟ್ರವೊಂದು ತನ್ನ ಮುಂದಿನ ಶತಮಾನದ ಜಾಗತಿಕ ನಾಯಕತ್ವವನ್ನು ಊಹಿಸಿಕೊಳ್ಳುತ್ತಿದ್ದ ಮಹತ್ವಾಕಾಂಕ್ಷೆಯ ಸಂದರ್ಭದಲ್ಲಿ. ಒಬ್ಬರು ಶೂನ್ಯದಿಂದ ಆಡಳಿತದ ಅಡಿಪಾಯ ಹಾಕಬೇಕಿತ್ತು, ಇನ್ನೊಬ್ಬರು ಈಗಾಗಲೇ ಸಿದ್ಧವಿರುವ ಬೃಹತ್ ಭವನವನ್ನು ಜಾಗತಿಕ ಆರ್ಥಿಕ, ರಾಜತಾಂತ್ರಿಕ ಉದ್ವಿಗ್ನಗಳ ನಡುವೆ ಭದ್ರಗೊಳಿಸುತ್ತ ಮುನ್ನಡೆಸಬೇಕಿದೆ. ಇದು ಕೇವಲ ಎಪ್ಪತ್ತು ವರ್ಷಗಳ ತಾಂತ್ರಿಕ ಅಂತರವಲ್ಲ, ಇದು ಎರಡು ಸಂಪೂರ್ಣ ಭಿನ್ನ ಪ್ರಪಂಚಗಳ ನಡುವಿನ ಸ್ಥಿತ್ಯಂತರ.

ಕಾಲಘಟ್ಟಗಳ ನಡುವಿನ ವ್ಯತ್ಯಾಸ






1947ರ ಭಾರತ ಮತ್ತು 2014ರ ನಂತರದ ಭಾರತ... ಇವೆರಡೂ ಕೇವಲ ಎಪ್ಪತ್ತು ವರ್ಷಗಳ ಅಂತರದ ದೇಶಗಳಲ್ಲ, ಇವು ಎರಡು ಭಿನ್ನ ಪ್ರಪಂಚಗಳು. ನೆಹರೂ ಪಾಲಿಗೆ ಎದುರಾಳಿಗಳಿಲ್ಲದ ರಾಜಕೀಯ ಮುಕ್ತ ಬಯಲಿನಲ್ಲಿ ಶೂನ್ಯದಿಂದ ಸಂಸ್ಥೆಗಳನ್ನು ಕಟ್ಟುವ ಐತಿಹಾಸಿಕ ಭಾರವಿತ್ತಾದರೆ, ಮೋದಿಯವರ ಪಾಲಿಗೆ ಪ್ರತಿ ಇಂಚಿಗೂ ಹೋರಾಡಬೇಕಾದ ಮುಳ್ಳಿನ ಕಣದಲ್ಲಿ ಜಾಗತಿಕ ಬಿಕ್ಕಟ್ಟು ಹಾಗೂ ಇಪ್ಪತ್ತನಾಲ್ಕು ಗಂಟೆಯ ಕಣ್ಗಾವಲಿನ ನಡುವೆ ದೇಶವನ್ನು ಮುನ್ನಡೆಸುವ ಅನಿವಾರ್ಯತೆಯಿದೆ. ಇದು ಯಾರು ಶ್ರೇಷ್ಠ ಎನ್ನುವ ಸರಳೀಕೃತ ಚರ್ಚೆಯಲ್ಲ, ಬದಲಿಗೆ ಭಾರತೀಯ ಪ್ರಜಾಪ್ರಭುತ್ವ ತಾನು ಬೆಳೆದು ಬಂದ ಹಾದಿಯಾಗಿದೆ.


2014 ಮೇ26


2019 ಮೇ30


2024 ಜೂನ್09

ಶೂನ್ಯದಿಂದ ಆರಂಭಿಸಿದ ಯುಗ



ನೆಹರು ಕಾಲವನ್ನು ಅರ್ಥ ಮಾಡಿಕೊಳ್ಳಬೇಕಾದರೆ, ಆಗಿನ ಭಾರತದ ಚಿತ್ರವನ್ನು ಮನಸ್ಸಿನಲ್ಲಿ ಎಳೆಯಬೇಕು. ಮುರಿದ ವಿಭಜನೆಯ ಗಾಯಗಳಿಂದ ರಕ್ತ ಸುರಿಯುತ್ತಿತ್ತು. ಲಕ್ಷಾಂತರ ನಿರಾಶ್ರಿತರು ಗಡಿಯ ಎರಡೂ ಕಡೆ ಸಾಗುತ್ತಿದ್ದರು. ಐದು ನೂರಕ್ಕೂ ಹೆಚ್ಚು ರಾಜಸಂಸ್ಥಾನಗಳನ್ನು ಒಂದು ಬಾವುಟದ ಕೆಳಗೆ ತರುವ ಸವಾಲಿತ್ತು. ಶೇ.12ರಷ್ಟು ಮಂದಿ ಮಾತ್ರ ಅಕ್ಷರಸ್ಥರಾಗಿದ್ದರು. ಕೈಗಾರಿಕೆ ಎಂದರೆ ಕೆಲವೇ ಗಿರಣಿಗಳು, ತಂತ್ರಜ್ಞಾನ ಎಂದರೆ ವಿದೇಶಿ ಆಮದು. ಇಂಥ ನೆಲದ ಮೇಲೆ ನಿಂತ ನೆಹರು ಮಾಡಬೇಕಿದ್ದದ್ದು ಸ್ಪಷ್ಟವಾಗಿತ್ತು. ಅದು ಒಂದು ರಾಷ್ಟ್ರವನ್ನು, ಒಂದು ರಾಜ್ಯವ್ಯವಸ್ಥೆಯನ್ನು, ಒಂದು ಆರ್ಥಿಕ ತಳಪಾಯವನ್ನು ಮೊದಲಿನಿಂದ ಕಟ್ಟುವುದು.

ಆ ಕಾಲದ ದೊಡ್ಡ ಅನುಕೂಲ ಎಂದರೆ ಹೊಸ ರಾಷ್ಟ್ರದ ಆ ಹುಮ್ಮಸ್ಸು. ಸ್ವಾತಂತ್ರ್ಯ ಹೋರಾಟದ ಕಿಚ್ಚು ಇನ್ನೂ ಆರಿರಲಿಲ್ಲ. ಜನರಿಗೆ ತ್ಯಾಗದ ಅರ್ಥ ಗೊತ್ತಿತ್ತು, ಕಾಯುವ ತಾಳ್ಮೆ ಇತ್ತು. ನೆಹರು ಅಣೆಕಟ್ಟುಗಳನ್ನು ಆಧುನಿಕ ಭಾರತದ ದೇವಾಲಯಗಳು ಎಂದಾಗ ಜನ ನಂಬಿದರು. ಭಾಕ್ರಾ-ನಂಗಲ್, ಭಿಲಾಯ್, ಐಐಟಿ, ಐಸಿಎಆರ್, ಬಾಹ್ಯಾಕಾಶ ಮತ್ತು ಪರಮಾಣು ಸಂಶೋಧನೆಯ ಸಂಸ್ಥೆಗಳೆಲ್ಲ ಆ ಕಾಲದ ಕನಸುಗಳ ಇಟ್ಟಿಗೆಗಳು. ಆದರೆ, ಆ ಯುಗದ ಅತಿ ದೊಡ್ಡ ಸೌಲಭ್ಯ ಬೇರೆಯೇ ಇತ್ತು. ಅದು ಕಾಲದ ನಿಧಾನಗತಿ. ಒಂದು ತಪ್ಪು ತೀರ್ಮಾನ ಮಾರನೆಯ ದಿನ ಜಗತ್ತಿನ ಮುಂದೆ ಬರುತ್ತಿರಲಿಲ್ಲ. ವಿಮರ್ಶೆ ಪತ್ರಿಕೆಯ ಸಂಪಾದಕೀಯದಲ್ಲಿ, ಸಂಸತ್ತಿನ ಚರ್ಚೆಯಲ್ಲಿ ಮಾತ್ರ ಇರುತ್ತಿತ್ತು. ವಾರಗಳ ನಂತರ ನಿರ್ಧಾರ ತೆಗೆದುಕೊಳ್ಳಲು ಸಮಯವಿತ್ತು, ತಿದ್ದಿಕೊಳ್ಳಲು ಅವಕಾಶವಿತ್ತು.

ಇದರ ಅರ್ಥ ನೆಹರು ಕಾಲ ಸವಾಲುರಹಿತವಾಗಿತ್ತು ಎಂದಲ್ಲ. 1962ರ ಚೀನಾ ಯುದ್ಧದ ಸೋಲು ಆ ಯುಗದ ಆತ್ಮವಿಶ್ವಾಸವನ್ನೇ ಅಲ್ಲಾಡಿಸಿತ್ತು. ಆಹಾರದ ಕೊರತೆ, ವಿದೇಶಿ ನೆರವಿನ ಮೇಲಿನ ಅವಲಂಬನೆ, ಭಾಷಾವಾರು ರಾಜ್ಯ ರಚನೆಯ ಬಿರುಗಾಳಿ ಸೇರಿ ಹಲವು ಸಮಸ್ಯೆಗಳಿದ್ದವು. ಆದರೆ ಆ ಸವಾಲುಗಳ ಸ್ವರೂಪವೇ ಬೇರೆ. ಅವು ಒಂದೊಂದಾಗಿ ಬರುತ್ತಿದ್ದವು. ಒಂದನ್ನು ನಿಭಾಯಿಸಿ ಮುಂದಿನದಕ್ಕೆ ಸಿದ್ಧವಾಗುವ ವ್ಯವಧಾನವಿತ್ತು. ಇಡೀ ಜಗತ್ತು ಕ್ಷಣಕ್ಷಣಕ್ಕೆ ಮೇಲೆ ಕಣ್ಣಿಟ್ಟು ಕೂತಿರಲಿಲ್ಲ.

ಎಲ್ಲವೂ ಒಟ್ಟಿಗೆ ಎರಗುವ ಯುಗ

ಇದಕ್ಕೆ ತದ್ವಿರುದ್ಧ ಮೋದಿ ಯುಗ. ಇಲ್ಲಿ ಸವಾಲುಗಳು ಸಾಲಾಗಿ ಬರುವುದಿಲ್ಲ, ಎಲ್ಲವೂ ಒಟ್ಟಿಗೆ ಮುಗಿಬೀಳುತ್ತವೆ. ಒಂದು ಬಿಕ್ಕಟ್ಟಿಗೆ ಉತ್ತರ ಹುಡುಕುತ್ತಿರುವಾಗಲೇ ಮತ್ತೆರಡು ಬಾಗಿಲು ಬಡಿಯುತ್ತವೆ. ನೆಹರುಗೆ ಒಂದು ಯುದ್ಧ ಎದುರಾದರೆ, ಮೋದಿ ಕಾಲದಲ್ಲಿ ಗಡಿಯ ಎರಡೂ ಮೂರೂ ಕಡೆ ಏಕಕಾಲಕ್ಕೆ ಒತ್ತಡ. ಪಶ್ಚಿಮದಲ್ಲಿ ಪಾಕಿಸ್ತಾನದಿಂದ 2016ರ ಉರಿ, 2019ರ ಪುಲ್ವಾಮಾ-ಬಾಲಾಕೋಟ್ ಮತ್ತು 2025ರ ಆಪರೇಷನ್ ಸಿಂದೂರ ಸಂಘರ್ಷ. ಉತ್ತರದಲ್ಲಿ ಚೀನಾದಿಂದ 2017ರ ಡೋಕ್ಲಾಮ್ ಬಿಕ್ಕಟ್ಟು, 2020ರ ಗಲ್ವಾನ್ ರಕ್ತಪಾತ. ಗಡಿಯಲ್ಲಿ ಶಾಂತಿಯೆಂಬುದು ಇಂದು ಸದಾ ಪರೀಕ್ಷೆಗೆ ಒಡ್ಡಿರುವ ಪದ. ಜತೆಗೆ ಜಾಗತಿಕ ಮಟ್ಟದಲ್ಲಿ ರಷ್ಯಾ-ಉಕ್ರೇನ್ ಮತ್ತು ಪಶ್ಚಿಮ ಏಷ್ಯಾದ ಯುದ್ಧಗಳಿಂದ ತೈಲ ಬೆಲೆ ಹೆಚ್ಚಳ, ಗೋಧಿ ರಫ್ತು, ರಸಗೊಬ್ಬರದ ಅಭಾವ. ಇದರ ನಡುವೆ ಬಂದದ್ದು ಶತಮಾನದಲ್ಲಿ ಒಮ್ಮೆ ಬರುವ ಮಹಾಮಾರಿ ಕೊರೋನಾ ವೈರಾಣು. ನೆಹರು ಯುಗಕ್ಕೆ ಇಂಥ ಒಂದು ಬಿಕ್ಕಟ್ಟಿನ ಊಹೆಯೂ ಇರಲಿಲ್ಲ. 130 ಕೋಟಿ ಜನರ ದೇಶವನ್ನು ಕೆಲವೇ ಗಂಟೆಗಳ ಸೂಚನೆಯಲ್ಲಿ ಸ್ತಬ್ಧಗೊಳಿಸಬೇಕಾದ ಪರಿಸ್ಥಿತಿ. ವಲಸೆ ಕಾರ್ಮಿಕರು ನೂರಾರು ಮೈಲಿ ನಡೆದ ಹೃದಯವಿದ್ರಾವಕ ದೃಶ್ಯಗಳು, ಆಮ್ಲಜನಕದ ಕೊರತೆ, ಸ್ಮಶಾನಗಳಲ್ಲಿ ಸಾಲು ಶವಗಳು. ಎರಡನೇ ಅಲೆಯ ಆ ಭೀಕರ ದಿನಗಳು ಆಡಳಿತದ ಮೇಲೆ ಶಾಶ್ವತ ಗಾಯವನ್ನು ಬಿಟ್ಟವು. ಆದರೆ ಇದೇ ಬಿಕ್ಕಟ್ಟಿನ ನಡುವೆ ದೇಶ ತನ್ನದೇ ಲಸಿಕೆಯನ್ನು ಅಭಿವೃದ್ಧಿಪಡಿಸಿ, 200 ಕೋಟಿಗೂ ಹೆಚ್ಚು ಡೋಸ್ ಹಾಕಿ, ಡಿಜಿಟಲ್ ತಂತ್ರಜ್ಞಾನದ ಮೂಲಕ ನಿರ್ವಹಿಸಿದ್ದು, ಆ ಕಾಲದ ಸಂಕೀರ್ಣತೆಯ ಇನ್ನೊಂದು ಮುಖ. ಒಂದೇ ಸವಾಲಿನಲ್ಲಿ ಆಳ ದುರಂತ ಮತ್ತು ದೊಡ್ಡ ಸಾಧನೆಯೆಂಬ ಎರಡೂ ಜೊತೆಯಾಗಿ ನಡೆಯುವುದು
ಈ ಯುಗದ ಲಕ್ಷಣ.


ಆರ್ಥಿಕತೆಯ ಮೇಲೆ ಬೀಳುವ ಪ್ರಹಾರಗಳೂ ಇಂದು ಬೇರೆ ಸ್ವರೂಪದ್ದು. ನೆಹರು ಕಾಲದಲ್ಲಿ ಆರ್ಥಿಕ ಬಿಕ್ಕಟ್ಟು ಎಂದರೆ ಮುಖ್ಯವಾಗಿ ಆಂತರಿಕವಾದವುಗಳಾದ ಆಹಾರ ಉತ್ಪಾದನೆ, ಕೈಗಾರಿಕೆಯ ಕೊರತೆ. ಇಂದು ಭಾರತ ಜಾಗತಿಕ ಆರ್ಥಿಕತೆಯ ಅವಿಭಾಜ್ಯ ಭಾಗ. ಅಮೆರಿಕದ ಬಡ್ಡಿದರ ಏರಿದರೆ ಮುಂಬೈ ಷೇರುಪೇಟೆ ತಲ್ಲಣವಾಗುತ್ತದೆ. ಸುಂಕ ಯುದ್ಧ, ಪೂರೈಕೆ ಸರಪಳಿಯ ಅಡಚಣೆ, ಡಾಲರ್ ಮುಂದೆ ರೂಪಾಯಿಯ ಮೌಲ್ಯ ಕುಸಿತ ಎಂಬಂತಹ ಜಾಗತಿಕ ಸಮಸ್ಯೆಗಳು ದಿಲ್ಲಿಯ ನಿಯಂತ್ರಣದಲ್ಲಿ ಇಲ್ಲದ ಶಕ್ತಿಗಳಿಂದ ಬರುತ್ತವೆ. ನೋಟು ಅಮಾನ್ಯೀಕರಣ, ಜಿಎಸ್‌ಟಿ ಜಾರಿಯಂಥ ಆಂತರಿಕ ಸವಾಲುಗಳ ಜೊತೆಗೆ ಈ ಬಾಹ್ಯ ಸಮಸ್ಯೆಗಳನ್ನೂ ಏಕಕಾಲಕ್ಕೆ ನಿಭಾಯಿಸಬೇಕಾದ ಸ್ಥಿತಿ. ಇದು ಒಂದು ಮುಚ್ಚಿದ, ಸ್ವಾವಲಂಬಿ ಆರ್ಥಿಕತೆಯ ಕಾಲವಲ್ಲ, ಎಲ್ಲ ಬಾಗಿಲೂ ತೆರೆದಿರುವ, ಎಲ್ಲ ಗಾಳಿಯೂ ಒಳಬರುವ ಕಾಲ.

ಇಪ್ಪತ್ತನಾಲ್ಕು ಗಂಟೆಯ ಕಣ್ಗಾವಲು

ಆದರೆ, ಮೋದಿ ಯುಗದ ಅತಿ ದೊಡ್ಡ ಮತ್ತು ಅತಿ ಹೊಸ ಸವಾಲು ಯುದ್ಧವೂ ಅಲ್ಲ, ಮಹಾಮಾರಿಯೂ ಅಲ್ಲ. ಅದು ನಿರಂತರ ಕಣ್ಗಾವಲು. ನೆಹರು ತೆಗೆದುಕೊಂಡ ಒಂದು ತೀರ್ಮಾನ ಜನರ ಕಣ್ಣಿಗೆ ಬೀಳಲು ದಿನಗಳು ಬೇಕಾಗುತ್ತಿದ್ದವು. ಇಂದು ಮೋದಿ ಆಡುವ ಒಂದು ವಾಕ್ಯ ಸೆಕೆಂಡುಗಳಲ್ಲಿ ಕೋಟ್ಯಂತರ ಮೊಬೈಲ್ ಪರದೆಗಳ ಮೇಲೆ ಮೂಡುತ್ತದೆ, ಅದೇ ಕ್ಷಣ ಸಾವಿರ ಕೋನಗಳಿಂದ ವಿಶ್ಲೇಷಣೆಗೆ, ವ್ಯಂಗ್ಯಚಿತ್ರಕ್ಕೆ, ಸಮರ್ಥನೆಗೆ, ಆಕ್ರೋಶಕ್ಕೆ ಒಳಗಾಗುತ್ತದೆ. ಸಾಮಾಜಿಕ ಜಾಲತಾಣಗಳು, 24X7 ಸುದ್ದಿವಾಹಿನಿಗಳು, ತ್ವರಿತ ಸಮೀಕ್ಷೆಗಳ ಈ ಯುಗದಲ್ಲಿ ಪ್ರತಿ ತೀರ್ಮಾನವೂ ತಕ್ಷಣದ ತೀರ್ಪಿಗೆ ಒಳಪಡುತ್ತದೆ. ತಿದ್ದಿಕೊಳ್ಳುವ ವ್ಯವಧಾನವಿಲ್ಲ, ಮೌನವಾಗಿರುವ ವಿಶ್ರಾಮವಿಲ್ಲ.

ಈ ಕಣ್ಗಾವಲು ಬರೀ ರಾಜಕೀಯ ಒತ್ತಡವಲ್ಲ, ಅದು ಆಡಳಿತದ ಶೈಲಿಯನ್ನೇ ಬದಲಿಸುತ್ತದೆ. ನೆಹರು ತಮ್ಮ ಧೋರಣೆಯನ್ನು ದೀರ್ಘ ಪತ್ರಗಳಲ್ಲಿ, ಸಂಸತ್ತಿನ ಭಾಷಣಗಳಲ್ಲಿ ನಿಧಾನವಾಗಿ ರೂಪಿಸಬಹುದಿತ್ತು. ಮೋದಿ ಯುಗದ ನಾಯಕ ಒಂದೇ ದಿನದಲ್ಲಿ ಜನಸಾಮಾನ್ಯನಿಗೆ, ಷೇರು ಮಾರುಕಟ್ಟೆಗೆ, ವಿದೇಶಿ ಬಂಡವಾಳಗಾರನಿಗೆ, ಗಡಿಯ ಸೈನಿಕನಿಗೆ ಮತ್ತು ಜಾಗತಿಕ ರಾಜತಂತ್ರ ಸೇರಿ ಎಲ್ಲರಿಗೂ ಏಕಕಾಲಕ್ಕೆ ಸಂದೇಶ ನೀಡಬೇಕು. ಅಭಿಪ್ರಾಯವೆಂಬುದು ಇಂದು ಗಂಟೆಗೊಮ್ಮೆ ಬದಲಾಗುವ ಹವಾಮಾನ. ಇಂಥ ಪರಿಸ್ಥಿತಿಯಲ್ಲಿ ಆಡಳಿತ ನಡೆಸುವುದು, ಆ ಆಡಳಿತದ ನಿರೂಪಣೆಯನ್ನು ನಿಯಂತ್ರಿಸುವುದಾಗಿದೆ. ಇದು ನೆಹರು ಕಾಲದ ಯಾವ ಪ್ರಧಾನಿಯೂ ಊಹಿಸಲಾಗದ ಸವಾಲು.

ಜತೆಗೆ ಒಕ್ಕೂಟ ವ್ಯವಸ್ಥೆಯ ಸ್ವರೂಪವೂ ಬದಲಾಗಿದೆ. ನೆಹರು ಕಾಲದಲ್ಲಿ ಬಹುತೇಕ ರಾಜ್ಯಗಳಲ್ಲಿ ಒಂದೇ ಪಕ್ಷದ ಆಡಳಿತವಿತ್ತು, ಸಮನ್ವಯ ಸುಲಭವಿತ್ತು. ಇಂದು ವಿವಿಧ ರಾಜ್ಯಗಳಲ್ಲಿ ವಿರೋಧ ಪಕ್ಷಗಳ ಸರ್ಕಾರಗಳು, ಪ್ರಾದೇಶಿಕ ಅಸ್ಮಿತೆಯ ಒತ್ತಾಯಗಳು, ತೆರಿಗೆ ಹಂಚಿಕೆಯ ತಿಕ್ಕಾಟಗಳು ಸೇರಿದಂತೆ ಒಕ್ಕೂಟ ತತ್ತ್ವ ಸದಾ ಪರೀಕ್ಷೆಗೆ ಒಳಪಡುತ್ತಿದೆ. ಪ್ರತಿ ರಾಷ್ಟ್ರೀಯ ತೀರ್ಮಾನವೂ ಮೂವತ್ತಕ್ಕೂ ಹೆಚ್ಚು ಭಿನ್ನ ರಾಜಕೀಯ ಧ್ವನಿಗಳ ಜಾಲವನ್ನು ದಾಟಿ ಬರಬೇಕು. ಇದು ಪ್ರಜಾಪ್ರಭುತ್ವದ ಆಳ ಬೆಳೆದದ್ದರ ಸಂಕೇತ, ಆದರೆ ಆಡಳಿತಗಾರನಿಗೆ ಇದು ನಿತ್ಯದ ಪರೀಕ್ಷೆ.



ಕಾಲವನ್ನು ಮರೆತ ಹೋಲಿಕೆ ಅಸ್ಪಷ್ಟ

ಈ ಎಲ್ಲ ಕಾರಣಗಳಿಂದ, ನೆಹರು ಮತ್ತು ಮೋದಿಯವರ ಸಾಧನೆ-ವೈಫಲ್ಯಗಳನ್ನು ಒಂದೇ ತಕ್ಕಡಿಯಲ್ಲಿ ತೂಗುವುದು ಬೌದ್ಧಿಕವಾಗಿ ಅಪ್ರಾಮಾಣಿಕ. ಇಬ್ಬರ ಜವಾಬ್ದಾರಿಗಳೇ ಬೇರೆ. ನೆಹರುಗೆ ಕಟ್ಟುವ ಭಾರ, ಮೋದಿಗೆ ಉಳಿಸಿಕೊಂಡು ಬೆಳೆಸುವ ಭಾರ. ಶೂನ್ಯದಿಂದ ಒಂದು ಸಂಸ್ಥೆ ಕಟ್ಟುವುದಕ್ಕೂ, ಈಗಾಗಲೇ ಇರುವ ಬೃಹತ್ ಸಂಸ್ಥೆಯನ್ನು ಬಿರುಗಾಳಿಯ ನಡುವೆ ಮುನ್ನಡೆಸುವುದಕ್ಕೂ ಬೇಕಾದ ಕೌಶಲ ಬೇರೆ. ನೆಹರು ಕಾಲದ ಪ್ರಧಾನಿಗೆ ತಾಳ್ಮೆ, ದೂರದೃಷ್ಟಿ ಮತ್ತು ಸ್ಥಿರತೆ ಮುಖ್ಯವಾಗಿತ್ತು. ಮೋದಿ ಕಾಲದ ಪ್ರಧಾನಿಗೆ ವೇಗ, ಏಕಕಾಲಿಕ ನಿರ್ವಹಣೆ ಮತ್ತು ಸಾರ್ವಜನಿಕ ನಿರೂಪಣೆಯ ಮೇಲಿನ ಹಿಡಿತ ಅನಿವಾರ್ಯ.

ನ್ಯಾಯಯುತವಾಗಿ ಹೇಳಬೇಕೆಂದರೆ, ಆಯಾ ಕಾಲಕ್ಕೆ ಆಯಾ ಸವಾಲುಗಳ ತೂಕವಿದೆ. ನೆಹರು ತಪ್ಪು ಮಾಡಿದಾಗ ಅದನ್ನು ಸರಿಪಡಿಸಲು ಕಾಲವಿತ್ತು, ಜನರ ತಾಳ್ಮೆಯಿತ್ತು, ಜಾಗತಿಕ ಒತ್ತಡ ಕಡಿಮೆಯಿತ್ತು. ಮೋದಿ ಒಂದು ತಪ್ಪು ಮಾಡಿದರೆ ಮರುಕ್ಷಣವೇ ಜಗತ್ತಿನ ಮುಂದೆ ತೆರೆದುಕೊಳ್ಳುತ್ತದೆ, ಮಾರುಕಟ್ಟೆ ಪ್ರತಿಕ್ರಿಯಿಸುತ್ತದೆ, ಗಡಿಯ ಆಚೆ ಶತ್ರು ಗಮನಿಸುತ್ತಾನೆ. ಒಂದು ಕಾಲ ಕಡಿಮೆ ಸಾಧನಗಳ, ಆದರೆ ಹೆಚ್ಚು ವ್ಯವಧಾನದ ಯುಗ, ಇನ್ನೊಂದು ಹೆಚ್ಚು ಸಾಧನಗಳ, ಆದರೆ, ಶೂನ್ಯ ವ್ಯವಧಾನದ ಯುಗ. ಒಂದು ಕಡೆ ಇಡೀ ರಾಷ್ಟ್ರವನ್ನು ಕಟ್ಟುವ ಭಾರ, ಇನ್ನೊಂದು ಕಡೆ ಯುದ್ಧ, ಮಹಾಮಾರಿ, ಆರ್ಥಿಕ ಪ್ರಹಾರ, ನಿರಂತರ ಕಣ್ಗಾವಲು. ಎಲ್ಲವೂ ಒಟ್ಟಿಗೆ ಬಡಿಯುವ ಭಾರ.

ಆದ್ದರಿಂದ ಯಾರು ಶ್ರೇಷ್ಠ ಎಂಬ ಪ್ರಶ್ನೆ ತಪ್ಪಾದದ್ದು. ಆಯಾ ಕಾಲ ಆ ನಾಯಕನ ಮುಂದೆ ಯಾವ ಪರೀಕ್ಷೆಯನ್ನು ಇಟ್ಟಿತು, ಮತ್ತು ಆ ಪರೀಕ್ಷೆಯನ್ನು ಆ ನಾಯಕ ಹೇಗೆ ಎದುರಿಸಿದ ಎಂಬುದು ಮುಖ್ಯ. ನೆಹರು ತಮ್ಮ ಕಾಲದ ಪರೀಕ್ಷೆಯನ್ನು ತಮ್ಮದೇ ಮಿತಿ-ಶಕ್ತಿಗಳೊಂದಿಗೆ ಎದುರಿಸಿದರು. ಮೋದಿ ತಮ್ಮ ಕಾಲದಲ್ಲಿ ಹೆಚ್ಚು ಕ್ರೂರವಾದ, ಹೆಚ್ಚು ವೇಗದ, ಹೆಚ್ಚು ನಿಷ್ಠುರವಾದ ಪರೀಕ್ಷೆಯನ್ನು ಎದುರಿಸುತ್ತಿದ್ದಾರೆ. ಇತಿಹಾಸ ಇಬ್ಬರನ್ನೂ ತೀರ್ಮಾನಿಸುತ್ತದೆ. ಆದರೆ ಆ ತೀರ್ಮಾನ ನ್ಯಾಯಯುತವಾಗಬೇಕಾದರೆ, ಮೊದಲು ಎರಡು ಕಾಲಗಳ ನಡುವಿನ ಆ ಅಜಗಜಾಂತರವನ್ನು ಮನಸ್ಸಿನಲ್ಲಿಟ್ಟುಕೊಳ್ಳಬೇಕು. ಕಾಲವನ್ನು ಮರೆತ ಹೋಲಿಕೆ, ಎಷ್ಟೇ ಚಾಣಾಕ್ಷವಾದರೂ ಅದು ಸುಳ್ಳಿನ ಸೋದರಿ.

ಎರಡು ಯುಗಗಳ ಹಾದಿ ಮತ್ತು ಸ್ವರೂಪ

ಆಯಾಮ	ನೆಹರು ಯುಗ (1947 - 1964)	ಮೋದಿ ಯುಗ(2014ರಿಂದ ಪ್ರಸ್ತುತ)
ಆರಂಭದ ನೆಲ	**ತೆರೆದ ಬಯಲು(ಗ್ರೀನ್‌ಫೀಲ್ಡ್):** ಬ್ರಿಟಿಷರು ಬಿಟ್ಟುಹೋದ ಖಾಲಿ ಬಿಳಿ ಹಾಳೆಯ ಮೇಲೆ ಶೂನ್ಯದಿಂದ ರಾಷ್ಟ್ರ ನಿರ್ಮಾಣ ಮಾಡುವ ಭಾರ.	**ಕಿಕ್ಕಿರಿದ ಕಣ(ಬ್ರೌನ್ ಫೀಲ್ಡ್):** ಆರು ದಶಕಗಳ ಕಾಲ ಆಳವಾಗಿ ಬೇರೂರಿದ್ದ ರಾಜಕೀಯ ಮತ್ತು ಸಾಂಸ್ಥಿಕ ವ್ಯವಸ್ಥೆಯನ್ನು ಮರುರೂಪಿಸುವ ಸವಾಲು.
ರಾಜಕೀಯ ಪ್ರತಿಸ್ಪರ್ಧೆ	**ಏಕಪಕ್ಷ ಪ್ರಾಬಲ್ಯ:** ಕಾಂಗ್ರೆಸ್‌ಗೆ ಸರಿಸಮನಾದ ಎದುರಾಳಿಗಳಿರಲಿಲ್ಲ. ಸ್ವಾತಂತ್ರ್ಯದ ಪ್ರಭಾವಳಿಯೇ ಶ್ರೀರಕ್ಷೆಯಾಗಿತ್ತು.	**ತೀವ್ರ ಜಿದ್ದಾಜಿದ್ದಿ:** ಪ್ರಬಲ ಪ್ರಾದೇಶಿಕ ಶಕ್ತಿಗಳು, ಸಂಘಟಿತ ಪ್ರತಿಪಕ್ಷಗಳು ಮತ್ತು ಪ್ರತಿ ಹಂತದಲ್ಲೂ ಕಠಿಣ ರಾಜಕೀಯ ಹೋರಾಟ.
ಅಧಿಕಾರದ ಸ್ವರೂಪ	**ವಾರಸುದಾರಿಕೆ:** ರಾಷ್ಟ್ರೀಯ ಚಳವಳಿ ಮತ್ತು ಮಹಾತ್ಮ ಗಾಂಧಿಯವರ ಪರಂಪರೆಯಿಂದ ಲಭಿಸಿದ ಸ್ವಾಭಾವಿಕ ನಾಯಕತ್ವ.	**ಸ್ವಯಂ ಗಳಿಸಿದ್ದು:** ತಳಮಟ್ಟದ ಸಂಘಟನೆಯಿಂದ ಮೆಟ್ಟಿಲೇರಿ, ತೀವ್ರ ಟೀಕೆ-ಪರೀಕ್ಷೆಗಳನ್ನು ದಾಟಿ ಗೆದ್ದುಕೊಂಡ ಅಧಿಕಾರ.
ಮಾಧ್ಯಮ ಮತ್ತು ಬೌದ್ಧಿಕ ವಲಯ	**ಅನುಕೂಲಕರ ವಾತಾವರಣ:** ರೂಪುಗೊಳ್ಳುತ್ತಿದ್ದ ಮಾಧ್ಯಮಗಳು, ಹೆಚ್ಚಾಗಿ ನೆಹರು ಅವರ ಉದಾರವಾದಿ ಧೋರಣೆಗೆ ಪೂರಕವಾಗಿದ್ದ ಬೌದ್ಧಿಕ ವರ್ಗ.	**ತೀಕ್ಷ್ಣ ಕಣ್ಗಾವಲು:** 24X7 ಸುದ್ದಿವಾಹಿನಿಗಳು, ವಿಭಜಿತ ಬೌದ್ಧಿಕ ವಲಯ ಮತ್ತು ತಕ್ಷಣದ ತೀರ್ಪು ನೀಡುವ ಸಾರ್ವಜನಿಕ ವೇದಿಕೆಗಳು.
ಆರ್ಥಿಕ ಮತ್ತು ತಾಂತ್ರಿಕ ಕ್ಷೇತ್ರ	**ಸಾಂಪ್ರದಾಯಿಕ ಬಿತ್ತನೆ:** ಅಣೆಕಟ್ಟು, ಭಾರೀ ಕೈಗಾರಿಕೆಗಳು, ಕೃಷಿ ಸಂಶೋಧನೆ ಮತ್ತು ಸಾರ್ವಜನಿಕ ವಲಯದ ಉದ್ಯಮಗಳ ಸ್ಥಾಪನೆ.	**ಡಿಜಿಟಲ್ ಕ್ರಾಂತಿ:** ಯುಪಿಐ, ನವೋದ್ಯಮ ಆರ್ಥಿಕತೆ, ಹಸಿರು ಇಂಧನ, ಸೆಮಿಕಂಡಕ್ಟರ್ ಮತ್ತು ಜಾಗತಿಕ ಸಂಪರ್ಕ ಕೊಂಡಿಗಳಲ್ಲಿ ಭಾರತದ ಪಾತ್ರ.
ಪ್ರಮುಖ ಸವಾಲು	ಸಂಸ್ಥೆಗಳನ್ನು ಶೂನ್ಯದಿಂದ ಕಟ್ಟುವುದು ಮತ್ತು ವೈವಿಧ್ಯಮಯ ದೇಶವನ್ನು ಒಗ್ಗೂಡಿಸುವುದು.	ಜಾಗತಿಕ ಬಿಕ್ಕಟ್ಟುಗಳ ನಡುವೆ ದೇಶದ ಆರ್ಥಿಕತೆಯನ್ನು ಎತ್ತಿಹಿಡಿಯುವುದು ಮತ್ತು ಸ್ಥಾಪಿತ ವ್ಯವಸ್ಥೆಯ ಜಡತ್ವವನ್ನು ನಿವಾರಿಸುವುದು.

ಕಿರುಸುದ್ದಿ

ಜೂ.10ರಂದು ಉಚಿತ ಶ್ರವಣ ತಪಾಸಣಾ ಶಿಬಿರ

• ಮಂಗಳೂರು: ರೋಟರಿ ಕ್ಲಬ್ ಮಂಗಳೂರು ಸೆಂಟ್ರಲ್, ವಿಶ್ವಕರ್ಮ ಸಹಕಾರ ಬ್ಯಾಂಕ್ ಲಿಮಿಟೆಡ್, ಟೀಮ್ ಈಶ್ವರ್ ಮಲ್ಪೆ ಮತ್ತು ಲಕ್ಷ್ಮೀ ಆಯುರ್ವೇದಿಕ್ ಕ್ಲಿನಿಕ್ ಸಹಯೋಗದೊಂದಿಗೆ ಉಚಿತ ಶ್ರವಣ ತಪಾಸಣೆ ಮತ್ತು ಶ್ರವಣಯಂತ್ರಕ್ಕೆ ಸಹಾಯಧನ ವಿತರಣೆ ಕಾರ್ಯಕ್ರಮ ಜೂ.10ರಂದು ಬೆಳಗ್ಗೆ 10ರಿಂದ 5ರವರೆಗೆ ನಗರದ ರಥಬೀದಿ ಫ್ಲವರ್ ಮಾರ್ಕೆಟ್ ರಸ್ತೆ ಲಕ್ಷ್ಮೀ ಕ್ಲಿನಿಕ್‌ನಲ್ಲಿ ನಡೆಯಲಿದೆ. ಈ ಶಿಬಿರದಲ್ಲಿ ಡಾ. ಜ್ಯೋತಿ ಕೆ. ಅವರ ನೇತೃತ್ವದಲ್ಲಿ ಟೀಮ್ ಈಶ್ವರ್ ಮಲ್ಪೆ ತಂಡ ಶ್ರವಣದ ಸಮಸ್ಯೆಯಿಂದ (ಕೇಳಿಸಿಕೊಳ್ಳುವ ಸಮಸ್ಯೆ) ಬಳಲುತ್ತಿರುವ ರೋಗಿಗಳಿಗೆ ಸಹಾಯ ಮಾಡುವ ಉದ್ದೇಶದಿಂದ ಉಚಿತ ಶಿಬಿರವನ್ನು ಆಯೋಜಿಸಿದೆ. ಟೀಮ್ ಈಶ್ವರ್ ಮಲ್ಪೆಯವರು ಶ್ರವಣದ ಯಂತ್ರದ ವೆಚ್ಚದ ಶೇ. 40 ಮೊತ್ತವನ್ನು ಭರಿಸುತ್ತಿದ್ದಾರೆ. ಶಿಬಿರದಲ್ಲಿ ಭಾಗವಹಿಸಲು ನೋಂದಣಿ ಕಡ್ಡಾಯವಾಗಿದೆ. ಕರೆಮಾಡಿ ನೋಂದಾಯಿಸಿಕೊಳ್ಳಬಹುದು. ಹಿರಿಯರಿಗೆ ಮೊದಲ ಆದ್ಯತೆ. ಹೆಚ್ಚಿನ ಮಾಹಿತಿಗಾಗಿ ದೂ. 8951804399 ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಕೆಇಸಿಟಿ ಪರೀಕ್ಷೆಯಲ್ಲಿ ಕಲ್ಲಡ್ಕ ಶ್ರೀರಾಮ ಕಾಲೇಜಿನ ವಿದ್ಯಾರ್ಥಿಗಳ ಸಾಧನೆ


• ಬಂಟ್ವಾಳ: ಕೆಇಸಿಟಿ ಪರೀಕ್ಷೆಯಲ್ಲಿ ಕಲ್ಲಡ್ಕ ಶ್ರೀರಾಮ ಪದವಿ ಪೂರ್ವ ವಿದ್ಯಾಲಯದ ವಿದ್ಯಾರ್ಥಿಗಳಾದ ವಾಸವಿ ಕೆ. ಸಿ. ಮತ್ತು ಭೂಷಣ್ ಉತ್ತಮ ರ್‍ಯಾಂಕ್ ಗಳಿಸಿದ್ದಾರೆ. ಕಲ್ಲಡ್ಕದ ಚಂದ್ರಶೇಖರ ಮತ್ತು ಸೌಮ್ಯ ದಂಪತಿಯ ಪುತ್ರಿ ವಾಸವಿ ಕೆ.ಸಿ.ಯವರು ಇಂಜಿನಿಯರಿಂಗ್‌ನಲ್ಲಿ 4285 ನೇ ರ್‍ಯಾಂಕ್ ಹಾಗೂ ಇತರ ವಿಭಾಗಗಳಾದ ಬಿಪಿಟಿಯಲ್ಲಿ 265, ನರ್ಸಿಂಗ್‌ನಲ್ಲಿ 721, ಡಿ.ಫಾರ್ಮ 265, ಬಿ.ಎಸ್. ಇ ಎಗ್ರಿಕಲ್ಚರ್ 1060, ಎಎಚ್‌ಎಸ್ 265, ನ್ಯಾಚೋರಪತಿ ಮತ್ತು ಯೋಗದಲ್ಲಿ 322ನೇ ರ್‍ಯಾಂಕ್ ಗಳಿಸಿದ್ದಾರೆ. ಕಲ್ಲಡ್ಕದ ಮೋಹನ್ ಮತ್ತು ಇಂದಿರಾರವರ ಪುತ್ರ ಭೂಷಣ್ ಇಂಜಿನಿಯರಿಂಗ್ ನಲ್ಲಿ 11864 ಹಾಗೂ ಇತರ ವಿಭಾಗಗಳಾದ ಬಿಪಿಟಿಯಲ್ಲಿ 414, ಡಿ.ಫಾರ್ಮ್ 414, ಬಿಪಿಒ 549, ಬಿಎಸ್‌ಸಿ ಎಚ್‌ಎಸ್ 414 , ನ್ಯಾಚರೋಪತಿ ಮತ್ತು ಯೋಗದಲ್ಲಿ 487 ರ್‍ಯಾಂಕ್ ಗಳಿಸಿದ್ದಾರೆ.





ಮಂಗಳೂರು ವಕೀಲರ ಸಂಘದ ನೂತನ ಅಧ್ಯಕ್ಷರಾಗಿ ಜಗದೀಶ್ ಶೇಣವ ಆಯ್ಕೆ

• ಮಂಗಳೂರು: ಮಂಗಳೂರು ವಕೀಲರ ಸಂಘದ ಅಧ್ಯಕ್ಷರಾಗಿ ಹಿರಿಯ ನ್ಯಾಯವಾದಿ ಜಗದೀಶ್ ಕೆ.ಶೇಣವ ಅವರು ಆಯ್ಕೆಯಾಗಿದ್ದಾರೆ. ಜಗದೀಶ ಶೇಣವ ಅವರು ಈ ಹಿಂದೆ ಸರ್ವ ಕಾಲೇಜು ಸಂಘದ ಅಧ್ಯಕ್ಷರಾಗಿ, ಬಳಿಕ ವಿಹಿಂಪ ದ.ಕ. ಜಿಲ್ಲಾಧ್ಯಕ್ಷರಾಗಿ, ಬಿಜೆಪಿ ಜಿಲ್ಲಾ ವಕ್ತಾರರಾಗಿ ಸೇವೆ ಸಲ್ಲಿಸಿದ್ದಾರೆ. ಹಲವು ಸಂಘಟನೆಗಳಲ್ಲಿ ಸಕ್ರಿಯರಾಗಿದ್ದು, ಜನಪರ ಹೋರಾಟಗಳಲ್ಲಿಯೂ ತೊಡಗಿಸಿಕೊಂಡಿದ್ದಾರೆ. ವಕೀಲರ ಸಂಘದ ನೂತನ ಉಪಾಧ್ಯಕ್ಷರಾಗಿ ಪ್ರವೀಣ್ ಕುಮಾರ್ ಅದ್ಯಪಾಡಿ, ಕಾರ್ಯದರ್ಶಿಯಾಗಿ ಗೌತಮ್ ಬಿ. ಪಿ., ಜತೆ ಕಾರ್ಯದರ್ಶಿಯಾಗಿ ರವಿ ಕುಮಾರ್, ಖಜಾಂಚಿಯಾಗಿ ರೇಖಾ, ಕಾರ್ಯಕಾರಿ ಸಮಿತಿಯ ಸದಸ್ಯರಾಗಿ ಅಕ್ಷತಾ, ಮಹೇಶ್ ಎಂ.ಆರ್, ಅಂಬಿಗ ವಸಂತ್ ಆಯ್ಕೆಯಾಗಿದ್ದಾರೆ. ವಕೀಲರಾದ ಆಶಾದೀಪ್ ಪೈ ಎಚ್., ಸುಜಿತ್ ಕುಮಾರ್, ಸುಂದರ ಗೌಡ ಬಿ., ರಾಧಾಕೃಷ್ಣ ಶೆಟ್ಟಿ ತಲೆಕಾಣ, ರಾಘವೇಂದ್ರ ರಾವ್, ಶಕುಂತಲಾ ಎಸ್. ಶೆಟ್ಟಿ, ಜೀಟ ಪ್ರಿಯ ಮೊರಸ್, ಪ್ರಣೀತ, ವಸುಧಾಮಣಿ ಎನ್. ಎಸ್. ಅವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ.



ಮಹಿಳೆ ನಾಪತ್ತೆ

• ಉಡುಪಿ: ಮೂಲತಃ ರಾಯಚೂರು ಜಿಲ್ಲೆ ಸಿಂಧನೂರು ತಾಲೂಕು ತುರುವಿನಾಳ ಮೂಲದವರಾದ ನಾಗಮ್ಮ (30) ಎಂಬ ಮಹಿಳೆಯು ಕೂಲಿ ಕೆಲಸಕ್ಕೆಂದು ಎರಡು ತಿಂಗಳ ಹಿಂದೆ ಕುಂದಾಪುರಕ್ಕೆ ಬಂದಿದ್ದು, ಕೆ.ಎಸ್. ಆರ್.ಟಿ.ಸಿ ಬಳಿ ಇರುವ ಟೆಂಟ್‌ನಲ್ಲಿ ವಾಸವಿದ್ದ ಇವರು ಮೇ 30 ರಿಂದ ನಾಪತ್ತೆಯಾಗಿದ್ದಾರೆ. ಇವರ ಬಗ್ಗೆ ಮಾಹಿತಿ ದೊರೆತಲ್ಲಿ ಕುಂದಾಪುರ ಪೊಲೀಸ್ ಠಾಣೆ ದೂ. ಸಂಖ್ಯೆ: 08254-230338, ಕುಂದಾಪುರ ವಿಭಾಗ ಡಿ.ವೈ.ಎಸ್.ಪಿ ಮೊ.ನಂ: 9480805422, ಕುಂದಾಪುರ ಠಾಣೆಯ ಪಿ.ಐ ಮೊ.ನಂ: 9480805455, ಪಿ.ಎಸ್.ಐ ಮೊ.ನಂ: 8277988957 ಮತ್ತು 8277988959 ಅನ್ನು ಸಂಪರ್ಕಿಸಬಹುದಾಗಿದೆ ಎಂದು ಕುಂದಾಪುರ ಪೊಲೀಸ್ ಠಾಣಾಧಿಕಾರಿಗಳ ಕಚೇರಿ ಪ್ರಕಟಣೆ ತಿಳಿಸಿದೆ.

ಆರೋಗ್ಯ ಇಲಾಖೆ ಜಿಲ್ಲಾ ಮಟ್ಟದ ಪ್ರಗತಿ ಪರಿಶೀಲನೆ | ಸಚಿವ ಯು.ಟಿ. ಖಾದರ್ ಭರವಸೆ

ಸ್ಟಾಫ್ ನರ್ಸ್ ಕೊರತೆಗೆ ಶೀಘ್ರ ಪರಿಹಾರ

• ಮಂಗಳೂರು: ಮಂಗಳೂರಿನಲ್ಲಿರುವ ವೆನ್ಲಾಕ್ ಹಾಗೂ ಲೇಡಿಗೋಷನ್ ಸರ್ಕಾರಿ ಆಸ್ಪತ್ರೆಯಲ್ಲಿನ ಸ್ಟಾಫ್ ನರ್ಸ್‌ಗಳ ಕೊರತೆಯನ್ನು ಶೀಘ್ರ ಬಗೆಹರಿಸಲಾಗುವುದು ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಖಾತೆ ಸಚಿವ ಯು.ಟಿ.ಖಾದರ್ ತಿಳಿಸಿದ್ದಾರೆ.

ದಕ್ಷಿಣ ಕನ್ನಡ ಜಿಲ್ಲಾಧಿಕಾರಿ ಕಚೇರಿಯಲ್ಲಿ ಸೋಮವಾರ ಆರೋಗ್ಯ ಇಲಾಖೆಯ ಜಿಲ್ಲಾ ಮಟ್ಟದ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಾತನಾಡಿದ ಅವರು, ಹೆರಿಗೆ ಆಸ್ಪತ್ರೆಯಾದ ಲೇಡಿಗೋಷನ್‌ಗೆ 22 ಹಾಗೂ ವೆನ್ಲಾಕ್‌ಗೆ 10 ಸ್ಟಾಫ್ ನರ್ಸ್‌ಗಳ ತುರ್ತು ಅಗತ್ಯವಿದೆ. ತಲಾ 17,000 ರೂ. ವೇತನದೊಂದಿಗೆ ತಕ್ಷಣ ನೇಮಕಾತಿ ಆದೇಶ ನೀಡಲಾಗುವುದು. ಅರ್ಹರು ಅರ್ಜಿ ಸಲ್ಲಿಸಬಹುದು ಎಂದರು.

ಆರೋಗ್ಯ ಮಿತ್ರ ಬೋರ್ಡ್ ಕಡ್ಡಾಯ

ಎಲ್ಲಾ ಸರ್ಕಾರಿ ಆಸ್ಪತ್ರೆಗಳಲ್ಲಿ ಆರೋಗ್ಯ ಮಿತ್ರ ಬಗ್ಗೆ ಬೋರ್ಡ್ ಕಡ್ಡಾಯವಾಗಿ ಅಳವಡಿಸಬೇಕು. ಆಯುಷ್ಮಾನ್ ಕರ್ನಾಟಕದಡಿ ಸಂಯೋಜನೆಗೊಂಡಿರುವ ಆಸ್ಪತ್ರೆಗಳಲ್ಲಿ ಬಿಪಿಎಲ್ ಕಾರ್ಡ್‌ದಾರರಿಗೆ ಉಚಿತ ಚಿಕಿತ್ಸೆ ಒದಗಿಸುವುದನ್ನು ಆರೋಗ್ಯ ಮಿತ್ರರು ಖಾತರಿಪಡಿಸಬೇಕು. ಯಾವುದೇ ರೀತಿಯ ಸಮಸ್ಯೆಗಳಿಂದಾಗಿ ಜನರ ಆರೋಗ್ಯಕ್ಕೆ ಸಂಬಂಧಿಸಿದ ಚಿಕಿತ್ಸೆಗೆ ತೊಂದರೆ ಆಗದಂತೆ ಸರ್ಕಾರಿ ಆಸ್ಪತ್ರೆ, ಪಿಎಚ್‌ಸಿಗಳಲ್ಲಿ ವೈದ್ಯರು ಕ್ರಮ ವಹಿಸಬೇಕು. ಸಮಸ್ಯೆಗಳನ್ನು ಹಂತ ಹಂತವಾಗಿ ಬಗೆಹರಿಸಲು ಪ್ರಯತ್ನಿಸಲಾಗುವುದು. ಮುಂದಿನ ದಿನಗಳಲ್ಲಿ ತಾಲೂಕು ಮಟ್ಟದಲ್ಲಿಯೂ ಆರೋಗ್ಯ ಇಲಾಖೆಯ ಪ್ರಗತಿ ಪರಿಶೀಲನೆ ನಡೆಸಲಾಗುವುದು ಅವರು ತಿಳಿಸಿದರು.



ಕೊರತೆ ನೀಗಿಸಲು ವೈದ್ಯರ ಮನವಿ

ದಕ್ಷಿಣ ಕನ್ನಡ ಜಿಲ್ಲೆಯ ವಿವಿಧ ತಾಲೂಕು ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರ (ಪಿಎಚ್‌ಸಿ)ಗಳಲ್ಲಿ ಫಾರ್ಮಾಸಿಸ್ಟ್‌ಗಳು ಹಾಗೂ ಲ್ಯಾಬ್ ಟೆಕ್ನಿಶಿಯನ್‌ಗಳ ಕೊರತೆಯಿಂದಾಗಿ ರೋಗಿಗಳ ಜತೆ ಕರ್ತವ್ಯ ನಿರ್ವಹಿಸುವ ವೈದ್ಯರೂ ತೊಂದರೆ ಅನುಭವಿಸುವಂತಾಗಿದೆ ಎಂಬ ಮಾತುಗಳು ತಾಲೂಕು ವೈದ್ಯಾಧಿಕಾರಿಗಳು ಹಾಗೂ ಪಿಎಚ್‌ಸಿಗಳ ವೈದ್ಯರಿಂದ ವ್ಯಕ್ತವಾಯಿತು.

ಸುಳ್ಯ, ಬೆಳ್ಳಾರೆ, ಬೆಳ್ತಂಗಡಿಯ ಪಡಂಗಡಿ ಮೊದಲಾದ ಪಿಎಚ್‌ಸಿಗಳಲ್ಲಿ ಸ್ಟಾಫ್ ನರ್ಸ್‌ಗಳೇ ಇಲ್ಲ ಎಂದು ಅಲ್ಲಿನ ವೈದ್ಯರು ಸಮಸ್ಯೆ ಹಂಚಿಕೊಂಡರೆ, ಫಾರ್ಮಾಸಿಸ್ಟ್ ಹಾಗೂ ಲ್ಯಾಬ್ ಟೆಕ್ನಿಶಿಯನ್‌ಗಳ ಕೊರತೆಯಿಂದಾಗಿ ವೈದ್ಯರಿಗೆ ಕಾರ್ಯ ನಿರ್ವಹಿಸಲು ಕಷ್ಟವಾಗುತ್ತಿದೆ ಎಂದು ಅನೇಕ ಮಂದಿ ವೈದ್ಯರು ಸಚಿವರ ಗಮನಕ್ಕೆ ತಂದರು.

ಸಭೆಯಲ್ಲಿ ಜಿಲ್ಲಾಧಿಕಾರಿ ದರ್ಶನ್ ಎಚ್.ವಿ., ಜಿಪಂ ಸಿಇಒ ನರ್ವಾಡೆ ವಿನಾಯಕ ಕಾರ್ಬಾರಿ, ಅಪರ ಜಿಲ್ಲಾಧಿಕಾರಿ ರಾಜು ಕೆ. ಉಪಸ್ಥಿತರಿದ್ದರು.

ಫಾರ್ಮಾಸಿಸ್ಟ್‌ಗಳ ಕೊರತೆ

ದ.ಕ. ಜಿಲ್ಲೆಯಲ್ಲಿ 87 ಫಾರ್ಮಾಸಿಸ್ಟ್‌ಗಳ ಮಂಜೂರಾತಿಯಾಗಿದ್ದು, 31 ಮಂದಿ ಮಾತ್ರವೇ ಕರ್ತವ್ಯ ನಿರ್ವಹಿಸುತ್ತಿದ್ದಾರೆ. 26 ಮಂದಿಯನ್ನು ಹೊರಗುತ್ತಿಗೆಯಲ್ಲಿ ನೇಮಕ ಮಾಡಲಾಗಿದ್ದು, ಬಾಕಿ ಖಾಲಿಯಾಗಿವೆ. ಮಂಜೂರಾತಿಗೊಂಡ 81 ಲ್ಯಾಬ್ ಟೆಕ್ನಿಶಿಯನ್ ಹುದ್ದೆಗಳಲ್ಲಿ 21 ಹುದ್ದೆಗಳು ಖಾಲಿ ಇವೆ ಎಂದು ಜಿಲ್ಲಾ ಆರೋಗ್ಯಾಧಿಕಾರಿ ಡಾ. ತಿಮ್ಮಯ್ಯ ಸಭೆಗೆ ಮಾಹಿತಿ ನೀಡಿದರು.

ಆಶಾ ಕಾರ್ಯಕರ್ತೆಯರ ಕೊರತೆ: ವೈದ್ಯರಿಂದ ದೂರು

ಜಿಲ್ಲೆಯಲ್ಲಿ ಆಶಾ ಕಾರ್ಯಕರ್ತೆಯರ ಕೊರತೆ ಇದೆ. 1000 ಜನಸಂಖ್ಯೆಗೆ ಒಬ್ಬರಂತೆ ಆಶಾ ಕಾರ್ಯಕರ್ತೆಯರ ನೇಮಕವಾಗಬೇಕು. ಆದರೆ ಕೆಲವೆಡೆ 2000 ಜನಸಂಖ್ಯೆಗೆ ಒಬ್ಬರಂತೆಯೂ ಆಶಾ ಕಾರ್ಯಕರ್ತೆಯರಿಲ್ಲ. ಹಲವು ಮಂದಿ ನಿವೃತ್ತರಾಗಿದ್ದು, ಅವರ ಸ್ಥಾನಕ್ಕೆ ನೇಮಕವಾಗಿಲ್ಲ ಎಂಬ ದೂರುಗಳು ವೈದ್ಯರಿಂದ ವ್ಯಕ್ತವಾಯಿತು.

ಕೆಸಿಇಟಿ ಪರೀಕ್ಷೆ : ಶಕ್ತಿ ಕಾಲೇಜಿನ ವಿದ್ಯಾರ್ಥಿಗಳ ಸಾಧನೆ

ಲಿಖಿತ್‌ಗೌಡಗೆ ಬಿಪಿಓನಲ್ಲಿ 221ನೇ ರ್‍ಯಾಂಕ್











• ಮಂಗಳೂರು: 2026ನೇ ಸಾಲಿನ ಕರ್ನಾಟಕ ಪರೀಕ್ಷಾ ಪ್ರಾಧಿಕಾರ ನಡೆಸಿದ ಕೆಸಿಇಟಿ ಪರೀಕ್ಷೆಯಲ್ಲಿ, ಮಂಗಳೂರಿನ ಶಕ್ತಿನಗರದ ಶಕ್ತಿ ವಿದ್ಯಾಸಂಸ್ಥೆಯ ನಾಲ್ವರು ವಿದ್ಯಾರ್ಥಿಗಳು ಉತ್ತಮ ಸಾಧನೆ ಮಾಡಿದ್ದಾರೆ.

ಶಕ್ತಿ ವಿದ್ಯಾಸಂಸ್ಥೆಯ ವಿಜ್ಞಾನ ವಿಭಾಗದ ಲಿಖಿತ್ ಗೌಡ ಎಸ್.ಡಿ. ಬಿಪಿಓನಲ್ಲಿ 221ನೇ ರ್‍ಯಾಂಕ್ ಗಳಿಸಿದ್ದಾರೆ ಹಾಗೂ ಇಂಜಿನಿಯರಿಂಗ್‌ನಲ್ಲಿ 2367ನೇ ರ್‍ಯಾಂಕ್ ಪಡೆದಿದ್ದಾರೆ. ಚೈತನ್ಯ ಪ್ರಕಾಶ್ ಸಿ. ಎಂ. ಅಗ್ರಿಕಲ್ಚರ್ ಪ್ರಾಕ್ಟಿಕಲ್‌ನಲ್ಲಿ 489ನೇ ರ್‍ಯಾಂಕ್, ಫುಡ್‌ಸೈನ್ಸ್ ಪ್ರಾಕ್ಟಿಕಲ್‌ನಲ್ಲಿ 489ನೇ ರ್‍ಯಾಂಕ್ ಮತ್ತು ವೆಟರಿನರಿ ಸೈನ್ಸ್ ಪ್ರಾಕ್ಟಿಕಲ್‌ನಲ್ಲಿ 612ನೇ ರ್‍ಯಾಂಕ್, ಪವನ್ ಮಲಗಿ ನರ್ಸಿಂಗ್‌ನಲ್ಲಿ 1428ನೇ ರ್‍ಯಾಂಕ್ ಹಾಗೂ ವೆಟರಿನರಿ ಸೈನ್ಸ್‌ನಲ್ಲಿ 1424ನೇ ರ್‍ಯಾಂಕ್ ಪಡೆದಿದ್ದಾರೆ. ಸುಹಾಸ್ ನರ್ಸಿಂಗ್‌ನಲ್ಲಿ 1661 ನೇ ರ್‍ಯಾಂಕ್, ನ್ಯಾಚುರೋಪತಿ-ಯೋಗದಲ್ಲಿ 1153ನೇ ರ್‍ಯಾಂಕ್ ಹಾಗೂ ವೆಟರಿನರಿ ಸೈನ್ಸ್‌ನಲ್ಲಿ 1656 ರ್‍ಯಾಂಕ್ ಬಂದಿದೆ. ಮತ್ತು ಚಿಂತನ ಪಿ. ಆರ್. ಬಿಪಿಟಿಯಲ್ಲಿ 1586ನೇ ರ್‍ಯಾಂಕ್, ಬಿಪಿಓನಲ್ಲಿ 1087ನೇ ರ್‍ಯಾಂಕ್, ಡಿ ಫಾರ್ಮದಲ್ಲಿ 1586ನೇ ರ್‍ಯಾಂಕ್ ಹಾಗೂ ಬಿ.ಎಸ್ ಸಿ-ಎಹೆಚ್‌ಎಸ್‌ನಲ್ಲಿ 1586ನೇ ರ್‍ಯಾಂಕ್ ಪಡೆದಿದ್ದಾರೆ.

ಸಂಸ್ಥೆಯ ಸ್ಥಾಪಕರು ಮತ್ತು ಆಡಳಿತಾಧಿಕಾರಿ ಡಾ.ಕೆ.ಸಿ.ನ್ಯಾಕ್ ವಿದ್ಯಾರ್ಥಿಗಳ ಸಾಧನೆಗೆ ಹರ್ಷ ವ್ಯಕ್ತಪಡಿಸಿದರು. ವಿದ್ಯಾರ್ಥಿಗಳಿಗೆ ಹಾಗೂ ಅವರ ಪೋಷಕರಿಗೆ ಅಭಿನಂದಿಸಿದರು. ಸಾಧನೆ ಮಾಡಲು ಶ್ರಮಿಸಿದ ಸಂಸ್ಥೆಯ ಉಪನ್ಯಾಸಕ ಮತ್ತು ಇತರ ಸಿಬ್ಬಂದಿ ವರ್ಗಕ್ಕೆ ಶುಭಹಾರೈಸಿದರು.

ಶಕ್ತಿ ಎಜ್ಯುಕೇಶನ್ ಟ್ರಸ್ಟ್‌ನ ಪ್ರಧಾನ ಸಲಹೆಗಾರ ರಮೇಶ ಕೆ, ಶಕ್ತಿ ಪಪೂ ಕಾಲೇಜಿನ ಪ್ರಾಂಶುಪಾಲ ಪ್ರದೀಪ್ ಕುಮಾರ್ ಶೆಟ್ಟಿ, ಶಕ್ತಿ ರೆಸಿಡೆನ್ಶಿಯಲ್ ಶಾಲೆಯ ಪ್ರಾಂಶುಪಾಲರಾದ ಸುರೇಖ ಆರ್. ಭಟ್, ಎಲ್ಲಾ ಉಪನ್ಯಾಸಕರು ಹಾಗೂ ಉಪನ್ಯಾಸಕೇತರ ಸಿಬ್ಬಂದಿಗಳು ವಿದ್ಯಾರ್ಥಿಗಳಿಗೆ ಶುಭಹಾರೈಸಿದರು.

ಶ್ರೀಶಾ ಸೌಹಾರ್ದ ಸೊಸೈಟಿಯ ವತಿಯಿಂದ ವಿತರಣೆ

ಪ್ರತಿಭಾವಂತ ಮಕ್ಕಳಿಗೆ ಸಹಾಯಧನ



• ಮಂಗಳೂರು: ಜಿಲ್ಲೆಯ ಪ್ರತಿಷ್ಠಿತ ಸಹಕಾರಿ ಸಂಸ್ಥೆಗಳಲ್ಲಿ ಒಂದಾದ ಶ್ರೀಶಾ ಸೌಹಾರ್ದ ಸೊಸೈಟಿಯ ವತಿಯಿಂದ ಜೂ.7ರಂದು ರಾಮಕೃಷ್ಣ ಮಠದ ಸಭಾಂಗಣದಲ್ಲಿ ಮಂಗಳೂರು ತಾಲೂಕಿನ 2026 ನೆಯ ಸಾಲಿನ ಸರಕಾರಿ/ ಅನುದಾನಿತ ಕನ್ನಡ ಮಾಧ್ಯಮದ ಶಾಲೆಗಳ ಎಸ್ಸೆಸ್ಸೆಲ್ಸಿ ಅಂತಿಮ ಪರೀಕ್ಷೆಯಲ್ಲಿ ಹಾಗೂ ಸರಕಾರಿ/ಅನುದಾನಿತ ಪದವಿ ಪೂರ್ವ ಕಾಲೇಜುಗಳ ಅಂತಿಮ ಪರೀಕ್ಷೆಯಲ್ಲಿ 90% ಹೆಚ್ಚಿನ ಅಂಕಗಳನ್ನು ಗಳಿಸಿದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಸಹಾಯಧನ ಹಾಗೂ ಸನ್ಮಾನ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

ಒಟ್ಟು 120 ವಿದ್ಯಾರ್ಥಿಗಳಿಗೆ ಸಹಾಯಧನ ನೀಡಿ ಶಾಲು ಹೊದಿಸಿ, ಹಾರ ಹಾಕಿ, ಫ್ರೇಮ್ ಹಾಕಿದ ಪ್ರಶಂಸನ ಪತ್ರಗಳನ್ನು ನೀಡಿ ಗೌರವಿಸಲಾಯಿತು.

ರಾಮಕೃಷ್ಣಮಠದ ಅಧ್ಯಕ್ಷರಾದ ಸ್ವಾಮಿ ಜಿತಕಾಮಾನಂದಜೀ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಇಂಗ್ಲಿಷ್ ಮಾಧ್ಯಮದ ಅರ್ಭಟದ ನಡುವೆ ಕನ್ನಡ ಮಾಧ್ಯಮವನ್ನು ಆಯ್ಕೆ ಮಾಡಿ ಸರಕಾರಿ ಶಾಲೆಗಳ ಎಸ್ಸೆಸ್ಸೆಲ್ಸಿ ಅಂತಿಮ ಪರೀಕ್ಷೆಯಲ್ಲಿ ಶೇಕಡ.90 ಕ್ಕಿಂತ ಹೆಚ್ಚು ಅಂಕಗಳನ್ನು ಪಡೆದಿರುವುದು ನಿಜಕ್ಕೂ ಹೆಮ್ಮೆಯ ವಿಷಯ. ಈ ವಿದ್ಯಾರ್ಥಿಗಳ ಸಾಧನೆಯನ್ನು ಗುರುತಿಸಿ ಶ್ರೀಶಾ ಸೊಸೈಟಿಯು ಅವರಿಗೆ ಸಹಾಯಧನದ ಜೊತೆಗೆ ಗೌರವಪೂರ್ವಕ ಸನ್ಮಾನ ಮಾಡಿರುವುದು ಅತೀವ ಸಂತಸ ತಂದಿದೆ. ಈ ಮಕ್ಕಳ ಭವಿಷ್ಯ ಉಜ್ವಲವಾಗಿ ಬೆಳಗಲಿ ಎಂದು ಹೇಳಿದರು.

ಶ್ರೀಕ್ಷೇತ್ರ ಶರವು ದೇವಸ್ಥಾನದ ಆಡಳಿತ ಮುಕ್ತೇಸರರಾದ ರಾಘವೇಂದ್ರ ಶಾಸ್ತ್ರಿ, ಕಟೀಲು ಶ್ರೀದುರ್ಗಾ ಪರಮೇಶ್ವರಿ ದೇವಸ್ಥಾನದ ಆನುವಂಶಿಕ ಅರ್ಚಕರಾದ ಹರಿನಾರಾಯಣದಾಸ ಅಸ್ರಣ್ಣ, ದ.ಕ. ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ನಿಕಟ ಪೂರ್ವ ಅಧ್ಯಕ್ಷ ಪ್ರದೀಪ್ ಕುಮಾರ್ ಕಲ್ಕೂರ, ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಜೇಮ್ಸ್ ಕುಟಿನ ಮತ್ತು ಹೆಚ್. ಆರ್.ಈಶ್ವರ್ ಸಾಂದರ್ಭಿಕವಾಗಿ ಮಾತನಾಡಿದರು.

> **ವಿದ್ಯಾರ್ಥಿಗಳ ಸಾಧನೆಯನ್ನು ಗುರುತಿಸಿ ಸಹಾಯಧನ ನೀಡುವುದನ್ನು ನೋಡಿದ್ದೇವೆ. ಆದರೆ 120 ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಸಹಾಯಧನ ನೀಡುವುದರ ಜೊತೆಗೆ ಇಷ್ಟು ದೊಡ್ಡ ಮಟ್ಟದಲ್ಲಿ ಸನ್ಮಾನ ಮಾಡುತ್ತಿರುವುದು ಅರ್ಥಪೂರ್ಣವಾಗಿದ್ದು ತನಗೆ ಅತೀವ ಸಂತಸ ತಂದಿದೆ. ವಿದ್ಯಾರ್ಥಿಗಳು ಈ ಸನ್ಮಾನವನ್ನು ಎಂದಿಗೂ ಮರೆಯಲಾರರು. ಶ್ರೀಶಾ ಸೊಸೈಟಿಯ ಇಂತಹ ಸಮಾಜ ಮುಖಿ ಕಾರ್ಯಗಳು ನಿರಂತರವಾಗಿ ನಡೆಯುತ್ತಿರುವುದನ್ನು ಗಮನಿಸಿದ್ದೇನೆ. ಶ್ರೀಶಾದಂತಹ ಸೊಸೈಟಿಗಳು ನಮ್ಮ ನಗರದಲ್ಲಿರುವುದು ನಮಗೆಲ್ಲಾ ಹೆಮ್ಮೆ ಹಾಗೂ ಗೌರವ. ಶ್ರೀಶಾದ ಸೇವಾ ಕಾರ್ಯಗಳು ಹೀಗೆಯೇ ಮುಂದುವರಿಯಲಿ.**
> ■ ವೇದವ್ಯಾಸ ಕಾಮತ್, ಶಾಸಕ

ಅಧ್ಯಕ್ಷತೆ ವಹಿಸಿದ್ದ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತದ ಅಧ್ಯಕ್ಷ ಜಿ.ನಂಜನ ಗೌಡರು ಮಾತನಾಡಿ, ಕನ್ನಡ ಮಾಧ್ಯಮದಲ್ಲಿ ವಿದ್ಯಾಭ್ಯಾಸ ಮಾಡಿ ಈ ಬಗೆಯ ಅಂಕಗಳನ್ನು ಪಡೆದಿರುವುದು ನಿಜಕ್ಕೂ ಆಶ್ಚರ್ಯ ತಂದಿದೆ. ಇವರ ಈ ಸಾಧನೆಯನ್ನು ಗುರುತಿಸಿ ಗೌರವಿಸುತ್ತಿರುವ ಶ್ರೀಶಾದಂತಹ ಸೊಸೈಟಿ ನಮ್ಮ ರಾಜ್ಯ ಫೆಡರೇಶನ್‌ನಲ್ಲಿರುವುದೇ ನಮಗೆ ಹೆಮ್ಮೆ ಹಾಗೂ ಗೌರವ. ರಾಜ್ಯದಲ್ಲಿ 6500 ಸೌಹಾರ್ದ ಸೊಸೈಟಿಗಳು ಕಾರ್ಯ ನಿರ್ವಹಿಸುತ್ತಿದ್ದು ಶ್ರೀಶಾ ಮಾದರಿಯಾಗಿದೆ. ತಾನು ಗಳಿಸಿದ ಲಾಭದ ಒಂದು ದೊಡ್ಡ ಪಾಲನ್ನು ಮರಳಿ ಸಮಾಜಕ್ಕೆ ಇಂತಹ ಸಮಾಜಮುಖಿ ಕಾರ್ಯಗಳ ಮೂಲಕ ನೀಡುತ್ತಿರುವುದು ಈ ಸಹಕಾರಿಯ ಸಾಮಾಜಿಕ ಬದ್ಧತೆಯನ್ನು ತೋರಿಸುತ್ತದೆ ಎಂದು ಹೇಳಿದರು.

ಶ್ರೀಶಾ ಸೌಹಾರ್ದ ಸೊಸೈಟಿಯ ಅಧ್ಯಕ್ಷ ಎಂ. ಎಸ್.ಗುರುರಾಜ್‌ರನ್ನು ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಪರವಾಗಿ ಅಧ್ಯಕ್ಷ ನಂಜನ ಗೌಡರು ಸನ್ಮಾನಿಸಿದರು.

ದೇಶದ ಗಡಿ ಕಾಯುವ ಸಂದರ್ಭದಲ್ಲಿ ಹುತಾತ್ಮರಾದ 50 ವೀರ ಯೋಧರ ಬಗ್ಗೆ ಪುಸ್ತಕವನ್ನು ಬರೆದಿರುವ ಡಾ.ಸಿಂಧು ಭಟ್ ಅವರನ್ನು ಸೊಸೈಟಿಯ ವತಿಯಿಂದ ಗೌರವಿಸಲಾಯಿತು.

ಶ್ರೀಶಾದ ಅಧ್ಯಕ್ಷರಾದ ಎಂ. ಎಸ್.ಗುರುರಾಜ್‌ರವರು ಸ್ವಾಗತಿಸಿ ಪ್ರಾಸ್ತಾವಿಕವಾಗಿ ಮಾತನಾಡಿದರು. ನಿರ್ದೇಶಕ ಪ್ರಸನ್ನ ಕುಮಾರ ವಂದನಾರ್ಪಣೆಗೈದರು. ಆರ್.ಜೆ. ಪ್ರಸನ್ನ ಕಾರ್ಯಕ್ರಮ ನಿರೂಪಣೆ ಮಾಡಿದರು.

ಹತ್ತು ಸಮಸ್ತರಿಂದ ಲೋಕ ಕಲ್ಯಾಣಾರ್ಥ ಸಾಮೂಹಿಕ ಪ್ರಾರ್ಥನೆ

ಕದ್ರಿಯಲ್ಲಿ ಸೀಯಾಳಾಭಿಷೇಕ



• ಮಂಗಳೂರು: ಕದ್ರಿ ಶ್ರೀ ಮಂಜುನಾಥ ದೇವಸ್ಥಾನದ ಸಹಯೋಗದೊಂದಿಗೆ ಹತ್ತು ಸಮಸ್ತರು, ಸಾರ್ವಜನಿಕ ಸಂಘ ಸಂಸ್ಥೆಗಳ ಸಹಭಾಗಿತ್ವದಲ್ಲಿ ನಗರದ ಶ್ರೀ ಕ್ಷೇತ್ರ ಕದ್ರಿಯಲ್ಲಿ ಲೋಕ ಕಲ್ಯಾಣಾರ್ಥ ಸಾಮೂಹಿಕ ಪ್ರಾರ್ಥನೆ, ಸೀಯಾಳಾಭಿಷೇಕ ಸೋಮವಾರ ನೆರವೇರಿತು.

ಕದ್ರಿ ದೇವಸ್ಥಾನದ ವ್ಯವಸ್ಥಾಪನ ಸಮಿತಿ ಅಧ್ಯಕ್ಷ ಎ.ಜನಾರ್ದನ ಶೆಟ್ಟಿ, ಕಲ್ಕೂರ ಪ್ರತಿಷ್ಠಾನದ ಅಧ್ಯಕ್ಷ ಪ್ರದೀಪ ಕುಮಾರ ಕಲ್ಕೂರ, ಕದ್ರಿ ದೇವಸ್ಥಾನ ವ್ಯವಸ್ಥಾಪನಾ ಸಮಿತಿ ಸದಸ್ಯರಾದ ರಾಜೇಂದ್ರ ಚಿಲಿಂಬಿ, ಕಿರಣ್ ಕುಮಾರ್ ಜೆ., ನಾರಾಯಣ ಕೋಟ್ಯಾನ್, ಪ್ರೀತಾನಂದನ್, ಉಷಾ ಪ್ರಭಾಕರ್, ಕಾರ್ಯನಿರ್ವಹಣಾಧಿಕಾರಿ ಪುಷ್ಪಲತಾ, ದೇವಳದ ಅರ್ಚಕರಾದ ವೇದ ವಿದ್ವಾಂಸ ಡಾ. ಪ್ರಭಾಕರ ಅಡಿಗ, ರವಿ ಅಡಿಗ, ರಾಘವೇಂದ್ರ ಭಟ್, ವಾಸುದೇವ ಅಡಿಗ, ಮಾಜಿ ಮೇಯರ್‌ಗಳಾದ ಎಂ.ಶಶಿಧರ ಹೆಗ್ಡೆ, ಪ್ರೇಮಾನಂದ ಶೆಟ್ಟಿ, ಮನಪಾ ಮಾಜಿ ಸದಸ್ಯರಾದ ಮನೋಹರ್ ಶೆಟ್ಟಿ, ಶಕೀಲಾ ಕಾವ, ಅಶೋಕ್ ಡಿ.ಕೆ., ಪ್ರಮುಖರಾದ ಡಾ. ವಾಮನ ಶೆಣೈ, ರತ್ನಾಕರ್ ಜೈನ್, ಮೋಹನ ಕೊಪ್ಪಳ ಕದ್ರಿ, ಅಮೃತ್ ಕದ್ರಿ, ಕಿರಣ್ ಕುಮಾರ್ ಜೋಗಿ, ಜಿತೇಂದ್ರ ಕೊಟ್ಟಾರಿ, ಸುಂದರ ಶೆಟ್ಟಿ, ಎಚ್.ಕೆ. ಪುರುಷೋತ್ತಮ, ಸುರೇಶ್ ಕುಮಾರ್, ರಾಮಕೃಷ್ಣ ರಾವ್, ದುರ್ಗಾರಾಮದಾಸ್ ಕಟೀಲ್, ಚಂದ್ರಶೇಖರ್ ಮಾಣಿಲ, ಪುರುಷೋತ್ತಮ ಭಂಡಾರಿ, ಪ್ರಭಾಕರ ರಾವ್ ಪೇಜಾವರ, ಪೂರ್ಣಿಮಾ ರಾವ್ ಪೇಜಾವರ, ಅರುಣ್ ಕದ್ರಿ, ಸುಧಾಕರ ರಾವ್ ಪೇಜಾವರ, ಮೋಹನ್ ಕೊಪ್ಪಳ, ಅರುಣ್ ಕದ್ರಿ, ಉಪಸ್ಥಿತರಿದ್ದರು.

ಮೆರವಣಿಗೆಯ ಮೂಲಕ ಸಿಯಾಳವನ್ನು ಕೊಂಡೊಯ್ದು, ಸಾಮೂಹಿಕ ಪ್ರಾರ್ಥನೆಯೊಂದಿಗೆ ದೇವರಿಗೆ ಸಮರ್ಪಿಸಲಾಯಿತು.

ರಾಜ್ಯ ಅಥ್ಲೆಟಿಕ್ಸ್ ಸ್ಪರ್ಧೆ: ಯುವರಾಜ್‌ಗೆ ಚಿನ್ನ

• ಮಂಗಳೂರು: ಬೆಂಗಳೂರಿನ ಕಂಠೀರವ ಕ್ರೀಡಾಂಗಣದಲ್ಲಿ ಕರ್ನಾಟಕ ಅಥ್ಲೆಟಿಕ್ಸ್ ಅಸೋಸಿಯೇಷನ್ ವತಿಯಿಂದ ಇತ್ತೀಚೆಗೆ ನಡೆದ ರಾಜ್ಯಮಟ್ಟದ ಅಥ್ಲೆಟಿಕ್ಸ್ ಸ್ಪರ್ಧೆಯಲ್ಲಿ ಮಂಗಳೂರಿನ ಸಂತ ಅಲೋಶಿಯಸ್ ಗೊನ್ಜಾಗ ಶಾಲೆಯ 9ನೇ ತರಗತಿ ವಿದ್ಯಾರ್ಥಿ ಯುವರಾಜ್ ಡಿ. ಕುಂದರ್ ಚಿನ್ನ ಮತ್ತು ಬೆಳ್ಳಿ ಪದಕದ ಸಾಧನೆ ತೋರಿದ್ದಾರೆ.



60 ಮೀಟರ್ ಓಟ ಸ್ಪರ್ಧೆಯಲ್ಲಿ ಚಿನ್ನದ ಪದಕ, ಉದ್ದ ಜಿಗಿತ ಸ್ಪರ್ಧೆಯಲ್ಲಿ ಬೆಳ್ಳಿ ಪದಕ ಗೆದ್ದಿದ್ದಾರೆ. ಎರಡು ಪದಕಗಳನ್ನು ಗೆದ್ದು ಶಾಲೆಗೆ ಕೀರ್ತಿ ತಂದಿರುವ ಯುವರಾಜ್ ಸಾಧನೆಯನ್ನು ಸಂಸ್ಥೆಯ ಪ್ರಾಂಶುಪಾಲರಾದ ವಂ.ಫಾ. ರೋಹನ್ ಡಿ ಅಲ್ಮೇಡ ಎಸ್. ಜೆ ಶ್ಲಾಘಿಸಿದ್ದಾರೆ.

ಚಾಕಲೇಟ್ ಕಾರ್ಖಾನೆಯಲ್ಲಿ ಕ್ಯಾಂಪ್ಕೋ ಸಂಸ್ಥಾಪಕ ವಾರಣಾಶಿ ಸುಬ್ರಾಯ ಭಟ್ ಜನ್ಮ ಶತಾಬ್ದಿ ‘ಕ್ಯಾಂಪ್ಕೋ ಬ್ರಹ್ಮ ಶತನಮನಗಳು’

ವಾರಣಾಶಿ ಸುಬ್ರಾಯ ಭಟ್ ಸಾಧನೆ ಪಠ್ಯವಾಗಲಿ: ಕೊಂಕೋಡಿ ಪದ್ಮನಾಭ

• ಪುತ್ತೂರು: ಕ್ಯಾಂಪ್ಕೋ ಸಂಸ್ಥೆಯ ಸಂಸ್ಥಾಪಕ, ಸಹಕಾರಿ ರತ್ನ ವಾರಣಾಶಿ ಸುಬ್ರಾಯ ಭಟ್ ಅವರ ಜನ್ಮ ಶತಾಬ್ಧಿ ಸಂಭ್ರಮ-2026 ‘ಕ್ಯಾಂಪ್ಕೋ ಬ್ರಹ್ಮ ಶತನಮನಗಳು’ ಕಾರ್ಯಕ್ರಮವು ಸೋಮವಾರ ಕೆಮ್ಮಿಂಜೆ ಕ್ಯಾಂಪ್ಕೋ ಚಾಕಲೇಟ್ ಕಾರ್ಖಾನೆಯಲ್ಲಿ ನಡೆಯಿತು.

ಕಾರ್ಯಕ್ರಮವನ್ನು ದೀಪ ಬೆಳಗಿಸಿ ಉದ್ಘಾಟಿಸಿದ ಕ್ಯಾಂಪ್ಕೋದ ಮಾಜಿ ಅಧ್ಯಕ್ಷ ಕೊಂಕೋಡಿ ಪದ್ಮನಾಭ ಮಾತನಾಡಿ, ಯಾರಿಗೂ ಬೇಡವಾದ ಅಡಿಕೆ ಬೆಳೆಗಾರರಿಗಾಗಿ ಹುಟ್ಟು ಹಾಕಿದ ಕ್ಯಾಂಪ್ಕೋ ಇಂದು ದೈತ್ಯ ಸಂಸ್ಥೆಯಾಗಿ ಬೆಳೆದು ದೇಶದ ಅತ್ಯುತ್ಕೃಷ್ಟ ಸಂಸ್ಥೆಗಳಲ್ಲಿ ಮೂರನೇ ಸ್ಥಾನದಲ್ಲಿದೆ. ಸುಬ್ರಾಯ ಭಟ್ ಕ್ಯಾಂಪ್ಕೋದಲ್ಲಿ ತಪಸ್ಸಿನಂತೆ ಸೇವೆಗೈದಿರುವ ಫಲವಾಗಿ ಇಂದು ಕೊಟ್ಯಂತರ ಅಡಿಕೆ ಬೆಳೆಗಾರರ ಬಾಳಿಗೆ ಬೆಳಕಾದವರು. ಕನಿಷ್ಠ ಮೂರು ಸಾವಿರ ಮಂದಿಗೆ ಉದ್ಯೋಗ ನೀಡಿದ ಅನ್ನದಾತರು. ಇಂತಹ ಯುಗ ಪುರುಷನ ಜೀವನ ಸಾಧನೆ ಯುವ ಸಮಾಜಕ್ಕೆ ದಾರಿ ದೀಪವಾಗುವ ನಿಟ್ಟಿನಲ್ಲಿ ಕರಾವಳಿಯ ಅವರ ಜೀವನ ಸಾಧನೆಗಳನ್ನು ಪಠ್ಯ ಪುಸ್ತಕಗಳಲ್ಲಿ ಜೋಡಿಸುವ ಕೆಲಸವಾಗಬೇಕು. ಅವರ ಹೆಸರಿನಲ್ಲಿ ದತ್ತಿ ನಿಧಿ ಸ್ಥಾಪಿಸಿ ಸಮಾಜಕ್ಕೆ ಅರ್ಪಣೆಯಾಗಬೇಕು ಎಂದರು.



ಅಧ್ಯಕ್ಷತೆ ವಹಿಸಿದ್ದ ಕ್ಯಾಂಪ್ಕೋ ಅಧ್ಯಕ್ಷ ಎಸ್. ಆರ್. ಸತೀಶ್ಚಂದ್ರ ಮಾತನಾಡಿ, ಅಡಿಕೆ ಬೆಳೆಗಾರರ ಸಂರಕ್ಷಣೆಗಾಗಿ ವಾರಣಾಶಿ ಸುಬ್ರಾಯ ಭಟ್ ಅವರು ಕ್ಯಾಂಪ್ಕೋ ಸಂಸ್ಥೆ ಹುಟ್ಟು ಹಾಕಿ ಬೆಳೆಗಾರರಿಗೆ ಭದ್ರ ಬುನಾದಿ ಹಾಕಿದವರು. ಅವರಿಗೆ ಪದ್ಮಶ್ರೀ ಪ್ರಶಸ್ತಿ ಬರಬೇಕಿತ್ತು. ಇದಕ್ಕಾಗಿ ಹಲವು ಪ್ರಯತ್ನಗಳು ನಡೆಸಲಾ ಗಿತ್ತು. ಈಗಲೂ ಪ್ರಯತ್ನ ನಡೆಯುತ್ತಿದ್ದು ಮುಂದಿನ ದಿನವಾದರೂ ಬರುವ ನಿರೀಕ್ಷೆಯಿದೆ ಎಂದರು.

ಕ್ಯಾಂಪ್ಕೋದ ಮೂಲಕ ಸಾವಿರಾರು ಮಂದಿಗೆ ಉದ್ಯೋಗ ನೀಡಿದ್ದು ಸಮುದಾಯದ ಅಭಿವೃದ್ಧಿಯಾಗಿದೆ. ದೇಶದ ಜಿಡಿಪಿ ಪ್ರಗತಿಯಲ್ಲಿಯೂ ಕ್ಯಾಂಪ್ಕೋದ ಕೊಡುಗೆಯಿದೆ. ಅಡಿಕೆ, ಕೊಕ್ಕೊ ಮಾತ್ರವಲ್ಲದೆ ತೆಂಗು, ಕಾಳುಮೆಣಸು ಹಾಗೂ ರಬ್ಬರ್ ಬೆಳೆಗಾರರ ಸಂರಕ್ಷಣೆಗೂ ಕೆಲಸ ಮಾಡಲಿದೆ. ರೈತರ ಆತ್ಮಹತ್ಯೆ ತಡೆಯಲು ಕ್ಯಾಂಪ್ಕೋದಂತೆ ಸಂಸ್ಥೆಗಳನ್ನು ಹುಟ್ಟು ಹಾಕುವಂತೆ ಸಂಸತ್, ವಿಧಾನ ಸಭೆಯಲ್ಲಿಯೂ ಚರ್ಚೆಗಳಾಗುತ್ತಿದೆ. ಅಡಿಕೆಯಿಂದ ಕ್ಯಾನ್ಸರ್ ರೋಗ ಶಮನ ಮಾಡಲು ಸಹಕಾರಿಯಾಗಿದೆ ಎಂದು ನಿಮಾನ್ಸ್ ಸಂಸ್ಥೆ ಅಧ್ಯಯನ ನಡೆಸಿ ವರದಿ ಮಾಡಿದೆ ಎಂದು ಹೇಳಿದರು.

3 ಹೊಸ ಉತ್ಪನ್ನಗಳ ಬಿಡುಗಡೆ

ಕ್ಯಾಂಪ್ಕೋ ಚಾಕಲೇಟ್ ಫ್ಯಾಕ್ಟರಿಯ ಮೂರು ಹೊಸ ಉತ್ಪನ್ನಗಳಾದ ಡಾರ್ಕ್ ಚಾಕಲೇಟ್ ಪ್ರೀಮಿಯಂ ಶೇ.55 ಕೊಕ್ಕೋ, ಡಾರ್ಕ್ ಚಾಕಲೇಟ್ ಫ್ರುಟ್ ಆಂಡ್ ನಟ್ ಮತ್ತು ಕೊಕ್ಕೋ ಪೌಡರ್ ಎಂಬ ಮೂರು ಹೊಸ ಉತ್ಪನ್ನಗಳು ಕಾರ್ಯಕ್ರಮದಲ್ಲಿ ಬಿಡುಗಡೆಗೊಂಡಿತು. ಪ್ರಭಾಕರ ಹೊಳ್ಳ ಉತ್ಪನ್ನಗಳ ಮಾಹಿತಿ ನೀಡಿದರು.

> **ಸುಬ್ರಾಯ ಭಟ್ ಅವರ ಸಾಧನೆ ತಿಳಿಸುವ ನಿಟ್ಟಿನಲ್ಲಿ ಒಂದು ವರ್ಷ ನಿರಂತರ ಕಾರ್ಯಕ್ರಮ ನಡೆಯಲಿದೆ. ಯುವ ಜನತೆಗಾಗಿ ಸಣ್ಣ ರೀಲ್ಸ್ ಮಾಡಲಾಗುವುದು. ಪ್ರಧಾನಿಯವರ ಕನಸಿನ ವಿಕಸಿತ ಭಾರತಕ್ಕೆ ಕೊಡುಗೆ ನೀಡುವ ನಿಟ್ಟಿನಲ್ಲಿ ಕ್ಯಾಂಪ್ಕೋ ಸಂಸ್ಥೆಯ ಆಧುನೀಕರಣಗೊಳಿಸಲಾಗುವುದು. ಉತ್ಪನ್ನಗಳ ರಫ್ತು ಮಾಡುವ ಸಂಸ್ಥೆಯಾಗಿ ಕ್ಯಾಂಪ್ಕೋವನ್ನು ಬೆಳೆಸಲಾಗುವುದು. ನಷ್ಟದಲ್ಲಿರುವ ಸಹಕಾರ ಸಂಸ್ಥೆಗಳ ಮೇಲ್ದರ್ಜೆಗೆ ಏರಿಸುವಲ್ಲಿಯೂ ಚಿಂತನೆ ನಡೆಸಲಾಗುವುದು.**
> ■ ಎಸ್.ಆರ್. ಸತೀಶ್ಚಂದ್ರ, ಅಧ್ಯಕ್ಷರು, ಕ್ಯಾಂಪ್ಕೋ

ಲಾಂಛನ ಬಿಡುಗಡೆ

ಇದೇ ಸಂದರ್ಭದಲ್ಲಿ ವಾರಾಣಾಶಿ ಸುಬ್ರಾಯ ಭಟ್ ಅವರ ಜನ್ಮ ಶತಾಬ್ದಿಯ ಲಾಂಛನವನ್ನು ಅನಾವರಣಗೊಳಿಸಲಾಯಿತು. ಸಂಸ್ಥೆಯ ಸಿಬ್ಬಂದಿ ಕಿಶೋರ್ ಅವರು ಲಾಂಛನದ ವಿನ್ಯಾಸ ಮಾಡಿದ್ದರು. ವಾರಾಣಾಶಿ ಸುಬ್ರಾಯ ಭಟ್ ಅವರ ಜೀವನ ಸಾಧನೆಯ ಕುರಿತ ಸಿಬ್ಬಂದಿ ಕಿಶೋರ್ ಅವರಿಂದ ನಿರ್ಮಾಣಗೊಂಡಿರುವ ಕಿರುಚಿತ್ರವು ಪ್ರದರ್ಶನ ಕಾರ್ಯಕ್ರಮದಲ್ಲಿ ಪ್ರದರ್ಶನಗೊಂಡಿತು. ರಾಷ್ಟ್ರೀಯ ಪ್ರಶಸ್ತಿ ಪುರಸ್ಕೃತ ಶಿಕ್ಷಕ, ಕೃಷಿಕ ಶಂಕರ್ ಸಾರಡ್ಕ ಮತ್ತು ಕ್ಯಾಂಪ್ಕೋದ ನಿವೃತ್ತ ವ್ಯವಸ್ಥಾಪಕ ನಿರ್ದೇಶಕ ಮಧುಸೂದನ ರಾವ್ ಶುಭಾಶಂಸನೆಗೈದರು.

ಸಂಶೋಧನೆ ಇನ್ನಷ್ಟು ಆಗಬೇಕು

ಲಾಂಛನ ಬಿಡುಗಡೆ ಮಾಡಿದ ಕೃಷಿ ಸಂಶೋಧಕರಾಗಿರುವ ವಾರಾಣಾಶಿ ಸುಬ್ರಾಯ ಭಟ್ ಅವರ ಪುತ್ರ ವಾರಾಣಾಶಿ ಕೃಷ್ಣಮೂರ್ತಿ ಮಾತನಾಡಿ, ಮಧ್ಯವರ್ತಿಗಳಿಂದ ಅಡಿಕೆ ಬೆಳೆಗಾರರಿಗೆ ಆಗುತ್ತಿರುವ ತೊಂದರೆ ನಿವಾರಿಸಲು ಬೆಳೆಗಾರರ ಸಂಸ್ಥೆಯಾಗಿ ಕ್ಯಾಂಪ್ಕೋ ಸ್ಥಾಪನೆಯಾಗಿತ್ತು. ಕ್ಯಾಂಪ್ಕೋ ಪ್ರಾರಂಭವಾದ ಬಳಿಕ ಅಡಿಕೆ ಬೆಲೆ ಏರಿಕೆಯಾಗುತ್ತಾ ಸಾಗಿದೆ. ಸುಬ್ರಾಯ ಭಟ್ ಅವರ ಭ್ರಷ್ಟಾಚಾರವಿಲ್ಲದ ಆಡಳಿತ ಕ್ಯಾಂಪ್ಕೋ ಭದ್ರವಾಗಿ ನೆಲೆಯೂರುವಂತೆ ಮಾಡಿದೆ. ಅಡಿಕೆ ಜಗಿಯುವುದು ಬಿಟ್ಟರೆ ಬೇರೇನು ಆಗಿಲ್ಲ. ಇದರ ಬಗ್ಗೆ ಸಂಶೋಧನೆ ನಡೆಸದೆ ಇದ್ದರೆ ಭವಿಷ್ಯದಲ್ಲಿ ಸಂಕಷ್ಟ ಎದುರಾಗಬಹುದಾಗಿದೆ ಎಂದು ಕಳವಳ ವ್ಯಕ್ತಪಡಿಸಿದರು.

ಪುರುಷೋತ್ತಮ ಪ್ರಾರ್ಥಿಸಿದರು. ವ್ಯವಸ್ಥಾಪನಾ ನಿರ್ದೇಶಕ ಡಾ.ಬಿ.ವಿ. ಸತ್ಯನಾರಾಯಣ ಸ್ವಾಗತಿಸಿ, ಉಪಾಧ್ಯಕ್ಷ ಪದ್ಮರಾಜ ಪಟ್ಟಾಜೆ ವಂದಿಸಿದರು. ಸಂಸ್ಥೆಯ ಸಿಬ್ಬಂದಿ ಜಯ ಭಂಡಾರಿ ಕಾರ್ಯಕ್ರಮ ನಿರ್ವಹಿಸಿದರು.

ಇಂದಿನಿಂದ ಖಾಸಗಿ ಸರ್ವೀಸ್ ಬಸ್‌ಗಳ ಪ್ರಯಾಣ ದುಬಾರಿ!

• **ಉಡುಪಿ:** ನಿರಂತರ ಡೀಸೆಲ್ ದರ ಏರಿಕೆ ಹಾಗೂ ವಾಹನ ನಿರ್ವಹಣಾ ವೆಚ್ಚಗಳು ಹೆಚ್ಚಾಗಿರುವುದರಿಂದ ರಾಜ್ಯಾದ್ಯಂತ ಚಾಲನೆಯಲ್ಲಿರುವ ಎಲ್ಲಾ ಖಾಸಗಿ ಡೇ ಸರ್ವೀಸ್ (ಮಜಲು ವಾಹನ) ಬಸ್‌ಗಳ ಪ್ರಯಾಣ ದರವನ್ನು ಪರಿಷ್ಕರಿಸಲಾಗಿದ್ದು, ಜೂನ್ 9ರಿಂದ (ಇಂದಿನಿಂದ) ಹೊಸ ದರ ಜಾರಿಗೆ ಬರಲಿದೆ ಎಂದು ರಾಜ್ಯ ಖಾಸಗಿ ಬಸ್ ಮಾಲೀಕರ ಸಂಘಗಳ ಒಕ್ಕೂಟದ ಅಧ್ಯಕ್ಷ ಕುಯಿಲಾಡಿ ಸುರೇಶ್ ನಾಯಕ್ ತಿಳಿಸಿದ್ದಾರೆ.

ಉಡುಪಿಯಲ್ಲಿ ನಡೆದ ಜಂಟಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಒಕ್ಕೂಟದ ವ್ಯಾಪ್ತಿಯಲ್ಲಿ ರಾಜ್ಯಾದ್ಯಂತ ಸುಮಾರು 5,300 ಬಸ್‌ಗಳು ಕಾರ್ಯಾಚರಣೆ ನಡೆಸುತ್ತಿವೆ.

> ಪೆಟ್ರೋಲ್ ಹಾಗೂ ಡೀಸೆಲ್ ಬೆಲೆ ಏರಿಕೆಯಿಂದಾಗಿ ಕರ್ನಾಟಕ ರಾಜ್ಯ ಬಸ್ ಮಾಲೀಕರ ಒಕ್ಕೂಟವು ಈಗಾಗಲೇ ಶೇ.20ರಷ್ಟು ಪ್ರಯಾಣ ದರ ಏರಿಕೆ ಮಾಡಿದೆ. ಹಾಗಾಗಿ ನಮ್ಮ ಸಂಘದಿಂದ ಬಸ್ ದರ ಏರಿಕೆ ಮಾಡುತ್ತಿಲ್ಲ .
> ■ **ನಟರಾಜ ಶರ್ಮ,** ಕರ್ನಾಟಕ ರಾಜ್ಯ ಬಸ್ ಮಾಲೀಕರ ಸಂಘದ ಅಧ್ಯಕ್ಷ

ಕಳೆದ ಒಂದು ವರ್ಷದಲ್ಲಿ ರಾಜ್ಯ ಸರ್ಕಾರ ಒಮ್ಮೆ ಡೀಸೆಲ್ ದರವನ್ನು 3 ರೂ. ಹೆಚ್ಚಿಸಿದ್ದರೆ, ಕೇಂದ್ರ ಸರ್ಕಾರ ನಾಲ್ಕು ಬಾರಿ ಒಟ್ಟು 8.17 ರೂಪಾಯಿಯಷ್ಟು ಇಂಧನ ದರ ಏರಿಕೆ ಮಾಡಿದೆ. ಇದರೊಂದಿಗೆ ಬಸ್ ಬಿಡಿಭಾಗಗಳು, ಟೈರ್ ಹಾಗೂ ರಿಸೋಲಿಂಗ್ ವೆಚ್ಚ, ಟೋಲ್ ಶುಲ್ಕ, ನೌಕರರ ಸಂಬಳ ಮತ್ತು ಸರ್ಕಾರದ ತೆರಿಗೆ ಸೇರಿದಂತೆ ದೈನಂದಿನ ನಿರ್ವಹಣಾ ವೆಚ್ಚಗಳು ಗಣನೀಯವಾಗಿ ಏರಿಕೆಯಾಗಿವೆ.

ಈ ನಷ್ಟವನ್ನು ಸರಿದೂಗಿಸಲು ಬಸ್ ಟಿಕೆಟ್ ದರವನ್ನು ಶೇ. 5 ರಿಂದ 8 ರವರೆಗೆ ಹೆಚ್ಚಿಸುವುದು ಅನಿವಾರ್ಯವಾಗಿದೆ ಎಂದು ಅವರು ಸ್ಪಷ್ಟಪಡಿಸಿದರು.

ರಾಮ ಬಾಣ



20 ಟಿಎಂಸಿ ಸಂಸದರು ಎನ್‌ಡಿಎಗೆ?

ಪುಟ ೧➡ ಪಕ್ಷಾಧ್ಯಕ್ಷರು ನಮ್ಮ ಮೇಲೆ ಏಕಪಕ್ಷೀಯವಾಗಿ ಸರ್ವಾಧಿಕಾರಿ ವರ್ತನೆ ತೋರಿದ್ದಾಗಿ ಅವರು ಆರೋಪಿಸಿದರು. ಈ ಹಿಂದೆ ಉಚ್ಚಾಟಿತ ಟಿಎಂಸಿ ಶಾಸಕ ರಿತಬ್ರತ ಬ್ಯಾನರ್ಜಿ ಅವರ ನೇತೃತ್ವದಲ್ಲಿ 58 ಟಿಎಂಸಿ ಶಾಸಕರು ಪ್ರತ್ಯೇಕ ಗುಂಪು ರಚಿಸಿಕೊಂಡಿದ್ದು, ತಮ್ಮದೇ ನಿಜವಾದ ತೃಣಮೂಲ ಕಾಂಗ್ರೆಸ್ ಎಂದು ಹೇಳಿದ್ದರು. ಅವರು ವಿಧಾನಸಭೆಯಲ್ಲಿ ಶೋಭನ್‌ದೇವ್ ಚಟರ್ಜಿ ಅವರನ್ನು ವಿಪಕ್ಷ ನಾಯಕನಾಗಿ ಆಯ್ಕೆ ಮಾಡಿಕೊಂಡಿದ್ದರು. ಮೂರನೇ ಎರಡಕ್ಕಿಂತ ಹೆಚ್ಚಿನ ಶಾಸಕರ ನಿಲುವನ್ನು ಒಪ್ಪಬೇಕಾಗಿ ಬಂದಿದ್ದ ವಿಧಾನಸಭಾಧ್ಯಕ್ಷರು ಈ ಗುಂಪಿಗೆ ಮನ್ನಣೆ ನೀಡಿದ್ದರು. ಚುನಾವಣಾ ಪೂರ್ವದಲ್ಲಿ ವಿವಾದಾತ್ಮಕ ಐ-ಪಿಎಸಿ ರಾಜಕೀಯ ಸಲಹಾ ಸಂಸ್ಥೆಯನ್ನು ಟಿಎಂಸಿ ಆಯ್ಕೆ ಮಾಡಿಕೊಂಡಲ್ಲಿಂದಲೇ ಪಕ್ಷದಲ್ಲಿ ಅಸಮಾಧಾನ ಉಂಟಾಗಿದ್ದು, ಪಕ್ಷದ ಸಂಸದರು ಈ ಬಗ್ಗೆ ಆಕ್ಷೇಪಿಸಿದ್ದರು. ಇದಕ್ಕೂ ಮುನ್ನ ಅವರು ಬಿಜೆಪಿ ನಾಯಕ ಭೂಪೇಂದ್ರ ಯಾದವ್ ಅವರನ್ನು ಭೇಟಿ ಮಾಡಿ ತಮ್ಮ ಬಣದ ನಿರ್ಧಾರವನ್ನು ಅವರಿಗೆ ತಿಳಿಸಿದ್ದರು. ನಾವು ಪಕ್ಷದ ಸಂಸದರು ಸುದೀರ್ಘ ಸಮಾಲೋಚನೆಯ ಬಳಿಕ ಎನ್‌ಡಿಎ ಬೆಂಬಲಿಸುವ ತೀರ್ಮಾನಕ್ಕೆ ಬಂದಿರುವುದಾಗಿ ಅವರು ಹೇಳಿದರು. ಪಶ್ಚಿಮ ಬಂಗಾಲದಲ್ಲಿ ಪಕ್ಷದ ಉನ್ನತ ನಾಯಕರು, ಸಂಸದರು ಹಾಗೂ ಶಾಸಕರಲ್ಲದೆ ಇದೀಗ 2ನೇ ಹಂತದ ನಾಯಕರು ಹಾಗೂ ಸುಮಾರು 100 ಕೌನ್ಸಿಲರ್‌ಗಳು ಕೂಡ ಟಿಎಂಸಿಗೆ ರಾಜೀನಾಮೆ ನೀಡಿದ್ದಾರೆ.

ನೀರಿನಲ್ಲಿ ಕೊಚ್ಚಿ ಹೋದ ಬೈಕ್‌ಗಳು

• **ಬೆಳಗಾವಿ:** ಜಿಲ್ಲೆಯ ಬೈಲಹೊಂಗಲ ಪಟ್ಟಣದಲ್ಲಿ ಸೋಮವಾರ ಮಧ್ಯಾಹ್ನ ಸುರಿದ ಧಾರಾಕಾರ ಮಳೆಯಿಂದ ಜನಜೀವನ ಅಸ್ತವ್ಯಸ್ತಗೊಂಡಿದೆ. ಮೇಘ ಸ್ಫೋಟದಂತೆಯೇ ಸುರಿದ ಭಾರೀ ಮಳೆಯಿಂದ ನಗರದಲ್ಲಿನ ರಸ್ತೆಗಳು ನದಿಗಳಂತೆ ಹರಿದು, ತಗ್ಗು ಪ್ರದೇಶಗಳು ಜಲಾವೃತಗೊಂಡಿವೆ. ನಿರಂತರ ಮಳೆಯ ಪರಿಣಾಮ ಬಸ್ ನಿಲ್ದಾಣದ ಸುತ್ತಮುತ್ತಲೂ ಹಾಗೂ ಪ್ರಮುಖ ರಸ್ತೆಗಳಲ್ಲಿ ಅಪಾರ ಪ್ರಮಾಣದ ನೀರು ಹರಿದಿದ್ದು, ನಿಲ್ಲಿಸಿದ್ದ ಕೆಲವು ಬೈಕ್‌ಗಳು ನೀರಿನ ಸೆಳೆತಕ್ಕೆ ಕೊಚ್ಚಿ ಹೋಗಿವೆ. ವಾಹನ ಸವಾರರು ತಮ್ಮ ವಾಹನಗಳನ್ನು ರಕ್ಷಿಸಲು ಪರದಾಡಿದ ಘಟನೆಗಳು ಸಾಮಾಜಿಕ ಜಾಲ ತಾಣಗಳಲ್ಲಿ ವೈರಲ್ ಆಗಿರುವ ದೃಶ್ಯಗಳು ಭಯ ಹುಟ್ಟಿಸುತ್ತಿವೆ ಎಂದು ಜನತೆಯು ಮಾತನಾಡಿಕೊಳ್ಳುತ್ತಿದ್ದಾರೆ.

ಕಿಡಿ ನುಡಿ

• ವಾಸುದೇವರಾವ್ ಕಕ್ಕೆನೇಜಿ

◈ ನಮ್ಮ ಆಚಾರ ವಿಚಾರಗಳನ್ನು ತಿಳಿಸುವ,ನಾವು ಬಳಸುವ ವಸ್ತುಗಳನ್ನು ಹೇಳಲು, ನಿಮ್ಮ ಭಾವನೆಗಳನ್ನು ತಿಳಿಸಲು ಭಾರತೀಯ ಭಾಷೆಗಳೇ ಬೇಕು – ಕಲ್ಲಡ್ಕ ಪ್ರಭಾಕರ ಭಟ್

– ಮೊದಲು ನಮ್ಮ ಭಾವನೆಗಳನ್ನೇ ಬದಲಾಯಿಸಬೇಕಾಗಿದೆ ಅಂತ ಅನಿಸುತ್ತಿದೆ.ನಮ್ಮ ದೇಶದ ಉಡುಗೆ ತೊಡುಗೆ, ಆಚಾರ ವಿಚಾರಗಳೆಲ್ಲವೂ ತೀರಾ ಕನಿಷ್ಠ, ಪರದೇಶದ ವಿಚಾರಗಳೆಲ್ಲವೂ ಭಾರೀ ಶ್ರೇಷ್ಠ ಎಂಬ ಮೂರ್ಖತನವನ್ನೇ ಆಧುನಿಕತೆ ಅಂತ ಮರೆಯುತ್ತಾ ನಮ್ಮದನ್ನು ಮರೆಯುತ್ತಿದ್ದೇವೆ!

ದಿನ ಭವಿಷ್ಯ

ಮೇಷ
ಉತ್ಸಾಹ ನಾಶ. ಪ್ರತಿ ಹೆಜ್ಜೆ ಎಚ್ಚರದಿಂದ ಇಡಿ. ಕ್ಲಿಷ್ಟಕರ ಪರಿಸ್ಥಿತಿ ಎದುರಿಸುವಿರಿ. ಮನೆಯ ಬಿಗು ಪರಿಸ್ಥಿತಿ ತಿಳಿಗೊಳಿಸಿ. ವೆಚ್ಚ ಅಧಿಕದ ಚಿಂತೆ.

ವೃಷಭ
ಹಣದ ವಿಚಾರ ಸದ್ಯಕ್ಕೆ ಬಿಡಿ, ದೈನಂದಿನ ಬದುಕಲ್ಲಿ ಉತ್ಸಾಹ ತುಂಬುವ ವಿಷಯಕ್ಕೆ ಪ್ರಾಮುಖ್ಯತೆ ಕೊಡಿ. ಸಂಘರ್ಷ ತಪ್ಪಿಸಿರಿ.

ಮಿಥುನ
ವಿಶೇಷ ಘಟಿಸದ ಸಾಮಾನ್ಯ ದಿನ. ವೃತ್ತಿ ಸಂಬಂಧ ಪ್ರಯಾಣ ಸಾಧ್ಯತೆ. ಕೌಟುಂಬಿಕ ಸಮಸ್ಯೆ ಪರಿಹಾರ ಕಾಣದೆ ಚಿಂತೆ ಉಳಿದೀತು.

ಕಟಕ
ಒತ್ತಡದ ಬದುಕಿಂದ ತುಸು ಹೊರಬಂದು ಜೀವನ ಆನಂದಿಸಲು ಗಮನ ಕೊಡಿ. ಆತ್ಮೀಯರ ಸಂಗದಲ್ಲಿ ಕಾಲ ಕಳೆಯಿರಿ. ಖರ್ಚು ಕಡಿಮೆ ಮಾಡಿ.

ಸಿಂಹ
ನಿಮ್ಮ ಕೆಲಸದಲ್ಲಿ ಬದಲಾವಣೆ ಬಂದೀತು ನಿರೀಕ್ಷೆಗಿಂತ ಅಧಿಕ ಕಾರ್ಯ. ಒತ್ತಡ ಅಧಿಕ. ಆದರೂ ದಿನದಂತ್ಯಕ್ಕೆ ಸಮಾಧಾನ ಪಡುವಿರಿ.

ಕನ್ಯಾ
ಬಳಲಿಕೆ, ಒತ್ತಡ ಇಂದು ಕಾಡಬಹುದು. ವೃತ್ತಿಯಲ್ಲೂ, ಖಾಸಗಿ ಬದುಕಲ್ಲೂ ಅನುಚಿತ ಬೆಳವಣಿಗೆ ಕಾಣುವಿರಿ.

ತುಲಾ
ಗಾಬರಿ ಪಡಿಸುವ ಪ್ರಸಂಗ ಉಂಟಾದೀತು. ವಸ್ತು ಕಳವಿನ ಸಾಧ್ಯತೆ ಇದೆ. ಅಜೀರ್ಣ ಸಂಬಂಧಿ ಹೊಟ್ಟೆ ಸಮಸ್ಯೆ. ಸಮಚಿತ್ತದಿಂದ ವ್ಯವಹರಿಸಿ.

ವೃಶ್ಚಿಕ
ನಿಮ್ಮ ಅಂಜಿಕೆ, ಚಿಂತೆಗಳ ಬಗ್ಗೆ ಮುಕ್ತ ವಿಮರ್ಶೆ ನಡೆಸಿ. ಅದರ ಪರಿಹಾರಕ್ಕೆ ಪ್ರಾಮಾಣಿಕ ಪ್ರಯತ್ನ ಮಾಡಿರಿ. ಪಲಾಯನ ಮಾಡದಿರಿ.

ಧನು
ಕಾರ್ಯ ಅಪೂರ್ಣ. ಪ್ರಮುಖ ಕಾರ್ಯ ಕೈಗೆತ್ತಿಕೊಳ್ಳದಿರಿ. ಆಪ್ತ ಸಂಬಂಧದಲ್ಲಿ ಒಡಕು. ಸಮಾಧಾನದ ನಡೆ ಅತ್ಯವಶ್ಯ.

ಮಕರ
ವಿವಾದ ಸೃಷ್ಟಿಸುವ ವಿಷಯದಿಂದ ದೂರವಿರಿ. ಪ್ರಮುಖ ಸಭೆ ಮುಂದೂಡಿ. ವೃತ್ತಿ ಸಂಬಂಧಿತ ವ್ಯವಹಾರ ಕಷ್ಟಕ್ಕೆ ಸಿಲುಕಬಹುದು.

ಕುಂಭ
ಫಲಪ್ರದ ದಿನವಲ್ಲ. ಎಲ್ಲರ ಜತೆ ಬೆರೆಯದೆ ಏಕಾಂಗಿಯಾಗಿರಲು ಬಯಸುವಿರಿ. ಆತ್ಮೀಯರ ಸಂಗಡ ಕಾಲ ಕಳೆಯಿರಿ. ಹುರುಪು ತುಂಬಿಕೊಳ್ಳಿ.

ಮೀನ
ನಿಮ್ಮ ಸಮಸ್ಯೆ ಮುಗಿಯುತ್ತಿಲ್ಲ ಎಂಬ ಚಿಂತೆ ಕಾಡುವುದು. ಸ್ವಲ್ಪ ದಿನ ಕಾಯಿರಿ, ಬಳಿಕ ಎಲ್ಲ ಸರಿಯಾಗಲಿದೆ.

ರಾಹುಕಾಲ: 3.00– 4.30
ಗುಳಿಕಕಾಲ: 12.00–1.30
ಅದೃಷ್ಟ ಸಂಖ್ಯೆ: 5,0,3,9

ಐದು ಸ್ಥಾನ ಗೆಲ್ಲಲು ಕೈ ರಣತಂತ್ರ | ಚುನಾವಣೆ ಪೈಪೋಟಿ ಖಾತ್ರಿ

ಮೇಲ್ಮನೆ ಕದನ ಕುತೂಹಲ

• **ಬೆಂಗಳೂರು:** ವಿಧಾನ ಪರಿಷತ್‌ಗೆ ಕಾಂಗ್ರೆಸ್‌ನಿಂದ ವಿನಯ್ ಕಾರ್ತಿಕ್ ಐದನೇ ಅಭ್ಯರ್ಥಿ ಕಣಕ್ಕೆ ಇಳಿದಿರುವುದರಿಂದ ಚುನಾವಣೆ ತುರುಸಿನ ಪೈಪೋಟಿಯಾಗುವುದು ಖಾತ್ರಿಯಾಗಿದೆ.

ಶಾಸಕರ ಸಂಖ್ಯಾಬಲದ ಆಧಾರದ ಮೇಲೆ ಕಾಂಗ್ರೆಸ್ ನಾಲ್ಕು, ಮತ್ತು ಬಿಜೆಪಿ ಎರಡು ಸ್ಥಾನಗಳನ್ನು ಅನಾಯಾಸವಾಗಿ ಗೆಲ್ಲಬಹುದಾಗಿದೆ. ಇನ್ನೊಂದು ಸ್ಥಾನಕ್ಕೆ ಎನ್‌ಡಿಎ ಮೈತ್ರಿ ಕೂಟದಿಂದ ಗೋವಿಂದಾ ರಾಜು ಅವರು ನಾಮಪತ್ರ ಸಲ್ಲಿಸಿದ್ದು, ಹೆಚ್ಚುವರಿ ಮತಗಳನ್ನು ಸೆಳೆಯಲು ಕಾಂಗ್ರೆಸ್ ತಂತ್ರ ರೂಪಿಸಿದೆ. ಕಾಂಗ್ರೆಸ್‌ನಿಂದ ಬಿ.ಕೆ. ಹರಿಪ್ರಸಾದ್, ಶಿವಣ್ಣ ಕಮಕನೂರ, ಪಿ.ವಿ. ಮೋಹನ್, ಶಿವಣ್ಣ ಮಳವಳ್ಳಿ ಮತ್ತು ವಿನಯ್ ಕಾರ್ತಿಕ್ ಸ್ಪರ್ಧಿಸಿದ್ದು, ಬಿಜೆಪಿಯಿಂದ ರಘು ಕೌಟಿಲ್ಯ ಮತ್ತು ಲಿಂಗರಾಜ್ ಪಾಟೀಲ ಕಣದಲ್ಲಿದ್ದಾರೆ. ಗೋವಿಂದರಾಜು ಮೈತ್ರಿ ಕೂಟದ ಅಭ್ಯರ್ಥಿಯಾಗಿದ್ದಾರೆ. ಮಂಗಳವಾರ ನಾಮಪತ್ರಗಳ ಪರಿಶೀಲನೆ ನಡೆಯಲಿದ್ದು, ನಾಮಪತ್ರಗಳು ಸೂಕ್ತವಾಗಿದ್ದಲ್ಲಿ ಚುನಾವಣೆ ಕಣ ರಂಗೇರಲಿದೆ.

62 ಸ್ಥಾನಗಳನ್ನು ಹೊಂದಿರುವ ಬಿಜೆಪಿಗೆ ಜನಾರ್ದನ್ ರೆಡ್ಡಿ ಅವರ ಬೆಂಬಲ ಸೇರಿ 63 ಆಗಲಿದೆ, ಯತ್ನಾಳ, ಎಸ್.ಟಿ. ಸೋಮಶೇಖರ್ ಮತ್ತು ಶಿವರಾಮ್ ಹೆಬ್ಬಾರ್ ಅವರನ್ನು ಪಕ್ಷದದಿಂದ ಉಚ್ಚಾಟಿಸಲಾಗಿದ್ದು, ಎಲ್ಲಾ ಪಕ್ಷದಿಂದ ಇವರುಗಳ ಮತಗಳನ್ನು ಸೆಳೆಯುವ ಯತ್ನಗಳು ನಡೆದಿವೆ. 18 ಸ್ಥಾನಗಳನ್ನು ಹೊಂದಿರುವ ಜೆಡಿಎಸ್ ಬಿಜೆಪಿಯ ಹೆಚ್ಚುವರಿ ಮತಗಳನ್ನು ಪಡೆದರೂ ಗೆಲುವು ಕಷ್ಟವಾಗಿದ್ದು, ಜೆಡಿಎಸ್ ಕೂಡಾ ಬಿಜೆಪಿ ಉಚ್ಚಾಟಿತ ಮೂವರು ಶಾಸಕರ ಮತಗಳು ಅವಶ್ಯಕವಾಗಿವೆ.

ಕಾಂಗ್ರೆಸ್‌ನ 5ನೇ ಅಭ್ಯರ್ಥಿಯ ನಾಮಪತ್ರ ಸಲ್ಲಿಸಿದ್ದರಿಂದ ವಿಧಾನ ಪರಿಷತ್‌ಗೆ ಚುನಾವಣೆ ನಡೆಯುವುದು ಪಕ್ಕಾ, ಜೂ.11ರಂದು ನಾಮಪತ್ರ ಹಿಂಪಡೆಯಲು ಕೊನೆಯ ದಿನವಾಗಿದೆ. ಕಣದಲ್ಲಿರುವ ಅಭ್ಯರ್ಥಿಗಳು ನಾಮಪತ್ರ ವಾಪಸ್ ಪಡೆಯುವುದು ಬಹುತೇಕ ಅನುಮಾನವಾಗಿದ್ದು, ಚುನಾವಣಾ ಚಟುವಟಿಕೆಗಳು ಜೋರಾಗಲಿವೆ.



ಕಾಂಗ್ರೆಸ್‌ಗೆ ಗೆಲುವು? ಒಂದು ಸ್ಥಾನಕ್ಕೆ 28 ಮತಗಳು ಬೇಕಿದ್ದು ಕಾಂಗ್ರೆಸ್‌ನ 134 ಸ್ಥಾನಗಳ ಪೈಕಿ, ಇಬ್ಬರು ಪಕ್ಷೇತರರ ಬೆಂಬಲ ಇದ್ದು, ಸ್ಪೀಕರ್ ಸೇರಿದಂತೆ ಎಸ್‌ಕೆಪಿ ಪಕ್ಷದ ದರ್ಶನ್ ಪುಟ್ಟಣ್ಣಯ್ಯ ಸೇರಿದರೆ ಒಟ್ಟು ಒಟ್ಟು 138 ಮತಗಳಾಗಲಿದ್ದು, ಬಿಜೆಪಿಯಿಂದ ಉಚ್ಚಾಟನೆಗೊಂಡಿರುವ ಶಿವರಾಮ್ ಹೆಬ್ಬಾರ್ ಮತ್ತು ಎಸ್.ಟಿ ಸೋಮಶೇಖರ್ ಮತ ನೀಡಿದರೆ ಕಾಂಗ್ರೆಸ್ 5ನೇ ಅಭ್ಯರ್ಥಿ ಗೆಲುವು ಸುಲಭವಾಗಲಿದೆ. ಇದರ ಜತೆಗೆ ಜೆಡಿಎಸ್‌ನ ಕೆಲವು ಶಾಸಕರನ್ನು ಸಂಪರ್ಕ ಮಾಡಲಾಗಿದ್ದು, ಅಡ್ಡಮತದಾನ ಆದಲ್ಲಿ ಗೆಲುವು ಖಚಿತವಾಗಲಿದೆ.

ಪರಂಗೆ ಡಿಸಿಎಂ ಸ್ಥಾನ ಸಿಕ್ಕಿದ್ದು ತೃಪ್ತಿಯಿದೆ: ಜಾರಕಿಹೊಳಿ

ಪಕ್ಷದಲ್ಲಿ ಯಾರಿಗೂ ಅನ್ಯಾಯವಾಗಿಲ್ಲ

• **ಬೆಳಗಾವಿ:** ಪಕ್ಷದಲ್ಲಿ ಯಾರಿಗೂ ಅನ್ಯಾಯವಾಗಿಲ್ಲ, ಎಲ್ಲರಿಗೂ ಒಂದೇ ಬಾರಿಗೆ ಎಲ್ಲವೂ ಸಿಗಲು ಸಾಧ್ಯವಿಲ್ಲ. ಡಿಸಿಎಂ ಜಿ.ಪರಮೇಶ್ವರ ನಮ್ಮವರೇ. ಹೈಕಮಾಂಡ್ ಅವರಿಗೆ ಜವಾಬ್ದಾರಿ ನೀಡಿದೆ. ಅಷ್ಟಕ್ಕೇ ನಾವು ತೃಪ್ತಿಪಡಬೇಕು ಎಂದು ಲೋಕೋಪಯೋಗಿ ಇಲಾಖೆ ಸಚಿವ ಸತೀಶ ಜಾರಕಿಹೊಳಿ ಹೇಳಿದರು.

ಸೋಮವಾರ ಬೆಳಗಾವಿ ಕಾಂಗ್ರೆಸ್ ಭವನದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಡಿಸಿಎಂ ಮತ್ತು ಕೆಪಿಸಿಸಿ ಅಧ್ಯಕ್ಷ ಸ್ಥಾನ ಕೈ ತಪ್ಪಿದ ವಿಚಾರಕ್ಕೆ ಪ್ರತಿಕ್ರಿಯೆ ನೀಡಿದ ಅವರು, ಒಬ್ಬರಿಗೆ ಒಂದು ಸ್ಥಾನ ಎನ್ನುವ ಕಾರಣದಿಂದ ಅಧ್ಯಕ್ಷ ಸ್ಥಾನ ಸಿಗಲಿಲ್ಲ. ಈ ಹಿಂದೆ ಇಂತಹ ಪರಿಸ್ಥಿತಿ ಇರಲಿಲ್ಲ, ಆದರೆ, ಈಗ ಪಕ್ಷದ ಆದೇಶವನ್ನು ಪ್ರತಿಯೊಬ್ಬರೂ ಪಾಲಿಸಲೇಬೇಕು ಎಂದು ತಿಳಿಸಿದರು.



ಜಿ.ಪರಮೇಶ್ವರ ಅವರಿಗೆ ಉಪಮುಖ್ಯಮಂತ್ರಿ ಸ್ಥಾನ ದೊರೆಯುವಲ್ಲಿ ಸಿದ್ದರಾಮಯ್ಯನವರ ಪ್ರಯತ್ನ ಮತ್ತು ಬೆಂಬಲ ಪ್ರಮುಖ ಕಾರಣ. ಸಿದ್ದರಾಮಯ್ಯನವರು ತಮ್ಮ ಒಡನಾಡಿಗಳು, ಪಕ್ಷದ ಹಿರಿಯ ನಾಯಕರಿಗೆ ಸೂಕ್ತ ಸ್ಥಾನಮಾನ ಕೊಡಿಸಲು ಸದಾ ಶ್ರಮಿಸಿದ್ದಾರೆ ಎಂಬುದನ್ನು ಒತ್ತಿ ಹೇಳಿದರು. ಸಿದ್ಧಾಂತದಲ್ಲಿ ಪ್ರಾಮಾಣಿಕವಾಗಿ ಕೆಲಸ ಮಾಡಿದಾಗ ಮಾತ್ರ ಜನಸಾಮಾನ್ಯರ ಮನಸ್ಸಿನಲ್ಲಿ ಜನನಾಯಕರಾಗಿ ಬೆಳೆಯಲು ಸಾಧ್ಯ ಎಂದರು.

ಬೆಳಗಾವಿಗೆ ಇನ್ನೊಂದು ಸಚಿವ ಸ್ಥಾನ ಖಚಿತ

ಬೆಳಗಾವಿಗೆ ಮತ್ತೊಂದು ಸಚಿವ ಸ್ಥಾನ ಸಿಗುವ ಕುರಿತು ದೃಢ ವಿಶ್ವಾಸ ವ್ಯಕ್ತಪಡಿಸಿದರು. ಬೆಳಗಾವಿ ದೊಡ್ಡ ಜಿಲ್ಲೆಯಾಗಿದ್ದು, ಇಲ್ಲಿನ ರಾಜಕೀಯ ಪ್ರಾತಿನಿಧ್ಯವನ್ನು ನಿರ್ಲಕ್ಷಿಸಲು ಸಾಧ್ಯವಿಲ್ಲ. ಜಿಲ್ಲೆಗೆ ಇನ್ನೊಂದು ಸಚಿವ ಸ್ಥಾನ ನೀಡಬೇಕು ಎಂಬ ಬೇಡಿಕೆಯ ಕುರಿತು ನಾನು ಈಗಾಗಲೇ ಪಕ್ಷದ ವರಿಷ್ಠರೊಂದಿಗೆ ಮಾತನಾಡಿದ್ದೇನೆ. ಬೆಳಗಾವಿಗೆ ಮತ್ತೊಂದು ಸಚಿವ ಸ್ಥಾನ ಸಿಕ್ಕೇ ಸಿಗುತ್ತದೆ ಎಂಬ ಸಂಪೂರ್ಣ ಭರವಸೆ ನನಗಿದೆ ಎಂದರು.

ಬಡವರ ಕಲ್ಯಾಣ, ದೇಶದ ಸಮಗ್ರ ಅಭಿವೃದ್ಧಿಗೆ ಆದ್ಯತೆ

ಪುಟ ೧➡ ಭಾರತ ಈ 12 ವರ್ಷಗಳಲ್ಲಿ ಒಂದು ಮಹತ್ವದ ಪರಿವರ್ತನೆ ಕಂಡಿದ್ದು, ಬಡವರು ಮತ್ತು ದುರ್ಬಲ ವರ್ಗದವರ ಕಲ್ಯಾಣವನ್ನು ಸರಕಾರದ ಪರಮಾದ್ಯತೆಯನ್ನಾಗಿ ಮಾಡಲಾಗಿದೆ. ಅಂತ್ಯೋದಯ ತತ್ತ್ವದ ಪ್ರೇರಣೆಯೊಂದಿಗೆ 80 ಕೋಟಿ ಬಡವರಿಗೆ ಉಚಿತ ಅಕ್ಕಿ ವಿತರಣೆಯ ಮೂಲಕ ದೇಶದಲ್ಲಿ ಹಸಿವೆಯಿಂದ ಜನರು ನಲುಗದಂತೆ ನೋಡಿಕೊಳ್ಳುವ ಜೊತೆಗೆ, ದಶಕಗಳಿಂದ ಹಿಂದೆ ಬಿದ್ದ ಜನರಿಗೂ ಅಭಿವೃದ್ಧಿ ಯೋಜನೆಗಳು ತಲುಪುವಂತೆ ಮಾಡಲು ಜನರ ಸಹಭಾಗಿತ್ವಕ್ಕೆ ಒತ್ತು ನೀಡಲಾಗಿದೆ ಎಂಬುದನ್ನು ಮೋದಿಯವರು ಬೊಟ್ಟು ಮಾಡಿದ್ದಾರೆ.

ಹಿಂದೆಲ್ಲ ತಂತ್ರಜ್ಞಾನ ಎಂದರೆ ಶ್ರೀಮಂತರಿಗೆ, ಬಡವರಿಗೇನು ಎಂಬ ಪ್ರಶ್ನೆಗಳಿದ್ದರೆ, ಇಂದು ಅದೇ ತಂತ್ರಜ್ಞಾನವನ್ನು ಬಡವರ ಜೀವನಮಟ್ಟ ಸುಧಾರಣೆಗೆ ಬಳಸಿ ಅವರಿಗೂ ಉತ್ತಮ ಗುಣಮಟ್ಟದ ಜೀವನ ನಡೆಸುವಂತೆ ಮಾಡಲು ಸರಕಾರ ಮುಂದಾಗಿರುವುದಕ್ಕೆ ನೇರ ಲಾಭ ವರ್ಗಾವಣೆ ಮತ್ತು ಡಿಜಿಟಲ್ ವೇದಿಕೆಗಳು ತಾಜಾ ನಿದರ್ಶನವಾಗಿದೆ.

ಇದರಿಂದ ಸರಕಾರದ ಯೋಜನೆಗಳು ಯಾವುದೇ ಲಂಚರುಷುವತ್ತುಗಳಿಲ್ಲದೆ ಪಾರದರ್ಶಕ ನೆಲೆಯಲ್ಲಿ ಜನರಿಗೆ ತಲುಪುವಂತೆ ಮಾಡಲಾಗಿದೆ. ಇದರಿಂದಾಗಿ ಸರಕಾರದ ಹಣ ಸೋರಿಕೆಯಾಗುವುದನ್ನು ತಡೆಗಟ್ಟಲು, ದಕ್ಷತೆ ಹೆಚ್ಚಿಸಲು ಮತ್ತು ಆಡಳಿತದ ಬಗ್ಗೆ ಜನತೆಯಲ್ಲಿ ವಿಶ್ವಾಸ, ನಂಬಿಕೆ ಬಲಗೊಳಿಸಲು ನೆರವಾಗಿದೆ ಎಂದು ಮೋದಿಯವರು ತಿಳಿಸಿದ್ದಾರೆ.

ಗರೀಬ್ ಕಲ್ಯಾಣ ಎಂಬುದು ಬರಿಯ ಘೋಷಣೆಯಾಗಿರದೆ ಇಂದು ಅದು ಮಾನವ ಸಬಲೀಕರಣದತ್ತ ಸಾಮೂಹಿಕ ಚಳವಳಿಯಾಗಿ ಮೂಡಿಬಂದಿದ್ದು, ಇದು ನಮ್ಮ ವಿಕಸಿತ ಭಾರತ್ ಕನಸನ್ನು ನನಸಾಗಿಸಲು ನೆರವಾಗಲಿದೆ ಎಂದಿದ್ದಾರೆ. ಕೇಂದ್ರದ ನರೇಂದ್ರ ಮೋದಿ ನೇತೃತ್ವದ ಎನ್‌ಡಿಎ ಸರಕಾರದ 12 ವರ್ಷಗಳು ಖಂಡಿತವಾಗಿಯೂ ಬಡವರ ಕಲ್ಯಾಣಕ್ಕೆ ಸಮರ್ಪಿತವಾಗಿದೆ ಎಂದು ಬಿಜೆಪಿ, ಎನ್‌ಡಿಎ ನಾಯಕರು ವಿಶ್ಲೇಷಿಸಿದ್ದಾರೆ. ಭಾರತದಲ್ಲಿ ಸರಕಾರದ ಸಾಧನೆಗಳ ಬಗ್ಗೆ ಚರ್ಚಿಸುವಾಗಲೆಲ್ಲ ಬಡವರ ಕಲ್ಯಾಣಕ್ಕೆ ಆದ್ಯತೆ ನೀಡುತ್ತಾ ಬರಲಾಗಿದೆ.

ಕಳೆದ 12 ವರ್ಷಗಳಲ್ಲಿ ಕೇಂದ್ರ ಸರಕಾರವು, ಪಿಎಂ ಗರೀಬ್ ಕಲ್ಯಾಣ್ ಅನ್ನ ಯೋಜನೆಯ ಮೂಲಕ ಬಡವರ ಅಭಿವೃದ್ಧಿಯನ್ನು ತನ್ನ ಪ್ರಾಥಮಿಕ ಆದ್ಯತೆಯಾಗಿ ಗುರುತಿಸಿ ಕೊಂಡಿತ್ತು. ಹಸಿವೆ ಮುಕ್ತ ಸಮಾಜ-ದೇಶ ನಿರ್ಮಾಣದಲ್ಲಿ ಘೋಷಣೆಗಳಿಂದಾಚೆಗೆ ನಿಜವಾಗಿಯೂ ಸಾಕಾರಗೊಳಿಸಿರುವುದು, ಸರಕಾರದ ಈ ನಿಟ್ಟಿನ ಹಲವು ಯೋಜನೆಗಳಿಂದ ಗ್ರಾಮೀಣ ಜನರ ಬದುಕಿನಲ್ಲಿ ಪರಿವರ್ತನೆಯೊಂದನ್ನು ತರಲು ಸಾಧ್ಯವಾಗಿರುವುದು ಗಮನಾರ್ಹವೆಂದು ಈ ಕುರಿತ ವಿಶ್ಲೇಷಣೆಯಲ್ಲಿ ವಿವರಿಸಲಾಗಿದೆ.

ನೆಹರು ದಾಖಲೆ ಮುರಿಯಲಿರುವ ಪ್ರಧಾನಿ ನರೇಂದ್ರ ಮೋದಿ

ಪುಟ ೧➡ ಹೀಗಾಗಿ ಮೋದಿ ಅವರ 4,399 ದಿನಗಳ ಆಡಳಿತವು ಕೇವಲ ಒಂದು ದಾಖಲೆಯಲ್ಲ, ಆಧುನಿಕ ಭಾರತದ ರೂಪಾಂತರದ ಪ್ರಮುಖ ಅಧ್ಯಾಯವಾಗಿಯೂ ಪರಿಗಣಿಸಲಾಗುತ್ತಿದೆ.

ಸವಾಲುಗಳ ನಡುವೆಯೂ ಜಗದ ಮನ್ನಣೆ ಪಡೆದ ಭಾರತ

ಪುಟ ೧➡ 2024ರ ಸಂಸದೀಯ ಚುನಾವಣೆಯಲ್ಲಿ 3ನೇ ಬಾರಿಗೆ ಅಧಿಕಾರಕ್ಕೆ ಬಂದ ಮೋದಿಯವರು ವಿಪಕ್ಷಗಳಿಂದ ಸತತ ಅಡ್ಡಿ, ಆತಂಕಗಳನ್ನು ಎದುರಿಸುವ ಜೊತೆಗೆ ಬಾಹ್ಯ ಪ್ರೇರಿತ ಸವಾಲುಗಳಿಗೆ ಎದೆಯೊಡ್ಡುತ್ತಲೇ ದೇಶವನ್ನು ಆತ್ಮನಿರ್ಭರತೆಯೆಡೆಗೆ ಒಯ್ಯಲು ನಿರಂತರ ಶ್ರಮಿಸುತ್ತಿದ್ದಾರೆ. ನರೇಂದ್ರ ಮೋದಿ ಸರಕಾರವನ್ನು ಅಸ್ಥಿರಗೊಳಿಸಲು ಆಂತರಿಕವಾಗಿ ಮತ್ತು ಬಾಹ್ಯ ನೆಲೆಗಳಿಂದ ನಡೆಯುತ್ತಿರುವ ಸತತ ಸಂಚು -ಪಿತೂರಿಗಳು ನಡೆಯುತ್ತಿರುವ ನಡುವೆಯೂ ದೇಶದ ಜನತೆ ಮೋದಿಯವರಲ್ಲಿ ವಿಶ್ವಾಸ ಇಟ್ಟಿದ್ದಾರೆ. ಹಾಗೆಯೇ ಚುನಾವಣಾ ಆಯೋಗದ ವಿಶ್ವಾಸಾರ್ಹತೆಗೇ ಧಕ್ಕೆ ಉಂಟು ಮಾಡುವ ಸತತ ಯತ್ನಗಳ ನಡುವೆಯೂ ದೇಶದಲ್ಲಿ ಮತಗಟ್ಟೆ ವಂಚನೆ, ಬೂತ್ ವಶೀಕರಣ, ಬೆದರಿಕೆ, ಹಿಂಸೆಗಳನ್ನು ತಡೆದು ನಿರ್ಭಯದಲ್ಲಿ ಪ್ರಜಾತಂತ್ರ ವ್ಯವಸ್ಥೆಯನ್ನು ಬಲಪಡಿಸುವ ಹೆಜ್ಜೆಗಳು, ವಿಶ್ವದೆಲ್ಲೆಡೆ ಭಾರತ-ಭಾರತೀಯರಿಗೆ ಮನ್ನಣೆ ಲಭಿಸುತ್ತಿರುವುದು ಗಮನ ಸೆಳೆಯುವ ಅಂಶವೆಂದು ವಿಶ್ಲೇಷಿಸಲಾಗಿದೆ.

ರಾಜ್ಯಸಭೆಗೆ ನಾಲ್ವರ ಅವಿರೋಧ ಆಯ್ಕೆ?

ಪುಟ ೧➡ ಎನ್‌ಡಿಎ ಮೈತ್ರಿಕೂಟದಲ್ಲಿ ಜೆಡಿಎಸ್ ಇರುವುದರಿಂದ ರಾಜ್ಯಸಭೆ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿಯನ್ನೇ ಬೆಂಬಲಿಸಲಿದೆ. ರಾಜ್ಯಸಭೆ ಚುನಾವಣೆಗೆ ಪಕ್ಷೇತರ ಅಭ್ಯರ್ಥಿಯಾಗಿ ಕೊಡಗಿನ ಬೋಜಣ್ಣ ಸೋಮಯ್ಯ ಅವರು ಉಮೇದುವಾರಿಕೆ ಸಲ್ಲಿಸಿದ್ದಾರೆ. ಇವರ ನಾಮಪತ್ರಕ್ಕೆ ಸೂಚಕರ ಸಹಿ ಇಲ್ಲದಿರುವ ಹಿನ್ನೆಲೆಯಲ್ಲಿ ಬಹುತೇಕ ತಿರಸ್ಕೃತವಾಗಲಿದೆ. ಹೀಗಾಗಿ, ಅಂತಿಮವಾಗಿ ಚುನಾವಣಾ ಕಣದಲ್ಲಿ ಉಳಿಯುವ ಕಾಂಗ್ರೆಸ್‌ನ ಮೂವರು ಹಾಗೂ ಬಿಜೆಪಿಯ ಒಬ್ಬ ಅಭ್ಯರ್ಥಿ ಚುನಾಯಿತರಾಗಲಿದ್ದಾರೆ. ಮಂಗಳವಾರ ನಾಮಪತ್ರಗಳ ಪರಿಶೀಲನೆ ನಡೆದು ಸಿಂಧುವಾದ ನಾಮಪತ್ರಗಳನ್ನು ಪ್ರಕಟಿಸಲಾಗುತ್ತದೆ. ಉಮೇದುವಾರಿಕೆ ವಾಪಸ್ ಪಡೆಯಲು ಜೂ.11ರವರೆಗೆ ಅವಕಾಶವಿದೆ. ಅಂದು ಮಧ್ಯಾಹ್ನ 3 ಗಂಟೆಯ ನಂತರ ಅಂತಿಮವಾಗಿ ಚುನಾವಣಾ ಕಣದಲ್ಲಿರುವ ಅಭ್ಯರ್ಥಿಗಳ ಪಟ್ಟಿ ಪ್ರಕಟಿಸಲಾಗುತ್ತದೆ. ಚುನಾವಣಾ ಕಣದಲ್ಲಿ ಕಾಂಗ್ರೆಸ್‌ನ ಮೂವರು, ಬಿಜೆಪಿಯ ಒಬ್ಬ ಉಳಿಯುವುದರಿಂದ ಚುನಾವಣಾಧಿಕಾರಿ ಅವಿರೋಧವಾಗಿ ಆಯ್ಕೆಯಾಗಿರುವುದನ್ನು ಪ್ರಕಟಿಸಲಿದ್ದಾರೆ. ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಬಿಜೆಪಿಯ ಈರಣ್ಣ ಕಡಾಡಿ, ನಾರಾಯಣ ಕೊರಗಪ್ಪ ಅವರು ರಾಜ್ಯಸಭೆ ಸದಸ್ಯ ಸ್ಥಾನದಿಂದ ಜೂ.25ರಂದು ನಿವೃತ್ತಿಯಾಗಲಿದ್ದಾರೆ. ಇವರ ನಿವೃತ್ತಿಯಿಂದ ತೆರವಾಗುವ ರಾಜ್ಯಸಭಾ ಸದಸ್ಯ ಸ್ಥಾನಗಳಿಗೆ ಚುನಾವಣಾ ಪ್ರಕ್ರಿಯೆ ನಡೆಯುತ್ತಿದೆ.



ಬಿಜೆಪಿ ಅಭ್ಯರ್ಥಿಗಳಿಂದ ನಾಮಪತ್ರ

• **ಬೆಂಗಳೂರು:** ರಾಜ್ಯಸಭೆ ಮತ್ತು ವಿಧಾನಪರಿಷತ್ ಚುನಾವಣೆಗಳಿಗೆ ನಾಮಪತ್ರ ಸಲ್ಲಿಕೆಗೆ ಕೊನೆಯ ದಿನವಾದ ಸೋಮವಾರ ಬಿಜೆಪಿ ಅಭ್ಯರ್ಥಿಗಳು ಉಮೇದುವಾರಿಕೆ ಸಲ್ಲಿಸಿದ್ದಾರೆ. ರಾಜ್ಯ ವಿಧಾನಸಭೆಯಿಂದ ರಾಜ್ಯಸಭೆಗೆ ನಡೆಯುವ ಚುನಾವಣೆಗೆ ಬಿಜೆಪಿ ಅಭ್ಯರ್ಥಿಯಾಗಿ ಪ್ರೊ. ಎಂ.ನಾಗರಾಜ್ ಹಾಗೂ ವಿಧಾನ ಪರಿಷತ್ ಸ್ಥಾನಗಳಿಗೆ ಪಕ್ಷದ ಅಭ್ಯರ್ಥಿಗಳಾದ ಲಿಂಗರಾಜ್ ಪಾಟೀಲ್ ಮತ್ತು ರಘು ಕೌಟಿಲ್ಯ ಅವರು ಚುನಾವಣಾಧಿಕಾರಿ ವಿಶಾಲಾಕ್ಷಿ ಅವರಿಗೆ ನಾಮಪತ್ರ ಸಲ್ಲಿಸಿದರು. ಈ ವೇಳೆ ಪಕ್ಷದ ರಾಜ್ಯಾಧ್ಯಕ್ಷ ಮತ್ತು ಶಾಸಕ ಬಿ.ವೈ.ವಿಜಯೇಂದ್ರ, ಕೇಂದ್ರೀಯ ಸಂಸದೀಯ ಮಂಡಳಿ ಸದಸ್ಯ ಮತ್ತು ಮಾಜಿ ಸಿಎಂ ಬಿ.ಎಸ್.ಯಡಿಯೂರಪ್ಪ, ವಿಧಾನಪರಿಷತ್ ಪ್ರತಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ, ಶಾಸಕ ಡಾ. ಸಿ.ಎನ್. ಅಶ್ವತ್ಥನಾರಾಯಣ, ರಾಜ್ಯಸಭಾ ಸದಸ್ಯ ಲೆಹರ್ ಸಿಂಗ್, ವಿಧಾನಸಭೆಯ ಪ್ರತಿಪಕ್ಷ ಮುಖ್ಯ ಸಚೇತಕ ದೊಡ್ಡನಗೌಡ ಜಿ. ಪಾಟೀಲ್, ವಿಧಾನಪರಿಷತ್ ಪ್ರತಿಪಕ್ಷ ಮುಖ್ಯ ಸಚೇತಕ ಎನ್.ರವಿಕುಮಾರ್ ಮತ್ತಿತರರು ಉಪಸ್ಥಿತರಿದ್ದು ಅಭ್ಯರ್ಥಿಗಳಿಗೆ ಶುಭ ಹಾರೈಸಿದರು.

> ರಾಜಕಾರಣದಲ್ಲಿ ಚದುರಂಗದ ಆಟ ಆಡುವಾಗ ಯಾರಾದರೂ ಯಾವ ರೀತಿ ಕಾಯಿ ನಡೆಸುತ್ತಾರೆ ಎಂದು ಹೇಳುತ್ತಾರೆಯೇ? ಯಾರೂ ಹೇಳುವುದಿಲ್ಲ.
> ■ **ಡಿ.ಕೆ. ಶಿವಕುಮಾರ್,** ಸಿಎಂ

ಐಡಿ ಇದ್ದರಷ್ಟೆ ಪಬ್ ಪ್ರವೇಶ: ಗೃಹ ಸಚಿವ

ಪುಟ ೧➡ **ಅಪ್ರಾಪ್ತರಿಗೆ ಮದ್ಯ ಪೂರೈಸುವ ಸಂಸ್ಥೆಗೆ ನೋಟೀಸ್ ನೀಡಿ:** ಅಪ್ರಾಪ್ತ ವಯಸ್ಕರ ಪ್ರವೇಶವನ್ನು ಕಟ್ಟುನಿಟ್ಟಾಗಿ ತಡೆಯಲು ಮತ್ತು ಮದ್ಯ ಸರಬರಾಜು ಮಾಡುವುದನ್ನು ನಿಷೇಧಿಸಲು ಬೆಂಗಳೂರಿನ ಎಲ್ಲಾ ಪಬ್‌ಗಳು, ಬ್ರೂವರೀಸ್, ಬಾರ್‌ಗಳು, ಕ್ಲಬ್‌ಗಳು, ಲಾಂಜ್‌ಗಳು, ರೆಸ್ಟೋರೆಂಟ್‌ಗಳು ಹಾಗೂ ಮದ್ಯ ಸರಬರಾಜು ಮಾಡುವ ಇತರ ಸಂಸ್ಥೆಗಳಿಗೆ ನೋಟಿಸ್ ಜಾರಿ ಮಾಡುವಂತೆ ಸಚಿವ ಪ್ರಿಯಾಂಕ್ ಖರ್ಗೆ ಹಿರಿಯ ಪೊಲೀಸ್ ಅಧಿಕಾರಿಗಳಿಗೆ ನಿರ್ದೇಶನ ನೀಡಿದ್ದಾರೆ.

ಪ್ರವೇಶ ದ್ವಾರದಲ್ಲೇ ಐಡಿ ಕಾರ್ಡ್ ಪರಿಶೀಲಿಸಿ: ಮದ್ಯ ಸರಬರಾಜು ಮಾಡುವ ಎಲ್ಲಾ ಸಂಸ್ಥೆಗಳು ಪ್ರವೇಶ ದ್ವಾರದಲ್ಲಿ ಮತ್ತು ಮದ್ಯವನ್ನು ನೀಡುವ ಮೊದಲು ಕಟ್ಟುನಿಟ್ಟಾದ ವಯಸ್ಸಿನ ಪರಿಶೀಲನಾ ನಿಯಮಗಳನ್ನು ಜಾರಿಗೆ ತರಬೇಕು ಎಂದು ಆದೇಶಿಸಿದ್ದಾರೆ. ಅಲ್ಲದೆ, ಸಂಸ್ಥೆಯ ಆವರಣದೊಳಗೆ ನಡೆಯುವ ನಿಯಮ ಉಲ್ಲಂಘನೆಗಳಿಗೆ ಆಯಾ ಸಂಸ್ಥೆಯ ಮಾಲೀಕರು, ವ್ಯವಸ್ಥಾಪಕರು, ಪರವಾನಗಿದಾರರು ಮತ್ತು ಕಾರ್ಯಕ್ರಮದ ಆಯೋಜಕರನ್ನು ನೇರ ಹೊಣೆಗಾರರನ್ನಾಗಿ ಮಾಡಲಾಗುತ್ತದೆ ಎಂದು ಎಚ್ಚರಿಸಿದ್ದಾರೆ.

ಪ್ರಮುಖ ನಿರ್ದೇಶನಗಳು

ಪುಟ ೧➡ 4. ಸಂಸ್ಥೆಯ ಆವರಣದೊಳಗೆ ನಡೆಯುವ ನಿಯಮ ಉಲ್ಲಂಘನೆಗಳಿಗೆ ಆಯಾ ಸಂಸ್ಥೆಯ ಮಾಲೀಕರು, ವ್ಯವಸ್ಥಾಪಕರು, ಪರವಾನಗಿದಾರರು ಮತ್ತು ಕಾರ್ಯಕ್ರಮದ ಆಯೋಜಕರನ್ನು ನೇರ ಹೊಣೆಗಾರರನ್ನಾಗಿ ಮಾಡಲಾಗುತ್ತದೆ.

5. ಪ್ರವೇಶ ದ್ವಾರದ ಸಿಸಿಟಿವಿ ಕ್ಯಾಮೆರಾಗಳು ಸರಿಯಾಗಿ ಕಾರ್ಯನಿರ್ವಹಿಸುತ್ತಿರುವುದನ್ನು ಖಚಿತಪಡಿಸಿಕೊಳ್ಳಬೇಕು, ತನಿಖೆಯ ಸಮಯದಲ್ಲಿ ನಿಯಮ ಪಾಲನೆಯನ್ನು ಪರಿಶೀಲಿಸಲು ಸಿಸಿಟಿವಿ ದೃಶ್ಯಾವಳಿಗಳನ್ನು ನಿಗದಿತ ಅವಧಿಯವರೆಗೆ ಸುರಕ್ಷಿತವಾಗಿ ಸಂಗ್ರಹಿಸಿಡಬೇಕು.
6. ಅಪ್ರಾಪ್ತ ವಯಸ್ಕರು ಮದ್ಯ, ತಂಬಾಕು, ಮಾದಕ ದ್ರವ್ಯಗಳಿಗೆ ಬಲಿಯಾಗುವುದನ್ನು ತಡೆಯಲು ಪೊಲೀಸರು ಶಿಕ್ಷಣ ಸಂಸ್ಥೆಗಳು, ಪೋಷಕರು, ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘಗಳು ಮತ್ತು ನಾಗರಿಕ ಗುಂಪುಗಳೊಂದಿಗೆ ಜಂಟಿಯಾಗಿ ಕಾರ್ಯನಿರ್ವಹಿಸಲಿದ್ದಾರೆ.



> ಅಪ್ರಾಪ್ತ ವಯಸ್ಕರ ಮದ್ಯಪಾನಕ್ಕೆ ಪ್ರೋತ್ಸಾಹ ನೀಡುವ ಅಥವಾ ಅದಕ್ಕೆ ಕಾರಣವಾಗುವ ಸಂಸ್ಥೆಗಳ ವಿರುದ್ಧ ನಮ್ಮ ಸರ್ಕಾರ ಯಾವುದೇ ಕಾರಣಕ್ಕೂ ರಾಜಿ ಮಾಡಿಕೊಳ್ಳುವುದಿಲ್ಲ ಮತ್ತು ಶೂನ್ಯ ಸಹಿಷ್ಣುತೆ ನೀತಿಯನ್ನು ಅಳವಡಿಸಿಕೊಳ್ಳಲಿದೆ.
> ■ **ಪ್ರಿಯಾಂಕ್ ಖರ್ಗೆ,** ಗೃಹ ಸಚಿವ

ಸಿನಿ ತಾರೆಯರಿಂದ ಮಾಹಿತಿ ಸಂಗ್ರಹಿಸಲು ಸಿಐಡಿ ನಿರ್ಧಾರ

ಪುಟ ೧➡ ಕಾರ್ಯಕ್ರಮದಲ್ಲಿ ಕನ್ನಡ ಚಿತ್ರರಂಗದ ಹಲವು ನಟ-ನಟಿಯರು ಭಾಗವಹಿಸಿದ್ದರು. ಸಿಐಡಿ ತನಿಖೆಯ ಭಾಗವಾಗಿ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಕೆಲ ಕಲಾವಿದರಿಂದ ಮಾಹಿತಿ ಪಡೆಯುವ ಸಾಧ್ಯತೆ ಇದೆ ಎಂದು ಮೂಲಗಳು ತಿಳಿಸಿವೆ. ಆದರೆ, ನಟ-ನಟಿಯರಿಗೆ ಈಗಾಗಲೇ ನೋಟಿಸ್ ಜಾರಿ ಮಾಡಲಾಗಿದೆ ಎಂಬುದಕ್ಕೆ ಅಧಿಕೃತ ದೃಢೀಕರಣ ಲಭ್ಯವಾಗಿಲ್ಲ. ಶಿವಂ ಅಸೋಸಿಯೇಟ್ಸ್ ವಿರುದ್ಧ ಸಾವಿರಾರು ಹೂಡಿಕೆದಾರರಿಂದ ಹಣ ಸಂಗ್ರಹಿಸಿ ವಂಚನೆ ನಡೆಸಲಾಗಿದೆ ಎಂಬ ಆರೋಪ ಕೇಳಿಬಂದಿದ್ದು, ಪ್ರಕರಣದ ತನಿಖೆ ಮುಂದುವರಿದಿದೆ. ತನಿಖೆಯ ಪ್ರಗತಿಯೊಂದಿಗೆ ಇನ್ನಷ್ಟು ಮಾಹಿತಿ ಬಹಿರಂಗವಾಗುವ ಸಾಧ್ಯತೆಯಿದ್ದು, ಇನ್ನು ಈ ಪ್ರಕರಣದಲ್ಲಿ ಯಾರು, ಯಾರು ಭಾಗಿಯಾಗಿದ್ದಾರೆ ಎಂಬುದು ತನಿಖೆಯ ಬಳಿಕ ತಿಳಿದುಬರಲಿದೆ.

ಮಧ್ಯಪ್ರಾಚ್ಯ: ಮತ್ತೆ ಸಂಘರ್ಷ

ಪುಟ ೧➡ ಕದನ ವಿರಾಮದ ಅವಧಿಯಲ್ಲಿ ಇರಾನ್ ಹಾರ್ಮುಜ್ ಜಲಸಂಧಿಯ ಮೇಲಿನ ತನ್ನ ನಿಯಂತ್ರಣವನ್ನು ಮುಂದುವರಿಸಿದೆ. ಇಸ್ರೇಲ್ ಲೆಬನಾನ್‌ನಲ್ಲಿ ಇರಾನ್ ಮಿತ್ರಪಡೆಯಾದ ಹಿಜ್ಬುಲ್ಲಾ ಮೇಲೆ ದಾಳಿ ಮುಂದುವರಿಸಿದೆ. ಸೋಮವಾರ ಯೆಮೆನ್‌ನ ಹೌತಿ ಬಂಡುಕೋರರು ಇಸ್ರೇಲ್ ಮೇಲೆ ಗುಂಡು ಹಾರಿಸುವ ಮೂಲಕ ಕೆಂಪು ಸಮುದ್ರದಲ್ಲಿ ಇಸ್ರೇಲ್‌ಗೆ ಸಂಬಂಧಿಸಿದ ಹಡಗುಗಳನ್ನು ಗುರಿಯಾಗಿಸುವುದಾಗಿ ಎಚ್ಚರಿಸಿದ್ದಾರೆ.

ಇರಾನ್ ವೈಮಾನಿಕ ವಲಯ ಬಂದ್: ಇರಾನ್ ಸೋಮವಾರ ಇಸ್ರೇಲ್‌ನ ಎರಡು ಮಿಲಿಟರಿ ನೆಲೆಗಳನ್ನು ಗುರಿಯಾಗಿಸಿ ದಾಳಿ ನಡೆಸಿದ್ದು, ಇಸ್ರೇಲ್ ಮತ್ತು ಜೋರ್ಡಾನ್‌ನಲ್ಲಿ ಸೈರನ್‌ಗಳು ಮೊಳಗಿವೆ. ಇದಕ್ಕೆ ಪ್ರತಿಕ್ರಿಯೆಯಾಗಿ ಇಸ್ರೇಲ್ ಮಧ್ಯ ಮತ್ತು ಪಶ್ಚಿಮ ಇರಾನ್ ಮೇಲೆ ದಾಳಿ ನಡೆಸಿ, ಕ್ಷಿಪಣಿ ಲಾಂಚರ್‌ಗಳು ಮತ್ತು ಮಹ್‌ಶಹರ್‌ನಲ್ಲಿರುವ ಪೆಟ್ರೋಕೆಮಿಕಲ್ ಕಾರ್ಖಾನೆಯನ್ನು ಧ್ವಂಸಗೊಳಿಸಿದೆ. ಈ ದಾಳಿಯ ಬೆನ್ನಲ್ಲೇ ಇರಾನ್ ಟೆಹ್ರಾನ್‌ನ ಇಮಾಮ್ ಖೊಮೇನಿ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ಸುತ್ತಲಿನ ವೈಮಾನಿಕ ವಲಯವನ್ನು ಮುಚ್ಚಿದೆ.

ಟ್ರಂಪ್- ನೆತನ್ಯಾಹು ಭಿನ್ನಾಭಿಪ್ರಾಯ?: ಈ ಕದನ ವಿರಾಮವನ್ನು ಉಳಿಸಲು ಈಜಿಪ್ಟ್, ಸೌದಿ ಅರೇಬಿಯಾ, ಟರ್ಕಿ, ಪಾಕಿಸ್ತಾನ ಮತ್ತು ಕತಾರ್ ರಾಜತಾಂತ್ರಿಕ ಪ್ರಯತ್ನಗಳನ್ನು ನಡೆಸುತ್ತಿವೆ. ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ತಕ್ಷಣವೇ ದಾಳಿಗಳನ್ನು ನಿಲ್ಲಿಸುವಂತೆ ಕರೆನೀಡಿದ್ದು, ಮಾತುಕತೆಗಳು ಜಾರಿಯಲ್ಲಿವೆ ಎಂದು ಹೇಳಿದ್ದಾರೆ. ಸೋಮವಾರಕ್ಕೆ ಈ ಸಂಘರ್ಷ ನೂರು ದಿನಗಳನ್ನು ಪೂರೈಸಿದೆ. ಆದರೆ ವಿವಿಧ ಕಾರಣಗಳಿಂದ ಟ್ರಂಪ್ ಮತ್ತು ನೆತನ್ಯಾಹು ನಡುವೆ ಭಿನ್ನಾಭಿಪ್ರಾಯಗಳು ಹೆಚ್ಚುತ್ತಿರುವುದು ಕಂಡುಬಂದಿದೆ.

ಉಕ್ರೇನ್ ಪರಮಾಣು ಶೇಖರಣಾ ಸ್ಥಾವರಕ್ಕೆ ರಷ್ಯಾ ದಾಳಿ

• **ಕೀವ್:** ಉಕ್ರೇನ್‌ನ ಚೊರ್ನೋಬಿಲ್ ವಿದ್ಯುತ್ ಸ್ಥಾವರದ ಬಳಿ ಪರಮಾಣು ಇಂಧನ ಶೇಖರಣಾ ಸ್ಥಾವರವನ್ನು ರಷ್ಯಾದ ಪಡೆಗಳು ಗುರಿಯಾಗಿಸಿ ದಾಳಿ ನಡೆಸಿವೆ ಎಂದು ಅಧ್ಯಕ್ಷ ವ್ಲಾಡಿಮಿರ್ ಝೆಲೆನ್ಸ್ಕಿ ಹೇಳಿದ್ದಾರೆ. ಅಂತಾರಾಷ್ಟ್ರೀಯ ಪರಮಾಣು ಶಕ್ತಿ ಸಂಸ್ಥೆ (ಐಎಇಎ) ಪ್ರಕಾರ, ದಾಳಿಯು ದೊಡ್ಡ ಪ್ರಮಾಣದ ಪರಮಾಣು ವಸ್ತುಗಳನ್ನು ಸಂಗ್ರಹಿಸಲಾಗಿರುವ ಸ್ಥಳದಿಂದ ಮೀಟರ್‌ಗಳಷ್ಟು ದೂರದಲ್ಲಿರುವ ಇಂಧನ ಸ್ಥಾವರ ಕಟ್ಟಡವನ್ನು ಗಮನಾರ್ಹವಾಗಿ ಹಾನಿಗೊಳಿಸಿದೆ.

ತಕ್ಷಣ ಇರಾನ್ ಬಿಡಲು ಭಾರತೀಯರಿಗೆ ಸೂಚನೆ

• **ಹೊಸದಿಲ್ಲಿ:** ಪರಿಸ್ಥಿತಿ ಹದಗೆಡುತ್ತಿರುವ ಹಿನ್ನೆಲೆಯಲ್ಲಿ ಕೂಡಲೇ ಇರಾನ್ ತೊರೆಯುವಂತೆ ಭಾರತೀಯರಿಗೆ ಕೇಂದ್ರ ಸರ್ಕಾರ ಸೂಚನೆ ನೀಡಿದೆ. ಈ ಪ್ರದೇಶದ ಇತ್ತೀಚಿನ ಬೆಳವಣಿಗೆಗಳನ್ನು ಗಮನದಲ್ಲಿಟ್ಟುಕೊಂಡು ಈ ಸಲಹೆ ನೀಡಲಾಗಿದೆ. ತುರ್ತು ಸಲಹೆಯಲ್ಲಿ, ಇರಾನ್‌ನಲ್ಲಿರುವ ಭಾರತೀಯ ರಾಯಭಾರ ಕಚೇರಿಯು ಇರಾನ್‌ಗೆ ಪ್ರಯಾಣಿಸುವುದನ್ನು ತಪ್ಪಿಸಲು ಎಲ್ಲಾ ಭಾರತೀಯ ಪ್ರಜೆಗಳಿಗೆ ಮತ್ತೆ ತಿಳಿಸಿದೆ. ಅಂತೆಯೇ ಪ್ರಸ್ತುತ ಇರಾನ್‌ನಲ್ಲಿರುವ ಭಾರತೀಯ ಪ್ರಜೆಗಳು ಲಭ್ಯವಿರುವ ಸಾರಿಗೆ ವಿಧಾನಗಳ ಮೂಲಕ ದೇಶವನ್ನು ಕೂಡಲೇ ತೊರೆಯುವಂತೆ ಸೂಚಿಸಲಾಗಿದೆ.


ಮೂರು ಬಾರಿ ಸಿಎಂ ಸ್ಥಾನ ಕೈತಪ್ಪಿದಕ್ಕೆ ಡಿಸಿಎಂ ಭಾವುಕ

ತುಮಕೂರು: ಉಪಮುಖ್ಯಮಂತ್ರಿ ಡಾ. ಜಿ. ಪರಮೇಶ್ವರ್ ಇತ್ತೀಚೆಗೆ ತುಮಕೂರಿನಲ್ಲಿ ನಡೆದ ಕಾರ್ಯಕ್ರಮವೊಂದರಲ್ಲಿ ಭಾವುಕರಾಗಿ ಮಾತನಾಡಿದ್ದು, ಮುಖ್ಯಮಂತ್ರಿ ಸ್ಥಾನವು ಮೂರು ಬಾರಿ ಕೈತಪ್ಪಿದ ಕುರಿತು ನೋವು ತೋಡಿಕೊಂಡಿದ್ದಾರೆ. ಇದು ತಮ್ಮ ಬಹುಕಾಲದ ಕನಸಾಗಿದ್ದು, ರಾಜಕೀಯ ಸನ್ನಿವೇಶಗಳಿಂದಾಗಿ ಕೈಗೂಡಿಲ್ಲ ಎಂದು ಹೇಳಿದ್ದಾರೆ.



ಹಳೆ ನೆನಪುಗಳನ್ನು ಹಂಚಿಕೊಂಡ ಅವರು, 2013ರ ಚುನಾವಣೆಯಲ್ಲಿ ನಾನು ಸೋತಿದ್ದರಿಂದ ಮುಖ್ಯಮಂತ್ರಿ ಹುದ್ದೆ ಕೈತಪ್ಪಿತು. ಅಂದು ನಾನು ಗೆದ್ದಿದ್ದರೆ ಸಿದ್ದರಾಮಯ್ಯ ಅವರು ಮುಖ್ಯಮಂತ್ರಿ ಆಗುತ್ತಿರಲಿಲ್ಲ ಎಂದು ಹೇಳಿದ್ದಾರೆ. ಮುಂದುವರಿದು, 2018ರಲ್ಲಿ ಕಾಂಗ್ರೆಸ್ 80 ಸ್ಥಾನಗಳನ್ನು ಗೆದ್ದಿದ್ದರೂ ಮೈತ್ರಿ ಸರ್ಕಾರದಲ್ಲಿ ಎಚ್.ಡಿ. ಕುಮಾರಸ್ವಾಮಿ ಅವರು ಮುಖ್ಯಮಂತ್ರಿಯಾದರು. ಅವತ್ತು ನನ್ನನ್ನೂ ಮುಖ್ಯಮಂತ್ರಿ ಮಾಡಬಹುದಿತ್ತು, ಆದರೆ ಆ ಅವಕಾಶ ಸಿಗಲಿಲ್ಲ ಎಂದು ಬೇಸರದಿಂದ ನುಡಿದಿದ್ದಾರೆ.


ಇನ್ನು 2026ರ ಪ್ರಸ್ತುತ ರಾಜಕೀಯ ವಿದ್ಯಮಾನಗಳಲ್ಲೂ ತಮಗೆ ಸಿಎಂ ಹುದ್ದೆಯ ನಿರೀಕ್ಷೆ ಇತ್ತು, ಆದರೆ ವಿವಿಧ ರಾಜಕೀಯ ಕಾರಣಗಳಿಂದ ಅದು ಸಾಧ್ಯವಾಗಲಿಲ್ಲ ಎಂದು ಪರಮೇಶ್ವರ್ ಹೇಳಿದ್ದಾರೆ. ಹೈಕಮಾಂಡ್ ಜತೆಗಿನ ಚರ್ಚೆಯನ್ನು ಸ್ಮರಿಸಿದ ಅವರು, ನನಗೆ ಸಂಸ್ಥೆಯ ಶ್ರೇಯೋಭಿವೃದ್ಧಿ ಮುಖ್ಯ. ಕೊಡಲು ಸಾಧ್ಯವಿಲ್ಲ ಅಂದರೆ ನೇರವಾಗಿ ಹೇಳಿ, ನನಗೆ ಬಹಳ ದೊಡ್ಡ ಕೆಲಸಗಳಿವೆ, ನಾನು ವಾಪಸ್ ಹೋಗ್ತೀನಿ ಎಂದು ಹೇಳಿದ್ದೆ. ಕೊನೆಗೆ ಪಕ್ಷ ನನಗೆ ಉಪಮುಖ್ಯಮಂತ್ರಿ ಹುದ್ದೆಯ ಜವಾಬ್ದಾರಿ ನೀಡಿದೆ ಎಂದರು. ಸದ್ಯ ತಮಗೆ ಸಿಕ್ಕಿರುವ ಜವಾಬ್ದಾರಿಯನ್ನು ಅತ್ಯಂತ ನಿಷ್ಠೆಯಿಂದ ನಿಭಾಯಿಸುವುದಾಗಿ ಹೇಳಿದ ಪರಮೇಶ್ವರ್, ಜನರು ನಮ್ಮನ್ನು ಸೂಕ್ಷ್ಮವಾಗಿ ನೋಡುತ್ತಾರೆ. ಆದ್ದರಿಂದ ಅತ್ಯಂತ ಜವಾಬ್ದಾರಿಯಿಂದ ನಡೆದುಕೊಳ್ಳುತ್ತೇನೆ ಎಂದು ಮಾರ್ಮಿಕವಾಗಿ ನುಡಿದರು.



ಡಾಲರ್ಸ್ ಕಾಲೋನಿಯಲ್ಲಿರುವ ಮಾಜಿ ಸಿಎಂ ಸದಾನಂದಗೌಡ ಅವರ ನಿವಾಸಕ್ಕೆ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಸೋಮವಾರ ಸಂಜೆ ಭೇಟಿ ನೀಡಿ ಆಶೀರ್ವಾದ ಪಡೆದರು. ಈ ವೇಳೆ ಪತ್ನಿ ಡಾಟಿ ಸದಾನಂದಗೌಡ ಹಾಗೂ ಕುಟುಂಬದ ಸದಸ್ಯರು ಇದ್ದರು

ಮತಪತ್ರ ತಿರುಚಿದ ಆರೋಪ: ಮಧ್ಯಂತರ ತಡೆ ವಿಸ್ತರಿಸಿದ ಹೈ

ಬೆಂಗಳೂರು: ಬಿಜೆಪಿಯ ಶೃಂಗೇರಿ ವಿಧಾನಸಭಾ ಕ್ಷೇತ್ರದ ಪರಾಜಿತ ಅಭ್ಯರ್ಥಿ ಡಿ.ಎನ್. ಜೀವರಾಜ್ ಅವರು ಮತಪತ್ರ ತಿದ್ದಲು ಹೇಗೆ ಸಾಧ್ಯ? ಚುನಾವಣಾ ಆಯೋಗವು ಹಾಕಿದ್ದ ಬೀಗವನ್ನು ಒಡೆದು ಮತಗಳನ್ನು ತಿದ್ದುಪಡಿ ಮಾಡಿ ಬಂದರೇ? ಅಂದರೆ ಚುನಾವಣಾ ಆಯೋಗದ ಭದ್ರತೆಯು ಉಪಯೋಗವಿಲ್ಲ ಎನ್ನುತ್ತೀರಾ ಎಂದು ಹೈಕೋರ್ಟ್ ದೂರುದಾರರನ್ನು ಮೌಖಿಕವಾಗಿ ಪ್ರಶ್ನಿಸಿತು.



ಅಂಚೆ ಮತಗಳ ಮರು ಎಣಿಕೆ ವೇಳೆ ಮತಪತ್ರಗಳನ್ನು ತಿರುಚಿದ ಆರೋಪ ಸಂಬಂಧ ಕಾಂಗ್ರೆಸ್ ಏಜೆಂಟ್ ಸುಧೀರ್ ಕುಮಾರ್ ಮುರೋಳ್ಳಿ ನೀಡಿದ ದೂರು ಆಧರಿಸಿ ಚಿಕ್ಕಮಗಳೂರು ಟೌನ್ ಪೊಲೀಸ್ ಠಾಣೆಯಲ್ಲಿ ತಮ್ಮ ವಿರುದ್ಧ ದಾಖಲಾಗಿರುವ ಎಫ್‌ಐಆರ್ ರದ್ದುಪಡಿಸಲು ಕೋರಿ ಡಿ.ಎನ್. ಜೀವರಾಜ್ ಸಲ್ಲಿಸಿರುವ ಅರ್ಜಿ ವಿಚಾರಣೆಯನ್ನು ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರ ಏಕಸದಸ್ಯ ಪೀಠ ನಡೆಸಿತು.

ಈ ವೇಳೆ ಅರ್ಜಿ ಪರಿಶೀಲಿಸಿದ ಪೀಠವು ಅರ್ಜಿದಾರರ ಮೇಲಿನ ಆರೋಪವೇನು? ಎಂದು ದೂರುದಾರರ ಪರ ವಕೀಲರನ್ನು ಪ್ರಶ್ನಿಸಿತು. ದೂರುದಾರರ ಪರ ವಕೀಲರು, ಮತಪತ್ರಗಳನ್ನು ತಿರುಚಲಾಗಿದೆ ಎಂದರು. ಆಗ ಪೀಠವು ಮತದಾನದ ಬಳಿಕ ಮತಪತ್ರಗಳು ಯಾರ ವಶದಲ್ಲಿತ್ತು? ಕೇಳಿತು.

ದೂರುದಾರರ ಪರ ವಕೀಲರು ಚುನಾವಣಾ ಆಯೋಗದ ವಶದಲ್ಲಿ ಎಂದರು. ಅದಕ್ಕೆ ಪೀಠವು ಮತಪತ್ರ ಚುನಾವಣಾ ಆಯೋಗದ ವಶದಲ್ಲಿರಬೇಕಾದರೆ, ಅವುಗಳನ್ನ ಜೀವರಾಜ್ ಹೇಗೆ ತಿದ್ದಲು ಸಾಧ್ಯ? ಚುನಾವಣಾ ಆಯೋಗವು ಹಾಕಿದ್ದ ಬೀಗವನ್ನು ಒಡೆದು ಮತಗಳನ್ನು ತಿದ್ದುಪಡಿ ಮಾಡಿ ಬಂದರೇ? ಅಂದರೆ ಚುನಾವಣಾ ಆಯೋಗದ ಭದ್ರತೆಯು ಉಪಯೋಗವಿಲ್ಲ ಎನ್ನುತ್ತೀರಾ? ಎಂದು ದೂರುದಾರರ ಪರ ವಕೀಲರನ್ನು ಪ್ರಶ್ನಿಸಿತು. ನಂತರ ಅರ್ಜಿದಾರರ ವಿರುದ್ಧದ ಎಫ್‌ಐಆರ್‌ಗೆ ನೀಡಿರುವ ಮಧ್ಯಂತರ ತಡೆಯನ್ನು ಜು.3ರವರೆಗೆ ವಿಸ್ತರಿಸಿ ವಿಚಾರಣೆ ಮುಂದೂಡಿತು.

ಕಿರು ಸುದ್ದಿ

ಗ್ಯಾರಂಟಿ ಅನುಷ್ಠಾನ ಸಮಿತಿ ಉಪಾಧ್ಯಕ್ಷ ಸೂರಜ್ ಹೆಗ್ಡೆ ನಿಧನ

ಬೆಂಗಳೂರು: ಎಐಸಿಸಿ ಕಾರ್ಯದರ್ಶಿ ಹಾಗೂ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಉಪಾಧ್ಯಕ್ಷ ಸೂರಜ್ ಹೆಗ್ಡೆ ಅವರು ಭಾನುವಾರ ರಾತ್ರಿ ನಿಧನರಾಗಿದ್ದಾರೆ. ಮಾಜಿ ಮುಖ್ಯಮಂತ್ರಿ ದೇವರಾಜ ಅರಸು ಅವರ ಮೊಮ್ಮಗ ಸೂರಜ್ ಹೆಗ್ಡೆ ಅವರು ತೀವ್ರ ಹೃದಯ ಸ್ತಂಭನದಿಂದ ಬೆಂಗಳೂರಿನ ಎಂ.ಎಸ್ ರಾಮಯ್ಯ ಆಸ್ಪತ್ರೆಗೆ ದಾಖಲಾಗಿದ್ದರು. ಭಾನುವಾರ ಚಿಕಿತ್ಸೆ ಫಲಕಾರಿಯಾಗದೇ ಕೊನೆಯುಸಿರೆಳೆದಿದ್ದಾರೆ. ಕಾಂಗ್ರೆಸ್‌ನಲ್ಲಿ ಹಲವು ಹುದ್ದೆಗಳನ್ನು ನಿರ್ವಹಿಸಿದ್ದ ಸೂರಜ್ ಹೆಗ್ಡೆ ಅವರ ಅಕಾಲಿಕ ನಿಧನಕ್ಕೆ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಕೆಪಿಸಿಸಿ ಅಧ್ಯಕ್ಷ ಹರಿಪ್ರಸಾದ್ ಸೇರಿದಂತೆ ಹಲವು ಗಣ್ಯರು ಸಂತಾಪ ವ್ಯಕ್ತಪಡಿಸಿದ್ದಾರೆ. ಸೋಮವಾರ ಬೆಳಗ್ಗೆ ಸೂರಜ್ ಹೆಗ್ಡೆ ಅವರಿಗೆ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಅಂತಿಮ ನಮನ ಸಲ್ಲಿಸಿ ಕುಟುಂಬದವರಿಗೆ ಸಾಂತ್ವನ ಹೇಳಿದರು. ಸೂರಜ್ ಹೆಗ್ಡೆ ಅವರ ಎಂ.ಎಸ್ ರಾಮಯ್ಯ ಆಸ್ಪತ್ರೆ ಬಳಿಯ ನಿವಾಸಕ್ಕೆ ರಾತ್ರಿ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅಂತಿಮ ನಮನ ಸಲ್ಲಿಸಲಿದರು.

ಡಿಕೆಶಿ ಅಂತಿಮ ನಮನ: ಸೂರಜ್ ಹೆಗ್ಡೆ ಅವರ ಕುಟುಂಬದ ದುಃಖ ನೋಡಲು ಆಗುತ್ತಿಲ್ಲ. ಅವರ ತಂದೆ ಕೂಡ ಒಬ್ಬ ಹಿರಿಯ ದೊಡ್ಡ ರಾಜಕಾರಣಿ. ವೈಯಕ್ತಿಕವಾಗಿ ನಮ್ಮೆಲ್ಲರಿಗೂ ಕೂಡ ಬಹಳ ದುಃಖ ಉಂಟಾಗಿದೆ. ಪಕ್ಷದ ಹಾಗೂ ಸರ್ಕಾರದ ಪರವಾಗಿ ಗೌರವ ನಮನ ಸಲ್ಲಿಸುತ್ತೇನೆ. ಕರ್ನಾಟಕ ಸರ್ಕಾರ ಅವರಿಗೆ ಸರ್ಕಾರಿ ಗೌರವದೊಂದಿಗೆ ಅಂತಿಮ ನಮನ ಸಲ್ಲಿಸಲಾಗುವುದು. ಅವರ ಕುಟುಂಬದವರು ಅಂತಿಮ ಕಾರ್ಯ ಯಾವಾಗ ತೀರ್ಮಾನ ಮಾಡುತ್ತಾರೋ ಆಗ ಗೌರವವನ್ನು ಕೊಡುತ್ತೇವೆ. ಈ ವಿಚಾರವಾಗಿ ನಾನು ಈಗಾಗಲೇ ಮುಖ್ಯ ಕಾರ್ಯದರ್ಶಿಗಳಿಗೆ ಆದೇಶ ತಿಳಿಸಿದ್ದೇನೆ. ಅವರ ಅಂತ್ಯಕ್ರಿಯೆಯಲ್ಲಿ ನಾನು ಕೂಡ ಭಾಗಿಯಾಗುತ್ತೇನೆ ಎಂದರು.

ಬಿಡದಿ ಟೌನ್‌ಶಿಪ್ ವಿಚಾರ ಸಿಎಂ ಸಮರ್ಪಕ ಉತ್ತರ ನೀಡಲಿ

ರಾಮನಗರ: ಬಿಡದಿ ಟೌನ್‌ಶಿಪ್ ವಿಚಾರವಾಗಿ ಈ ಬಾರಿ ಅಧಿವೇಶನದಲ್ಲಿ ಚರ್ಚೆಸಲಾಗುವುದು. ಈ ಬಗ್ಗೆ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರಿಂದ ಸರಿಯಾದ ಉತ್ತರ ಲಭಿಸದಿದ್ದರೆ ಅಧಿವೇಶನದಲ್ಲಿ ಅಹೋರಾತ್ರಿ ಧರಣಿ ಹಮ್ಮಿಕೊಳ್ಳಲಾಗುತ್ತದೆ ಎಂದು ವಿಜಯಪುರ ಶಾಸಕ ಬಸವನಗೌಡ ಪಾಟೀಲ್ ಯತ್ನಾಳ್ ತಿಳಿಸಿದರು. ಬಿಡದಿ ಟೌನ್‌ಶಿಪ್ ವಿರೋಧಿಸಿ ಸ್ಥಳೀಯ ರೈತರು ನಡೆಸುತ್ತಿರುವ ಪ್ರತಿಭಟನಾ ಸ್ಥಳಕ್ಕೆ ಭೇಟಿ ನೀಡಿ, ರೈತರ ಹೋರಾಟಕ್ಕೆ ಬೆಂಬಲ ಸೂಚಿಸಿ ಮಾತನಾಡಿದರು. ಅಧಿವೇಶನದಲ್ಲಿ ನಡೆಸುವ ಪ್ರತಿಭಟನೆಗೆ ಬಿಡದಿ ರೈತರು ಸಹ ಸಹಕಾರ ನೀಡಬೇಕು. ಸಾವಿರಾರು ಮಂದಿ ಆಗಮಿಸಿ, ಸರ್ಕಾರದ ನಡೆ ವಿರುದ್ಧ ಆಕ್ರೋಶ ವ್ಯಕ್ತಪಡಿಸಬೇಕು ಎಂದು ಮನವಿ ಮಾಡಿದರು.

ಅನುಮಾನಾಸ್ಪದ ವಸ್ತು ಸ್ಫೋಟ: ಮೂವರಿಗೆ ಗಾಯ

ವಿಜಯಪುರ: ಅನುಮಾನಾಸ್ಪದ ವಸ್ತು ಸ್ಫೋಟಗೊಂಡು ಮೂವರಿಗೆ ಗಂಭೀರ ಗಾಯವಾಗಿರುವ ಘಟನೆ ಜಿಲ್ಲೆಯ ಬಬಲೇಶ್ವರ ತಾಲೂಕಿನ ಮಮದಾಪೂರ ಗ್ರಾಮದಲ್ಲಿ ನಡೆದಿದೆ. ಪಾನ್‌ಶಾಪ್ ಅಂಗಡಿಯಲ್ಲಿ ಅನುಮಾನಾಸ್ಪದ ವಸ್ತು ಸ್ಫೋಟಗೊಂಡಿದ್ದು, ಮೂವರು ಗಂಭೀರ ಗಾಯಗೊಂಡಿದ್ದು, ಚಿಕಿತ್ಸೆಗಾಗಿ ಜಿಲ್ಲಾಸ್ಪತ್ರೆಗೆ ದಾಖಲಿಸಲಾಗಿದೆ. ಗಂಭೀರವಾಗಿ ಗಾಯಗೊಂಡವರ ಹೆಸರು ಹಾಗೂ ಹೆಚ್ಚಿನ ಮಾಹಿತಿ ಲಭ್ಯವಾಗಿಲ್ಲ. ಸ್ಥಳಕ್ಕೆ ಪೊಲೀಸರು ಹಾಗೂ ಅಗ್ನಿ ಶಾಮಕ ಸಿಬ್ಬಂದಿ ಭೇಟಿ ಪರಿಶೀಲನೆ ನಡೆಸಿದ್ದಾರೆ. ಬಬಲೇಶ್ವರ ಠಾಣಾ ವ್ಯಾಪ್ತಿಯಲ್ಲಿ ಘಟನೆ ನಡೆದಿದೆ.

ವರ್ಷಾಂತ್ಯದೊಳಗೆ ಪಂಚಾಯ್ತಿಗಳಿಗೆ ಚುನಾವಣೆ: ಸಚಿವ ಈಶ್ವರ ಖಂಡ್ರೆ

ಖಾಲಿ ಹುದ್ದೆಗಳ ಭರ್ತಿ

ಬೆಂಗಳೂರು: ಅಧಿಕಾರ ವಿಕೇಂದ್ರೀಕರಣ ದಿ. ರಾಜೀವ್ ಗಾಂಧಿ ಅವರ ಕಲ್ಪನೆಯಾಗಿದ್ದು, ಈ ವರ್ಷಾಂತ್ಯದೊಳಗೆ ಎಲ್ಲ ಪಂಚಾಯ್ತಿಗಳಿಗೆ ಚುನಾವಣೆ ನಡೆಸಲು ಕ್ರಮವಹಿಸಲಾಗುವುದು ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಈಶ್ವರ ಖಂಡ್ರೆ ತಿಳಿಸಿದ್ದಾರೆ.



ಸೋಮವಾರ ಇಲಾಖೆಯ ಉನ್ನತಾಧಿಕಾರಿಗಳೊಂದಿಗೆ ಸಭೆ ನಡೆಸಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದರು. ಮುಂದಿನ 8 ವಾರಗಳಲ್ಲಿ ಕ್ಷೇತ್ರ ಪುನರ್ವಿಂಗಡಣೆ ಕಾರ್ಯ ಹಾಗೂ ಮೀಸಲಾತಿ ಪ್ರಕ್ರಿಯೆ ಪೂರ್ಣಗೊಳಿಸಲಾಗುವುದು. ನಂತರ ರಾಜ್ಯ ಚುನಾವಣೆ ಆಯೋಗ ಚುನಾವಣೆ ಪ್ರಕ್ರಿಯೆ ನಡೆಸಲಿದೆ ಎಂದರು.

ಇಲಾಖೆಯಲ್ಲಿ ಎ ವರ್ಗದ 268, ಬಿ ವರ್ಗದ 1079, ಸಿ ವರ್ಗದ 5294, ಡಿ ವರ್ಗದ 2129 ಹುದ್ದೆಗಳು ಖಾಲಿ ಇದ್ದು, ಈ ಪೈಕಿ ಎಲ್ಲ ವರ್ಗದ ಹುದ್ದೆಗಳ ಪೈಕಿ 4 ಸಾವಿರ ಹುದ್ದೆಗಳ ಭರ್ತಿಗೆ ಕ್ರಮ ವಹಿಸಲು ಅಧಿಕಾರಿಗಳಿಗೆ ಸೂಚಿಸಲಾಗಿದೆ. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಲ್ಲಿ 25,540 ಮಂಜೂರಾದ ಹುದ್ದೆಗಳಿದ್ದು, ಈ ಪೈಕಿ ಖಾಲಿ ಇರುವ 8,770 ಹುದ್ದೆ ಪೈಕಿ 4 ಸಾವಿರ ಹುದ್ದೆ ಭರ್ತಿಗೆ ಕ್ರಮ ಕೈಗೊಳ್ಳಲಾಗುವುದು ಎಂದು ಸಚಿವ ಖಂಡ್ರೆ ತಿಳಿಸಿದರು.

ಕರ್ನಾಟಕ ಲೋಕಸೇವಾ ಆಯೋಗ ಮತ್ತು ಕರ್ನಾಟಕ ಪರೀಕ್ಷಾ ಪ್ರಾಧಿಕಾರದಿಂದ ಈ ಎಲ್ಲ ಹುದ್ದೆಗಳನ್ನು ಪಾರದರ್ಶಕವಾಗಿ ಭರ್ತಿ ಮಾಡಲು ಸೂಚಿಸಲಾಗಿದೆ ಎಂದರು. ಕಲ್ಯಾಣ ಕರ್ನಾಟಕ ಭಾಗದಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಲ್ಲಿ ಖಾಲಿ ಇರುವ ಎಲ್ಲ ಹುದ್ದೆಗಳ ಭರ್ತಿಗೂ ಕ್ರಮ ವಹಿಸುವಂತೆ ಸೂಚನೆ ನೀಡಿರುವುದಾಗಿ ಖಂಡ್ರೆ ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಇಲಾಖೆಯ ಕಾರ್ಯದರ್ಶಿಗಳಾದ ಸಮೀರ್ ಶುಕ್ಲ, ರಂದೀಪ್ ಡಿ., ಪಂಚಾಯತ್ ರಾಜ್ ಆಯುಕ್ತೆ ಡಾ.ಕೆ. ಅರುಂಧತಿ, ಕೆಆರ್‌ಐಡಿಎಲ್ ವ್ಯವಸ್ಥಾಪಕ ನಿರ್ದೇಶಕ ರಾಜೇಶ್ ಗೌಡ, ಕುಡಿಯುವ ನೀರು ಪೂರೈಕೆ ವಿಭಾಗದ ಆಯುಕ್ತರಾದ ಫೌಜಿಯಾ ತರುನ್ನುಂ ಮತ್ತಿತರರು ಪಾಲ್ಗೊಂಡಿದ್ದರು.

ಕಲುಷಿತ ನೀರು ಸರಬರಾಜಾಗದಂತೆ ಕಟ್ಟೆಚ್ಚರ ವಹಿಸಿ

ಗ್ರಾಮೀಣ ಕರ್ನಾಟಕದ ಜನರಿಗೆ ಶುದ್ಧ ಕುಡಿಯುವ ನೀರು ಪೂರೈಕೆ ಮಾಡುವುದು ಎಲ್ಲ ಪಂಚಾಯಿತಿಗಳ ಆದ್ಯ ಕರ್ತವ್ಯವಾಗಿದ್ದು, ಯಾವುದೇ ಕಾರಣಕ್ಕೂ ಕಲುಷಿತ ನೀರು ಸರಬರಾಜಾಗದಂತೆ ಎಚ್ಚರ ವಹಿಸಲು ಖಂಡ್ರೆ ಸೂಚಿಸಿದರು. ಕಲುಷಿತ ನೀರು ಸೇವನೆಯಿಂದ ಮುಗ್ಧ ಜನರು ಮೃತಪಟ್ಟ ಘಟನೆಗಳು ಹಲವೆಡೆ ನಡೆದಿವೆ. ಇಂತಹ ಘಟನೆ ಮರುಕಳಿಸದಂತೆ ನೀರಿನ ಪರೀಕ್ಷೆಯನ್ನು ಎನ್.ಎ.ಬಿ.ಎಲ್. ಮಾನ್ಯತೆ ಪಡೆದ ಪ್ರಯೋಗಾಲಯಗಳಲ್ಲಿ ನಿಯಮಿತವಾಗಿ ಮಾಡಬೇಕು. ಪಂಚಾಯ್ತಿಗಳಿಂದ ಪೂರೈಕೆ ಮಾಡುವ ಕುಡಿಯುವ ನೀರಿನಲ್ಲಿ ಯಾವುದೇ ಲೋಪ ಆಗದಂತೆ ಬಹು ಹಂತದ ಪರಿಶೀಲನೆ ನಡೆಸಲು ಸೂಚಿಸಿರುವುದಾಗಿ ತಿಳಿಸಿದರು.

> ಮನ್‌ರೇಗಾ ಸಂಯೋಜನೆಯಲ್ಲಿ ಸಾಮಾಜಿಕ ಅರಣ್ಯಕ್ಕೆ ಆರ್ಥಿಕ ನೆರವು ಒದಗಿಸಲಾಗಿದ್ದು, ರಸ್ತೆ ಬದಿಯಲ್ಲಿ ಮತ್ತು ನೆಡುತೋಪುಗಳಲ್ಲಿ ಬೆಳೆಸಲಾಗಿರುವ ಸಸಿಗಳ ಜಿಯೋ ಟ್ಯಾಗ್ ಮಾಡಿ, ಆಡಿಟ್ ಮಾಡಲು ಸೂಚಿಸಿದ್ದೇನೆ.
> ■ ಈಶ್ವರ ಖಂಡ್ರೆ, ಸಚಿವ

ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಅಭಿಪ್ರಾಯ

ಸಮರ್ಥ ಅಭ್ಯರ್ಥಿಗಳ ಆಯ್ಕೆಯಿಂದ ಸಂತಸ

ಬೆಂಗಳೂರು: ಪಕ್ಷದ ವರಿಷ್ಠರು ರಾಜ್ಯ ಸಭೆ ಹಾಗೂ ವಿಧಾನ ಪರಿಷತ್ ಚುನಾವಣೆಗೆ ಸಮರ್ಥ ಅಭ್ಯರ್ಥಿಗಳನ್ನೇ ಆಯ್ಕೆ ಮಾಡಿದ್ದಾರೆ. ಈ ಆಯ್ಕೆ ಪಕ್ಷದ ಮುಖಂಡರು ಹಾಗೂ ಕಾರ್ಯಕರ್ತರಿಗೆ ಸಂತಸ ತಂದಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಅಭಿಪ್ರಾಯ ಪಟ್ಟಿದ್ದಾರೆ.



ಸೋಮವಾರ ಮಾಧ್ಯಮಗಳೊಂದಿಗೆ ಮಾತನಾಡಿ, ರಾಜ್ಯಸಭೆಗೆ ಪ್ರೊ.ಎಂ.ನಾಗರಾಜ್ ಅವರನ್ನು ಹಾಗೂ ವಿಧಾನ ಪರಿಷತ್‌ಗೆ ಲಿಂಗರಾಜ್ ಪಾಟೀಲ್, ರಘು ಕೌಟಿಲ್ಯ ಅವರ ಹೆಸರನ್ನು ಘೋಷಣೆ ಮಾಡಲಾಗಿದೆ. ಈ ಎಲ್ಲಾ ಮುಖಂಡರು ಪಕ್ಷದ ಸಂಘಟನೆಗೆ ವಿವಿಧ ರೀತಿಯಲ್ಲಿ ತೊಡಗಿಸಿಕೊಂಡಿದ್ದವರು ಎಂದರು.

ಮುಂದೆ ಸುಮಲತಾಗೆ ಸೂಕ್ತ ಸ್ಥಾನಮಾನ: ರಾಜ್ಯಸಭೆಗೆ ಸುಮಲತಾ ಅಂಬರೀಷ್ ಅವರ ಹೆಸರು ಪ್ರಸ್ತಾಪವಾಗಿತ್ತು. ಈ ಹಿಂದೆ ಮಂಡ್ಯದಿಂದ ಅವರು ಸ್ವತಂತ್ರ ಸ್ಪರ್ಧೆ ಮಾಡಿದ್ದಾಗ ಬಿಜೆಪಿ ಬೆಂಬಲ ನೀಡಿತ್ತು. ಒಳ್ಳೆಯ ಅಂತರದಿಂದ ಗೆಲುವು ಸಾಧಿಸಿದ್ದರು ಎಂದು ಹೇಳಿದರು.

ರಾಜ್ಯಸಭೆಗೆ ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ ಅವರ ಹೆಸರು ಪ್ರಸ್ತಾಪ ಕುರಿತ ಪ್ರಶ್ನೆಗೆ ಉತ್ತರಿಸಿ, ದೇವೇಗೌಡರು ಮೋದಿ ಅವರ ಕೈ ಬಲಪಡಿಸಿದ್ದಾರೆ. ಎನ್‌ಡಿಎಗೆ ಬೆಂಬಲ ನೀಡಿದ್ದಾರೆ. ಅವರ ಬಗ್ಗೆ ಪಕ್ಷಕ್ಕೆ ಅಪಾರ ಗೌರವವಿದೆ. ರಾಜ್ಯ ಸಭೆಗೆ ಅವರನ್ನು ಕಳುಹಿಸುವ ಬಗ್ಗೆ ರಾಜ್ಯ ಮಟ್ಟದಲ್ಲಿ ಯಾವುದೇ ರೀತಿಯ ಚರ್ಚೆ ನಡೆದಿರಲಿಲ್ಲ. ಇತ್ತೀಚಿನ ರಾಜಕೀಯ ಸ್ಥಿತಿಗತಿ ನೋಡಿ ಸೂಕ್ತ ಅಭ್ಯರ್ಥಿಗೆ ಅವಕಾಶ ಮಾಡಿಕೊಟ್ಟಿದ್ದಾರೆ ಎಂದರು.

ಸವಾಲಾದ ಖಾತೆ ಹಂಚಿಕೆ

ಸಿಎಂ ಅವರಿಗೆ ಖಾತೆ ಹಂಚಿಕೆಯೇ ಸವಾಲಾಗಿದೆ. ಮೂರು ವರ್ಷ ಅಧಿಕಾರದಲ್ಲಿ ಏನೂ ಮಾಡಿಲ್ಲ. ಇನ್ನಾದರೂ ಖಾತೆಗಳಿಗೆ ನ್ಯಾಯ ಒದಗಿಸುವ ಕೆಲಸ ಮಾಡಲಿ. ಮುಖ್ಯಮಂತ್ರಿಗಳು ಬದಲಾಗಿದ್ದಾರೆ. ಆದರೆ, ಈ ಸರ್ಕಾರದಿಂದ ಅಭಿವೃದ್ಧಿ ನಿರೀಕ್ಷೆ ಮಾಡಲಾಗದು. ಸಾಲದ ಹೊರೆ ಹತ್ತು ಲಕ್ಷ ಕೋಟಿ ರೂ.ಗೆ ಬಂದಿದೆ. ಸಂಪುಟ ಪೂರ್ಣ ಪ್ರಮಾಣದಲ್ಲಿ ರಚನೆಯಾಗಿಲ್ಲ. ಜಿಲ್ಲಾ ಉಸ್ತುವಾರಿ ಹಂಚಿಕೆ ಆಗಿಲ್ಲ ಎಂದರು.

ಎಚ್ಡಿಡಿಗೆ ಸಿಗದ ರಾಜ್ಯಸಭೆ ಸ್ಥಾನ: ಕೈ ಟೀಕೆ

ಬೆಂಗಳೂರು: ಎನ್‌ಡಿಎ ಮೈತ್ರಿ ಕೂಟದಿಂದ ರಾಜ್ಯಸಭೆಗೆ ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡರಿಗೆ ಅವಕಾಶ ಸಿಗದಿರುವುದನ್ನು ಕಾಂಗ್ರೆಸ್ ಟೀಕಿಸಿದ್ದು, ಇದು ಕನ್ನಡಿಗರಿಗೆ ಮಾಡಿದ ದ್ರೋಹ ಎಂದು ಕಾಂಗ್ರೆಸ್ ನಾಯಕರು ಆರೋಪಿಸಿದ್ದಾರೆ.

ಎನ್‌ಡಿಎ ಮೈತ್ರಿ ಕೂಟದಿಂದ ಎಚ್.ಡಿ. ದೇವೇಗೌಡರಿಗೆ ರಾಜ್ಯಸಭೆಗೆ ಸಿಗಲಿದೆ ಎಂಬ ಚರ್ಚೆಗಳು ಜೋರಾಗಿದ್ದವು, ಇದರ ಜತೆಗೆ ಬಿಜೆಪಿಯಿಂದಲೂ ಹಲವು ನಾಯಕರ ಹೆಸರುಗಳು ಕೇಳಿ ಬಂದಿದ್ದವು, ಕೊನೆಯದಾಗಿ ಬಿಜೆಪಿ ಪ್ರೊ. ನಾಗರಾಜ ಅಭ್ಯರ್ಥಿಯಾಗಿ ಘೋಷಣೆ ಮಾಡಿಕೊಂಡಿರುವುದನ್ನು ಕಾಂಗ್ರೆಸ್ ಅಸ್ತ್ರ ಮಾಡಿಕೊಂಡಿದ್ದು, ಎಚ್.ಡಿ ಕುಮಾರಸ್ವಾಮಿ ಮತ್ತು ಬಿಜೆಪಿಯ ಮೇಲೆ ಮುಗಿಬಿದ್ದಿದ್ದಾರೆ.

ಬಿಜೆಪಿ ಮತ್ತು ಅದರ ನಾಯಕತ್ವವು ಜೆಡಿಎಸ್‌ಗೆ ಪದೇ ಪದೇ ಮಾಡುತ್ತಿರುವ ಅವಮಾನವನ್ನು ಸಚಿವ ಸ್ಥಾನ ಉಳಿಸಿಕೊಳ್ಳುವ ಉದ್ದೇಶದಿಂದ ಎಚ್.ಡಿ.ಕುಮಾರಸ್ವಾಮಿ ನಿರಂತರವಾಗಿ ಸಹಿಸಿಕೊಳ್ಳುತ್ತಿರುವುದು ಆಶ್ಚರ್ಯಕರವೂ, ಕಣ್ಣು ತೆರೆಸುವಂತದ್ದೂ ಆಗಿದೆ. ಈ ಅವಮಾನವನ್ನೂ ಒಪ್ಪಿಕೊಳ್ಳುವುದು ಪರಮಾವಧಿಯ ರಾಜಕೀಯ ಶರಣಾಗತಿಯಾಗಿದೆ ಎಂದು ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ಹೇಳಿದ್ದಾರೆ.

2019ರ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿಯ ಜಿ.ಎಸ್ ಬಸವರಾಜು ಅವರು ದೇವೇಗೌಡರನ್ನು ಸೋಲಿಸಿದ್ದರು. ಬಳಿಕ, ರಾಜಕೀಯ ಭಿನ್ನಾಭಿಪ್ರಾಯಗಳಿದ್ದರೂ, ಮಾಜಿ ಪ್ರಧಾನಮಂತ್ರಿಯ ಸ್ಥಾನಮಾನಕ್ಕೆ ಗೌರವ ನೀಡಿ ಕಾಂಗ್ರೆಸ್ ಪಕ್ಷ ಹಾಗೂ ಸೋನಿಯಾ ಗಾಂಧಿಯವರು ದೇವೇಗೌಡರನ್ನು ರಾಜ್ಯಸಭೆಗೆ ಆಯ್ಕೆ ಮಾಡಲು ಬೆಂಬಲ ನೀಡಿದ್ದರು. ಈಗ ದೇವೇಗೌಡರಿಗೆ ರಾಜ್ಯಸಭೆಗೆ ಅವಕಾಶ ನಿರಾಕರಿಸಿ, ತನ್ನ ಪಕ್ಷದ ಪದಾಧಿಕಾರಿಯನ್ನೇ ಆಯ್ಕೆ ಮಾಡಿದೆ ಎಂದಿದ್ದಾರೆ.

ಸುರ್ಜೇವಾಲಗೆ ತಿರುಗೇಟು

ಸುರ್ಜೇವಾಲ ಅವರ ಹೇಳಿಕೆ ತಿರುಗೇಟು ನೀಡಿರುವ ಕೇಂದ್ರ ಸಚಿವ ಎಚ್.ಡಿ ಕುಮಾರಸ್ವಾಮಿ ಅವರು,



ಜೆಡಿಎಸ್ ಬಗ್ಗೆ ಮಾತನಾಡುವ ಮುನ್ನ ಕಾಂಗ್ರೆಸ್‌ನ ಕರಾಳ ಇತಿಹಾಸವನ್ನು ಒಮ್ಮೆ ನೆನಪಿಸಿಕೊಳ್ಳಿ, 1997ರಲ್ಲಿ ಕುತಂತ್ರದಿಂದ ದೇವೇಗೌಡರನ್ನು ಅವರನ್ನು ಪ್ರಧಾನಿ ಸ್ಥಾನದಿಂದ ಕೆಳಗಿಳಿಸಿದ್ದು, ನೀವು ಕಾಂಗ್ರೆಸ್ ಪಕ್ಷ ಮಾಡಿದ ಈ ಮಹಾದ್ರೋಹವನ್ನು ಕಳೆದ 30 ವರ್ಷದಿಂದ ಕನ್ನಡಿಗರು ಪ್ರಶ್ನಿಸುತ್ತಿದ್ದಾರೆ ಎಂದು ವಾಗ್ದಾಳಿ ನಡೆಸಿದ್ದಾರೆ.



> ದೇವೇಗೌಡರ ಸಹಾಯದಿಂದ ಸಂಸತ್ತಿನಲ್ಲಿ ಬಿಜೆಪಿ ಬಿಲ್ ಪಾಸ್ ಮಾಡಿಕೊಂಡಿತು. ಆದರೆ, ಈಗ ಅವರಿಗೆ ಅಪಮಾನ ಮಾಡಿದೆ.
> ■ ಬಿ.ಕೆ. ಹರಿಪ್ರಸಾದ್, ಕೆಪಿಸಿಸಿ ಅಧ್ಯಕ್ಷ

ಬಿಜೆಪಿ ಅಭ್ಯರ್ಥಿಗಳಿಂದ ಉಮೇದುವಾರಿಕೆ

ಬೆಂಗಳೂರು: ರಾಜ್ಯಸಭೆ ಮತ್ತು ವಿಧಾನ ಪರಿಷತ್ ಚುನಾವಣೆಗಳಿಗೆ ನಾಮಪತ್ರ ಸಲ್ಲಿಕೆಗೆ ಕೊನೆ ದಿನವಾದ ಸೋಮವಾರ ಬಿಜೆಪಿ ಅಭ್ಯರ್ಥಿಗಳು ಉಮೇದುವಾರಿಕೆ ಸಲ್ಲಿಸಿದ್ದಾರೆ.

ರಾಜ್ಯ ವಿಧಾನಸಭೆಯಿಂದ ರಾಜ್ಯಸಭೆಗೆ ನಡೆಯುವ ಚುನಾವಣೆಗೆ ಬಿಜೆಪಿ ಅಭ್ಯರ್ಥಿಯಾಗಿ ಪ್ರೊ. ಎಂ.ನಾಗರಾಜ್ ಹಾಗೂ ವಿಧಾನ ಪರಿಷತ್ ಸ್ಥಾನಗಳಿಗೆ ಪಕ್ಷದ ಅಭ್ಯರ್ಥಿಗಳಾದ ಲಿಂಗರಾಜ್ ಪಾಟೀಲ್ ಮತ್ತು ರಘು ಕೌಟಿಲ್ಯ ಅವರು ಚುನಾವಣಾಧಿಕಾರಿ ವಿಶಾಲಾಕ್ಷಿ ಅವರಿಗೆ ನಾಮಪತ್ರ ಸಲ್ಲಿಸಿದರು. ಈ ವೇಳೆ ಪಕ್ಷದ ರಾಜ್ಯಾಧ್ಯಕ್ಷ ಮತ್ತು ಶಾಸಕ ಬಿ.ವೈ.ವಿಜಯೇಂದ್ರ, ಕೇಂದ್ರೀಯ ಸಂಸದೀಯ ಮಂಡಳಿ ಸದಸ್ಯ ಮತ್ತು ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ, ವಿಧಾನ ಪರಿಷತ್ ಪ್ರತಿಪಕ್ಷ ನಾಯಕ ಛಲವಾದಿ ನಾರಾಯಣ ಸ್ವಾಮಿ, ಶಾಸಕ ಡಾ. ಸಿ.ಎನ್.ಅಶ್ವತ್ಥ ನಾರಾಯಣ, ರಾಜ್ಯಸಭಾ ಸದಸ್ಯ ಲೆಹರ್ ಸಿಂಗ್, ವಿಧಾನಸಭೆಯ ಪ್ರತಿಪಕ್ಷ ಮುಖ್ಯ ಸಚೇತಕ ದೊಡ್ಡನಗೌಡ ಜಿ. ಪಾಟೀಲ್, ವಿಧಾನಪರಿಷತ್ ಪ್ರತಿಪಕ್ಷ ಮುಖ್ಯ ಸಚೇತಕ ಎನ್.ರವಿಕುಮಾರ್ ಮತ್ತಿತರರು ಉಪಸ್ಥಿತರಿದ್ದು ಅಭ್ಯರ್ಥಿಗಳಿಗೆ ಶುಭ ಹಾರೈಸಿದರು.



ಪ್ರೊ. ಎಂ. ನಾಗರಾಜ್: ಶಿಕ್ಷಣ ಮತ್ತು ರಾಜಕೀಯ ಕ್ಷೇತ್ರದಲ್ಲಿ ಸುದೀರ್ಘ ಅನುಭವ ಹೊಂದಿರುವ ಪ್ರೊ. ಎಂ. ನಾಗರಾಜ್ ಅವರು ಕರ್ನಾಟಕ ಬಿಜೆಪಿಯ ಹಿರಿಯ ಮುಖಂಡರು. ಮೂಲತಃ ಧಾರವಾಡದವರಾದ ನಾಗರಾಜ್, ಶೈಕ್ಷಣಿಕ ವಲಯದಿಂದ ಬಂದವರಾಗಿದ್ದು, ದೀರ್ಘಕಾಲ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿದ್ದಾರೆ. ವಿದ್ಯಾರ್ಥಿ ದೆಸೆಯಿಂದಲೇ ರಾಷ್ಟ್ರೀಯ ಸ್ವಯಂಸೇವಕ ಸಂಘ (ಆರ್‌ಎಸ್‌ಎಸ್) ಮತ್ತು ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ (ಎಬಿವಿಪಿ) ಸಂಘಟನೆಗಳ ಸಕ್ರಿಯ ಕಾರ್ಯಕರ್ತರಾಗಿ ಗುರುತಿಸಿಕೊಂಡಿದ್ದಾರೆ. ತರುವಾಯ ಭಾರತೀಯ ಜನತಾ ಪಕ್ಷದ ಮೂಲಕ ಸಕ್ರಿಯ ರಾಜಕೀಯಕ್ಕೆ ಪ್ರವೇಶಿಸಿದರು.

ಕರ್ನಾಟಕ ಲೋಕಸೇವಾ ಆಯೋಗದ (ಕೆಪಿಎಸ್‌ಸಿ) ಸದಸ್ಯರಾಗಿಯೂ ಸೇವೆ ಸಲ್ಲಿಸಿದ ಆಡಳಿತಾತ್ಮಕ ಅನುಭವ ಇವರಿಗಿದೆ. ಜನಸಂಘದ ಸ್ಥಾಪಕ ಪಂಡಿತ್ ದೀನದಯಾಳ್ ಉಪಾಧ್ಯಾಯ ಅವರ ಜನ್ಮ ಶತಮಾನೋತ್ಸವ ವರ್ಷದ ನಿಮಿತ್ತ ಪ್ರತಿ ಜಿಲ್ಲೆಯಲ್ಲೂ ಬಿಜೆಪಿಯ ಸ್ವಂತ ಕಾರ್ಯಾಲಯ ನಿರ್ಮಿಸುವ ಅಮಿತ್ ಶಾ ಅವರ ಕನಸಿನ ಯೋಜನೆಯಲ್ಲಿ ಭವನ ನಿರ್ಮಾಣ ಸಮಿತಿಗೆ ಕರ್ನಾಟಕದ ಸಂಚಾಲಕರಾಗಿಯೂ ಕೆಲಸ ಮಾಡಿದ್ದಾರೆ.

ಲಿಂಗರಾಜ ಪಾಟೀಲ್: ಹುಬ್ಬಳ್ಳಿಯವರಾದ ಲಿಂಗರಾಜ ಪಾಟೀಲ್ ಅವರು ಸುಮಾರು ಮೂರುವರೆ ದಶಕಗಳಿಂದ ಬಿಜೆಪಿಯಲ್ಲಿ ಕಾರ್ಯಕರ್ತರಾಗಿ, ಪಕ್ಷದ ವಿವಿಧ ಜವಾಬ್ದಾರಿಗಳನ್ನು ನಿಭಾಯಿಸಿದ್ದಾರೆ. ರಾಜ್ಯ ಬಿಜೆಪಿ ಶಿಸ್ತು ಸಮಿತಿ ಅಧ್ಯಕ್ಷರಾಗಿಯೂ ಜವಾಬ್ದಾರಿ ನಿರ್ವಹಿಸಿದ್ದರು.

ರಘು ಕೌಟಿಲ್ಯ: ಮೈಸೂರಿನ ರಘು ಕೌಟಿಲ್ಯ ಅವರು ಕಾಯಕ ಸಮುದಾಯದ ಪರ ಹೋರಾಟದಲ್ಲಿ ಗುರುತಿಸಿ ಕೊಂಡವರು. ಬಿಜೆಪಿ ರಾಜ್ಯ ಸಹ ವಕ್ತಾರರಾಗಿ ಕಾರ್ಯನಿರ್ವಹಿಸಿದ್ದಾರೆ. ಪ್ರಸ್ತುತ ಬಿಜೆಪಿ ರಾಜ್ಯ ಹಿಂದುಳಿದ ವರ್ಗಗಳ ಮೋರ್ಚಾ ಅಧ್ಯಕ್ಷರಾಗಿದ್ದಾರೆ. ಎಸ್.ಎಂ.ಕೃಷ್ಣ ಅವರು ಮುಖ್ಯಮಂತ್ರಿ ಆಗಿದ್ದಾಗ ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದರು.

ಸರ್ಕಾರಿ ಯೋಜನೆಗಳಿಗೆ ಒಳಪಟ್ಟ ಖಾಸಗಿ ಆಸ್ಪತ್ರೆಗಳು ನಿಯಮ ಉಲ್ಲಂಘಿಸುವಂತಿಲ್ಲ

ನಿಯಮ ಮೀರಿದರೆ ಅನುಮತಿ ರದ್ದು: ಖಾದರ್

ಮಂಗಳೂರು: ರಾಜ್ಯದ ಜನರಿಗೆ ಅತ್ಯುತ್ತಮ ಆರೋಗ್ಯ ಸೇವೆಯನ್ನು ನೀಡುವ ವಾತಾವರಣ ನಿರ್ಮಿಸಬೇಕಾಗಿದೆ. ಆಯುಷ್ಮಾನ್ ಸೇರಿದಂತೆ ಸರಕಾರಿ ಯೋಜನೆಗಳಿಗೆ ಒಳಪಟ್ಟ ಖಾಸಗಿ ಆಸ್ಪತ್ರೆಗಳು ಜನಸಾಮಾನ್ಯರಿಗೆ ನೀಡಿರುವ ಸೌಕರ್ಯ ನೀಡದೆ ನಿಯಮ ಉಲ್ಲಂಘಿಸಿದರೆ, ದುರುಪಯೋಗಪಡಿಸಿದರೆ ಅವರಿಗೆ ನೀಡಿರುವ ಅನುಮತಿ ರದ್ದುಪಡಿಸಲಾಗುವುದು ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸಚಿವ ಯು.ಟಿ. ಖಾದರ್ ತಿಳಿಸಿದರು.

ಆರೋಗ್ಯ ಸಚಿವ ಬಳಿಕ ಅವರು ಆರೋಗ್ಯ ಇಲಾಖೆ ದಕ ಜಿಲ್ಲಾ ಮಟ್ಟದ ಪ್ರಥಮ ಸಭೆಯನ್ನು ಪಡೀಲ್‌ನ ಪ್ರಜಾಸೌಧದಲ್ಲಿ ನಡೆಸಿದ ಬಳಿಕ ಸುದ್ದಿಗಾರರೊಂದಿಗೆ ಸೋಮವಾರ ಅವರು ಮಾತನಾಡಿದರು. ಈ ಕಾರ್ಯದಲ್ಲಿ ವಿಫಲರಾಗುವ ಆರೋಗ್ಯ ಮಿತ್ರರ ವಿರುದ್ಧವೇ ಇಲಾಖೆಯಿಂದ ಕ್ರಮ ವಹಿಸಲಾಗುವುದು ಎಂದರು. ಜನಸಾಮಾನ್ಯರಿಗೂ ಅತ್ಯುತ್ತಮ ಆರೋಗ್ಯ ವ್ಯವಸ್ಥೆ ಲಭ್ಯವಾಗುವುದನ್ನು ಖಾತರಿ ಪಡಿಸುವುದಕ್ಕಾಗಿ ಆರೋಗ್ಯ ಮಿತ್ರರನ್ನು ನೇಮಕ ಮಾಡಲಾಗಿದೆ. ಅವರು ತಮ್ಮ ಜವಾಬ್ದಾರಿಯನ್ನು ನಿರ್ವಹಿಸಬೇಕು. ಇದರ ಜತೆಯಲ್ಲೇ ಅಗತ್ಯ ಕೆಲವೊಂದು ಯೋಜನೆಗಳನ್ನು ಜಾರಿಗೊಳಿಸುವುದು ಹಾಗೂ ಅನಗತ್ಯ ಕಾರ್ಯಕ್ರಮಗಳನ್ನು ಕೈಬಿಡುವ ಬಗ್ಗೆಯೂ ಮುಂದಿನ ದಿನಗಳಲ್ಲಿ ರಾಜ್ಯವ್ಯಾಪಿಯಾಗಿ ಪರಿಶೀಲಿಸಿ ಕ್ರಮ ವಹಿಸಲಾಗುವುದು ಎಂದರು.



> ಆಯುಷ್ಮಾನ್ ಕರ್ನಾಟಕ ಯೋಜನೆಯಲ್ಲಿ ಬಿಪಿಎಲ್ ಕಾರ್ಡ್ ಹೊಂದಿರುವ ರೋಗಿಗಳಿಂದ ಖಾಸಗಿ ಆಸ್ಪತ್ರೆಗಳು ಹಣ ಪಡೆಯಬಾರದು. ಒಂದು ವೇಳೆ ಹೆಚ್ಚುವರಿ ಶುಲ್ಕ ಪಡೆದರೆ ಆರೋಗ್ಯ ಮಿತ್ರರು ಈ ಬಗ್ಗೆ ಗಮನ ಹರಿಸಿ ಮೇಲಿನ ಅಧಿಕಾರಿಗಳ ಮೂಲಕ ಉಚಿತ ಚಿಕಿತ್ಸೆಗೆ ಕ್ರಮ ವಹಿಸಬೇಕು.
> ■ ಯು.ಟಿ. ಖಾದರ್, ಸಚಿವ

ಹಿಂದೆ ನಾನು ಆರೋಗ್ಯ ಸಚಿವನಾಗಿದ್ದ ವೇಳೆ ಆರೋಗ್ಯ ಕರ್ನಾಟಕದಲ್ಲಿ ಬಿಪಿಎಲ್ ಕಾರ್ಡ್‌ದಾರರಿಗೆ ಉಚಿತವಾಗಿ ಹಾಗೂ ಎಪಿಎಲ್‌ನವರಿಗೆ ಶೇ. 70ರಷ್ಟು ಉಚಿತ, ಶೇ.30ರಷ್ಟು ವೆಚ್ಚ ರೋಗಿ ಭರಿಸುವ ವ್ಯವಸ್ಥೆ ಇತ್ತು. ಬಳಿಕ ಅದೀಗ ಶೇ. 70ರಷ್ಟು ರೋಗಿ ಭರಿಸುತ್ತಿದ್ದು, ಶೇ.30 ಸರಕಾರ ಎಂಬಂತಾಗಿದೆ. ಇದರ ಬಗ್ಗೆ ಪುನರ್ ಪರಿಶೀಲನೆ ಮಾಡಲಾಗುವುದು. ಎಪಿಎಲ್ ಹಾಗೂ ಬಿಪಿಎಲ್‌ನವರಿಗೆ ಕಡಿಮೆ ದರದಲ್ಲಿ ಚಿಕಿತ್ಸೆ ಒದಗಿಸುವ ಬಗ್ಗೆ ರೂಪುರೇಷೆ ಮಾಡಲಾಗುವುದು ಎಂದು ಹೇಳಿದರು.

ವೈದ್ಯರು ಸರಕಾರಿ ಆಸ್ಪತ್ರೆಗಳಲ್ಲಿ ಸೇವೆ ಮಾಡಲು ಆಕರ್ಷಿಸುವ ಹಾಗೂ ಪ್ರೇರಣೆ ನೀಡುವ ಯೋಜನೆಗಳನ್ನು ಹಮ್ಮಿಕೊಳ್ಳುವ ಬಗ್ಗೆ ಮುಖ್ಯಮಂತ್ರಿ ಜತೆ ಚರ್ಚಿಸಿ ಕ್ರಮ ವಹಿಸಲಾಗುವುದು. ಸರಕಾರಿ ಯೋಜನೆಗಳು ಸಮರ್ಪಕವಾಗಿ ನಿರ್ವಹಣೆಯಾಗಬೇಕಾದರೆ ಪ್ರಾಥಮಿಕ ಆರೋಗ್ಯ ಕೇಂದ್ರಗಳ ವ್ಯವಸ್ಥೆ ಉತ್ತಮವಾಗಿರಬೇಕು. ಅದಕ್ಕಾಗಿ ಜಿಲ್ಲಾ ಮಟ್ಟದ ವಿವಿಧ ಹಂತಗಳ ಅಧಿಕಾರಿ, ಸಿಬ್ಬಂದಿಯಿಂದ ಸಮಸ್ಯೆಯನ್ನು ಅರಿತುಕೊಳ್ಳಲಾಗಿದೆ. ಹಲವಾರು ಸಮಸ್ಯೆಗಳು ಗಮನಕ್ಕೆ ಬಂದಿವೆ. ಸಮಸ್ಯೆ ಬಗೆಹರಿಸದೆ ಯೋಜನೆಗಳನ್ನು ಜನರಿಗೆ ತಲುಪಿಸಲು ಸಾಧ್ಯವಾಗದು. ಅದಕ್ಕಾಗಿ ಸರಕಾರಿ ಆಸ್ಪತ್ರೆಗಳಿಗೆ ವೈದ್ಯರನ್ನು ನೇಮಕ ಮಾಡಬೇಕಿದೆ ಎಂದರು.

ಗುತ್ತಿಗೆ ಆಧಾರದಲ್ಲಿ ನೇಮಕ ಆದ ವೈದ್ಯರು ಮೂರು ವರ್ಷ ಸೇವೆ ಸಲ್ಲಿಸಿದರೆ ಅವರನ್ನು ಖಾಯಂಗೊಳಿಸುವ ಪದ್ಧತಿ ಹಿಂದೆ ಮಾಡಲಾಗಿತ್ತು. ಇದರಿಂದ ಉದ್ಯೋಗ ಭದ್ರತೆಯ ಕಾರಣದಿಂದ ಹೆಚ್ಚಿನ ವೈದ್ಯರ ನೇಮಕವಾಗುತ್ತಿತ್ತು. ಆದರೆ ಅದೀಗ ಬದಲಾಗಿದೆ. ಅದನ್ನು ಮರು ಪರಿಶೀಲಿಸಲಾಗುವುದು ಎಂದು ಸಚಿವ ಯು.ಟಿ.ಖಾದರ್ ಹೇಳಿದರು. ಸಚಿವ ಕೃಷ್ಣ ಭೈರೇಗೌಡ ಅವರು ತಮಗೆ ನೀಡಲಾದ ಖಾತೆ ಬಗ್ಗೆ ವ್ಯಕ್ತಪಡಿಸಿರುವ ಅಭಿಪ್ರಾಯದ ಬಗ್ಗೆ ಪ್ರತಿಕ್ರಿಯಿಸಿದ ಖಾದರ್, ಎಲ್ಲಾ ಗೊಂದಲವನ್ನು ಮುಖ್ಯಮಂತ್ರಿ ಹಾಗೂ ಪಕ್ಷದ ಅಧ್ಯಕ್ಷರು ಸರಿ ಮಾಡುತ್ತಾರೆ ಎಂದರು.

ಶಕ್ತಿಗೆ ಬರಲಿದೆ ಸ್ಮಾರ್ಟ್‌ಕಾರ್ಡ್: ಸಚಿವ

ಬೆಂಗಳೂರು: ರಾಜ್ಯದ ಮಹಿಳೆಯರಿಗೆ ಸಾರಿಗೆ ನಿಗಮಗಳ ಬಸ್‌ಗಳಲ್ಲಿ ಉಚಿತವಾಗಿ ಪ್ರಯಾಣ ಮಾಡಲು ಮಹಿಳೆಯರಿಗೆ ಸ್ಮಾರ್ಟ್‌ಕಾರ್ಡ್ ಹಾಗೂ ಪುರುಷರಿಗೆ ಮೆಟ್ರೊ ಕಾರ್ಡ್ ರೀತಿಯಲ್ಲಿ ಹಣ ಪಾವತಿಸಿ ಸ್ಮಾರ್ಟ್ ಕಾರ್ಡ್‌ನ್ನು ಪಡೆದುಕೊಳ್ಳಬಹುದಾಗಿದೆ ಎಂದು ಸಾರಿಗೆ ಸಚಿವ ಭೈರತಿ ಸುರೇಶ್ ಹೇಳಿದರು.

ನೂತನ ಸಾರಿಗೆ ಸಚಿವರಾಗಿ ಸೋಮವಾರ ವಿಧಾನಸೌಧದ ಕೊಠಡಿಯಲ್ಲಿ ಅಧಿಕಾರ ಸ್ವೀಕರಿಸಿದ ಬಳಿಕ ಕೆಎಸ್‌ಆರ್‌ಟಿಸಿ, ಬಿಎಂಟಿಸಿ, ಕೆಕೆಆರ್‌ಟಿಸಿ ಮತ್ತು ವಾಯವ್ಯ ಸಾರಿಗೆ ನಿಗಮಗಳ ಮುಖ್ಯಸ್ಥರು ಹಾಗೂ ಹಿರಿಯ ಅಧಿಕಾರಿಗಳೊಂದಿಗೆ ಸಭೆ ನಡೆಸಿ ಇಲಾಖೆಗಳ ಬಗ್ಗೆ ಮಾಹಿತಿ ಪಡೆದರು.


ಈ ವೇಳೆ ಮಾತನಾಡಿದ ಸಚಿವರು, ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಪಂಚ ಗ್ಯಾರಂಟಿಗಳ ಮೂಲಕ ಜನತೆಯ ಬದುಕು ಹಸನಾಗುವಂತೆ ಮಾಡಲಾಗಿದೆ. ಶಕ್ತಿ ಯೋಜನೆಯನ್ನು ಕೋಟ್ಯಂತರ ಮಹಿಳೆಯರು ಸದುಪಯೋಗ ಮಾಡಿಕೊಳ್ಳುತ್ತಿದ್ದಾರೆ. ಈ ಯೋಜನೆ ಜಾರಿಯಾದ ಬಳಿಕ ಪ್ರಯಾಣಿಕರ ಸಂಖ್ಯೆಯಲ್ಲಿ ಶೇ.40 ರಷ್ಟು ಹೆಚ್ಚಳವಾಗಿದೆ ಎಂದರು.

ಶಕ್ತಿ ಯೋಜನೆಯನ್ನು ಇನ್ನಷ್ಟು ಪರಿಣಾಮಕಾರಿಯಾಗಿ ಮಾಡುವ ಉದ್ದೇಶದಿಂದ ರಾಜ್ಯದ ಮಹಿಳೆಯರಿಗೆ ಸಾರಿಗೆ ನಿಗಮಗಳ ಬಸ್‌ಗಳಲ್ಲಿ ಉಚಿತವಾಗಿ ಪ್ರಯಾಣ ಮಾಡಲು ಸ್ಮಾರ್ಟ್‌ಕಾರ್ಡ್‌ಗಳನ್ನು ವಿತರಣೆ ಮಾಡಲು ನಿರ್ಧರಿಸಲಾಗಿದೆ ಎಂದು ತಿಳಿಸಿದರು.

ರಾಜ್ಯದ ಮೂರು ಕೋಟಿಗೂ ಅಧಿಕ ಜನರಿಗೆ ಈ ಸ್ಮಾರ್ಟ್‌ಕಾರ್ಡ್‌ನ್ನು ವಿತರಿಸುವ ನಿರೀಕ್ಷೆಯಿದೆ. ಮಹಿಳೆಯರಿಗೆ ಉಚಿತವಾಗಿ ಸ್ಮಾರ್ಟ್ ಕಾರ್ಡ್ ಸಿಗಲಿದ್ದು, ಪುರುಷರು ಮೆಟ್ರೊ ಕಾರ್ಡ್ ರೀತಿಯಲ್ಲಿ ಹಣ ಪಾವತಿಸಿ ಸ್ಮಾರ್ಟ್ ಕಾರ್ಡ್‌ನ್ನು ಪಡೆದುಕೊಳ್ಳಬಹುದಾಗಿದೆ ಎಂದು ತಿಳಿಸಿದರು.

1000 ಬಸ್ ಖರೀದಿ

ರಾಜ್ಯ ಸರ್ಕಾರದ ಅನುದಾನದಲ್ಲಿ 1000 ಸಾವಿರ ಬಸ್‌ಗಳನ್ನು ಖರೀದಿಸಲಾಗುತ್ತದೆ.



ಇದೇ ವೇಳೆ, ಕೇಂದ್ರ ಸರ್ಕಾರದ ಅನುದಾನದಲ್ಲಿ 4 ಸಾವಿರ ಎಲೆಕ್ಟ್ರಿಕ್ ಬಸ್‌ಗಳನ್ನು ಖರೀದಿಸಲು ನಿರ್ಧರಿಸಲಾಗಿದೆ. ಹಂತಹಂತವಾಗಿ ಬಸ್‌ಗಳನ್ನು ಖರೀದಿಸಿ ನಾಲ್ಕೂ ನಿಗಮಗಳಿಗೆ ಹಂಚಿಕೆ ಮಾಡಲಾಗುತ್ತದೆ ಎಂದು ಹೇಳಿದರು.

ಸಂಪಾದಕೀಯ

ಸತ್ವವಿಲ್ಲದ ವಿಪಕ್ಷ ಒಕ್ಕೂಟ

ವಿಪರ್ಯಾಸ ನೋಡಿ, ಬಿಜೆಪಿ ವಿರುದ್ಧವಾಗಿ ಒಗ್ಗಟ್ಟಿನ ಪ್ರದರ್ಶನ ನೀಡಬೇಕು ಎಂದು ಪ್ರತಿಪಾದಿಸುವ ಇಂಡಿಯಾ ಒಕ್ಕೂಟವು ತಾನೇ ಒಗ್ಗಟ್ಟು ಕಳೆದುಕೊಂಡು ಸತ್ವಹೀನವಾಗುತ್ತಿದೆ. ಅದೂ ಸಾಲದೆಂಬಂತೆ ಇಂಡಿ ಕೂಟದ ಪ್ರಬಲ ಪಕ್ಷಗಳೂ ತಮ್ಮೊಳಗೇ ಛಿದ್ರಗೊಳ್ಳುತ್ತಾ ಸಾಗುತ್ತಿವೆ. ಸೋಮವಾರ ಇಂಡಿಕೂಟದ 20ಕ್ಕೂ ಹೆಚ್ಚು ವಿರೋಧ ಪಕ್ಷಗಳು ದಿಲ್ಲಿಯಲ್ಲಿ ಸಭೆ ಸೇರಿ ಚರ್ಚಿಸಿದವಾದರೂ ಅವರೊಳಗಿನ ವೈರುಧ್ಯ, ಕೆಲವು ಪಕ್ಷಗಳು ಎದುರಿಸುತ್ತಿರುವ ಆಂತರಿಕ ಸಂಘರ್ಷಗಳು ಈ ಸಭೆಯನ್ನು ಮಂಕುಗೊಳಿಸಿದವು. ಕಾಂಗ್ರೆಸಿನ ವಿಶ್ವಾಸದ್ರೋಹವನ್ನು ವಿರೋಧಿಸಿ ಡಿಎಂಕೆ ಸಭೆಗೇ ಹಾಜರಾಗಲಿಲ್ಲ. ಆಪ್ ಕೂಡಾ ಸಭೆಯಿಂದ ದೂರವುಳಿಯಿತು. ಕೇರಳ ಚುನಾವಣೆಯ ವೇಳೆ ಕಾಂಗ್ರೆಸ್ ಹೊರಿಸಿದ ಆರೋಪಗಳಿಂದ ಕೆಂಡವಾಗಿರುವ ಎಡಪಕ್ಷಗಳು ಕೂಡಾ ಇಂಡಿಯಾ ಒಕ್ಕೂಟವನ್ನು ಟೀಕಿಸುವ ಮೂಲಕ ಬಿರುಕಿನ ಸಂಕೇತ ನೀಡಿವೆ. ಜೆಎಂಎಂ ಕೂಡಾ ರಾಜ್ಯಸಭಾ ಚುನಾವಣೆಗೆ ಸಂಬಂಧಿಸಿ ಕಾಂಗ್ರೆಸಿನ ವರ್ತನೆಯಿಂದ ಆಕ್ರೋಶಗೊಂಡಿದೆ.



ಇದೇವೇಳೆ, ಪಶ್ಚಿಮ ಬಂಗಾಳದಲ್ಲಿ ಸೋತು ಸುಣ್ಣವಾಗಿರುವ ಮಮತಾ ಬ್ಯಾನರ್ಜಿಯವರು ಇಂಡಿಯಾ ಒಕ್ಕೂಟವನ್ನು ಬಲಪಡಿಸುವ ನಿಟ್ಟಿನಲ್ಲಿ ತಮ್ಮ ಶ್ರಮ ಹಾಕುತ್ತಿದ್ದಾರಾದರೂ ಅವರ ಕಾಲಕೆಳಗೆ ಅವರದೇ ಪಕ್ಷ ಛಿದ್ರವಾಗುತ್ತಿರುವುದು ಇಂಡಿ ಒಕ್ಕೂಟದಲ್ಲೂ ಅವರ ಪರಿಸ್ಥಿತಿಯನ್ನು ದುರ್ಬಲಗೊಳಿಸಿದೆ. ಅತ್ತ ಅವರು ವಿಪಕ್ಷ ಒಕ್ಕೂಟದ ಸಭೆಯಲ್ಲಿ ಭಾಗವಹಿಸಿದ್ದರೆ ಇತ್ತ ಅವರ ಪಕ್ಷದ ಮುಖ್ಯ ಸಚೇತಕ ಹಾಗೂ ರಾಜ್ಯಸಭಾ ಸದಸ್ಯ ಸುಕೇಂದು ಶೇಖರ ರಾಯ್ ಪಕ್ಷಕ್ಕೆ ರಾಜೀನಾಮೆ ನೀಡಿದ ಬೆಳವಣಿಗೆ ನಡೆಯಿತು.

ನಂತರದ ಬೆಳವಣಿಗೆಯಲ್ಲಿ 10ಕ್ಕೂ ಅಧಿಕ ಟಿಎಂಸಿ ಸಂಸತ್ ಸದಸ್ಯರು ದಿಲ್ಲಿಗೆ ಬಂದಿದ್ದ ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಸುವೇಂದು ಅಧಿಕಾರಿ ಅವರನ್ನು ಭೇಟಿಯಾಗುವ ಮೂಲಕ ಟಿಎಂಸಿಯ ಸಂಸತ್‌ಸದಸ್ಯರು ಕೂಡಾ ಬಂಡಾಯವೇಳುವ ಸಂಕೇತ ತೋರಿದರು. ಅದರ ಬೆನ್ನಿಗೇ ಸುಮಾರು 20 ಸಂಸತ್‌ಸದಸ್ಯರು ಎನ್‌ಡಿಎ ಕೂಟವನ್ನು ಸೇರುವ ಇಂಗಿತ ವ್ಯಕ್ತಪಡಿಸುತ್ತಿದ್ದಾರೆಂದೂ ವರದಿಯಾಗಿದೆ. ಈಗಾಗಲೆ ಪಶ್ಚಿಮ ಬಂಗಾಳದಲ್ಲಿ ಶಾಸಕರ ಬಂಡಾಯದಿಂದ ಸೊರಗಿರುವ ಟಿಎಂಸಿಗೆ ಇದು ಇನ್ನಷ್ಟು ದೊಡ್ಡ ಹೊಡೆತ ನೀಡಬಹುದು.

ಈ ಮಧ್ಯೆ ಇಂಡಿಯಾ ಒಕ್ಕೂಟದ ನಾಯಕತ್ವ ವಹಿಸುವ ಕುರಿತಂತೆ ಕೂಡಾ ಗೊಂದಲ ಮನೆ ಮಾಡಿದೆ. ತಮ್ಮ ಪಕ್ಷಕ್ಕೇ ಗೆಲುವು ತಂದುಕೊಡದ ರಾಹುಲ್ ಗಾಂಧಿಯ ನಾಯಕತ್ವವನ್ನು ಬಹುತೇಕರು ಒಪ್ಪುತ್ತಿಲ್ಲ. ಒಂದು ಕಾಲದಲ್ಲಿ ಮಮತಾ ನಾಯಕತ್ವವನ್ನು ಬೆಂಬಲಿಸಿದ್ದವರೆಲ್ಲ ಈಗ ಟಿಎಂಸಿ ಸ್ಥಿತಿ ಕಂಡು ಹಿಂಸರಿದಿದ್ದಾರೆ. ಒಮ್ಮೆ ಕೇಜ್ರಿವಾಲ್‌ರನ್ನು ಮುಂದೆ ಮಾಡಲಾಗಿತ್ತಾದರೂ ಅವರೂ ಈಗ ಮೂಲೆಗುಂಪಾಗಿದ್ದಾರೆ. ಒಟ್ಟಿನಲ್ಲಿ ಇಂಡಿಯಾ ಒಕ್ಕೂಟವೆಂಬುದು ಸತ್ವವಿಲ್ಲದ ಪಕ್ಷಗಳ ಒಕ್ಕೂಟವೇ ಹೊರತು ಎನ್‌ಡಿಎಗೆ ಪ್ರಬಲ ಪರ್ಯಾಯವಾಗುವ ಪ್ರಶ್ನೆ ದೂರವೇ ಉಳಿದಿದೆ.

ದೆಹಲಿ ಬಿಸಿಲಿಗೆ ಜಿರಳೆಗಳು ಒಣಗಿದವೇ?



ರಾಘವಾಂಕಣ
ರಾಘವೇಂದ್ರ ಸುಬ್ರಹ್ಮಣ್ಯ
raghavaankana@gmail.com

ಪುಟ ೧ ಯಾರು ಬೇಕಾದರೂ, ಎಲ್ಲಿ ಬೇಕಾದರೂ, ಯಾವಾಗ ಬೇಕಾದರೂ ವ್ಯವಸ್ಥೆಯ ವಿರುದ್ಧ ಪ್ರತಿಭಟನೆ ನಡೆಸಬಹುದು ಎಂಬ ಹಗಲುಗನಸಿನ ಆದರ್ಶವನ್ನು ಮುಂದಿಟ್ಟು ಕೊಂಡು ತಲೆಬುಡವಿಲ್ಲದ ಮಾತಾನಾಡುತ್ತಾ, ಎಲ್ಲಾ ಮಾಧ್ಯಮಗಳನ್ನು ಕರೆಸಿಕೊಂಡು ಕುಳಿತಿದ್ದ ಈ ಹುಡುಗರಿಗೆ ಆಶ್ಚರ್ಯವಾಗುವಂತೆ, ತಮ್ಮ ಬಳಿ ಕೋರಿಕೆ ಹಿಡಿದು ಬಂದವರಿಗೆ ಹೆಚ್ಚಿನ ಪ್ರಶ್ನೆಯನ್ನೇನೂ ಕೇಳದೆ ದೆಹಲಿ ಪೊಲೀಸರು ಅನುಮತಿ ಪತ್ರವನ್ನು ಕೈಗಿತ್ತರು. ಅನುಮತಿ ಸಿಗದಿದ್ದರೆ ಗಲಭೆ ಮಾಡುವ ಸಾಧ್ಯತೆಯನ್ನೇ ಇಲ್ಲವಾಗಿಸಿದರು. ಅನುಮತಿ ಸಿಕ್ಕಿದರೆ ಗಲಭೆ ಮಾಡಿಸುವ ಇನ್ನೊಂದು ಸಾಧ್ಯತೆಯನ್ನು ಇಲ್ಲವಾಗಿಸಲು, ಸಮವಸ್ತ್ರ ಧರಿಸಿದ ಹಾಗು ಮಫ್ತಿಯಲ್ಲಿರುವ ಸಾಮಾನ್ಯ ಪೊಲೀಸ್ ತುಕಡಿಗಳೊಂದಿಗೆ ಹಿಂದೆಂದೂ ಉಪಯೋಗಿಸದ ಹೊಸ ತಂತ್ರವೊಂದನ್ನು ಬಳಸಲಾಯ್ತು. ಅದೇನೆಂದರೆ, ಪ್ರತಿಭಟನೆಯ ದಿನ ಮಾಧ್ಯಮ ಪ್ರತಿನಿಧಿಗಳಲ್ಲದೆ ದೆಹಲಿ ಪೊಲೀಸರು ಕೂಡ ಕೈಯಲ್ಲಿ ಕ್ಯಾಮರಾ ಮತ್ತು ಡ್ರೋನ್‌ಗಳನ್ನು ಹಿಡಿದು, ಬಾಡಿ ಕ್ಯಾಮ್‌ಗಳನ್ನೂ ಧರಿಸಿ, ಪ್ರತಿಯೊಬ್ಬ ಪ್ರತಿಭಟನಾಕಾರನ ಮುಖಗಳನ್ನು ಸೆರೆಹಿಡಿದರು. ಒಂದೊಮ್ಮೆ ಗಲಭೆ ನಡೆದರೆ ಯಾರ್ಯಾರನ್ನು ಹೆಡೆಮುರಿ ಕಟ್ಟಬೇಕು ಎನ್ನುವುದು ಇದರಿಂದ ಸುಲಭವಾಯ್ತು. ನಿಜಕ್ಕೂ ನೀಟ್ ಅವ್ಯವಹಾರದ ಬಗ್ಗೆ ಮಾತ್ರವೇ ಪ್ರತಿಭಟಿಸಲು ಬಂದಿದ್ದ ವಿದ್ಯಾರ್ಥಿಗಳು ಪೊಲೀಸರ ಈ ನಡೆಗಳಿಂದ, ಯಾರಾದರೂ ಗಲಭೆ ಪ್ರಾರಂಭಿಸಿದರೆ ಆದರಿಂದ ತಮ್ಮ ಮುಂದಿನ ಭವಿಷ್ಯಕ್ಕೆ ಆಗಬಹುದಾದ ಪರಿಣಾಮಗಳನ್ನು ಊಹಿಸಿಕೊಂಡು ಪ್ರತಿಭಟನೆಯಿಂದ ದೂರವೇ ಉಳಿದರು.

ಇದೆಲ್ಲದರ ಜೊತೆಗೆ ಯೂಟ್ಯೂಬರ್‌ಗಳು ಮತ್ತು ಇನ್ಫ್ಲುಯೆನ್ಸರುಗಳು ಸ್ಥಳಕ್ಕೆ ಆಗಮಿಸಿ ಪ್ರತಿಭಟನಾಕಾರರ ಜೊತೆ ನಡೆಸಿದ ಸಂವಾದಗಳು ಮತ್ತು ಸಂದರ್ಶನಗಳು, ಇಡೀ ಪ್ರತಿಭಟನೆ ಎಷ್ಟು ಟೊಳ್ಳು ಅಂತಲೂ ನಿರೂಪಿಸಿದರು. ನೀಟ್ ಪರೀಕ್ಷೆ ಅಂದರೆ ಏನಂತಲೂ ಗೊತ್ತಿಲ್ಲದ ಒಂಬತ್ತನೇ ತರಗತಿಯಲ್ಲಿ ಓದುತ್ತಿದ್ದ ಒಂದು ಹುಡುಗಿಯಂತೂ 'ನಾನಿಲ್ಲಿ ಇಸ್ರೇಲ್-ಅಮೆರಿಕಾ ನಡುವೆ ನಡೆಯುತ್ತಿರುವ ಯುದ್ಧದ ವಿರುದ್ಧ ಪ್ರತಿಭಟಿಸಲು ಬಂದಿದ್ದೇನೆ' ಎಂದಳು. ಇನ್ನೊಬ್ಬಳು 'ಸರ್ಕಾರಿ ಶಾಲೆಗಳು ಮುಚ್ಚುತ್ತಿವೆ. ಅದರ ವಿರುದ್ಧ ಪ್ರತಿಭಟನೆಗೆ ಬಂದಿದ್ದೀನಿ' ಎಂದಳು.

ಮತ್ತೊಬ್ಬ ಮಹಾಶಯ 'ಇವಿಎಂ ಹ್ಯಾಕ್ ಮಾಡಿ ತೋರಿಸುತ್ತೇನೆ' ಎಂದು ಕುಳಿತಿದ್ದ. ಇನ್ನೊಬ್ಬ 'ನನ್ನ ಮೊಬೈಲ್ ಮತ್ತು ಚಿನ್ನದ ಚೈನ್ ಕಳುವಾಗಿದೆ. ಹುಡುಕಿಕೊಡಿ' ಎಂದು ಅಳುತ್ತಿದ್ದ. ಉದ್ದದ ಫ್ರಾಕ್, ಲಂಗ ದಾವಣಿ ಮತ್ತು ಸೀರೆಗಳನ್ನು ಧರಿಸಿದ್ದ ಪುರುಷ ಮಹಾಶಯರು ಆಝಾದಿ ಆಝಾದಿ ಎಂದು ನರ್ತಿಸುತ್ತಿದ್ದರು. ಪ್ಯಾಂಟ್ ಮತ್ತು ಚಡ್ಡಿ ಧರಿಸಿರುವ ಹುಡುಗಿಯರು ಪ್ಯಾಲೆಸ್ತೀನಿಗೆ ಜಿಂದಾಬಾದ್ ಕೂಗುತ್ತಿದ್ದರು. ಸಮಾನತೆಯ ಕೂಗು ಎತ್ತಿದ್ದ ಮೂವತ್ತರ ಹರೆಯದ ಜೆನ್ ಝೀ ಪ್ರತಿನಿಧಿಗಳಿಗೆ ಅರವತ್ತೈದರ ಅಜ್ಜನೊಬ್ಬ ಗಾಳಿ ಹಾಕುತ್ತಾ ನಿಂತಿದ್ದ. ಅಮೆರಿಕಾದಿಂದ ಆಮದಾಗಿದ್ದ ಸಿಜೆಪಿಯ ಅಧ್ಯಕ್ಷನಂತೂ ದೆಹಲಿಯ ಬಿಸಿ ತಾಳಲಾರದೆ ಅವರ ಪ್ರತಿಭಟನೆಯ ರೀತಿಯಲ್ಲಿ ಕುಸಿದೇ ಬಿದ್ದ. ಒಟ್ಟಿನಲ್ಲಿ ನಿಜಕ್ಕೂ ಅರ್ಥಪೂರ್ಣ ರೀತಿಯಲ್ಲಿ ನಡೆಯಬೇಕಾಗಿದ್ದ ಪ್ರತಿಭಟನೆಯೊಂದು, ಇಪ್ಪತ್ತು ಲಕ್ಷಕ್ಕೂ ಹೆಚ್ಚು ಆನ್ಲೈನ್ ಬೆಂಬಲಿಗರಿದ್ದ ಪ್ರತಿಭಟನೆಯೊಂದು, ಇಪ್ಪತ್ತು ಸಾವಿರ ಜನರನ್ನೂ ಜಂತರ್ ಮಂತರ್‌ನಲ್ಲಿ ಸೇರಿಸಲಾಗದೇ ಕಮರಿಯೇ ಹೋಯಿತು. ಈ ಪ್ರತಿಭಟನಾಕಾರರು ತಮ್ಮ ತಪ್ಪುಗಳಿಂದ ಪಾಠ ಕಲಿತು, ಇನ್ನೊಮ್ಮೆ ಬೇರೆಯದೇ ರೂಪದಲ್ಲಿ ಅಥವಾ ದೇಶಾದ್ಯಂತ ಏಕಕಾಲದಲ್ಲಿ ತಲೆಯೆತ್ತುವುದನ್ನು ಅಲ್ಲಗಳೆಯಲಾಗುವುದಿಲ್ಲವಾದರೂ, ಈ ಪಾರ್ಟಿ ತನ್ನ ನಂಬಿಕೆಯನ್ನು ಮತ್ತು ಈ ಪ್ರತಿಭಟನೆ ತನ್ನ ಮೊನಚನ್ನು ಸದ್ಯಕ್ಕೆ ಕಳೆದುಕೊಂಡಿರುವುದಂತೂ ಹೌದು.

ಹಾಗಾದರೆ ಈ ಪ್ರತಿಭಟನೆಯೇ ತಪ್ಪೇ? ಇದು ಕೇವಲ ಬಿಜೆಪಿ ವಿರೋಧಿಗಳ ರಾಜಕಿಯವೇ? ಖಂಡಿತಾ ಈ ಪ್ರತಿಭಟನೆ ತಪ್ಪಲ್ಲ. ಧರ್ಮೇಂದ್ರ ಪ್ರಧಾನ್ ಸಾರ್ವಜನಿಕವಾಗಿ ಛೀಮಾರಿ ಹಾಕಿಸಿಕೊಳ್ಳುತ್ತಿರುವುದು ಇದೇನೂ ಮೊದಲನೇ ಬಾರಿಗಲ್ಲ. ನಮ್ಮ ಭವಿಷ್ಯದ ಪ್ರಜೆಗಳನ್ನು ರೂಪಿಸುವಂತಹ ಗುರುತರ ಜವಾಬ್ದಾರಿಯಿರುವ ಈ ಹುದ್ದೆಗೆ ಅದೆಷ್ಟು ವರ್ಚಸ್ಸಿರುವ ವ್ಯಕ್ತಿ ಬೇಕು. ಇನ್ನು ಈ ರಾಜೀನಾಮೆಯ ಬೇಡಿಕೆಗೆ ಬಂದರೆ, ವೈಯಕ್ತಿಕವಾಗಿ ನನಗಂತೂ ಧರ್ಮೇಂದ್ರ ಪ್ರಧಾನ್ ರಾಜೀನಾಮೆ ಕೊಡಬೇಕೇ? ಎನ್ನುವುದು ರಾಜಕೀಯ ಪ್ರೇರಿತ ಪ್ರಶ್ನೆಯಷ್ಟೇ. ಕಾಂಗ್ರೆಸ್ ಮತ್ತು ಸಿಜೆಪಿಯಂತವರು ರಾಜೀನಾಮೆಗೆ ಆಗ್ರಹಿಸುತ್ತಿರುವುದು ಮೋದಿಯರನ್ನು ಮಣಿಸುವ ಸೇಡಿನ ಲೆಕ್ಕಾಚಾರದಲ್ಲೇ ಹೊರತು, ನೀಟ್ ಪತ್ರಿಕೆಯ ಸೋರಿಕೆಯಿಂದ ನೊಂದ ವಿದ್ಯಾರ್ಥಿಗಳ ಮೇಲಿನ ಕಕ್ಕುಲತೆಗಲ್ಲ ಎನ್ನುವುದು ಆದಾಗಲೇ ಕಂಡುಬರುತ್ತಿದೆ. ಇಲ್ಲಿ ಸರಿಹೋಗಬೇಕಾದದ್ದು ದುರ್ಬಲ ವ್ಯವಸ್ಥೆಯಷ್ಟೇ ಹೊರತು, ಪ್ರಧಾನ್ ಒಂದು ದುರ್ಬಲ ಮಂತ್ರಿಯ ಮುಖ ಮಾತ್ರ. ಹಾಗು ಸರ್ಕಾರ ದುರ್ಬಲ ವ್ಯವಸ್ಥೆಯನ್ನು ಸರಿಮಾಡಬೇಕಾಗಿದೆಯೇ ಹೊರತು, ದುರ್ಬಲ ಮಂತ್ರಿಯನ್ನು ಹೊರಗಟ್ಟಿದರೆ ಆದರಿಂದ ಯಾವ ಹೆಚ್ಚಿನ ಸಕಾರಾತ್ಮಕ ಪರಿಣಾಮವೂ ಉಂಟಾಗದು. ಮಾತ್ರವಲ್ಲ, ರಾಜಕೀಯ ಒಳಸುಳಿಯ ದೃಷ್ಟಿಯಿಂದ ನೋಡಿದರೂ ಕೂಡ, ನಡೆದ ಅವಘಡಕ್ಕೆ ಮಂತ್ರಿಯೊಬ್ಬನನ್ನು ಹೊಣೆಮಾಡುವ ಹಾಗೂ ಅವನ ಅಥವಾ ಅವಳ ರಾಜೀನಾಮೆ ಪಡೆಯುವ ಹೊಸ ಪದ್ಧತಿಗೆ ನಾಂದಿ ಹಾಡುವತ್ತ ಬಿಜೆಪಿ ಹೆಜ್ಜೆ ಹಾಕಲಾರದು. ಯಾಕೆಂದರೆ ಸಾಂವಿಧಾನಿಕವಾಗಿ ಜಾರಿಗೆ ಬಂದ ನಿಯಮವೊಂದನ್ನು ಹೇಗಾದರೂ ಬದಲಿಸಬಹುದು. ಆದರೆ ಮಂತ್ರಿಯನ್ನು ಬಲಿಕೊಡುವ ಪದ್ಧತಿ ಒಮ್ಮೆ ಜಾರಿಗೆ ಬಂದರೆ ಮತ್ತೆ ಬದಲಿಸಲಾಗದು. ಇವತ್ತು ಪ್ರಧಾನ್ ಅವರನ್ನು ತೆಗೆದರೆ, ಬಿಜೆಪಿ ತಾನಾಗಿಯೇ 'ಆಯಾ ಸಚಿವಾಲಯದಲ್ಲಿ ನಡೆದ ತಪ್ಪಿಗೆ ಆ ಮಂತ್ರಿಯೇ ಹೊಣೆ ಹಾಗೂ ಆ ತಪ್ಪಿಗೆ ಅವರನ್ನು ಕೆಲಸದಿಂದ ತೆಗೆಯಲಾಗುತ್ತದೆ' ಎಂಬ ಅಲಿಖಿತ ನಿಯಮವನ್ನು ಬರೆದಂತಾಗುತ್ತದೆ. ನಾಳೆ ರೂಪಾಯಿ ಅಪಮೌಲ್ಯದ ನೆಪ ಹಿಡಿದು ನಿರ್ಮಲಾ ಅವರ ತಲೆದಂಡಕ್ಕೆ ಆಗ್ರಹವಿಡಲಾಗುತ್ತದೆ. ಪೆಟ್ರೋಲ್ ಮತ್ತು ಗ್ಯಾಸ್ ಕೊರತೆಗೆ ಹರ್ದೀಪ್ ಪುರಿಯವರ ರಾಜೀನಾಮೆಗೆ ಗಲಭೆ ಪ್ರಾರಂಭವಾಗುತ್ತದೆ. ಮಾತ್ರವಲ್ಲ ವಿರೋಧ ಪಕ್ಷಗಳು ಮುಂದಿನ ದಿನಗಳಲ್ಲಿ ಇದನ್ನೇ ಖಾಯಂ ಅಜೆಂಡಾ ಮಾಡಿಕೊಂಡು ಬಿಡುತ್ತವೆ. ಆದ್ದರಿಂದ, ಪ್ರಧಾನ್ ಅವರ ತಲೆದಂಡ ಕೊಡಲಾಗುತ್ತದೆ ಎಂಬ ಯಾವ ನಂಬಿಕೆಯೂ ನನಗಿಲ್ಲ. ಆದರೆ, ಈ ಜಿರಳೆಗಳ ಗಲಾಟೆಯಿಂದ ಯಾವ ಉಪಯೋಗವೂ ಇದೆ ಎಂಬ ನಂಬಿಕೆಯೂ ನನಗಿಲ್ಲ. ಆದ್ದರಿಂದ, ಯಾರನ್ನೂ ಕೆಲಸದಿಂದ ತೆಗೆಯದೇ, ಮೋದಿಯವರ ಸರ್ಕಾರ ಈಗ ನಡೆದಿರುವ ತಪ್ಪನ್ನು ಒಪ್ಪಿಕೊಂಡು, ಇಂತಹ ಘಟನೆಗಳು ಮರುಕಳಿಸದಂತೆ ಯಾವ ನಿಯಮಾವಳಿಗಳನ್ನು ಜಾರಿಗೊಳಿಸುವ ಹೆಜ್ಜೆಗಳನ್ನು ಇಡಲಿದೆ ಎಂಬುದು ಕುತೂಹಲಕಾರಿ ವಿಚಾರ. ಅಂತಹದೊಂದು ನಿಯಮಾವಳಿಯನ್ನು ಜಾರಿಗೆ ತಂದು, ಆನಂತರ ಸಚಿವಾಲಯದಲ್ಲಿ ಬದಲಾವಣೆ ಮಾಡಿದರೆ, ಈ ಸರ್ಕಾರ ನಿಜಕ್ಕೂ ತಪ್ಪುಗಳನ್ನು ಸರಿಪಡುವ ನಿಟ್ಟಿನಲ್ಲಿ ಗಂಭೀರವಾಗಿ ಯೋಚಿಸಿದೆ ಎಂಬ ನಂಬಿಕೆಯನ್ನಾದರೂ ಉಳಿಸಿಕೊಳ್ಳಬಹುದು.

ಇನ್ನು ಈ ಜೆನ್-ಝೀಗಳ ವಿಚಾರಕ್ಕೆ ಬಂದರೆ, ಯೋಚಿಸುವ ಶಕ್ತಿಯೇ ಇಲ್ಲದ ಇವರನ್ನು ವಿದೇಶೀ ಶಕ್ತಿಗಳು ದಾಳಗಳನ್ನಾಗಿ ಬಳಸಿಕೊಳ್ಳುತ್ತಿವೆ ಎಂಬುದಂತೂ ಬಾಂಗ್ಲಾದೇಶ, ನೇಪಾಳ, ಇಂಡೋನೇಷ್ಯಗಳಲ್ಲಿ ನಡೆದ ರಾಜಕೀಯ ವಿಕೋಪಗಳಿಂದ ಸರ್ವವಿದಿತವಾಗಿದೆ. ಹೊಸ ರೀತಿಯ ಸಮಸ್ಯೆಗಳಿಗೆ, ಹೊಸ ರೀತಿಯ ಪರಿಹಾರಗಳೇ ಬೇಕು. ರಾಜಕೀಯದಲ್ಲಿ ಅನುಭವಿಗಳಾದರೂ ಸಹ ಹಳೆಯ ಯೋಚನಾಲಹರಿಗೇ ಜೋತುಬಿದ್ದಿರುವ ಹಳೆಯ ಪಕ್ಷಗಳು ಇವರನ್ನು ಹೇಗೆ ನಿರ್ವಹಿಸುತ್ತವೆ ಎಂಬುದು ಕೂಡ ಕುತೂಹಲದ ವಿಚಾರ.

ಮೊನ್ನೆಯಷ್ಟೇ ನನ್ನ ಮಗಳು ಅಪ್ಪಾ, ಜೆನ್-ಝೀ ಗಳಿಗೆ ಆ ಝೆಡ್ ಅಕ್ಷರವನ್ನೇ ಏಕೆ ಬಳಸುತ್ತಾರೆ ಎಂದು ಕೇಳಿದಾಗ, ಬೇರೆಲ್ಲ ಇತಿಹಾಸ ವಿವರಿಸುವುದು ಬಿಟ್ಟು ನಾನು ಝೆಡ್ ಹೇಗೆ ಅಕ್ಷರಮಾಲೆಯ ಕೊನೆಯ ಅಕ್ಷರವೋ, ಹಾಗೆಯೇ ಈ ಜೆನ್-ಝೀಗಳು ಮನುಕುಲದ ಕೊನೆಯ ಪೀಳಿಗೆಯಾಗುವ ಎಲ್ಲ ಲಕ್ಷಣಗಳನ್ನೂ ಹೊಂದಿದ್ದಾರೆ. ಇವರನ್ನೇ ನಂಬಿಕೊಂಡರೆ, ಇವರನ್ನು ತಿವಿಯುವ ಎಚ್ಚರವನ್ನು ನಾವು ಬೆಳೆಸಿಕೊಳ್ಳದೇ ಹೋದರೆ ನಮ್ಮ ಕಥೆ ಆ ಇಂಗ್ಲಿಷ್ ಅಕ್ಷರಮಾಲೆಯಂತೆಯೇ ಕೊನೆಯಾಗುವುದೇ ಹೌದು. ಅದಕ್ಕೇ ಆ ಅಕ್ಷರವನ್ನು ಸರಿಯಾಗಿಯೇ ಇಟ್ಟಿದ್ದಾರೆ ಎಂದೆ. ಮನುಕುಲ ಕೊನೆಯಾಗುತ್ತಾ? ಹಾಗಾದರೆ ನಮ್ಮ ಕಥೆಯೇನು? ಎಂದಳು. ಈ ಝೀಗಳ ಹಳವಂಡಗಳನ್ನು ನೋಡಿದ ಮೇಲೆ, ಅವರನ್ನು ತಿವಿದ ಮೇಲೆ, ನಿಮ್ಮನ್ನು ಸರಿಯಾಗಿ ಬೆಳೆಸುವುದು ನಮ್ಮ ಮುಖ್ಯ ಜವಾಬ್ದಾರಿಯಾಗುತ್ತದೆ. ನಿಮ್ಮನ್ನೆಲ್ಲಾ ಸರಿಯಾಗಿ ಬೆಳೆಸಿದ ಮೇಲೆ, ಮನುಕುಲಕ್ಕೆ ಹೊಸದೊಂದು ಹುಟ್ಟು ಸಿಗುವ ಸಾಧ್ಯತೆಯಿರುವುದರಿಂದ ನೀವು ಝೀನ್-ಎ ಕಣೇ ಮಗಳೇ. ನಿಮ್ಮಿಂದ ಹಳೆಯ ಮತ್ತು ಹೊಸ ಜಗತ್ತಿನ ಮಿಸಳಭಾಜಿಯಾಗಿ. ಮನುಕುಲದ ಹೊಸ ಶಕೆಯ ಪ್ರಾರಂಭ ಆಗಬೇಕು ನೋಡು ಎಂದೆ. ಎಷ್ಟು ಅರ್ಥವಾಯ್ತೋ ಗೊತ್ತಿಲ್ಲ.

ಬಕ್ರೀದ್ ಮತ್ತು ವಿವಿಧ ರಾಜ್ಯಗಳ ಗೋಹತ್ಯಾ ನಿಷೇಧ ಕಾನೂನುಗಳು



ಧರಣಿ ಮಂಡಲ
ಕೆ.ಎನ್. ಶೈಲೇಶ್ ಹೊಳ್ಳ
shyleshholla@gmail.com

ಈ ವರ್ಷದ ಬಕ್ರೀದ್‌ನಲ್ಲಿ ಪ್ರತಿ ವರ್ಷದಂತೆ ಅಲ್ಲದಿದ್ದರೂ ಸ್ವಲ್ಪ ಮಟ್ಟಿಗಾದರೂ ಗೋವುಗಳ ರಕ್ತ ಕಡಿಮೆ ಹರಿದಿತ್ತು. ಇದಕ್ಕೆ ಆಯಾ ರಾಜ್ಯ ಸರ್ಕಾರಗಳು ಪ್ರಾಣಿ ಬಲಿ ತಡೆಗೆ ಸಂಬಂಧಿಸಿದಂತೆ ತಕ್ಕ ಮಟ್ಟಿನ ವ್ಯವಸ್ಥೆಯನ್ನು ಮಾಡಿದ್ದು ಒಂದು ಕಾರಣವಾದರೆ, ಜನರಲ್ಲಿ ಗೋವಿನ ಬಗ್ಗೆ ಜಾಗೃತಿ ಮೂಡುತ್ತಿರುವುದು ಮತ್ತೊಂದು ಕಾರಣವಾಗಿದೆ. ಬಿಜೆಪಿ ಆಡಳಿತವಿರುವ ರಾಜ್ಯಗಳಲ್ಲೆಲ್ಲಾ ಜಾನುವಾರು ಮಾರಾಟ ಮತ್ತು ಹತ್ಯೆಗೆ ಸಂಬಂಧಿಸಿದ ನಿಯಮಗಳನ್ನು ಬಿಗಿಗೊಳಿಸಲಾಗಿತ್ತು. ದೇಶದಲ್ಲಿ ಆಡು, ಕುರಿ ಮತ್ತು ಒಂಟೆಗಳನ್ನು ಸಾಮಾನ್ಯವಾಗಿ ಬಲಿ ನೀಡಲಾಗುತ್ತದೆಯಾದರೂ, ಕೆಲವು ರಾಜ್ಯಗಳು ಮುಂದಾಗಲಿರುವ ಧಾರ್ಮಿಕ ಸೂಕ್ಷ್ಮತೆಯನ್ನು ಗಮನದಲ್ಲಿಟ್ಟುಕೊಂಡು ಗೋಹತ್ಯೆಯ ಮೇಲೆ ಭಾಗಶಃ ನಿಷೇಧವನ್ನು ವಿಧಿಸಿದ್ದವು. ಜಾನುವಾರುಗಳ ದುಡಿಮೆಯ ಶಕ್ತಿ, ವಯಸ್ಸು ಮತ್ತು ಹಾಲು ಕೊಡುವ ಸಾಮರ್ಥ್ಯಕ್ಕೆ ಅನುಗುಣವಾಗಿ ದೃಢೀಕರಣ ಪತ್ರದೊಂದಿಗೆ ಅವುಗಳ ಹತ್ಯೆಗೂ ಕೆಲವೊಂದು ರಾಜ್ಯಗಳು ಅನುಮತಿಸಿದ್ದವು. ಬಹುತೇಕ ಬಿಜೆಪಿ ಅಧಿಕಾರವಿರುವ ರಾಜ್ಯಗಳಲ್ಲಿ ಗೋಹತ್ಯೆಯ ಮೇಲೆ ಕಟ್ಟುನಿಟ್ಟಾದ ನಿರ್ಬಂಧಗಳು ಅಥವಾ ಸಂಪೂರ್ಣ ನಿಷೇಧವಿತ್ತು. ಇನ್ನು ಕೆಲ ಈಶಾನ್ಯ ಮತ್ತು ದಕ್ಷಿಣ ರಾಜ್ಯಗಳಲ್ಲಿ ಪರಿಸ್ಥಿತಿಗೆ ಅನುಗುಣವಾಗಿ ಹತ್ಯೆಗೆ ಕೆಲವು ನಿರ್ಬಂಧಗಳೊಂದಿಗೆ ಅನುಮತಿಯನ್ನು ನೀಡಲಾಗಿತ್ತು.

ಇದೇ ಕಾರಣಕ್ಕೆ ಈ ವರ್ಷ ಮೊದಲ ಬಾರಿಗೆ ಕೆಲ ಮುಲ್ಲಾ ಮೌಲ್ವಿಗಳು ಮುಂದಾಗಲಿರುವ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ರಸ್ತೆಗಿಳಿದು ಗೋವಿಗೆ ರಾಷ್ಟ್ರೀಯ ಪ್ರಾಣಿಯ ಸ್ಥಾನಮಾನವನ್ನು ನೀಡಬೇಕೆಂದು ಒತ್ತಾಯಿಸುವುದರೊಂದಿಗೆ ಗೋವನ್ನು ಈ ಬಾರಿ ಕುರ್ಬಾನಿ ಕೊಡಬಾರದು ಎಂಬುದಾಗೆಲ್ಲಾ ಹೇಳಲು ಪ್ರಾರಂಭಿಸಿದ್ದರು. ಇನ್ನು ಕೆಲ ಮುಸ್ಲಿಂ ಸಂಘಟನೆಗಳು ಮತ್ತು ಧರ್ಮಗುರುಗಳು ಕುರ್ಬಾನಿ ಆಚರಣೆಯನ್ನು ಆಯಾ ರಾಜ್ಯದ ಕಾನೂನಿನ ಅನ್ವಯ ಕಟ್ಟುನಿಟ್ಟಾಗಿ ಪಾಲಿಸಬೇಕೆಂದು ಒತ್ತಾಯಿಸಿದ್ದವು. ಅಸ್ಸಾಂ ಮತ್ತು ಪಶ್ಚಿಮ ಬಂಗಾಳದಂತಹ ರಾಜ್ಯಗಳಲ್ಲಿನ ಮುಸ್ಲಿಂ ಮುಖಂಡರು ಮತ್ತು ಈದ್ಗಾ ಸಮಿತಿಗಳು ಮುಸ್ಲಿಂ ಸಮುದಾಯಕ್ಕೆ ಗೋವುಗಳ ಬಲಿಯನ್ನು ಸಂಪೂರ್ಣವಾಗಿ ನಿಲ್ಲಿಸುವಂತೆ ಮನವಿ ಮಾಡಿದ್ದವು. ಮಹಾರಾಷ್ಟ್ರದ ಕೆಲವು ಭಾಗಗಳಲ್ಲಿನ ಮುಸ್ಲಿಂ ಸಂಘಟನೆಗಳು ಕೋಮು ಸಾಮರಸ್ಯವನ್ನು ಕಾಪಾಡಿಕೊಳ್ಳಲು ಗೋಹತ್ಯೆ ಮಾಡದಂತೆ ಮತ್ತು ಕಾನೂನನ್ನು ಪಾಲಿಸುವಂತೆ ಸಮುದಾಯಕ್ಕೆ ಮನವಿ ಮಾಡಿತ್ತು. ಜಮಿಯತ್ ಉಲಮಾ-ಇ-ಹಿಂದ್ ಮುಖ್ಯಸ್ಥ ಮೌಲಾನಾ ಅರ್ಷದ್ ಮದನಿ ಸ್ಥಳೀಯ ಕಾನೂನುಗಳ ಅಡಿಯಲ್ಲಿ ನಿಷೇಧಿಸಲಾದ ಪ್ರಾಣಿಗಳನ್ನು ಬಲಿ ನೀಡದಂತೆ ಸಮುದಾಯಕ್ಕೆ ಮನವಿ ಮಾಡಿದ್ದರು ಮತ್ತು ಸಾಮಾಜಿಕ ಮಾಧ್ಯಮದಲ್ಲಿ ವಧೆ ಮಾಡಲಾದ ಪ್ರಾಣಿಗಳ ಚಿತ್ರಗಳನ್ನು ಹಂಚಿಕೊಳ್ಳದಂತೆ ಸಲಹೆ ನೀಡಿದ್ದರು. ಇವರು ಇನ್ನಿತರ ಮುಸ್ಲಿಂ ಮುಖಂಡರೊಂದಿಗೆ ಸೇರಿಕೊಂಡು ಗೋವಿಗೆ ರಾಷ್ಟ್ರೀಯ ಪ್ರಾಣಿ ಸ್ಥಾನಮಾನ ನೀಡಬೇಕೆಂದು ಒತ್ತಾಯಿಸಿದ್ದರು.

ಪ್ರತಿವರ್ಷ ಮುಸ್ಲಿಮರು ಬಕ್ರೀದ್‌ಗೆ ಪ್ರಾಣಿ ಬಲಿ ಕೊಡಲು ತಯಾರಿ ನಡೆಸುತ್ತಿದ್ದಂತೆ, ಆಡಳಿತ ರೂಢ ಸರ್ಕಾರಗಳು ಯಾವುದೇ ರೀತಿಯ ಅಹಿತಕರ ಘಟನೆಗಳು ನಡೆಯದಂತೆ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳುವುದು ಸಾಮಾನ್ಯ. ಇದರೊಂದಿಗೆ ಸ್ಥಳೀಯ ಜಾನುವಾರು ಹತ್ಯೆ ನಿಷೇಧ ಮತ್ತು ಪ್ರಾಣಿ ಬಲಿ ತಡೆ ಕಾನೂನಿನ ನಿಯಮಗಳನ್ನು ಜಾರಿಗೊಳಿಸಿ ನಿಗಾವಹಿಸಲು ಪ್ರಾರಂಭಿಸುತ್ತವೆ. ಹೀಗೆ ತೆಗೆದುಕೊಳ್ಳುವ ಕಾನೂನಿನ ನಿಯಮಗಳು ರಾಜ್ಯದಿಂದ ರಾಜ್ಯಕ್ಕೆ ಭಿನ್ನವಾಗಿರುತ್ತವೆ. ದೆಹಲಿ, ತಮಿಳುನಾಡು, ಮಹಾರಾಷ್ಟ್ರ, ಗುಜರಾತ್, ಹರಿಯಾಣ, ಮಧ್ಯಪ್ರದೇಶ ಸೇರಿದಂತೆ ಹಲವು ರಾಜ್ಯಗಳಲ್ಲಿ ಗೋವಿನ ಬಲಿಯ ಮೇಲೆ ಸಂಪೂರ್ಣ ನಿಷೇಧವಿದ್ದರೆ, ಕೇರಳ, ಈಶಾನ್ಯದ ಕೆಲವು ರಾಜ್ಯಗಳು ಗೋಹತ್ಯೆಗೆ ಅನುಮತಿಯನ್ನು ನೀಡುತ್ತವೆ.

ಮಹಾರಾಷ್ಟ್ರ ತನ್ನ 1976ರ ಮಹಾರಾಷ್ಟ್ರ ಪ್ರಾಣಿ ಸಂರಕ್ಷಣಾ ಕಾಯ್ದೆಯಡಿಯಲ್ಲಿ ಪ್ರಾಣಿಗಳ ಹತ್ಯೆಯನ್ನು ನಿಯಂತ್ರಿಸುತ್ತಾ, ಗೋವುಗಳ ಹತ್ಯೆಯನ್ನು ನಿಷೇಧಿಸಿದೆ. ಈ ಕಾಯ್ದೆಗೆ 2015ರಲ್ಲಿ ತಿದ್ದುಪಡಿಯನ್ನು ತಂದು ಎತ್ತುಗಳ ವಧೆಯನ್ನು ಸಹ ನಿಷೇಧಿಸುತ್ತಾ, ಗೋವಂಶದ ಬಲಿಯನ್ನು ಸಂಪೂರ್ಣವಾಗಿ ನಿಷೇಧಿಸಿದೆ. ಹಾಗೆಯೇ ಗೋಮಾಂಸದ ಸಂಗ್ರಹ, ಮಾರಾಟ ಮತ್ತು ಸಾಗಿಸುವುದನ್ನು ಅಪರಾಧ ಕೃತ್ಯವೆಂದು ಘೋಷಿಸುತ್ತಾ, ಉಲ್ಲಂಘಿಸಿದಲ್ಲಿ ಐದು ವರ್ಷಗಳ ವರೆಗೆ ಜೈಲು ಶಿಕ್ಷೆ ಮತ್ತು ದಂಡವನ್ನು ವಿಧಿಸುವ ಅವಕಾಶವನ್ನು ಕಲ್ಪಿಸಿದೆ. ಎಮ್ಮೆಗಳ ಹತ್ಯೆಗೆ ಸ್ಥಳೀಯ ಅಧಿಕಾರಿಗಳ ಪ್ರಮಾಣಪತ್ರದೊಂದಿಗೆ ಅನುಮತಿಯನ್ನು ನೀಡಿದೆ.

ಪಶ್ಚಿಮ ಬಂಗಾಳದ ನೂತನ ಸರ್ಕಾರ 14 ವರ್ಷಕ್ಕಿಂತ ಮೇಲ್ಪಟ್ಟ ಅಥವಾ ಕೆಲಸ ಮಾಡಲು ಅಥವಾ ಸಂತಾನೋತ್ಪತ್ತಿಗೆ ಅನರ್ಹವೆಂದು ಘೋಷಿಸಲಾದ ಜಾನುವಾರುಗಳನ್ನು ಮಾತ್ರ ವಧೆಗೆ ಬಳಸಬಹುದು ಎಂಬ ಆದೇಶವನ್ನು ಹೊರಡಿಸಿದೆ. ಇದಕ್ಕೆ ಸಂಬಂಧಿಸಿದಂತೆ ಫಿಟ್‌ನೆಸ್ ಪ್ರಮಾಣಪತ್ರವನ್ನು ಕಡ್ಡಾಯಗೊಳಿಸಿದೆ. ಹಾಗೆಯೇ ಸಾರ್ವಜನಿಕವಾಗಿ ಜಾನುವಾರುಗಳ ಹತ್ಯೆಯನ್ನು ಮಾಡುವಂತಿಲ್ಲ ಮತ್ತು ಅಧಿಕೃತ ಕಸಾಯಿಖಾನೆಗಳಲ್ಲಿ ಮಾತ್ರ ನಿರ್ದಿಷ್ಟ ಸೂಚನೆಗಳೊಂದಿಗೆ ಹತ್ಯೆಯನ್ನು ಅನುಮತಿಸಿದೆ. ಧಾರ್ಮಿಕ ಆಚರಣೆಗಳನ್ನು ಗುರಿಯಾಗಿಸುವ ಬದಲು ಅಕ್ರಮ ಜಾನುವಾರು ಕಳ್ಳಸಾಗಾಣಿಕೆ ಮತ್ತು ಅನಧಿಕೃತ ಹತ್ಯೆಯನ್ನು ತಡೆಯುವುದು ಸರ್ಕಾರದ ಮೂಲ ಉದ್ದೇಶವಾಗಿದೆ.

ಕರ್ನಾಟಕ ಜಾನುವಾರು ಹತ್ಯೆ ಪ್ರತಿಬಂಧಕ ಮತ್ತು ಸಂರಕ್ಷಣಾ ವಿಧೇಯಕ- 2020ರ ಅಡಿಯಲ್ಲಿ ಎಲ್ಲಾ ವಯಸ್ಸಿನ ಹಸುಗಳು, ಎತ್ತುಗಳು ಮತ್ತು 13 ವರ್ಷಕ್ಕಿಂತ ಕಡಿಮೆ ವಯಸ್ಸಿನ ಎಮ್ಮೆಗಳ ವಧೆಯನ್ನು ನಿಷೇಧಿಸಿದೆ. ಕಾನೂನುಬದ್ಧವಾಗಿ ಎಮ್ಮೆ ವಧೆಗೆ ಸಹ ಪಶುವೈದ್ಯಕೀಯ ಪ್ರಮಾಣೀಕರಣ ಮತ್ತು ಅಧಿಕೃತ ಅನುಮತಿಯನ್ನು ಕಡ್ಡಾಯಗೊಳಿಸಿದೆ. ತಮಿಳುನಾಡು ಪ್ರಾಣಿ ಸಂರಕ್ಷಣಾ ಕಾಯ್ದೆ, 1958ರ ಅಡಿಯಲ್ಲಿ ಜಾನುವಾರು ಹತ್ಯೆಯನ್ನು ತುಲನಾತ್ಮಕವಾಗಿ ಅನುಸರಿಸುತ್ತಾ, ಗೋಹತ್ಯೆಯನ್ನು ಸಂಪೂರ್ಣವಾಗಿ ನಿಷೇಧಿಸಿಲ್ಲ. ಪಶುವೈದ್ಯಕೀಯ ಅಧಿಕಾರಿಗಳಿಂದ ವಧೆಗೆ ಯೋಗ್ಯ ಪ್ರಮಾಣ ಪತ್ರವನ್ನು ಪಡೆದ ನಂತರವೇ ವಧೆಯನ್ನು ಅನುಮತಿಸಲಾಗಿದೆ. ಸಂತಾನೋತ್ಪತ್ತಿ, ಡ್ರಾಫ್ಟ್ ಅಥವಾ ಕೃಷಿ ಬಳಕೆಗೆ ಶಾಶ್ವತವಾಗಿ ಅನರ್ಹವೆಂದು ಪರಿಗಣಿಸಲಾದ ಪ್ರಾಣಿಗಳಿಗೆ ಸಾಮಾನ್ಯವಾಗಿ ಪ್ರಮಾಣಪತ್ರವನ್ನು ನೀಡಲಾಗುತ್ತದೆ. ಎಮ್ಮೆಗಳು, ಮೇಕೆಗಳು ಮತ್ತು ಕುರಿಗಳನ್ನು ಸಾಮಾನ್ಯವಾಗಿ ಇಲ್ಲಿ ಕುರ್ಬಾನಿಗಾಗಿ ಬಳಸಲಾಗುತ್ತದೆ. ಇನ್ನು ಆಂಧ್ರಪ್ರದೇಶ ಮತ್ತು ತೆಲಂಗಾಣವು ಆಂಧ್ರ ಪ್ರದೇಶ ಗೋಹತ್ಯೆ ನಿಷೇಧ ಮತ್ತು ಪ್ರಾಣಿ ಸಂರಕ್ಷಣಾ ಕಾಯ್ದೆ, 1977ರ ನಿಬಂಧನೆಗಳನ್ನು ಜಾರಿಗೊಳಿಸುವುದನ್ನು ಮುಂದುವರೆಸಿದೆ. ಇಲ್ಲಿಯ ಕಾನೂನು ಹಸುಗಳು ಮತ್ತು ಕರುಗಳ ವಧೆಯನ್ನು ನಿಷೇಧಿಸುತ್ತದೆ, ಆದರೆ ಎತ್ತುಗಳನ್ನು ಕೃಷಿ ಅಥವಾ ಸಂತಾನೋತ್ಪತ್ತಿ ಉದ್ದೇಶಗಳಿಗೆ ಶಾಶ್ವತವಾಗಿ ಅನರ್ಹವೆಂದು ಘೋಷಿಸಿದ ನಂತರವೇ ವಧೆ ಮಾಡಬಹುದಾಗಿದೆ. ಕೆಲವೊಂದು ಪರಿಸ್ಥಿತಿಗಳಲ್ಲಿ ವಯಸ್ಕ ಎಮ್ಮೆಗಳ ವಧೆಯನ್ನು ಅನುಮತಿಸಲಾಗಿದೆ.

ಗೋಹತ್ಯೆಯ ಮೇಲೆ ಸಂಪೂರ್ಣ ನಿಷೇಧವಿಲ್ಲದ ಏಕೈಕ ದಕ್ಷಿಣದ ರಾಜ್ಯವಾಗಿ ಕೇರಳ ಕಂಡುಬರುತ್ತದೆ. ಇಲ್ಲಿ ಗೋಹತ್ಯೆ ಮತ್ತು ಗೋಮಾಂಸ ಸೇವನೆ ರಾಜ್ಯದಾದ್ಯಂತ ಕಾನೂನುಬದ್ಧವಾಗಿದೆ. ಗೋಹತ್ಯೆ ವಿರೋಧಿ ಶಾಸನಕ್ಕಿಂತ ಹೆಚ್ಚಾಗಿ ಪುರಸಭೆಯ ಕಾನೂನುಗಳು, ಪರವಾನಗಿ ಪಡೆದ ಕಸಾಯಿಖಾನೆಗಳು ಮತ್ತು ಸಾರ್ವಜನಿಕ ಆರೋಗ್ಯ ನಿಯಮಗಳ ಮೂಲಕ ವಧೆಯನ್ನು ನಿಯಂತ್ರಿಸಲಾಗುತ್ತದೆ. ಇನ್ನು ಅಸ್ಸಾಂಗೆ ಹೋಲಿಸಿದರೆ, ಇತರ ಈಶಾನ್ಯ ರಾಜ್ಯಗಳು ಗೋಹತ್ಯೆಯ ಮೇಲಿನ ನಿಯಮಗಳ ವಿಷಯದಲ್ಲಿ ತುಸು ಭಿನ್ನವಾಗಿರುವುದು ಕಂಡುಬರುತ್ತದೆ. ಮೇಘಾಲಯ, ನಾಗಾಲ್ಯಾಂಡ್ ಮತ್ತು ಮಿಜೋರಾಂಗಳಲ್ಲಿ ಗೋಹತ್ಯೆಗೆ ಸಂಪೂರ್ಣ ನಿಷೇಧವಿಲ್ಲದೆ ಜಾನುವಾರು ವಧೆ ಮತ್ತು ಗೋಮಾಂಸ ಸೇವನೆಯನ್ನು ಅನುಮತಿಸಿದೆ. ಈ ಕ್ರಿಶ್ಚಿಯನ್ ಬಹುಸಂಖ್ಯಾತ ರಾಜ್ಯಗಳು ದೇಶಾದ್ಯಂತ ಹಿಂದೆ ಗೋಹತ್ಯೆಗೆ ನಿರ್ಬಂಧಿಸುವುದನ್ನು ತೀವ್ರವಾಗಿ ವಿರೋಧಿಸಿದ್ದವು. ಈ ರಾಜ್ಯಗಳ ಪ್ರಕಾರ ಗೋಮಾಂಸ ಎಂಬುದು ಸ್ಥಳೀಯ ಆಹಾರ ಸಂಸ್ಕೃತಿಯ ಮತ್ತು ಬುಡಕಟ್ಟು ಸಂಪ್ರದಾಯದ ಅವಿಭಾಜ್ಯ ಅಂಗವಾಗಿದೆ. ಅರುಣಾಚಲ ಪ್ರದೇಶ ಮತ್ತು ತ್ರಿಪುರ ರಾಜ್ಯಗಳು ಜಾನುವಾರು ವಧೆಯ ಮೇಲೆ ಸಂಪೂರ್ಣ ನಿಷೇಧವನ್ನು ಜಾರಿಗೊಳಿಸಿಲ್ಲ. ಮಣಿಪುರ ಸಂಪೂರ್ಣ ಗೋಹತ್ಯೆಯ ಪರ ಹಾಗೂ ವಿರುದ್ಧವು ಇಲ್ಲದ ಸ್ಥಿತಿಯನ್ನು ಅನುಸರಿಸುತ್ತಿದೆ. ಮೈತೈ ಹಿಂದೂಗಳು ಹೆಚ್ಚಿರುವ ಸ್ಥಳಗಳಲ್ಲಿ ಪ್ರಮುಖವಾಗಿ ಇಂಫಾಲ್ ಕಣಿವೆಯಲ್ಲಿ ಧಾರ್ಮಿಕ ಸೂಕ್ಷ್ಮತೆಯ ದೃಷ್ಟಿಯಿಂದ ಜಾನುವಾರು ವಧೆಯನ್ನು ನಿರ್ಬಂಧಿಸಿದೆ. ಆದರೆ ಬುಡಕಟ್ಟು ಕ್ರಿಶ್ಚಿಯನ್ ಸಮುದಾಯಗಳು ಪ್ರಾಬಲ್ಯ ಹೊಂದಿರುವ ಬೆಟ್ಟದ ಜಿಲ್ಲೆಗಳಲ್ಲಿ ಗೋಮಾಂಸ ಸೇವನೆಯು ಸಾಮಾನ್ಯವಾಗಿದೆ.

ಬಕ್ರೀದ್ ಸಮಯದಲ್ಲಿ ಭಾಗಶಃ ಭಾರತದಾದ್ಯಂತ ಗೋಹತ್ಯೆಯನ್ನು ಆಯಾ ರಾಜ್ಯಗಳ ಸ್ಥಳೀಯ ಕಾನೂನಿನ ಅಡಿಯಲ್ಲಿಯೇ ನಿಷೇಧಿಸುವ ಪ್ರಯತ್ನಗಳಾಗುತ್ತವೆ. ಬಹುತೇಕ ರಾಜ್ಯಗಳು ಸ್ಥಳೀಯವಾಗಿ ಗೋವಂಶದ ಹತ್ಯೆಯನ್ನು ನಿಷೇಧಿಸುವ ಕಾನೂನನ್ನು ಒಳಗೊಂಡಿದ್ದರೆ, ಇನ್ನು ಕೆಲ ರಾಜ್ಯಗಳು ಗೋಹತ್ಯೆ ತಡೆಯಲು ಯಾವುದೇ ಕಾಯ್ದೆ ಕಾನೂನನ್ನು ಇಂದಿಗೂ ರಚಿಸಿಕೊಂಡಿಲ್ಲ. ಇನ್ನು ಕೆಲವೊಂದು ರಾಜ್ಯಗಳು ಯಾವುದೇ ಧಾರ್ಮಿಕ ಹಬ್ಬಗಳಲ್ಲಿ ಕುರಿ, ಒಂಟೆ, ಗೋವಂಶ ಸೇರಿದಂತೆ ಯಾವುದೇ ಪ್ರಾಣಿಗಳನ್ನು ಬಲಿ ಕೊಡುವುದನ್ನು ಕಡ್ಡಾಯವಾಗಿ ಸ್ಥಳೀಯ ಹಾಗೂ ಕೇಂದ್ರೀಯ ಕಾನೂನಿನ ಮೂಲಕ ನಿಯಂತ್ರಿಸುವುದರೊಂದಿಗೆ ಅಧಿಕೃತ ಕಸಾಯಿಖಾನೆಗಳಲ್ಲಿ ಮಾತ್ರ ಕೆಲವೊಂದು ನಿರ್ಬಂಧಗಳೊಂದಿಗೆ ಹತ್ಯೆ ಮಾಡಲು ಅನುಮತಿಸಿವೆ. ಅದರಲ್ಲೂ ಸಾರ್ವಜನಿಕ ಸ್ಥಳಗಳಲ್ಲಿ ಯಾವುದೇ ಪ್ರಾಣಿಯ ಹತ್ಯೆ ಮಾಡುವುದನ್ನು ಸಂಪೂರ್ಣವಾಗಿ ನಿಷೇಧಿಸಿವೆ.

ಅದೃಷ್ಟವಿದ್ದಂತೆಯೇ ಫಲ

ಸಮುದ್ರಮಥನಾಲ್ಲೇಭೆ ಹರಿರ್ಲಕ್ಷ್ಮೀಂ ಹರೋ ವಿಷಮ್ ।
ಭಾಗ್ಯಂ ಫಲತಿ ಸರ್ವತ್ರ ನ ವಿದ್ಯಾ ನ ಚ ಪೌರುಷಮ್ ॥

ದೇವಾಸುರರು ಸಮುದ್ರವನ್ನು ಕಡೆದಾಗ ವಿಷ್ಣು ಲಕ್ಷ್ಮಿಯನ್ನೂ , ಶಿವ ವಿಷವನ್ನೂ ಪಡೆದರು. ಆದುದರಿಂದ ಅದೃಷ್ಟವಿದ್ದಂತೆಯೇ ಫಲಪ್ರಾಪ್ತಿ. ವಿದ್ಯೆ ಮತ್ತು ಪುರುಷ ಪ್ರಯತ್ನಗಳು ಪ್ರಯೋಜನಕ್ಕೆ ಬರಲಾರವು – ಎಂಬುದು ಶ್ಲೋಕಾರ್ಥ.

ಪ್ರಕೃತದಲ್ಲಿ ಈ ಸುಭಾಷಿತ ಪುರಾಣದ ಘಟನೆಯೊಂದನ್ನು ದೃಷ್ಟಾಂತವನ್ನಾಗಿಸಿ ಶಾಶ್ವತವಾದ ಮೌಲ್ಯವೊಂದನ್ನು ನಿರೂಪಿಸುತ್ತದೆ.

ದೇವತೆಗಳು ಹಾಗೂ ಅಸುರರು ಒಟ್ಟಾಗಿ ಸಮುದ್ರ ಮಥನ ಮಾಡಿದ ಘಟನೆಯನ್ನು ಕೇಳಿದ್ದೇವೆ. 'ಸಮುದ್ರಮಥನ' ಎಂಬ ಯಕ್ಷಗಾನವನ್ನಾದರೂ ನೋಡಿರ ಬಹುದು. ದೂರ್ವಾಸರ ಶಾಪದ ಪರಿಣಾಮವಾಗಿ ಇಂದ್ರನು ದೇವಲೋಕದ ತನ್ನೆಲ್ಲ ಸಂಪತ್ತುಗಳನ್ನೂ ಕಳೆದುಕೊಳ್ಳುತ್ತಾನೆ. ಆ ಸಂಪತ್ತುಗಳನ್ನು ಪುನರಪಿ ಪಡೆಯಲು ಮಹಾವಿಷ್ಣುವಿನ ಸಲಹೆಯಂತೆ ಸಮುದ್ರ ವನ್ನು ಕಡೆಯಲು ಮುಂದಾಗುತ್ತಾರೆ. ಮಂದರ ಪರ್ವತವನ್ನು ಕಡಗೋಲಾಗಿಸಿ, ವಾಸುಕಿಯನ್ನು ಹಗ್ಗವನ್ನಾಗಿಸಿ ದೇವ-ದಾನವರು ಸಮುದ್ರ ಮಥನ ನಡೆಸುತ್ತಾರೆ. ಆಗ ನೀರಿನಲ್ಲಿ ಕರಗಿಹೋದ ಅಥವಾ ಮುಳುಗಿಹೋದ ಒಂದೊಂದೇ ವಸ್ತುಗಳು ಮೇಲಕ್ಕೆ ಬರಲಾರಂಭಿಸಿದವು. ಮಥನ ಕ್ರಿಯೆ ನಡೆದಾಗ ಸಮುದ್ರದ ಆಳದಿಂದ ಹಾಲಾಹಲವು ಬರಲು ಅದನ್ನು ಶಿವನು ಸ್ವೀಕರಿಸಿದ ವಿಷಕಂಠನಾದ.



ಶ್ಲೋಕ ಸಾಗರ
ಡಾ.ಸೋಂದಾ ಭಾಸ್ಕರ ಭಟ್

ಮಥನಕ್ರಿಯೆ ಮುಂದುವರಿಯಲು ಕಡಲಿನ ಒಡಲಿನಿಂದ ಸಂಪತ್ತಿನ ಒಡತಿ ಲಕ್ಷ್ಮಿ ಮೇಲೆ ಬಂದಳು. ಅವಳನ್ನು ವಿಷ್ಣುವು ಪಡೆದನು. ಲಕ್ಷ್ಮೀಪತಿಯಾದನು. ಕಥೆಯು ಇನ್ನೂ ಮುಂದುವರಿಯುತ್ತದೆ. ಇರಲಿ. ಅದೃಷ್ಟದಂತೆಯೇ ಫಲದ ಪ್ರಾಪ್ತಿಯಾಗುತ್ತದೆ. ಶಿವನ ಅದೃಷ್ಟದಲ್ಲಿ ವಿಷವಿತ್ತು. ವಿಷ್ಣುವಿನ ಅದೃಷ್ಟದಲ್ಲಿ ಲಕ್ಷ್ಮಿಯಿತ್ತು. ಅದೃಷ್ಟವನ್ನು ಬದಲಾಯಿಸಲು ಸಾಧ್ಯವಾಗು ವುದಿಲ್ಲ. ಅದನ್ನು ಅನುಭವಿಸಲೇಬೇಕು. ಕೆಡುಕಾದಾಗ ಅದೃಷ್ಟವನ್ನು ದೂಷಿಸದೇ ಅದನ್ನು ಸರಿಪಡಿಸಿಕೊಳ್ಳಲು ಪ್ರಯತ್ನಿಸಬೇಕು. ಯಾರ ಅದೃಷ್ಟ ಹೇಗಿದೆಯೆಂಬುದು ಹೇಳಲು ಸಾಧ್ಯವಿಲ್ಲ. ಇದರ ಮುಂದೆ ಪ್ರಯತ್ನ ವಿಫಲವೂ ಆಗುತ್ತದೆ. ಚೆನ್ನಾಗಿ ಓದಿದವನೊಬ್ಬ ಪರೀಕ್ಷೆಯ ಸಮಯದಲ್ಲಿ ಅನಾರೋಗ್ಯದಿಂದ ಪರೀಕ್ಷೆಗೆ ಹಾಜರಾಗುವುದಕ್ಕೂ ಆಗದೇ ಅನುತ್ತೀರ್ಣನಾಗಬಲ್ಲ. ಏನೂ ಓದದವನು ಒಳ್ಳೆಯ ಅಂಕದೊಂದಿಗೆ ಉತ್ತೀರ್ಣನಾಗಬಲ್ಲ.

ಅದೃಷ್ಟದ ಮುಂದೆ ಯಾವುದೂ ಇಲ್ಲ. ವಿದ್ಯೆ, ಪುರುಷ ಪ್ರಯತ್ನ ಇವುಗಳೆಲ್ಲವೂ ಗೌಣವೆನಿಸುತ್ತವೆ. ಯಾವುದೇ ರಂಗದಲ್ಲಿ ಯಶಸ್ಸನ್ನು ಪಡೆಯಲು ಅದೃಷ್ಟ ಮೊದಲು ಬೇಕು. ವಿದ್ಯೆಯಿದ್ದವರೂ ಚೆನ್ನಾಗಿರುವ ಉದ್ಯೋಗ ಪಡೆಯದಿರಬಹುದು ಅಥವಾ ಅಷ್ಟೇ ವಿಧದಲ್ಲಿ ಪ್ರಯತ್ನಪಟ್ಟರೂ ಎಣಿಸಿದ ಯಶಸ್ಸು ಸಿಗದಿರಬಹುದು. ಆಗೆಲ್ಲ ಅದೃಷ್ಟ ಕೈಕೊಟ್ಟಿದೆ ಎನ್ನುತ್ತೇವೆ. ಅದೃಷ್ಟವಂತನಾಗುವುದಕ್ಕೂ ಪೂರ್ವಜನ್ಮದ ಪುಣ್ಯ ಸಂಚಯನವಿರಬೇಕು. ಒಳ್ಳೆಯ ಯೋಚನೆ, ಮನೋಭಾವ ಇರಬೇಕು. ಈ ಎಲ್ಲ ಬಗೆಯ ಒಳ್ಳೆಯತನವೇ ನಮ್ಮನ್ನು ಮೇಲೆತ್ತುವುದು.

ಮನ ಮೋಹಿಸುವ ಮಾಧುರ್ಯದ ಒಡತಿ ಸುಮನ್ ಕಲ್ಯಾಣ್‌ಪುರ್

ಸುಮನ್ ಕಲ್ಯಾಣಪುರ್ ತಮ್ಮ ಹಾಡುಗಳ ರೂಪದಲ್ಲಿ ಎಂದೆಂದಿಗೂ ನಮ್ಮೊಂದಿಗೆ ಇರುತ್ತಾರೆ.

ಚಿದಂಬರ ಕಾಕತ್ಕರ್ ಮಂಗಳೂರು

ಚಿತ್ರಸಂಗೀತದ ಸ್ವರ್ಣಯುಗವನ್ನು ಶ್ರೀಮಂತಗೊಳಿಸಿದವರಲ್ಲಿ ಓರ್ವರಾದ ಗಾಯಕಿ ಸುಮನ್ ಕಲ್ಯಾಣ್‌ಪುರ್ ಮದುವೆಗೆ ಮುನ್ನ ಸುಮನ್ ಹೆಮ್ಮಾಡಿ ಆಗಿದ್ದವರು. ಬ್ಯಾಂಕ್ ನೌಕರಿ ನಿಮಿತ್ತ ಢಾಕಾದಲ್ಲಿ ನೆಲೆಸಿದ್ದ ಅವರ ತಂದೆ ಶಂಕರ ರಾವ್ ಮೂಲತಃ ಕುಂದಾಪುರ ಸಮೀಪದ ಹೆಮ್ಮಾಡಿಯವರು. 1937ರಲ್ಲಿ ಸುಮನ್ ಜನಿಸಿದ ಕೆಲವು ವರ್ಷಗಳ ನಂತರ ಅವರ ಕುಟುಂಬ ಮುಂಬಯಿಗೆ ಸ್ಥಳಾಂತರಗೊಂಡಿತು. ಚಿತ್ರಕಲೆಯಲ್ಲಿ ಆಸಕ್ತಿ ಹೊಂದಿದ್ದ ಸುಮನ್ ಹೈಸ್ಕೂಲ್ ಶಿಕ್ಷಣದ ನಂತರ ಪ್ರಸಿದ್ಧ ಜೆ.ಜೆ. ಸ್ಕೂಲ್ ಆಫ್ ಆರ್ಟ್ಸ್ ಸೇರಿದರು. ಗಾಯನದಲ್ಲೂ ಆಸಕ್ತಿ ಹೊಂದಿದ್ದ ಅವರು ಶಾಸ್ತ್ರೀಯ ಸಂಗೀತ ತರಬೇತಿಯನ್ನೂ ಪಡೆದರು. ಸಮಾರಂಭವೊಂದರಲ್ಲಿ ಹಾಡುತ್ತಿದ್ದಾಗ ಮುಖ್ಯ ಅತಿಥಿಯಾಗಿದ್ದ ತಲತ್ ಮಹಮೂದ್ ಇವರ ಪ್ರತಿಭೆಯನ್ನು ಗುರುತಿಸಿ HMVಗೆ ಪರಿಚಯಿಸಿದರು. ಆ ಮೇಲೆ ಆಕಾಶವಾಣಿಯಲ್ಲೂ ಹಾಡತೊಡಗಿದ ಅವರಿಗೆ ಮರಾಠಿ ಚಿತ್ರ ಶುಕ್ರಾಚಿ ಚಾಂದಣಿಯಲ್ಲಿ ಹಾಡುವ ಅವಕಾಶ ದೊರೆಯಿತು. ಅದರ ಹಾಡುಗಳಿಂದ ಆಕರ್ಷಿತರಾದ ಶೇಖ್ ಮುಖ್ತಾರ್‌ರವರು 'ಮಂಗೂ' ಎಂಬ ಹೆಸರಿನ ತಮ್ಮ ಚಿತ್ರಕ್ಕಾಗಿ ಮಹಮ್ಮದ್ ಶಫಿ ಅವರ ಸಂಗೀತ ನಿರ್ದೇಶನದಲ್ಲಿ ಮೂರು ಹಾಡುಗಳನ್ನು ಹಾಡಿಸಿದರು. ಆದರೆ ಕಾರಣಾಂತರದಿಂದ ಮಹಮ್ಮದ್ ಶಫಿ ಆ ಚಿತ್ರವನ್ನು ಬಿಡಬೇಕಾಗಿ ಬಂತು. ಅವರ ಜಾಗಕ್ಕೆ ಬಂದ ಓ.ಪಿ. ನಯ್ಯರ್ ಸುಮನ್ ಅವರ ಒಂದು ಹಾಡನ್ನು ಮಾತ್ರ ಉಳಿಸಿಕೊಂಡರು. ನಂತರ ಸುಮನ್ ನೌಷಾದ್ ಸಂಗೀತ ನಿರ್ದೇಶನವಿದ್ದ ದರ್ವಾಜಾ ಚಿತ್ರಕ್ಕೆ ಹಾಡಿದರು. ಕ್ರಮೇಣ ಅವರಿಗೆ ಒಂದರ ಹಿಂದೆ ಒಂದು ಅವಕಾಶಗಳು ಬರತೊಡಗಿದವು.



ಸುಮನ್ ಹೆಮ್ಮಾಡಿ 1958ರಲ್ಲಿ ಮುಂಬಯಿಯ ಉದ್ಯಮಿ ರಮಾನಂದ ಕಲ್ಯಾಣ್‌ಪುರ್ ಅವರನ್ನು ವಿವಾಹವಾದ ಮೇಲೆ ಸುಮನ್ ಕಲ್ಯಾಣ್‌ಪುರ್ ಆದರು.

50-60ರ ದಶಕಗಳಲ್ಲಿ ಸುಮನ್ ಕಲ್ಯಾಣಪುರ್ ಮತ್ತು ಲತಾ ಮಂಗೇಶ್ಕರ್ ಅವರ ಧ್ವನಿ ಮತ್ತು ಹಾಡುವ ಶೈಲಿಗಳು ಬಹುವಾಗಿ ಹೋಲುತ್ತಿದ್ದವು. ಶಂಕರ್ ಜೈಕಿಶನ್ ಅವರಿಂದ ಲಕ್ಷ್ಮಿ ಪ್ಯಾರೆವರೆಗೆ, ಸಲಿಲ್ ಚೌಧರಿಯಿಂದ ನೌಷಾದ್ ವರೆಗೆ ಎಲ್ಲರ ಅಚ್ಚು ಮೆಚ್ಚಿನವರಾಗಿದ್ದ ಇವರು ಹೆಚ್ಚಿನ ರಿಹರ್ಸಲ್ ಇಲ್ಲದೆ ಸ್ಟುಡಿಯೊದಲ್ಲೇ ಹಾಡನ್ನು ಒಂದೆರಡು ಸಲ ಕೇಳಿ ರೆಕಾರ್ಡಿಂಗಿಗೆ ತಯಾರಾಗುತ್ತಿದ್ದರಂತೆ. ಲತಾ ಮಂಗೇಷ್ಕರ್ ಮುಂಚೂಣಿಯಲ್ಲಿರುವಾಗಲೇ ಇಷ್ಟೊಂದು ಹಾಡುಗಳು ಇವರ ಕಂಠದಿಂದ ಹೊರಹೊಮ್ಮಲು ಇದೂ ಒಂದು ಕಾರಣವಿರಬಹುದು. ಲತಾ ಮಂಗೇಶ್ಕರ್ ಇವರಿಗೆ ಹೆಚ್ಚು ಅವಕಾಶಗಳು ಸಿಗದಂತೆ ಮಾಡಿದರು ಎಂದು ಕೆಲವರು ಹೇಳುವುದಿದೆ. ಆದರೆ ಇದರಲ್ಲಿ ಹುರುಳಿಲ್ಲ. ಅವರು ಹಾಡಬೇಕಾದ ಹಾಡುಗಳೆಲ್ಲ ಅವರಿಗೆ ಸಿಕ್ಕಿವೆ.

ರಫಿ - ಸುಮನ್

ಸುಮನ್ ಕಲ್ಯಾಣಪುರ್ ಡ್ಯುಯೆಟ್‌ಗಳ ರಾಣಿ ಎಂದರೆ ತಪ್ಪಾಗಲಾರದು. ಇವರು ರಫಿ ಜತೆಗೂಡಿ ಹಾಡಿದರೆಂದರೆ ಆ ಹಾಡು ಸುಪರ್ ಹಿಟ್ ಎಂದೇ ಅರ್ಥ. ತುಝೆ ಪ್ಯಾರ್ ಕರತೆ ಹೈಂ ಕರತೆ ರಹೇಂಗೆ - ಎಪ್ರಿಲ್ ಫೂಲ್, ಅಗರ್ ತೇರಿ ಜಲ್ವಾನುಮಾಯಿ ನ ಹೋತಿ - ಬೇಟಿ ಬೇಟೆ, ಆಜ್ ಹುನ ಆಯೆ ಬಾಲಮಾ - ಸಾಂಝ್ ಔರ್ ಸವೇರಾ, ತುಮನೆ ಪುಕಾರಾ ಔರ್ ಹಮ್ ಚಲೆ ಆಯೆ - ರಾಜ್ ಕುಮಾರ್, ಠಹರಿಯೆ ಹೋಶ್ ಮೆಂ ಆ ಲೂಂ - ಮೊಹಬ್ಬತ್ ಇಸಕೊ ಕಹತೆ ಹೈಂ, ರಾತ್ ಸುಹಾನೀ ಜಾಗ್ ರಹೀ ಹೈ - ಜಿಗ್ರೀ ದೋಸ್ತ್ , ಆಜ್ ಕಲ್ ತೆರೆ ಮೇರೆ ಪ್ಯಾರ್ ಕೆ - ಬ್ರಹ್ಮಚಾರಿ, ನಾ ನಾ ಕರತೆ ಪ್ಯಾರ್ ತುಮ್ಹೀ ಸೆ - ಜಬ್ ಜಬ್ ಫೂಲ್ ಖಿಲೆ, ದಿಲ್ ಏಕ್ ಮಂದಿರ್ ಹೈ - ಟೈಟಲ್ ಹಾಡು, ಪರ್‌ಬತೊಂ ಕೆ ಪೇಡೊಂ ಪರ್ - ಶಗೂನ್, ತುಮ್ ಸೆ ಓ ಹಸೀನಾ ಮೊಹಬ್ಬತ್ ನ ಮೈನೆ - ಫರ್ಜ್, ತುಝೆ ದೇಖಾ, ತುಝೇ ಚಾಹಾ - ಛೋಟೀಸೀ ಮುಲಾಕಾತ್ ಇವು ಕೆಲವು ಉದಾಹರಣೆಗಳು.

ಮುಕೇಶ್ - ಸುಮನ್

ಮುಕೇಶ್ ಜೊತೆಗಿನ ಅವರ ಹಿಟ್ ಹಾಡುಗಳು ಮೇರಾ ಪ್ಯಾರ್ ಭೀ ತೂ ಹೈ - ಸಾಥಿ, ಚುರಾ ಲೇನ ತುಮ್ ಕೋ ಯೇ - ದಿಲ್ ಹೀ ತೊ ಹೈ, ಯೇ ಕಿಸ್ ನೆ ಗೀತ್ ಛೇಡಾ - ಮೇರೀ ಸೂರತ್ ತೇರೀ ಆಂಖೆಂ, ಆಯಾ ನ ಹಮ್ ಕೋ ಪ್ಯಾರ್ ಜತಾನಾ - ಪಹಚಾನ್, ಹಾಂ ಮೈ ನೆ ಭೀ ಪ್ಯಾರ್ ಕಿಯಾ - ಬೂಂದ್ ಜೋ ಬನ್ ಗಯೇ ಮೋತಿ, ಯೇ ಮೌಸಮ್ ರಂಗೀನ್ ಸಮಾ - ಮಾಡರ್ನ್ ಗರ್ಲ್ ಇತ್ಯಾದಿ. ಪಹಚಾನ್ ಚಿತ್ರಕ್ಕಾಗಿ ಮುಕೇಶ್ ಮತ್ತು ಶಾರದಾ ಜೊತೆ ಅವರು ಹಾಡಿದ ವೋ ಪರಿ ಕಹಾಂ ಸೆ ಲಾವೂಂ ಚಾರ್ಟ್ ಬಸ್ಟರ್ ಆಗಿತ್ತು.

ಇತರರೊಂದಿಗೆ

ಅವರು ಹೇಮಂತ್ ಕುಮಾರ್ ಜೊತೆ ಹಾಡಿದ ಬಾತ್ ಏಕ್ ರಾತ್ ಕೀ ಚಿತ್ರದ ನ ತುಮ್ ಹಮೆಂ ಜಾನೋ, ಮನ್ನಾಡೆ ಜೊತೆ ಹಾಡಿದ ಜಿಂದಗೀ ಔರ್ ಖ್ವಾಬ್ ಚಿತ್ರದ ನ ಜಾನೆ ಕಹಾಂ ತುಮ್ ಥೆ, ಮನ್‌ಹರ್ ಉಧಾಸ್ ಜೊತೆ ಹಾಡಿದ ವಿಶ್ವಾಸ್ ಚಿತ್ರದ ಆಪ್ ಕೊ ಹಮ್ ಸೆ ಬಿಛ್‌ಡೆ ಹುವೆ ಕೂಡ ಹಿಟ್ ಹಾಡುಗಳೇ.

ಸೋಲೋ ಹಾಡುಗಳು

ಅವರ ಸೋಲೋ ಹಾಡುಗಳಲ್ಲಿ ದಿಲ್ ಏಕ್ ಮಂದಿರ್ ಚಿತ್ರದ ಜೂಹಿ ಕೀ ಕಲಿ ಮೇರಿ ಲಾಡಲಿ, ಕಣ್ ಕಣ್ ಮೆಂ ಭಗವಾನ್ ಚಿತ್ರದ ಅಪನೆ ಪಿಯಾ ಕೀ ಮೈ ತೋ ಬನಿರೆ ಜೋಗನಿಯಾ, ನೂರ್ ಮಹಲ್ ಚಿತ್ರದ ಮೇರೆ ಮೆಹಬೂಬ್ ನ ಜಾ, ಬಾಲಕ್ ಚಿತ್ರದ ಸುನ್ ಲೇ ಬಾಪೂ ಯೆ ಪೈಗಾಮ್, ರೇಶಮ್ ಕೀ ಡೋರಿಯ ಬಹನಾ ನೆ ಭಾಯಿ ಕೀ ಕಲಾಯಿ ಸೇ, ಗೀತ್ ಚಿತ್ರದ ಕಭೀ ಹೋಟೊಂ ಪೆ ಮುಝೆ ಭೀ ಲಗಾ ಲೆ, ರಫಿ ಮತ್ತು ಅವರು ಬೇರೆ ಬೇರೆಯಾಗಿ ಹಾಡಿದ ಜಹಾಂ ಪ್ಯಾರ್ ಮಿಲೆ ಚಿತ್ರದ ಚಲೇ ಜಾ ಚಲೇಜಾ ಹಾಡುಗಳು ನೆನಪಿನಲ್ಲುಳಿಯುವಂಥವು. Come September ಚಿತ್ರದ ಥೀಮ್ ಮ್ಯೂಸಿಕ್ ಆಧರಿಸಿ ಶಂಕರ್ ಜೈಕಿಶನ್ ನೇತೃತ್ವದಲ್ಲಿ ರಿಮ್ ಝಿಮ್ ರಿಮ್ ಝಿಮ್ ನ ಬರ್‌ಸೆ ಮೋತಿ ಕೆ ದಾನೆ ಎಂಬ non filmy ಹಾಡನ್ನು ಸುಮನ್ ಕಲ್ಯಾಣಪುರ್ ಹಾಡಿದ್ದು ಅದು ರೇಡಿಯೋ ಸಿಲೋನಿನಲ್ಲಿ ಮಾತ್ರ ಕೇಳಲು ಸಿಗುತ್ತಿತ್ತು.

ಕನ್ನಡ, ಮರಾಠಿ

'ಕಲಾವತಿ' ಚಿತ್ರದ ಒಡನಾಡಿ ಬೇಕೆಂದು, ಕಲ್ಪವೃಕ್ಷದ ಹನಿ ಹನಿ ಹೀರಿ ತನಿ ಹರೆಯ ಮತ್ತು ತಲ್ಲಣ ನೂರು ಬಗೆ ಅವರು ಹಾಡಿದ ಕನ್ನಡ ಹಾಡುಗಳು. ಅವರ ಮಧುರ ಮರಾಠಿ ಹಾಡುಗಳಲ್ಲಿ ಥಟ್ಟನೆ ನೆನಪಿಗೆ ಬರುವುದು ಬೆಳಗ್ಗೆ ರೇಡಿಯೋ ಮೂಲಕ ಕಿವಿಗೆ ಬೀಳುತ್ತಿದ್ದ 'ಕೇಶವಾ ಮಾಧವಾ ತುಝ್ಯಾ ನಾಮಾಚ ವೇಗೋಡವಾ' ಮತ್ತು 'ದೇಹ ಶುದ್ಧ ಕರುನಿ'.

ಸುರ್ ಸಿಂಗಾರ್ ಸಂಸದ್ ಪ್ರಶಸ್ತಿ, ಲತಾ ಮಂಗೇಶ್ಕರ್ ಪ್ರಶಸ್ತಿಗಳನ್ನು ಪಡೆದಿದ್ದ ಅವರನ್ನು 2023ರಲ್ಲಿ ಪದ್ಮಭೂಷಣ ನೀಡಿ ಗೌರವಿಸಲಾಗಿತ್ತು. ಯಾವುದೇ ವಿವಾದಗಳಿಗೆ ಸಿಲುಕದೆ ತಾನಾಯಿತು, ತನ್ನ ಹಾಡುಗಾರಿಕೆಯಾಯಿತು ಎಂದು ಕೂಡು ಕುಟುಂಬದೊಂದಿಗೆ ಸಂತೃಪ್ತ ಜೀವನ ನಡೆಸಿ 31-05-2026ರಂದು ನಮ್ಮನ್ನಗಲಿದ ಸುಮನ್ ಕಲ್ಯಾಣಪುರ್ ತಮ್ಮ ಹಾಡುಗಳ ರೂಪದಲ್ಲಿ ಎಂದೆಂದಿಗೂ ನಮ್ಮೊಂದಿಗೆ ಇರುತ್ತಾರೆ.

ಫಿಲಿಪ್ಪೀನ್ಸ್ ನಲ್ಲಿ 7.8 ತೀವ್ರತೆ ಭೂಕಂಪ

ಪ್ರಬಲ ಕಂಪನಕ್ಕೆ 32 ಮಂದಿ ಸಾವು



ಮನಿಲಾ: ದಕ್ಷಿಣ ಫಿಲಿಪ್ಪೀನ್ಸ್‌ನಲ್ಲಿ 7.8 ಪ್ರಬಲ ತೀವ್ರತೆಯ ಭೂಕಂಪ ಸಂಭವಿಸಿದ್ದು, 32 ಮಂದಿ ಮೃತಪಟ್ಟಿದ್ದು, 200ಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದಾರೆ. ಈ ಹಿನ್ನೆಲೆ ಕರಾವಳಿ ಪ್ರದೇಶದಲ್ಲಿ ಸುನಾಮಿ ಮುನ್ನೆಚ್ಚರಿಕೆ ನೀಡಲಾಗಿದೆ.

ಭೂಕಂಪದಿಂದ ಜನರಲ್ ಸ್ಯಾಂಟೋಸ್ ನಗರದಲ್ಲಿ ಹಲವು ಕಟ್ಟಡಗಳು ಕುಸಿದು ಬಿದ್ದಿದ್ದು, ಪ್ರಮುಖ ಮೂಲಸೌಕರ್ಯಗಳು ಹಾನಿಗೊಳಗಾಗಿದೆ. ಜನರಲ್ ಸ್ಯಾಂಟೋಸ್ ನಗರದ ಒಂದು ವಾಣಿಜ್ಯ ಸಂಕೀರ್ಣ ಸಂಪೂರ್ಣ ನೆಲಸಮವಾಗಿರುವ ದೃಶ್ಯಗಳು ಸಾಮಾಜಿಕ ಮಾಧ್ಯಮದಲ್ಲಿ ವೈರಲ್ ಆಗಿವೆ.

ಭೂಕಂಪದ ನಂತರದ ಆಘಾತಗಳಿಂದಾಗಿ ಕುಸಿಯಬಹುದಾದ ಮತ್ತು ಹಾನಿಗೊಳಗಾದ ಕಟ್ಟಡಗಳು ಮತ್ತು ಮನೆಗಳಿಂದ ಹೊರಬಂದು ಸುರಕ್ಷಿತ ಸ್ಥಳದಲ್ಲಿ ರಕ್ಷಣೆ ಪಡೆಯುವಂತೆ ನಾಗರಿಕರಿಗೆ ಸೂಚಿಸಲಾಗಿದೆ. ಇಂಡೋನೇಷ್ಯಾ, ತೈವಾನ್, ಪಲಾವ್, ಪಪುವಾ ನ್ಯೂಗಿನಿಯಾ ಮತ್ತು ಜಪಾನ್ ದೇಶಗಳಲ್ಲಿ ಸುನಾಮಿ ಎಚ್ಚರಿಕೆ ಘೋಷಿಸಲಾಗಿದೆ.

ಅತೀ ಹೆಚ್ಚು ಜನಸಂಖ್ಯೆಯಿರುವ ಪ್ರದೇಶ: ಜನರಲ್ ಸ್ಯಾಂಟೋಸ್ 700,000ಕ್ಕೂ ಹೆಚ್ಚು ಜನಸಂಖ್ಯೆ ಹೊಂದಿರುವ ಬಂದರು ನಗರವಾಗಿದ್ದು, ಇದು ಟ್ಯೂನ ಮೀನು ರಫ್ತು ಉದ್ಯಮ ಮತ್ತು ಇತರ ವಾಣಿಜ್ಯದ ಪ್ರಾದೇಶಿಕ ಕೇಂದ್ರವಾಗಿದೆ. ಈ ವರ್ಷ ದೇಶವನ್ನು ಅಪ್ಪಳಿಸಿದ ಅತ್ಯಂತ ಪ್ರಬಲ ಭೂಕಂಪವು ಫಿಲಿಪ್ಪೀನ್ಸ್ ದ್ವೀಪಸಮೂಹದ ಎರಡನೇ ಅತಿ ಹೆಚ್ಚು ಜನಸಂಖ್ಯೆ ಹೊಂದಿರುವ ದ್ವೀಪವಾದ ಮಿಂಡಾನಾವೊದ ಸಮುದ್ರದಲ್ಲಿ ಕೇಂದ್ರೀಕೃತವಾಗಿತ್ತು. ಬಾಕೋಲ್ಕೋಲ್ ಪ್ರಕಾರ, ಭೂಕಂಪವು ಸಾರಂಗಾನಿ ಪ್ರಾಂತ್ಯದ ಮಾಸಿಮ್ ಪಟ್ಟಣದಿಂದ ನೈಋತ್ಯಕ್ಕೆ ಸುಮಾರು 32 ಕಿಮೀ. (20 ಮೈಲಿ) ದೂರದಲ್ಲಿ 33 ಕಿಮೀ. (20 ಮೈಲಿ) ಆಳದಲ್ಲಿ ಸಂಭವಿಸಿದೆ.

ಫಿಲಿಪ್ಪೀನ್ಸ್ ಅಧ್ಯಕ್ಷ ಫರ್ಡಿನ್ಯಾಂಡ್ ಮಾರ್ಕೋಸ್ ಜೂನಿಯರ್ ತರಗತಿಗಳನ್ನು ರದ್ದುಗೊಳಿಸಲು ಆದೇಶಿಸಿದ್ದಾರೆ. ಭೂಕಂಪ ಪೀಡಿತ ಪ್ರಾಂತ್ಯಗಳಲ್ಲಿ ತಕ್ಷಣವೇ ದುರಸ್ತಿ ಕಾರ್ಯ ವಿಪತ್ತು-ಪ್ರತಿಕ್ರಿಯೆ ಸಂಸ್ಥೆಗಳಿಗೆ ನಿರ್ದೇಶನ ನೀಡಿದ್ದಾರೆ.

ಶಿಕ್ಷಕರ ಕಾರ್ಯಕ್ಕೆ ಶ್ಲಾಘನೆ ವ್ಯಕ್ತ : ಭೂಕಂಪನದ ವೇಳೆ ಶಾಲಾ ಶಿಕ್ಷಕರು ಮತ್ತು ಅಧಿಕಾರಿಗಳು ವಿದ್ಯಾರ್ಥಿಗಳನ್ನು ಅತ್ಯಂತ ಶಾಂತವಾಗಿ, ಶಿಸ್ತುಬದ್ಧವಾಗಿ ಮುಕ್ತ ಮೈದಾನಕ್ಕೆ ಕರೆತಂದು ಸುರಕ್ಷತೆ ಖಚಿತಪಡಿಸಿರುವುದು ಸಾರ್ವಜನಿಕರ ಶ್ಲಾಘನೆಗೆ ಪಾತ್ರವಾಗಿದ್ದು ಈ ದೃಶ್ಯವು ಸಾಮಾಜಿಕ ಮಾಧ್ಯಮಗಳಲ್ಲಿ ಭಾರೀ ಪ್ರಶಂಸೆಗೆ ಪಾತ್ರವಾಗಿದೆ. ಸಂತ್ರಸ್ತ ಪ್ರದೇಶದ ಜನರಿಗೆ ಆಡಳಿತ ಮಂಡಳಿಯು ತಾತ್ಕಾಲಿಕ ವಸತಿ, ಆಹಾರ, ಶುದ್ಧ ನೀರು ಮತ್ತು ವೈದ್ಯಕೀಯ ಕಿಟ್‌ಗಳನ್ನು ವಿತರಿಸಲು ತುರ್ತು ಕೇಂದ್ರಗಳನ್ನು ತೆರೆದಿದೆ.

ಫಿಲಿಪ್ಪೀನ್ಸ್ ಪೆಸಿಫಿಕ್ ಮಹಾಸಾಗರದ ರಿಂಗ್ ಆಫ್ ಫೈರ್ ಅಂದರೆ ಭೂಕಂಪನ ಸೂಕ್ಷ್ಮ ವಲಯ ವ್ಯಾಪ್ತಿಯೊಳಗೆ ಇರುವುದರಿಂದ ಸಾಮಾನ್ಯವಾಗಿ ಇಲ್ಲಿನ ನಾಗರಿಕರು ಮತ್ತು ರಕ್ಷಣಾ ಪಡೆಗಳು ಇಂತಹ ಸವಾಲುಗಳನ್ನು ಎದುರಿಸಲು ಮೊದಲೇ ತರಬೇತಿ ಪಡೆದಿರುತ್ತಾರೆ. ಸರ್ಕಾರದ ತ್ವರಿತ ಸ್ಪಂದನೆ, ಡ್ರೋನ್ ತಂತ್ರಜ್ಞಾನದ ಕಣ್ಗಾವಲು ಮತ್ತು ನೆರೆರಾಷ್ಟ್ರಗಳ ಸೌಹಾರ್ದಯುತ ಬೆಂಬಲದಿಂದಾಗಿ ಮಿಂಡಾನಾವೊ ಪ್ರದೇಶವು ಅತ್ಯಂತ ವೇಗವಾಗಿ ಸಹಜ ಸ್ಥಿತಿಗೆ ಮರಳುತ್ತಿದ್ದು, ಪುನರ್ ನಿರ್ಮಾಣ ಕಾರ್ಯಗಳು ಸಶಕ್ತವಾಗಿ ಆರಂಭಗೊಂಡಿವೆ.

ಪ್ರಧಾನ್ ರಾಜೀನಾಮೆಗೆ ಇಂಡಿ ಕೂಟ ಆಗ್ರಹ

ಎಸ್‌ಐಆರ್ ಬಗ್ಗೆ ಸಿಜೆಐಗೆ ಪತ್ರ

ಹೊಸದಿಲ್ಲಿ: ಇಂಡಿ ಕೂಟದ ವಿರೋಧ ಪಕ್ಷಗಳ ನಾಯಕರು ಸೋಮವಾರ ವಿಶೇಷ ತೀವ್ರ ಪರಿಷ್ಕರಣೆ(ಎಸ್‌ಐಆರ್) ಪ್ರಕ್ರಿಯೆ ಮತ್ತು ಮತ ಅಕ್ರಮಗಳ ಕುರಿತು ಭಾರತದ ಮುಖ್ಯ ನ್ಯಾಯಮೂರ್ತಿಗೆ ಪತ್ರ ಬರೆಯಲು ತೀರ್ಮಾನಿಸಿದ್ದು, ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ರಾಜೀನಾಮೆಗೆ ಆಗ್ರಹಿಸಿದ್ದಾರೆ.

ದಿಲ್ಲಿಯಲ್ಲಿ ನಡೆದ ವಿರೋಧ ಪಕ್ಷಗಳ ಸಭೆಯ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಒಕ್ಕೂಟ ಐದು ವಿಷಯಗಳಲ್ಲಿ ಒಮ್ಮತಕ್ಕೆ ಬಂದಿರುವುದಾಗಿ ತಿಳಿಸಿದರು. ನೀಟ್-ಸಿಬಿಎಸ್‌ಇ ವಿವಾದದ ಹಿನ್ನೆಲೆಯಲ್ಲಿ ಧರ್ಮೇಂದ್ರ ಪ್ರಧಾನ್ ತಕ್ಷಣ ರಾಜೀನಾಮೆ ನೀಡಬೇಕು ಎಂಬುದಾಗಿ ವಿರೋಧ ಪಕ್ಷಗಳು ಸರ್ವಾನುಮತದಿಂದ ಒತ್ತಾಯಿಸಿವೆ. ದೇಶದ ಆರ್ಥಿಕ ಪರಿಸ್ಥಿತಿ, ನಿರುದ್ಯೋಗ, ಬೆಲೆ ಏರಿಕೆ, ರೈತರ ಸಮಸ್ಯೆಗಳು, ಹಿಂದುಳಿದ ವರ್ಗಗಳ ಮೇಲಿನ ದೌರ್ಜನ್ಯಗಳು ಹಾಗೂ ಜನಸಾಮಾನ್ಯರ ಸಮಸ್ಯೆಗಳ ಕುರಿತು ಚರ್ಚಿಸಲು ಕೇಂದ್ರ ಸರ್ಕಾರ ಸರ್ವಪಕ್ಷ ಸಭೆ ಕರೆಯಬೇಕು ಎಂದು ಖರ್ಗೆ ಹೇಳಿದರು.

ಇಂಡಿ ಕೂಟದ ನಾಯಕರು ಪ್ರತಿ ಎರಡು ತಿಂಗಳಿಗೊಮ್ಮೆ ಸಭೆ ನಡೆಸಲು ತೀರ್ಮಾನಿಸಿದ್ದು, ಮುಂದಿನ ಸಭೆ ಆಗಸ್ಟ್‌ನಲ್ಲಿ ಹೈದರಾಬಾದ್‌ನಲ್ಲಿ ನಡೆಯಲಿದೆ.

ಮಧ್ಯಪ್ರಾಚ್ಯದಲ್ಲಿ ಇರಾನ್ ಮತ್ತು ಇಸ್ರೇಲ್ ನಡುವೆ ದಾಳಿ-ಪ್ರತಿದಾಳಿಗಳು ಪುನರಾರಂಭಗೊಂಡಿದ್ದು, 100 ದಿನಗಳ ಸಂಘರ್ಷದ ಹಿನ್ನೆಲೆಯಲ್ಲಿ ಭಾರತ ವ್ಯಾಪಕ ಆರ್ಥಿಕ ಆಘಾತ ಎದುರಿಸಲು ಸಜ್ಜಾಗಬೇಕಿದೆ. ಜಾಗತಿಕ ತೈಲ ಬೆಲೆಗಳು ಮತ್ತೆ ಏರಿಕೆಯಾಗಲಿವೆ ಮತ್ತು ಕೆಲವು ತಿಂಗಳುಗಳ ಕಾಲ ಸಂಘರ್ಷ ಮುಂದುವರಿದರೆ ಭಾರತದ ತೈಲ ಸಂಗ್ರಹ ಒತ್ತಡಕ್ಕೀಡಾಗಲಿದೆ.



ಸವಾಲು ಎದುರಿಸಲು ಭಾರತ ಸಮಗ್ರ ಸಿದ್ಧತೆ

ಕ್ಷಿಪಣಿ ದಾಳಿ ಪುನರಾರಂಭ

ಯೆಮೆನ್‌ನ ಇರಾನ್ ಬೆಂಬಲಿತ ಹೌತಿ ಬಂಡುಕೋರರು ಇಸ್ರೇಲ್ ಮೇಲೆ ಕ್ಷಿಪಣಿ ದಾಳಿ ನಡೆಸಿದ ಬೆನ್ನಲ್ಲೇ ಪ್ರಾದೇಶಿಕ ಉದ್ವಿಗ್ನತೆ ಹೆಚ್ಚಾಗಿದೆ. ಇದಕ್ಕೆ ಪ್ರತಿಕ್ರಿಯೆಯಾಗಿ ಇಸ್ರೇಲ್ ಕೂಡ ಇರಾನ್ ನೆಲೆಗಳ ಮೇಲೆ ದಾಳಿ ನಡೆಸಿದೆ. ಅಮೆರಿಕದ ಮಧ್ಯಸ್ಥಿಕೆ ಸೇರಿದಂತೆ ಜಾಗತಿಕ ರಾಜತಾಂತ್ರಿಕ ಪ್ರಯತ್ನಗಳು ವಿಫಲವಾಗಿದ್ದು, ತೈಲ ಇಂಧನ ಆಗತ್ಯಕ್ಕಾಗಿ ಈ ಪ್ರದೇಶವನ್ನು ಹೆಚ್ಚಾಗಿ ಅವಲಂಬಿಸಿರುವ ಭಾರತಕ್ಕೆ ಆತಂಕ ತಂದೊಡ್ಡಿದೆ.

ಸರ್ಕಾರದ ಮುನ್ನೆಚ್ಚರಿಕೆ

ಪಶ್ಚಿಮ ಏಷ್ಯಾ ಸಂಘರ್ಷದಿಂದ ದೇಶೀಯ ಆರ್ಥಿಕತೆಯನ್ನು ರಕ್ಷಿಸಲು ಕೇಂದ್ರ ಸರ್ಕಾರ ಹಂತ-ಹಂತದ ನೀತಿ ಕ್ರಮಗಳನ್ನು ಕೈಗೊಳ್ಳುತ್ತಿದೆ. ವರದಿಯೊಂದರ ಪ್ರಕಾರ, ದೇಶೀಯ ಬೇಡಿಕೆ ಪೂರೈಸಲು ಅಗತ್ಯ ವಸ್ತುಗಳು, ಕಚ್ಚಾ ವಸ್ತುಗಳು ಮತ್ತು ಸಿದ್ಧ ವಸ್ತುಗಳ ಲಭ್ಯತೆ ಖಚಿತಪಡಿಸಿಕೊಳ್ಳಲು ಈ ಕ್ರಮಗಳನ್ನು ತುರ್ತಾಗಿಯಲ್ಲಿ ಮಾಡಿದೆ, ರೂಪಾಯಿ ಮೌಲ್ಯ ಮತ್ತು ವಿದೇಶಿ ವಿನಿಮಯ ಮೀಸಲುಗಳ ಸ್ಥಿರತೆ ಕಾಯ್ದುಕೊಳ್ಳಲು ಹಂತ-ಹಂತವಾಗಿ ಜಾರಿಗೊಳಿಸಲಾಗುತ್ತಿದೆ.

ಏರ್‌ಲೈನ್ಸ್, ತೈಲ ಕಂಪನಿಗಳಿಗೆ ಸರ್ಕಾರಿ ಪ್ಯಾಕೇಜ್

ಸರ್ಕಾರ ರಿಸರ್ವ್ ಬ್ಯಾಂಕ್‌ನೊಂದಿಗೆ ಸಮನ್ವಯ ಸಾಧಿಸಿ ಸರ್ಕಾರಿ ಬಾಂಡ್‌ಗಳು ಮತ್ತು ಇತರ ಉಪಕರಣಗಳಲ್ಲಿ ವಿದೇಶಿ ಹೂಡಿಕೆಯನ್ನು ಹೆಚ್ಚಿಸಿದೆ. ಇದರೊಂದಿಗೆ, ಕಚ್ಚಾ ತೈಲ ಬೆಲೆ ಏರಿಕೆಯ ಆಘಾತದಿಂದ ರಕ್ಷಿಸಲು ವಿಮಾನಯಾನ ಸಂಸ್ಥೆಗಳಿಗೆ ವಿಶೇಷ ಪ್ಯಾಕೇಜ್ ಮಂಜೂರು ಮಾಡಲಾಗಿದೆ. ಹೆಚ್ಚುತ್ತಿರುವ ವೆಚ್ಚದ ಹೊರೆಯನ್ನು ಭಾಗಶಃ ಭರಿಸಲು ಸರ್ಕಾರಿ ಸ್ವಾಮ್ಯದ ತೈಲ ಕಂಪನಿಗಳಿಗೆ ಆರ್ಥಿಕ ಬೆಂಬಲ ನೀಡಲಾಗುತ್ತಿದೆ. ಪೆಟ್ರೋಕೆಮಿಕಲ್ಸ್ ಮತ್ತು ಹತ್ತಿ ಕೊರತೆಯಿಂದ ಉತ್ಪಾದನಾ ವಲಯಕ್ಕೆ ತೊಂದರೆಯಾಗದಂತೆ ನೋಡಿಕೊಳ್ಳಲಾಗಿದೆ.

ಸಬ್ಸಿಡಿ ಹೊರೆ ಏರಿಕೆ

ಹೆಚ್ಚುತ್ತಿರುವ ಸಬ್ಸಿಡಿ ವೆಚ್ಚಗಳು, ತೈಲ ವೆಚ್ಚ ಮತ್ತು ರೂಪಾಯಿ ಮೌಲ್ಯ ಕುಸಿತ ದೇಶದ ಬಜೆಟ್ ಲೆಕ್ಕಾಚಾರಕ್ಕೆ ಸವಾಲಾಗಲಿದೆ. ಪ್ರಸ್ತುತ ಬಜೆಟ್‌ನಲ್ಲಿ ವಿತ್ತೀಯ ಕೊರತೆ ಜಿಡಿಪಿಯ ಶೇ.4.3 ಕ್ಕೆ ಸೀಮಿತಗೊಳಿಸುವ ಗುರಿ ಹೊಂದಲಾಗಿದೆ. ಮೂಲಗಳ ಪ್ರಕಾರ, ರಸಗೊಬ್ಬರ ಸಬ್ಸಿಡಿ ಬಜೆಟ್ ಅಂದಾಜಿನ 1.7 ಲಕ್ಷ ಕೋಟಿ ರೂ. ಗಳಿಂದ ದುಪ್ಪಟ್ಟಾಗಿ 3.8 ಲಕ್ಷ ಕೋಟಿ ರೂ.ಗಳಿಗೆ ತಲುಪುವ ಸಾಧ್ಯತೆಯಿದೆ. ಕಳೆದ ವರ್ಷ 26,000 ಕೋಟಿ ರೂ. ಹಾದಿತಪ್ಪಿದೆ, ಈ ವರ್ಷ ಆಡುಗೆ ಅನಿಲ ಸಬ್ಸಿಡಿ 12,085 ಕೋಟಿ ರೂ.ದಾಟುವ ನಿರೀಕ್ಷೆಯಿದೆ. ಜಾಗತಿಕ ಮಾರುಕಟ್ಟೆಯಲ್ಲಿ ಯೂರಿಯಾ, ಡಿಎಪಿ ಮತ್ತು ಅಮೋನಿಯಾ ಬೆಲೆ ಏರಿಕೆಯು ಸಾರ್ವಜನಿಕ ಹಣಕಾಸಿನ ಮೇಲೆ ತೀವ್ರ ಒತ್ತಡವನ್ನು ಉಂಟುಮಾಡಿದೆ.


ಭಾರತದ ಮುಂದಿರುವ ಸವಾಲುಗಳೇನು?

ತೈಲ ಬೆಲೆ ಏರಿಕೆ: ಹೂಡಿಕೆ-ಬಳಕೆಗೆ ಹಿಂಜರಿಕೆ

ಹೆಚ್ಚುತ್ತಿರುವ ತೈಲ ಬೆಲೆ ಮತ್ತು ಪೂರೈಕೆ ಜಾಲದ ಅಡಚಣೆಗಳಿಂದಾಗಿ ದೇಶೀಯ ಕೈಗಾರಿಕೆಗಳ ಉತ್ಪಾದನಾ ವೆಚ್ಚ ಈಗಾಗಲೇ ಹೆಚ್ಚಾಗಿದೆ. ಮಧ್ಯಪ್ರಾಚ್ಯ ಬಿಕ್ಕಟ್ಟು ತೀವ್ರಗೊಂಡಿರುವುದರಿಂದ, ಇದು ಹೂಡಿಕೆ ಮತ್ತು ಬಳಕೆ ಮೇಲೆ ನಕಾರಾತ್ಮಕ ಪರಿಣಾಮ ಬೀರಲಿದ್ದು, ಒಟ್ಟಾರೆ ಆರ್ಥಿಕ ಪ್ರಗತಿಯ ವೇಗ ಕುಂಠಿತಗೊಳಿಸಲಿದೆ. ಆದ್ದರಿಂದ ಸದ್ಯ ಭಾರತ ಜನಸಾಮಾನ್ಯರಿಗೆ ಸಮಸ್ಯೆಯಾಗದಂತೆ ಎಚ್ಚರಿಕೆ ವಹಿಸುತ್ತಿದೆ.

ಉದ್ಯೋಗ, ಆದಾಯ ಕುಂಠಿತ

ಸಮೀಕ್ಷೆ ಅವಧಿಯಲ್ಲಿ ಉದ್ಯೋಗ ಮಾರುಕಟ್ಟೆ ಬೆಳವಣಿಗೆ ವಿಶ್ವಾಸ ಮೈನಸ್ 9.1 ರಿಂದ ಮೈನಸ್ 14.4ಕ್ಕೆ ಕುಸಿದಿದೆ. ಶೇ.91.6 ರಷ್ಟು ಗ್ರಾಹಕರು ಕಳೆದ ಒಂದು ವರ್ಷದಲ್ಲಿ ಬೆಲೆಗಳು ಗಣನೀಯವಾಗಿ ಏರಿಕೆಯಾಗಿವೆ ಎಂದು ಅಭಿಪ್ರಾಯಪಟ್ಟಿದ್ದಾರೆ. ಆದಾಯದ ಬೆಳವಣಿಗೆ ಸ್ಥಗಿತಗೊಂಡಿದ್ದು, ಪ್ರಸ್ತುತ ಆದಾಯದ ನಿವ್ವಳ ಪ್ರತಿಕ್ರಿಯೆ 3.0 ರಿಂದ 0.9 ಕ್ಕೆ ಇಳಿದಿದೆ. ಇದರಿಂದಾಗಿ ಒಟ್ಟಾರೆ ವೆಚ್ಚ ಸಾಮರ್ಥ್ಯ 78.4 ರಿಂದ 74.0 ಕ್ಕೆ ಇಳಿಕೆಯಾಗಿದೆ.




ಕೈಗಾರಿಕಾ ವಲಯಕ್ಕೆ ಹಿನ್ನಡೆ

ವೃತ್ತಿಪರ ಮುನ್ಸೂಚನೆದಾರರು 2026-27ರ ನೈಜ ಜಿಡಿಪಿ ಬೆಳವಣಿಗೆ ಅಂದಾಜನ್ನು ಶೇ.6.9 ರಿಂದ ಶೇ.6.5ಕ್ಕೆ ಇಳಿಸಿದ್ದಾರೆ. ವೆಚ್ಚ ಏರಿಕೆ ಮತ್ತು ಅನಿಶ್ಚಿತ ಬೇಡಿಕೆಯಿಂದಾಗಿ ಕಂಪನಿಗಳು ತಮ್ಮ ವಿಸ್ತರಣಾ ಯೋಜನೆಗಳನ್ನು ಮುಂದೂಡುತ್ತಿವೆ. ಹೂಡಿಕೆಯಲ್ಲಿನ ಈ ದೀರ್ಘಾವಧಿಯ ಮಂದಗತಿ ಉತ್ಪಾದನಾ ಮತ್ತು ಮೂಲಸೌಕರ್ಯ ವಲಯಗಳ ಬೆಳವಣಿಗೆಗೆ ಧಕ್ಕೆ ತರಬಹುದು ಎಂದು ವಿಶ್ಲೇಷಕರು ಎಚ್ಚರಿಸಿದ್ದಾರೆ.

ರಫ್ತು ವಲಯ ಎರಡಂಕಿ ಪ್ರಗತಿ

ಸರ್ಕಾರ ಈ ಹಿಂದೆ ಘೋಷಿಸಿದ್ದ ರಫ್ತು ಪ್ಯಾಕೇಜ್ ಉತ್ತಮ ಫಲಿತಾಂಶ ನೀಡುತ್ತಿದ್ದು, ಪ್ರಸಕ್ತ ಹಣಕಾಸು ವರ್ಷದ ಮೊದಲ ಎರಡು ತಿಂಗಳುಗಳಲ್ಲಿ ರಫ್ತು ವಲಯ ಎರಡಂಕಿ ಪ್ರಗತಿ ದಾಖಲಿಸಿದ್ದರೂ, ಆದರೆ, ಜಾಗತಿಕ ಮಾರುಕಟ್ಟೆಯಲ್ಲಿ ತೈಲ ಮತ್ತು ಚಿನ್ನದ ಬೆಲೆ ಏರಿಕೆ ದೇಶದ ವ್ಯಾಪಾರ ಕೊರತೆಯ ಮೇಲೆ ತೀವ್ರ ಒತ್ತಡ ಹೇರುತ್ತಿದೆ. ಪೂರೈಕೆ ಜಾಲ ಮತ್ತು ದೇಶೀಯ ವೆಚ್ಚಗಳ ಮೇಲೆ ತೀವ್ರ ನಿಗಾ ಇಡಲಾಗುತ್ತಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.



ರಿಸರ್ವ್ ಬ್ಯಾಂಕ್ ಮುನ್ನೆಚ್ಚರಿಕೆ

ಭಾರತದ ಆರ್ಥಿಕತೆ, ಆರ್ಥಿಕ ವರ್ಷ 2026ರಲ್ಲಿ ಶೇ.7.7 ಮತ್ತು ಕೊನೆ ತ್ರೈಮಾಸಿಕದಲ್ಲಿ ಶೇ.7.8 ಪ್ರಗತಿ ದಾಖಲಿಸಿದ್ದರೂ, ಪ್ರಸ್ತುತ ಜಾಗತಿಕ ಮಟ್ಟದ ದೇಶೀಯ ಒತ್ತಡಗಳನ್ನು ಎದುರಿಸುತ್ತಿದೆ. ಜೂ.6ರಂದು ನಡೆದ ಹಣಕಾಸು ನೀತಿ ಪರಾಮರ್ಶೆಯಲ್ಲಿ ಆರ್‌ಬಿಐ ರೆಪೊ ದರವನ್ನು ಶೇ.5.25 ಯಥಾಸ್ಥಿತಿಯಲ್ಲಿಟ್ಟಿದೆ. ಕೇಂದ್ರ ಬ್ಯಾಂಕ್ ಆರ್ಥಿಕ ವರ್ಷ 2027ರ ಜಿಡಿಪಿ ಬೆಳವಣಿಗೆಯ ಮುನ್ಸೂಚನೆ ಶೇ.6.9 ರಿಂದ ಶೇ.6.6 ಕ್ಕೆ ಇಳಿಸಿದೆ. ಪೂರೈಕೆ ಕೊರತೆ ಮುಂದುವರಿದರೆ ಹಣದುಬ್ಬರ ಕೇವಲ ಇಂಧನ ಮತ್ತು ಸರಕುಗಳಿಗೆ ಸೀಮಿತವಾಗದೆ ಇಡೀ ಆರ್ಥಿಕತೆಗೆ ವ್ಯಾಪಿಸಲಿದೆ ಎಂದು ರಿಸರ್ವ್ ಬ್ಯಾಂಕ್ ಗವರ್ನರ್ ಸಂಜಯ್ ಮಲ್ಹೋತ್ರಾ ತಿಳಿಸಿದ್ದಾರೆ.

ಹಣದುಬ್ಬರ: 15 ತಿಂಗಳ ಗರಿಷ್ಠ ಮಟ್ಟಕ್ಕೆ

ಜೂನ್ 3 ರಿಂದ ಜೂನ್ 8 ರವರೆಗೆ 38 ಆರ್ಥಿಕ ತಜ್ಞರ ನಡುವೆ ನಡೆಸಿದ ಸಮೀಕ್ಷೆಯ ಪ್ರಕಾರ, ಭಾರತದ ಗ್ರಾಹಕ ಬೆಲೆ ಸೂಚ್ಯಂಕ (ಸಿಪಿಐ) ಆಧಾರಿತ ಹಣದುಬ್ಬರ, ಮೇ ತಿಂಗಳಿನಲ್ಲಿ ಶೇ.4.0ಕ್ಕೆ ಏರಿದೆ. ಇದು ಏಪ್ರಿಲ್‌ನಲ್ಲಿ ಶೇ.3.48 ರಷ್ಟಿತ್ತು. ಕಳೆದ 15 ತಿಂಗಳುಗಳಿಂದ ಹಣದುಬ್ಬರ, ಆರ್‌ಬಿಐ ನಿಗದಿಪಡಿಸಿದ ಶೇ.4ರ ಮಧ್ಯಕಾಲೀನ ಗುರಿಗಿಂತ ಕೆಳಗಿತ್ತು. ತರಕಾರಿ ಮತ್ತು ಸಾರಿಗೆ ವೆಚ್ಚದ ಏರಿಕೆಯಿಂದಾಗಿ ಮೇ ತಿಂಗಳಿನಲ್ಲಿ ಗ್ರಾಹಕ ಬೆಲೆ ಸೂಚ್ಯಂಕವು ಶೇ.4ರ ಗಡಿ ದಾಟಿದೆ ಎಂದು ತಜ್ಞರು ತಿಳಿಸಿದ್ದಾರೆ.

ಕಿರುಸುದ್ದಿ

ಕಾದ ಕಬ್ಬಿಣ ಸೋರಿ ಒಂಬತ್ತು ಜನ ಸಾವು

ವಿಶಾಖಪಟ್ಟಣಂ: ಆಂಧ್ರ ಪ್ರದೇಶದ ವಿಶಾಖಪಟ್ಟಣಂನಲ್ಲಿರುವ ರಾಷ್ಟ್ರೀಯ ಇಸ್ಪಾತ್ ನಿಗಮ್ ಲಿಮಿಟೆಡ್ (ವಿಜಾಗ್ ಸ್ಟೀಲ್ ಪ್ಲಾಂಟ್) ನಲ್ಲಿ ಸೋಮವಾರ ಸಂಭವಿಸಿದ ಭೀಕರ ಕೈಗಾರಿಕಾ ದುರಂತದಲ್ಲಿ ಕನಿಷ್ಠ ಒಂಬತ್ತು ಕಾರ್ಮಿಕರು ಮೃತಪಟ್ಟಿದ್ದು, ಆರು ಮಂದಿ ಗಾಯಗೊಂಡಿದ್ದಾರೆ. ಪೊಲೀಸರ ಮಾಹಿತಿ ಪ್ರಕಾರ, ಕ್ರೇನ್ ಮೂಲಕ ಬಕೆಟ್ ನಲ್ಲಿ ಸಾಗಿಸಲಾಗುತ್ತಿದ್ದ ಕರಗಿದ ಕಬ್ಬಿಣ ಆಕಸ್ಮಿಕವಾಗಿ ಕಾರ್ಮಿಕರ ಮೇಲೆ ಚೆಲ್ಲಿದ ಪರಿಣಾಮ ಈ ದುರಂತ ಸಂಭವಿಸಿದೆ. ಸುಮಾರು 1,600 ಡಿಗ್ರಿ ಸೆಲ್ಸಿಯಸ್ ಉಷ್ಣಾಂಶ ಹೊಂದಿದ್ದ ಕರಗಿದ ಕಬ್ಬಿಣ ಕಾರ್ಮಿಕರ ಮೇಲೆ ಬಿದ್ದ ಕಾರಣ ಸ್ಥಳದಲ್ಲೇ ಹಲವರು ಸಾವನ್ನಪ್ಪಿದ್ದಾರೆ. ಗಾಯಗೊಂಡ ಆರು ಕಾರ್ಮಿಕರಲ್ಲಿ ಕೆಲವರ ಸ್ಥಿತಿ ಗಂಭೀರವಾಗಿದ್ದು, ಅವರನ್ನು ಸಮೀಪದ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗುತ್ತಿದೆ. ಘಟನೆಯ ತಕ್ಷಣ ರಕ್ಷಣಾ ಕಾರ್ಯಾಚರಣೆ ಆರಂಭಿಸಲಾಗಿದೆ.

ಕೇರಳದ ಇಡುಕ್ಕಿಯಲ್ಲಿ ಆನೆ ತುಳಿತಕ್ಕೆ ಮಹಿಳೆ ಬಲಿ

ತಿರುವನಂತಪುರಂ: ದುರಂತ ಘಟನೆಯೊಂದರಲ್ಲಿ, ಇಡುಕ್ಕಿ ಜಿಲ್ಲೆಯ ಚಿನ್ನಕನಾಲ್‌ನ ಸೂರ್ಯನೆಲ್ಲಿ ಬಳಿ ಕಾಡು ಆನೆಯ ದಾಳಿಯಲ್ಲಿ ಮಹಿಳೆಯೊಬ್ಬರು ಮೃತಪಟ್ಟಿದ್ದು, ಅವರ ಪುತ್ರ ಗಂಭೀರವಾಗಿ ಗಾಯಗೊಂಡಿದ್ದಾನೆ. ಸೋಮವಾರ ಬೆಳಗ್ಗೆ ಮಾರಿ (35) ಎಂಬ ಮಹಿಳೆ ತನ್ನ ಮಗನನ್ನು ಶಾಲೆಗೆ ಬಿಡಲು ಹೊರಟಾಗ ಈ ದಾಳಿ ನಡೆದಿದೆ. ಪೊಲೀಸರ ಪ್ರಕಾರ, ಭಾರೀ ಮಂಜು ಮತ್ತು ಮಳೆಯಿಂದಾಗಿ ಆನೆ ಹಾದಿ ತಪ್ಪಿ ರಸ್ತೆ ಬದಿ ಸಂಭವಿಸಿದೆ ಎಂದು ವರದಿಯಾಗಿದೆ. ರಾಜ್ಯದ ಅರಣ್ಯ ಅಂಚಿನ ಪ್ರದೇಶಗಳಲ್ಲಿ ಮಾನವ-ಆನೆ ಸಂಘರ್ಷದ ಘಟನೆಗಳು ಹೆಚ್ಚುತ್ತಿರುವುದನ್ನು ಪ್ರತಿಭಟಿಸಿ, ಸ್ಥಳೀಯರು ಮಾರಿ ಅವರ ದೇಹವನ್ನು ಆಸ್ಪತ್ರೆಗೆ ಸ್ಥಳಾಂತರಿಸಲು ಅಧಿಕಾರಿಗಳಿಗೆ ಅವಕಾಶ ನೀಡಲು ನಿರಾಕರಿಸಿದ್ದು, ಇದರಿಂದಾಗಿ ಈ ಪ್ರದೇಶದಲ್ಲಿ ಉದ್ವಿಗ್ನತೆ ಉಂಟಾಗಿತ್ತು.

ಬಾಂಗ್ಲಾ ಶಿಕ್ಷೆ ಮುಗಿದರೂ ಬಿಡುಗಡೆ ಭಾಗ್ಯವಿಲ್ಲ

ಢಾಕಾ: ಕಾರ್ಯವಿಧಾನದ ವಿಳಂಬದಿಂದಾಗಿ ಸುಮಾರು 150 ಭಾರತೀಯರು ತಮ್ಮ ಜೈಲು ಶಿಕ್ಷೆ ಅವಧಿ ಪೂರ್ಣಗೊಳಿಸಿದರೂ ಬಾಂಗ್ಲಾದೇಶದ ಜೈಲುಗಳಲ್ಲಿ ನರಳುತ್ತಿದ್ದಾರೆ. 148 ಭಾರತೀಯರು ಸೇರಿದಂತೆ 152 ವಿದೇಶಿಯರು ತಮ್ಮ ಜೈಲು ಶಿಕ್ಷೆ ಪೂರ್ಣಗೊಳಿಸಿದ್ದರೂ ಬಾಂಗ್ಲಾದೇಶದ ಜೈಲಿನಲ್ಲೇ ಇದ್ದಾರೆ.

ನೇಪಾಳ ಗಡಿಯ ಬಳಿ ಅಭಿಷೇಕ್ ಆಪ್ತನ ಸೆರೆ

ಸಿಲಿಗುರಿ: ಕೆಲವು ವಾರಗಳಿಂದ ತಲೆಮರೆಸಿಕೊಂಡಿದ್ದ ತೃಣಮೂಲ ಕಾಂಗ್ರೆಸ್ ನಾಯಕ, ಸಂಸದ ಅಭಿಷೇಕ್ ಬ್ಯಾನರ್ಜಿ ಆಪ್ತ ಜಹಾಂಗೀರ್ ಖಾನ್ ಅವರನ್ನು ಪಶ್ಚಿಮ ಬಂಗಾಳದ ವಿಶೇಷ ಕಾರ್ಯಪಡೆ (ಎಸ್‌ಟಿಎಫ್) ಸೋಮವಾರ ನೇಪಾಳ ಗಡಿ ಸಮೀಪವಿರುವ ಉತ್ತರ ಬಂಗಾಳದಲ್ಲಿ ಬಂಧಿಸಿದೆ.

ಸಂಸದ ಅಭಿಷೇಕ್ ಬ್ಯಾನರ್ಜಿ ಅವರ ಆಪ್ತರಾಗಿರುವ ಖಾನ್ ನೇಪಾಳಕ್ಕೆ ಪಲಾಯನ ಮಾಡಲು ಯತ್ನಿಸುತ್ತಿದ್ದಾಗ ಅಧಿಕಾರಿಗಳು ಅವರನ್ನು ವಶಕ್ಕೆ ಪಡೆದಿದ್ದಾರೆ. ಕಲ್ಕತ್ತಾ ಹೈಕೋರ್ಟ್ ಅವರಿಗೆ ನೀಡಿದ್ದ ಮಧ್ಯಂತರ ಜಾಮೀನನ್ನು ಹಿಂಪಡೆದ ಬೆನ್ನಲ್ಲೇ ಈ ಬಂಧನ ನಡೆದಿದೆ. ಪಶ್ಚಿಮ ಬಂಗಾಳ ವಿಧಾನಸಭಾ ಚುನಾವಣೆಯ ಸಂದರ್ಭದಲ್ಲಿ ದಕ್ಷಿಣ 24 ಪರಗಣ ಕ್ಷೇತ್ರದಲ್ಲಾದ ವಿದ್ಯುನ್ಮಾನ ಮತಯಂತ್ರ (ಇವಿಎಂ) ಅಕ್ರಮ ಸೇರಿದಂತೆ ಖಾನ್ ವಿರುದ್ಧ ಹಲವು ಎಫ್‌ಐಆರ್‌ಗಳು ದಾಖಲಾಗಿವೆ.

ಮೇ 21 ರಂದು ನಡೆದ ಫಾಲ್ಟಾ ವಿಧಾನಸಭಾ ಕ್ಷೇತ್ರದ ಮರುಚುನಾವಣೆಯಿಂದ ಖಾನ್ ತಮ್ಮ ಉಮೇದುವಾರಿಕೆ ಹಿಂಪಡೆದಿದ್ದರು. ಮುಖ್ಯಮಂತ್ರಿ ಸುವೇಂದು ಅಧಿಕಾರಿ ನೀಡಿದ ಅಭಿವೃದ್ಧಿ ಪ್ಯಾಕೇಜ್ ಭರವಸೆ ಕಾರಣ ತಾವು ಸ್ಪರ್ಧೆಯಿಂದ ಹಿಂದೆ ಸರಿದಿರುವುದಾಗಿ ಖಾನ್ ಪ್ರತಿಪಾದಿಸಿದ್ದರು. ಆದರೆ, ತೃಣಮೂಲ ಕಾಂಗ್ರೆಸ್ ಈ ನಿರ್ಧಾರದಿಂದ ದೂರ ಉಳಿದಿದ್ದು, ಇದು ಅವರ ವೈಯಕ್ತಿಕ ನಿರ್ಧಾರ ಎಂದು ಹೇಳಿತ್ತು.

ಏ.29 ರಂದು ನಡೆದಿದ್ದ ಮೊದಲ ಹಂತದ ಮತದಾನದಲ್ಲಿ ಚುನಾವಣಾ ಅಕ್ರಮಗಳು ನಡೆದ ಹಿನ್ನೆಲೆಯಲ್ಲಿ ಕೇಂದ್ರ ಚುನಾವಣಾ ಆಯೋಗ ಮರುಚುನಾವಣೆಗೆ ಆದೇಶಿಸಿತ್ತು.

ಇಸ್ರೇಲ್ ಕಾನ್ಸುಲೇಟಲ್ಲಿ ಶಿವಾಜಿ ಪ್ರತಿಮೆ ಸ್ಥಾಪನೆ

ಮುಂಬೈ: ಭಾರತ-ಇಸ್ರೇಲ್ ಸಂಬಂಧಗಳನ್ನು ಬಲಪಡಿಸುವ ಗುರಿ ಹೊಂದಿರುವ ಮಹತ್ವದ ಸಾಂಸ್ಕೃತಿಕ ಸೂಚಕವಾಗಿ, ಮುಂಬೈನಲ್ಲಿರುವ ಇಸ್ರೇಲ್ ಕಾನ್ಸುಲೇಟ್ ಜನರಲ್ ಇಸ್ರೇಲ್‌ನಲ್ಲಿ ಛತ್ರಪತಿ ಶಿವಾಜಿ ಮಹಾರಾಜರ ಪ್ರತಿಮೆ ಸ್ಥಾಪಿಸುವ ಯೋಜನೆ ಘೋಷಿಸಿದೆ. ಛತ್ರಪತಿ ಶಿವಾಜಿ ಮಹಾರಾಜರ ಪಟ್ಟಾಭಿಷೇಕದ ವಾರ್ಷಿಕೋತ್ಸವದ ಶಿವರಾಜ್ಯಾಭಿಷೇಕ ದಿನದ ಶುಭ ಸಂದರ್ಭದಲ್ಲಿ ಈ ಘೋಷಣೆ ಮಾಡಲಾಗಿದೆ. ಈ ಪ್ರಸ್ತಾವಕ್ಕೆ ಈಗಾಗಲೇ ಮಹಾರಾಷ್ಟ್ರದ ಮುಖ್ಯಮಂತ್ರಿ ದೇವೇಂದ್ರ ಫಡ್ನವೀಸ್ ಅವರ ಬೆಂಬಲ ದೊರೆತಿದೆ ಎಂದು ಇಸ್ರೇಲಿ ಕಾನ್ಸುಲ್ ಜನರಲ್ ಯಾನಿವ್ ರೆವಾಚ್ ತಿಳಿಸಿದ್ದಾರೆ.

ಈ ಯೋಜನೆ ಹಿಂದಿನ ಕಲ್ಪನೆ ವಿವರಿಸಿದ ರೆವಾಚ್, ಈ ಸ್ಮಾರಕ ಉಭಯ ದೇಶಗಳ ನಡುವಿನ ಬೆಳೆಯುತ್ತಿರುವ ಸಂಬಂಧವನ್ನು ಪ್ರತಿನಿಧಿಸುತ್ತದೆ. ಇಸ್ರೇಲ್‌ನಲ್ಲಿರುವ ಛತ್ರಪತಿ ಶಿವಾಜಿ ಮಹಾರಾಜರ ಪ್ರತಿಮೆ ಇಸ್ರೇಲ್ ಮತ್ತು ಭಾರತದ ನಡುವಿನ ನಿಕಟ ಸಂಬಂಧಗಳ ಪ್ರಬಲ ಸಂಕೇತವಾಗಿ ಕಾರ್ಯನಿರ್ವಹಿಸುತ್ತದೆ. ಮಹಾರಾಷ್ಟ್ರ ಮತ್ತು ಭಾರತೀಯ ಯಹೂದಿ ಸಮುದಾಯದ ನಡುವಿನ ಐತಿಹಾಸಿಕ ಸಂಪರ್ಕವನ್ನು ಗಮನದಲ್ಲಿಟ್ಟುಕೊಂಡು ಅಂತಹ ಸ್ಮಾರಕವು ವಿಶೇಷವಾಗಿ ಅರ್ಥಪೂರ್ಣವಾಗಿದೆ. ಅವರ ಅನೇಕ ವಂಶಸ್ಥರು ಇಂದು ಇಸ್ರೇಲಿ ಸಮಾಜಕ್ಕೆ ಗಮನಾರ್ಹ ಕೊಡುಗೆ ನೀಡುತ್ತಾರೆ ಎಂದು ರೆವಾಚ್ ಫಡ್ನವೀಸ್ ಅವರಿಗೆ ಬರೆದ ಪತ್ರದಲ್ಲಿ ತಿಳಿಸಿದ್ದಾರೆ. ಪ್ರತಿಮೆ ಶಿವಾಜಿ ಮಹಾರಾಜರ ಪರಂಪರೆ ನಿಖರವಾಗಿ ಪ್ರತಿಬಿಂಬಿಸುತ್ತದೆ ಎಂದು ಖಚಿತಪಡಿಸಿಕೊಳ್ಳುವಲ್ಲಿ ಮಹಾರಾಷ್ಟ್ರ ಸರ್ಕಾರ ಪ್ರಮುಖ ಪಾತ್ರ ವಹಿಸುತ್ತದೆ ಎಂದು ಬಹಿರಂಗಪಡಿಸಿದರು.

ಬಂಗಾಳದಿಂದ 4,800 ವಲಸಿಗರ ಗಡಿಪಾರು

ಕೋಲ್ಕತ್ತಾ: ಪೌರತ್ವ(ತಿದ್ದುಪಡಿ) ಕಾಯ್ದೆ ವ್ಯಾಪ್ತಿಗೆ ಬಾರದ ಬಾಂಗ್ಲಾದೇಶದ 4,800 ಅಕ್ರಮ ನುಸುಳುಕೋರರನ್ನು ಕಳೆದ ಒಂದು ತಿಂಗಳಲ್ಲಿ ಬಾಂಗ್ಲಾದೇಶಕ್ಕೆ ಗಡಿಪಾರು ಮಾಡಲಾಗಿದೆ ಎಂದು ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಸುವೇಂದು ಅಧಿಕಾರಿ ಹೇಳಿದ್ದಾರೆ.

ಪಶ್ಚಿಮ ಬಂಗಾಳದಲ್ಲಿ ದೀರ್ಘಕಾಲದಿಂದ ವಿವಾದಾತ್ಮಕ ರಾಜಕೀಯ ಮತ್ತು ಭದ್ರತಾ ಕಾಳಜಿಯಾಗಿ ಉಳಿದಿದ್ದ ಅಕ್ರಮ ವಲಸೆ ಸಮಸ್ಯೆಯನ್ನುದ್ದೇಶಿಸಿ ಮಾತನಾಡಿದ ಅಧಿಕಾರಿ, ರಾಜ್ಯದಲ್ಲಿ ಅಕ್ರಮವಾಗಿ ವಾಸಿಸುತ್ತಿರುವ ವಿದೇಶಿ ಪ್ರಜೆಗಳನ್ನು ಗುರುತಿಸಲು, ಬಂಧಿಸಲು ಮತ್ತು ಗಡಿಪಾರು ಮಾಡಲು ತಮ್ಮ ಸರ್ಕಾರ ವ್ಯವಸ್ಥಿತ ಪ್ರಕ್ರಿಯೆಯನ್ನು ಪ್ರಾರಂಭಿಸಿದೆ ಎಂದು ಪ್ರತಿಪಾದಿಸಿದರು. ಪ್ರಸ್ತುತ ನಿರಾಶ್ರಿತರ ಕೇಂದ್ರಗಳಲ್ಲಿ ಇನ್ನೂ 836 ಜನರನ್ನು ಇರಿಸಲಾಗಿದೆ. ಗಡಿಪಾರು ಪ್ರಕ್ರಿಯೆ ಪೂರ್ಣಗೊಳ್ಳಲು ಕಾಯಲಾಗುತ್ತಿದೆ ಎಂದು ಅಧಿಕಾರಿ ಹೇಳಿದರು. ರಾಜ್ಯ ಸರ್ಕಾರ, ಕೇಂದ್ರ ಸರ್ಕಾರ ರೂಪಿಸಿದ ಕಾನೂನುಗಳಿಗೆ ಅನುಗುಣವಾಗಿ ಕಾರ್ಯನಿರ್ವಹಿಸುತ್ತಿದೆ. ರಾಜ್ಯದಲ್ಲಿ ಅಕ್ರಮವಾಗಿ ವಾಸಿಸುತ್ತಿರುವ ವಿದೇಶಿ ಪ್ರಜೆಗಳನ್ನು ಗುರುತಿಸಿ ಮರಳಿ ಕಳುಹಿಸಲಾಗಿದೆಯೆ ಎಂದು ಖಚಿತಪಡಿಸಿಕೊಳ್ಳಲು ಕ್ರಮಗಳನ್ನು ತೆಗೆದುಕೊಳ್ಳುತ್ತಿದೆ. ಅಕ್ರಮ ನುಸುಳುಕೋರರನ್ನು ನೇರವಾಗಿ ಬಿಎಸ್‌ಎಫ್‌ಗೆ ಹಸ್ತಾಂತರಿಸಲಾಗುತ್ತಿದೆ. ಅಕ್ರಮ ವಲಸೆ ಪಶ್ಚಿಮ ಬಂಗಾಳ ಎದುರಿಸುತ್ತಿರುವ ಅತ್ಯಂತ ಗಂಭೀರ ಸಮಸ್ಯೆಗಳಲ್ಲಿ ಒಂದಾಗಿದೆ. ಕಣ್ಗಾವಲು ಬಲಪಡಿಸಲು ಮತ್ತು ಭವಿಷ್ಯದ ಒಳನುಸುಳುವಿಕೆಯನ್ನು ತಡೆಯಲು ರಾಜ್ಯ ಸರ್ಕಾರವು ಗಡಿ ಭದ್ರತಾ ಸಂಸ್ಥೆಗಳೊಂದಿಗೆ ನಿಕಟವಾಗಿ ಕಾರ್ಯನಿರ್ವಹಿಸುತ್ತಿದೆ ಎಂದು ಹೇಳಿದರು.

ತಿಂಡಿ ಪೊಟ್ಟಣಕ್ಕೆ ಸುದ್ದಿ ಪತ್ರಿಕೆ ಬಳಸುವಂತಿಲ್ಲ

ಹೊಸದಿಲ್ಲಿ: ಆಹಾರ ಪದಾರ್ಥಗಳನ್ನು ಪ್ಯಾಕ್ ಮಾಡಲು ಅಥವಾ ಸೇವಿಸಲು ಸುದ್ದಿ ಪತ್ರಿಕೆಗಳ ಬಳಕೆಯನ್ನು ತಕ್ಷಣವೇ ನಿಲ್ಲಿಸುವಂತೆ ಎಲ್ಲಾ ಆಹಾರ ವ್ಯಾಪಾರ ನಿರ್ವಾಹಕರಿಗೆ ಭಾರತೀಯ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಪ್ರಾಧಿಕಾರವು (ಎಫ್‌ಎಸ್‌ಎಸ್‌ಎಐ) ಗಂಭೀರ ಆರೋಗ್ಯ ಅಪಾಯಗಳನ್ನು ಉಲ್ಲೇಖಿಸಿ ನಿರ್ದೇಶನ ನೀಡಿದೆ. ಮುಂಬೈನಲ್ಲಿ ಇತ್ತೀಚೆಗೆ ವಡಾ ಪಾವ್ ಮಾರಾಟಗಾರರೊಬ್ಬರು ಆಹಾರ ಪ್ಯಾಕ್ ಮಾಡಲು ಪತ್ರಿಕೆ ಬಳಸಿದ ಘಟನೆ ನಂತರ ಈ ಸಲಹೆ ನೀಡಲಾಗಿದೆ. ಆದರ ನಂತರ ಎಫ್‌ಎಸ್ ಎಸ್‌ಎಐ ಮತ್ತು ಮುಂಬೈ ನಾಗರಿಕ ಸಂಸ್ಥೆ, ಬೃಹನ್ ಮುಂಬೈ ಮಹಾನಗರ ಪಾಲಿಕೆ ಜಂಟಿ ಕ್ರಮ ಕೈಗೊಂಡಿವೆ. ಪತ್ರಿಕೆಗಳು ಅಥವಾ ಅಂತಹುದೇ ಅನುಮೋದಿಸದ ವಸ್ತುಗಳನ್ನು ಆಹಾರ ಪ್ಯಾಕ್ ಅಥವಾ ಸೇವಿಸಲು ಬಳಸುವುದನ್ನು ಕಟ್ಟುನಿಟ್ಟಾಗಿ ನಿಷೇಧಿಸಲಾಗಿದೆ.

ತೈಲ ಟ್ಯಾಂಕರ್‌ನಲ್ಲಿ ಅವಘಡ | 24 ನಾವಿಕರಿದ್ದ ಹಡಗಿನಲ್ಲಿ ಬೆಂಕಿ

ಎಲ್ಲ ಭಾರತೀಯ ನಾವಿಕರು ಸುರಕ್ಷಿತ

ಹೊಸದಿಲ್ಲಿ: ಒಮನ್ ಕರಾವಳಿ ಸಮೀಪ ಸಂಚರಿಸುತ್ತಿದ್ದ ತೈಲ ಟ್ಯಾಂಕರ್‌ನಲ್ಲಿ ಸೋಮವಾರ ಬೆಂಕಿ ಕಾಣಿಸಿಕೊಂಡಿದ್ದು, ಅದರಲ್ಲಿದ್ದ 24 ಭಾರತೀಯ ನಾವಿಕರು ಸುರಕ್ಷಿತರಾಗಿದ್ದಾರೆ ಎಂದು ಕೇಂದ್ರ ಬಂದರು, ಹಡಗು ಸಾಗಣೆ ಮತ್ತು ಜಲಮಾರ್ಗ ಸಚಿವಾಲಯ ತಿಳಿಸಿದೆ.

ಮಡಗಾಸ್ಕರ್ ಧ್ವಜ ಹೊಂದಿದ್ದ ಎಂಟಿ ಮ್ಯಾರಿವೆಕ್ಸ್ ಎಂಬ ತೈಲ ಟ್ಯಾಂಕರ್‌ನಲ್ಲಿ ಮಧ್ಯಾಹ್ನ ಸುಮಾರು 1.30 ಗಂಟೆ ವೇಳೆಗೆ ಬೆಂಕಿ ಕಾಣಿಸಿಕೊಂಡಿರುವ ಮಾಹಿತಿ ಲಭಿಸಿದೆ. ಈ ಕುರಿತು ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಚಿವಾಲಯದ ನಿರ್ದೇಶಕ ಒಪೇಶ್ ಕುಮಾರ್ ಶರ್ಮಾ, ಹಡಗಿನಲ್ಲಿ 24 ಭಾರತೀಯ ಸಿಬ್ಬಂದಿ ಇದ್ದರು ಎಂದು ತಿಳಿಸಿದರು.

ಬೆಂಕಿಗೆ ಕಾರಣವೇನು ಎಂಬ ಬಗ್ಗೆ ಸ್ಪಷ್ಟ ಮಾಹಿತಿ ಲಭ್ಯವಾಗಿಲ್ಲ. ಆದರೆ ಹಡಗು ಖಾಲಿಯಾಗಿದ್ದು, ಜಾಗತಿಕ ತೈಲ ಸಾಗಣೆಗೆ ಪ್ರಮುಖವಾಗಿರುವ ಹೋರ್ಮುಜ್ ಜಲಸಂಧಿಯಿಂದ ಸಾಕಷ್ಟು ದೂರದಲ್ಲಿತ್ತು ಎಂದು ಅವರು ಹೇಳಿದರು.

> **ಪ್ರಮುಖ ಅಂಶಗಳು**
> - ಭಾರತೀಯ ನೌಕಾಪಡೆ, ವಿದೇಶಾಂಗ ಸಚಿವಾಲಯ ದೊಂದಿಗೆ ಸಮನ್ವಯ
> - ಇಸ್ರೇಲ್‌ಇರಾನ್ ಉದ್ವಿಗ್ನತೆಯ ನಡುವೆಯೇ ಘಟನೆ ಸಂಭವನೆ

ನಮಗೆ ಲಭ್ಯವಾಗಿರುವ ಪ್ರಾಥಮಿಕ ಮಾಹಿತಿಯ ಪ್ರಕಾರ ಎಲ್ಲ ಭಾರತೀಯ ನಾವಿಕರೂ ಸುರಕ್ಷಿತರಾಗಿದ್ದಾರೆ. ಅವರ ಭದ್ರತೆಯನ್ನು ಖಚಿತಪಡಿಸಿಕೊಳ್ಳಲು ವಿದೇಶಾಂಗ ವ್ಯವಹಾರಗಳ ಸಚಿವಾಲಯ, ವಿದೇಶಗಳಲ್ಲಿರುವ ಭಾರತೀಯ ರಾಯಭಾರ ಕಚೇರಿಗಳು, ಭಾರತೀಯ ನೌಕಾಪಡೆ ಹಾಗೂ ರಕ್ಷಣಾ ಸಚಿವಾಲಯದೊಂದಿಗೆ ಸಮನ್ವಯ ಸಾಧಿಸಲಾಗುತ್ತಿದೆ ಎಂದು ಶರ್ಮಾ ಹೇಳಿದರು. ಹಡಗುಗಳ ಸಂಚಾರದ ಮಾಹಿತಿ ನೀಡುವ ವ್ಯವಸ್ಥೆಯ ಪ್ರಕಾರ, ಟ್ಯಾಂಕರ್ ಮಸ್ಕಟ್‌ನ ದಕ್ಷಿಣ ಭಾಗದಲ್ಲಿ ಲಂಗರು ಹಾಕಿಕೊಂಡಿತ್ತು. ಒಮಾನ್‌ನ ಡುಕ್ಮ್ ಬಂದರಿನತ್ತ ತೆರಳುತ್ತಿದ್ದ ವೇಳೆ ಹಡಗು ಮೇಲೆ ದಾಳಿ ನಡೆದಿರುವ ಶಂಕೆಯೂ ವ್ಯಕ್ತವಾಗಿದ್ದು, ಆದರ ಬಳಿಕ ತುರ್ತು ಸಹಾಯಕ್ಕಾಗಿ ಸಂದೇಶ ರವಾನಿಸಲಾಗಿದೆ ಎಂದು ಪ್ರಾಥಮಿಕ ವರದಿಗಳು ತಿಳಿಸಿವೆ.


ಈ ಘಟನೆ ಪಶ್ಚಿಮ ಏಷ್ಯಾದಲ್ಲಿ ಉದ್ವಿಗ್ನತೆ ಹೆಚ್ಚುತ್ತಿರುವ ಸಂದರ್ಭದಲ್ಲೇ ಸಂಭವಿಸಿದೆ. ಇಸ್ರೇಲ್ ಮತ್ತು ಇರಾನ್ ನಡುವೆ ಮತ್ತೆ ದಾಳಿ-ಪ್ರತಿದಾಳಿ ಆರಂಭವಾಗಿದ್ದು, ಇಸ್ರೇಲ್ ಇರಾನ್‌ನ ಪೆಟ್ರೋಕೆಮಿಕಲ್ ಘಟಕಗಳ ಮೇಲೆ ದಾಳಿ ನಡೆಸಿದೆ. ಇದಕ್ಕೆ ಪ್ರತಿಯಾಗಿ ಇರಾನ್ ಕೂಡ ಇಸ್ರೇಲ್‌ನ ಹೈಫಾ ಪ್ರದೇಶದ ಗುರಿಗಳ ಮೇಲೆ ಕ್ಷಿಪಣಿ ದಾಳಿ ನಡೆಸಿರುವುದಾಗಿ ವರದಿಯಾಗಿದೆ.

ಭದ್ರತಾ ಪಡೆ-ಪ್ರತಿಭಟನಾಕಾರರ ನಡುವೆ ಘರ್ಷಣೆ

ಪಿಒಕೆ ಸಂಘರ್ಷದಲ್ಲಿ 11 ಸಾವು

ರಾವಲಕೋಟ್: ಪಾಕಿಸ್ತಾನ ಆಕ್ರಮಿತ ಕಾಶ್ಮೀರದಲ್ಲಿನ(ಪಿಒಕೆ) ರಾವಲಕೋಟ್‌ನಲ್ಲಿ ನಾಗರಿಕ ಸಮಾಜದ ಒಕ್ಕೂಟದ ಪ್ರತಿಭಟನಾಕಾರರು ಮತ್ತು ಭದ್ರತಾ ಪಡೆಗಳ ನಡುವೆ ನಡೆದ ಹಿಂಸಾತ್ಮಕ ಘರ್ಷಣೆಯಲ್ಲಿ ಭಾನುವಾರ 11 ಮಂದಿ ಮೃತಪಟ್ಟಿದ್ದಾರೆ. ಇತರೆ 70ಕ್ಕೂ ಹೆಚ್ಚು ಜನರು ಗಾಯಗೊಂಡಿದ್ದಾರೆ.

ಜಂಟಿ ಅವಾಮಿ ಆಕ್ಷನ್ ಕಮಿಟಿ(ಜೆಎಎಸಿ) ಸದಸ್ಯರನ್ನು ಚದುರಿಸಲು ಪೊಲೀಸ್ ಮತ್ತು ಅರೆಸೇನಾ ಪಡೆಗಳು ಯತ್ನಿಸಿದಾಗ ಈ ಘಟನೆ ಸಂಭವಿಸಿದೆ. ಪೂಂಚ್ ವಲಯದ ಕಮಿಷನರ್ ಸರ್ದಾರ್ ವಹೀದ್ ಖಾನ್ ಪ್ರಕಾರ, ಮೃತರ ಪೈಕಿ ನಾಲ್ಕು ಪೊಲೀಸ್ ಅಧಿಕಾರಿಗಳು ಮತ್ತು ಒಬ್ಬ ದಾರಿಹೋಕ ಸೇರಿದಂತೆ ಏಳು ನಾಗರಿಕರು ಸೇರಿದ್ದಾರೆ. ಪ್ರಾದೇಶಿಕ ಪೊಲೀಸ್ ಮುಖ್ಯಸ್ಥ ಲಿಯಾಖತ್ ಮಲಿಕ್ ಮಾತನಾಡಿ, 23 ಭದ್ರತಾ ಸಿಬ್ಬಂದಿ ಮತ್ತು 50 ಪ್ರತಿಭಟನಾಕಾರರು ಗಾಯಗೊಂಡಿದ್ದು, ಅಧಿಕಾರಿಗಳು 30 ಆರೋಪಿಗಳನ್ನು ಬಂಧಿಸಿದ್ದಾರೆ ಎಂದು ತಿಳಿಸಿದ್ದಾರೆ.



ಇಂದು ಲಾಕ್‌ಡೌನ್

ಜುಲೈ 27ರಂದು ನಡೆಯಲಿರುವ ಶಾಸನಸಭೆ ಚುನಾವಣೆಯಲ್ಲಿ ನಿರಾಶ್ರಿತರಿಗಾಗಿ 12 ಸ್ಥಾನಗಳನ್ನು ಕಾಯ್ದಿರಿಸಿರುವುದನ್ನು ವಿರೋಧಿಸಿ ಜಂಟಿ ಅವಾಮಿ ಕ್ರಿಯಾ ಸಮಿತಿ ಈ ಪ್ರತಿಭಟನೆಗೆ ಕರೆ ನೀಡಿತ್ತು. ಪ್ರಾದೇಶಿಕ ಸರ್ಕಾರ ಶುಕ್ರವಾರ ಈ ಒಕ್ಕೂಟವನ್ನು ಭಯೋತ್ಪಾದನಾ ವಿರೋಧಿ ಕಾಯ್ದೆಯಲ್ಲಿ ನಿಷೇಧಿತ ಗುಂಪು ಎಂದು ಘೋಷಿಸಿತ್ತು. ಅಲ್ಲದೆ, ಜೂನ್ 9 ರಂದು ನಿಗದಿಯಾಗಿದ್ದ ಲಾಕ್‌ಡೌನ್‌ಗಿಂತ ಮುಂಚಿತವಾಗಿ ಈ ಪ್ರದೇಶವನ್ನು ತೊರೆಯುವಂತೆ ಪ್ರವಾಸಿಗರಿಗೆ ಸಲಹೆ ನೀಡಿತ್ತು.

ಕನ್ಯಾಡಿ ಶ್ರೀರಾಮ ಕ್ಷೇತ್ರದಲ್ಲಿ ಶ್ರೀ ಗ್ರಂಥರಾಜ ಜ್ಞಾನೇಶ್ವರಿಯ ಸಮುದಾಯಿಕ ಪಾರಾಯಣ

ದ್ವೇಷ ಬಿಟ್ಟು ಬಾಳಿದಾಗ ನೆಮ್ಮದಿ ಸಾಧ್ಯ



» ಸನಾತನ ಹಿಂದೂ ಧರ್ಮದ ಆಚಾರ ವಿಚಾರಗಳನ್ನು ಅರಿತು ಕೊಂಡು ನಮ್ಮಲ್ಲಿರುವ ಆತ್ಮ ಒಂದೇ ಎಂಬ ಭಾವನೆಯಿಂದ ಬದುಕಿ ಮತ್ತೊಬ್ಬರ ಬಗ್ಗೆ ಚಿಂತನೆ, ದ್ವೇಷ ಬಿಟ್ಟು ಬಾಳಿದಾಗ ನೆಮ್ಮದಿ ಸಾಧ್ಯ.

» ಹಿಂದೂ ಧರ್ಮದ ಸಂಸ್ಕೃತಿ, ಸಂಸ್ಕಾರದ ಜಗತ್ತಿನಲ್ಲಿ ಉಳಿಸಿ ಬೆಳೆಸಿದೆ.

» ಜಗತ್ತಿನ ಮೊತ್ತ ಮೊದಲ ಮನೋ ವಿಜ್ಞಾನಿ ಶ್ರೀಕೃಷ್ಣ.

• **ಬೆಳ್ತಂಗಡಿ:** ಧರ್ಮಸ್ಥಳ ಗ್ರಾಮದ ನಿತ್ಯಾನಂದ ನಗರದಲ್ಲಿರುವ ಶ್ರೀರಾಮ ಕ್ಷೇತ್ರ ಮಹಾಸಂಸ್ಥಾನದಲ್ಲಿ ಕ್ಷೇತ್ರದ ಪೀಠಾಧೀಶ ಮಹಾಮಂಡಲೇಶ್ವರ 1008 ಸದ್ಗುರು ಶ್ರೀ ಬ್ರಹ್ಮಾನಂದ ಸರಸ್ವತಿ ಮಹಾರಾಜ್ ಅವರ ಉಪಸ್ಥಿತಿಯಲ್ಲಿ ಪಂಡರಾಪುರ ಶ್ರೀ ಚೈತನ್ಯ ಸದ್ಗುರು ಹರಿಪ್ರಸಾದ ಶರದಸ್ವಾಮಿ ಶಿವೂರಕರ ಇವರ ನೇತೃತ್ವದಲ್ಲಿ ಅಧಿಕ ಮಾಸದ ನಿಮಿತ್ತ ಜೂ.13 ರ ವರೆಗೆ ನಡೆಯಲಿರುವ ಶ್ರೀ ಗ್ರಂಥರಾಜ ಜ್ಞಾನೇಶ್ವರಿಯ ಸಮುದಾಯಿಕ ಪಾರಾಯಣ ಹಾಗೂ ಅಖಂಡ ಹರಿನಾಮ ಸಪ್ತಾಹ ಉದ್ಘಾಟನೆ ಮತ್ತು ಗ್ರಂಥರಾಜ ಜ್ಞಾನೇಶ್ವರಿಯ ಬಿಡುಗಡೆ ಜೂ. 7 ರಂದು ನಡೆಯಿತು.

ಕ್ಷೇತ್ರದ ಮಹಾಧೀಶ ಮಹಾಮಂಡಲೇಶ್ವರ 1008 ಸದ್ಗುರು ಶ್ರೀ ಬ್ರಹ್ಮಾನಂದ ಸರಸ್ವತಿ ಸ್ವಾಮೀಜಿ ದೀಪ ಬೆಳಗಿಸಿ ಉದ್ಘಾಟಿಸಿ ಆಶೀರ್ವಚನ ನೀಡಿ, ಸನಾತನ ಹಿಂದೂ ಧರ್ಮದ ಆಚಾರ ವಿಚಾರಗಳನ್ನು ಅರಿತು ಕೊಂಡು ನಮ್ಮಲ್ಲಿರುವ ಆತ್ಮ ಒಂದೇ ಎಂಬ ಭಾವನೆಯಿಂದ ಬದುಕಿ ಮತ್ತೊಬ್ಬರ ಬಗ್ಗೆ ಚಿಂತನೆ, ದ್ವೇಷ ಬಿಟ್ಟು ಬಾಳಿದಾಗ ನೆಮ್ಮದಿ ಸಾಧ್ಯ. ಪಾಂಡುರಂಗ ಭಜನೆಯ ಶಕ್ತಿಯಿಂದ ಇಲ್ಲಿ ಆಗಮಿಸಿದ ಪಂಡರಾಪುರ ಭಕ್ತ ವೃಂದ, ಶಿಷ್ಯರು ಧನ್ಯರು, ಭಜನೆ, ಧ್ಯಾನದಿಂದ ನಮ್ಮಲ್ಲಿನ ದುಃಖವನ್ನು ನಿವಾರಿಸುವ ಶಕ್ತಿ ಇದೆ ಎಂದು ಹೇಳಿದರು.

ಆರ್. ಎಸ್. ಎಸ್. ಹಿರಿಯ ಪ್ರಮುಖ ಡಾ. ಪ್ರಭಾಕರ ಭಟ್ ಕಲ್ಲಡ್ಕ ಮಾತನಾಡಿ, ಹಿಂದೂ ಧರ್ಮದ ಸಂಸ್ಕೃತಿ, ಸಂಸ್ಕಾರದ ಜಗತ್ತಿನಲ್ಲಿ ಉಳಿಸಿ ಬೆಳೆಸಿದೆ. ನಾವೆಲ್ಲ ಒಟ್ಟಾಗಿ ಪಾರಾಯಣದ ಮೂಲಕ ಅನುಷ್ಠಾನ ಮಾಡಿದಾಗ ನೆಮ್ಮದಿ ಸಿಗುವುದು. ಜಗತ್ತಿನ ಮೊತ್ತ ಮೊದಲ ಮನೋ ವಿಜ್ಞಾನಿ ಶ್ರೀಕೃಷ್ಣ. ಇಂತಹ ಪಾರಾಯಣದಿಂದ ನಮ್ಮ ಸಂಸ್ಕೃತಿ ಮುಂದಿನ ಪೀಳಿಗೆಗೆ ಉಳಿಸಲು ಸಾಧ್ಯ ಎಂದರು.

ಬೆಳ್ತಂಗಡಿ ಶಾಸಕ ಹರೀಶ್ ಪೂಂಜ ಮಾತನಾಡಿ, ಪಂಢರಾಪುರದ ವಿಠಲ ಕ್ಷೇತ್ರಕ್ಕೆ ಬಂದು ಭಕ್ತ ವೃಂದದ ಮೂಲಕ ಶಕ್ತಿ ನೀಡುವ ಕಾರ್ಯ ಆಗಿದೆ. ಇದರಿಂದ ಹಿಂದೂ ಸಂಸ್ಕೃತಿ, ಸಂಸ್ಕಾರ ಉಳಿಯಲು ಸಾಧ್ಯ. ಹಿಂದೂ ಸಮಾಜಕ್ಕೆ ಇಲ್ಲಿ ನಡೆಯುವ ಪಾರಾಯಣ ಸಪ್ತಾಹ ಒಂದು ದೊಡ್ಡ ಯಜ್ಞವಾಗಿದೆ. ನಮಗೂ ಪಂಡರಾಪುರದ ಭಕ್ತರೊಂದಿಗೆ ಸೇರುವ ಅವಕಾಶ ಸಿಕ್ಕಿದೆ ಎಂದರು.

ವಿಧಾನ ಪರಿಷತ್ ಸದಸ್ಯ ಪ್ರತಾಪಸಿಂಹ ನಾಯಕ್ ಮಾತನಾಡಿ, ದೇವರ ಎದುರು ಎಲ್ಲರೂ ಸಮಾನರು ಅಧಿಕ ಮಾಸದ ನಿಮಿತ್ತ ಮಾಡಿರುವ ಪಾರಾಯಣ ಎಲ್ಲರಲ್ಲಿ ಭಕ್ತಿಯನ್ನು ತೋರಿಸುತ್ತದೆ. ಪಂಢರಾಪುರ ಕ್ಷೇತ್ರ ಪವಿತ್ರ ಕ್ಷೇತ್ರ, ಸನಾತನ ಪರಂಪರೆಯನ್ನು ಉಳಿಸಲು ಪಾರಾಯಣದಿಂದ ಸಾಧ್ಯ ಎಂದು ಹೇಳಿದರು.

ಗುರುದೇವ ಮಠದ ಟ್ರಸ್ಟಿ ಸುಜಿತಾ ವಿ. ಬಂಗೇರ, ತುಕಾರಾಮ ಸಾಲಿಯಾನ್ ಆರ್ಲ, ಕೃಷ್ಣಪ್ಪ ಗುಡಿಗಾರ್, ನಾನಾ ಮಠಗಳ ಸ್ವಾಮೀಜಿಗಳಾದ ಶ್ರೀ ಚೈತನ್ಯ ಸದ್ಗುರು ಹರಿಪ್ರಸಾದ ಮಹಾರಾಜ್, ಶ್ರೀ ಚೈತನ್ಯ ಸದ್ಗುರು ಗೋಪಾಲ ಕಾಕಾ ಮಹಾರಾಜ್, ಹಿರೇಮಠದ ಡಾ. ಕಲ್ಲೇಶ್ವರ ಮಹಾಸ್ವಾಮೀಜಿ, ದಾದಾನಹಿ ಶಿವಾನಂದ ಮಠದ ಶ್ರೀ ನಿಜಾನಂದ ಸ್ವಾಮೀಜಿ, ವೀರಾನಂದ ಆಶ್ರಮದ ಚೆನ್ನಮಲ್ಲಯ್ಯ ಸ್ವಾಮೀಜಿ, ವೀರಮಲ್ಲೇಶ್ವರ ಸ್ವಾಮೀಜಿ, ಬಸವರಾಜ್ ಸ್ವಾಮೀಜಿ ಅಂದ್ರಲಾ, ಸ್ವಾಮಿ ಬೋಳಗಿರಿ ಉಪಸ್ಥಿತರಿದ್ದರು. ಪಂಢರಾಪುರ ಶಿವೂರಕರ ಸಂಸ್ಥೆ ವತಿಯಿಂದ ಶ್ರೀ ಗ್ರಂಥರಾಜ ಜ್ಞಾನೇಶ್ವರಿ ಗ್ರಂಥವನ್ನು ಸ್ವಾಮೀಜಿ ಬಿಡುಗಡೆಗೊಳಿಸಿದರು.

ಅಧಿಕ ಮಾಸ ಪಾರಾಯಣ ಸೇವಾ ಸಮಿತಿ ಅಧ್ಯಕ್ಷ ಆರ್. ಟಿ. ಪಾಟೀಲ್ ಧ್ವಜಾರೋಹಣ ನೆರವೇರಿಸಿದರು.

ಅಧಿಕಮಾಸ ಪಾರಾಯಣ ಸೇವಾ ಸಮಿತಿಯ ಉಪಾಧ್ಯಕ್ಷ ರಮೇಶ ಪಾ. ಅರಕೇರಿ ಸ್ವಾಗತಿಸಿ, ಸದಸ್ಯ ಭೀಮ್ ಸಿಂಗ್ ವಿ. ರಜಪುತ ವಿಜಯಪುರ ಕಾರ್ಯಕ್ರಮ ನಿರೂಪಿಸಿದರು.

ಶ್ರೀರಾಮ ಕ್ಷೇತ್ರದಲ್ಲಿ 7 ದಿನಗಳ ಕಾಲ ಅಖಂಡ ಹರಿನಾಮ ಸಪ್ತಾಹ ಪಂಢರಾಪುರ ಅಧಿಕ ಮಾಸ ಪಾರಾಯಣ ಸಮಿತಿಯ 1008 ಸದಸ್ಯರಿಂದ ನಡೆಯಲಿದೆ.

ಕೆಎಸ್‌ಆರ್‌ಟಿಸಿ ಆರ್ಡಿನರಿ ಬಸ್‌ಗಳಲ್ಲಿ ಮಾತ್ರ ಮಹಿಳೆಯರಿಗೆ ಉಚಿತ ಪ್ರಯಾಣ



• **ಕಾಸರಗೋಡು:** ಕೇರಳದಲ್ಲಿ ಕೆಎಸ್‌ಆರ್‌ಟಿಸಿ ಬಸ್‌ಗಳಲ್ಲಿ ಮಹಿಳೆಯರಿಗೆ ಘೋಷಿಸಲಾದ ಉಚಿತ ಪ್ರಯಾಣ ಯೋಜನೆಯನ್ನು ಮೊದಲ ಹಂತದಲ್ಲಿ ಸಾಮಾನ್ಯ ಸೇವೆಗಳ ಅಂದರೆ ಆರ್ಡಿನರಿ ಬಸ್‌ಗಳಲ್ಲಿ ಮಾತ್ರ ಜಾರಿಗೆ ತರಲಾಗುವುದು ಎಂದು ಐಕ್ಯರಂಗ ಸರಕಾರವು ತಿಳಿಸಿದೆ.

ಯೋಜನೆಯ ಅನುಷ್ಠಾನಕ್ಕೆ ಸಂಬಂಧಿಸಿದ ಸಮಸ್ಯೆಗಳನ್ನು ಮೌಲ್ಯಮಾಪನ ನಡೆಸಲು ಮತ್ತು ಅಂತಿಮ ನಿರ್ಧಾರಗಳನ್ನು ತೆಗೆದುಕೊಳ್ಳಲು ಸಾರಿಗೆ ಸಚಿವ ಸಿ.ಪಿ.ಜೋನ್ ಅವರು ಮುಖ್ಯಮಂತ್ರಿ ವಿ.ಡಿ.ಸತೀಶನ್ ಅವರೊಂದಿಗೆ ನಿರ್ಣಾಯಕ ಚರ್ಚೆ ನಡೆಸಿದ್ದಾರೆ. ಕಾಸರಗೋಡು ಜಿಲ್ಲೆಯೂ ಸಹಿತ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಆರ್ಡಿನರಿ ಬಸ್‌ಗಳಲ್ಲಿ ಮಾತ್ರ ಉಚಿತ ಪ್ರಯಾಣಕ್ಕೆ ಅವಕಾಶ ನೀಡುವ ಮೂಲಕ ಯೋಜನೆಯ ಪ್ರಾಯೋಗಿಕ ಮತ್ತು ಆರ್ಥಿಕ ಅಂಶಗಳನ್ನು 100 ದಿನಗಳ ವರೆಗೆ ಸಮಗ್ರವಾಗಿ ಅಧ್ಯಯನ ನಡೆಸುವುದು ಪ್ರಥಮ ಹಂತದ ವ್ಯವಸ್ಥೆಯಾಗಿದೆ.

ಮೌಲ್ಯಮಾಪನಗಳ ನಂತರ ಇನ್ನಷ್ಟು ಬಸ್‌ಗಳಲ್ಲಿ ಯೋಜನೆಯಲ್ಲಿ ಸೇರ್ಪಡೆಗೊಳಿಸುವ ಮೂಲಕ ಯೋಜನೆಯ ಎರಡನೇ ಹಂತವನ್ನು ಜಾರಿಗೆ ತರಲಾಗುವುದು. ಹಿಂದಿನ ಸಚಿವ ಸಂಪುಟ ಸಭೆಗಳಲ್ಲಿ ಈ ಯೋಜನೆಯ ವ್ಯಾಪ್ತಿಯನ್ನು ಅಂತಿಮಗೊಳಿಸಲಾಗಿಲ್ಲ. ಇದೀಗ ಸಾರಿಗೆ ಇಲಾಖೆ ಆರಂಭದಲ್ಲಿ ಮೊದಲ ಹಂತವನ್ನು ಆರ್ಡಿನರಿ ಬಸ್‌ಗಳಿಗೆ ಮಾತ್ರ ಸೀಮಿತಗೊಳಿಸಲು ನಿರ್ಧರಿಸಿದೆ.

ಈ ರೀತಿಯಾಗಿ ಕೆಎಸ್‌ಆರ್‌ಟಿಸಿಗೆ ತಗಲುವ ಆದಾಯ ನಷ್ಟವನ್ನು ಸರಿದೂಗಿಸಲು ಸರಕಾರವು ತಿಂಗಳಿಗೆ ಕೇವಲ 57 ಕೋಟಿ ರೂ.ಗಳನ್ನು ಮಾತ್ರ ನಿಗದಿಪಡಿಸಬೇಕಾಗುತ್ತದೆ. ಮೊದಲ ಹಂತವನ್ನು ಅನುಷ್ಠಾನಗೊಳಿಸಿದ ನಂತರ ಸರಕಾರವು 100 ದಿನಗಳ ವರೆಗೆ ಅದರ ಕಾರ್ಯಸಾಧ್ಯತೆ ಮತ್ತು ಆರ್ಥಿಕ ಪರಿಣಾಮಗಳ ಕುರಿತು ಸಮಗ್ರವಾದ ಅಧ್ಯಯನವನ್ನು ನಡೆಸಲಿದೆ ಎಂದು ಸಾರಿಗೆ ಇಲಾಖೆ ತಿಳಿಸಿದೆ.

ಈ 100 ದಿನಗಳ ಅಧ್ಯಯನದ ನಂತರ ಯೋಜನೆಯ ಎರಡನೇ ಹಂತವನ್ನು ಹೆಚ್ಚಿನ ಬಸ್‌ಗಳನ್ನು ಒಳಗೊಂಡಂತೆ ಬದಲಾವಣೆಗಳೊಂದಿಗೆ ಜಾರಿಗೆ ತರಲಾಗುತ್ತದೆ. ಕಾಸರಗೋಡು ಸೇರಿದಂತೆ ಉತ್ತರದ ಜಿಲ್ಲೆಗಳಲ್ಲಿ ಸಾಮಾನ್ಯ ಬಸ್‌ಗಳಲ್ಲಿ ಮಾತ್ರ ಉಚಿತ ಪ್ರಯಾಣಕ್ಕೆ ಅವಕಾಶ ನೀಡುವುದರಿಂದ ಹೆಚ್ಚಿನ ಪ್ರಯೋಜನವಾಗುವುದಿಲ್ಲ ಎಂಬ ದೂರುಗಳು ಈಗಾಗಲೇ ಬಂದಿವೆ. ಈ ಜಿಲ್ಲೆಗಳಲ್ಲಿ ಮಹಿಳೆಯರಿಗೆ ಯೋಜನೆಯ ಸಂಪೂರ್ಣ ಪ್ರಯೋಜನ ದೊರೆಯುವಂತೆ ಮಾಡಲು ಆರ್ಡಿನರಿ ಬಸ್‌ಗಳ ಕೊರತೆಯಿರುವ ಪ್ರದೇಶಗಳಲ್ಲಿ ಫಾಸ್ಟ್ ಪ್ಯಾಸೆಂಜರ್ ಬಸ್‌ಗಳಲ್ಲಿ ಉಚಿತ ಪ್ರಯಾಣಕ್ಕೆ ಬಲವಾದ ಬೇಡಿಕೆಯಿದೆ.

ಸಾರಿಗೆ ಸಚಿವರು ಮುಖ್ಯಮಂತ್ರಿಯೊಂದಿಗಿನ ಚರ್ಚೆಯಲ್ಲಿ ಈ ವಿಷಯಗಳನ್ನು ಮಂಡಿಸಿ ಯೋಜನೆಯನ್ನು ಅನುಷ್ಠಾನಗೊಳಿಸುವಾಗ ಸರಕಾರವು ಕೇರಳ ಹಣಕಾಸು ನಿಗಮ (ಕೆಫ್‌ಸಿ) ಮೂಲಕ ಕೆಎಸ್‌ಆರ್‌ಟಿಸಿಗೆ ಪಾವತಿಸಬೇಕಾದ ಮೊತ್ತವನ್ನು ಸಾಲವಾಗಿ ಒದಗಿಸಲು ತೀರ್ಮಾನಿಸಲಾಗಿದೆ. ಸಾಲದ ಬಡ್ಡಿದರ ಮತ್ತು ನಿಯಮಗಳನ್ನು ನಿರ್ಧರಿಸಲು ಕೆಫ್‌ಸಿ ಪ್ರತಿನಿಧಿಗಳು ಮುಂದಿನ ಸಭೆಯಲ್ಲಿ ಭಾಗವಹಿಸಲಿದ್ದಾರೆ. ಜೂ.10ರಂದು ನಡೆಯಲಿರುವ ಸಚಿವ ಸಂಪುಟ ಸಭೆಯಲ್ಲಿ ಈ ವಿಷಯದ ಬಗ್ಗೆ ಅಂತಿಮ ನಿರ್ಧಾರ ಕೈಗೊಳ್ಳುವ ಗುರಿಯನ್ನು ರಾಜ್ಯ ಸರಕಾರ ಹೊಂದಿದೆ. ಚರ್ಚೆಗಳಲ್ಲಿ ತೆಗೆದುಕೊಂಡ ನಿರ್ಧಾರಗಳನ್ನು ಸೇರಿಸಿಕೊಂಡು ಆದೇಶ ಹೊರಡಿಸಲಾಗುವುದು ಎಂದು ಸರಕಾರವು ಮಾಹಿತಿ ನೀಡಿದೆ.

ಬಿಲ್ಲವ ಸಮಾಜದ ಕುರಿತು ಅವಹೇಳನಕಾರಿ ಪದ ಬಳಕೆ: ಕ್ರಮಕ್ಕೆ ಆಗ್ರಹಿಸಿ ಮನವಿ



• **ಬಂಟ್ವಾಳ:** ಸಾಮಾಜಿಕ ಜಾಲತಾಣದಲ್ಲಿ ಬಿಲ್ಲವ ಸಮಾಜದ ಕುರಿತು ಕೀಳಾಗಿ ಮಾತನಾಡಿರುವ ಜತೆಗೆ ಅವಹೇಳನಕಾರಿ ಪದ ಬಳಕೆ ಮಾಡಿರುವ ಮಹಿಳೆಯ ವಿರುದ್ಧ ಸೂಕ್ತ ಕಾನೂನು ಕ್ರಮಕ್ಕೆ ಆಗ್ರಹಿಸಿ ಬಂಟ್ವಾಳ ತಾಲೂಕು ಬಿಲ್ಲವ ಸಮಾಜ ಸೇವಾ ಸಂಘ ಹಾಗೂ ವಿವಿಧ ಬಿಲ್ಲವ ಸಂಘಟನೆಗಳು ಒಟ್ಟಾಗಿ ಸೋಮವಾರ ಬಂಟ್ವಾಳ ತಹಸೀಲ್ದಾರ್ ಮತ್ತು ಬಂಟ್ವಾಳ ಉಪವಿಭಾಗದ ಎಎಸ್ಪಿ ಕಚೇರಿಗೆ ತೆರಳಿ ಮನವಿ ಸಲ್ಲಿಸಿತು.

ಬಂಟ್ವಾಳ ತಾಲೂಕು ಬಿಲ್ಲವ ಸಮಾಜ ಸೇವಾ ಸಂಘದ ಅಧ್ಯಕ್ಷ ಭುವನೇಶ್ ಪಚಿನಡ್ಕ ನೇತೃತ್ವದಲ್ಲಿ ತಾಲೂಕಿನ ವಿವಿಧ ಬಿಲ್ಲವ ಸಂಘಗಳ ಪದಾಧಿಕಾರಿಗಳು, ಪ್ರಮುಖರ ಉಪಸ್ಥಿತಿಯಲ್ಲಿ ತಾಲೂಕು ಕಚೇರಿಯಲ್ಲಿ ಸಂಘದ ಮಾಜಿ ಅಧ್ಯಕ್ಷ ಹರಿಕೃಷ್ಣ ಬಂಟ್ವಾಳ ಖಂಡನಾ ನಿರ್ಣಯದ ಹಕ್ಕೊತ್ತಾಯ ಮಂಡಿಸಿದರು.

ಬಳಿಕ ಬಂಟ್ವಾಳ ತಹಸೀಲ್ದಾರ್ ಮಂಜುನಾಥ್ ಅವರಿಗೆ ಮನವಿ ನೀಡಲಾಯಿತು. ತದನಂತರ ಬಂಟ್ವಾಳ ಉಪವಿಭಾಗದ ಸಹಾಯಕ ಪೊಲೀಸ್ ಅಧಿಕಾರಿ ಯಶ್ ಕುಮಾರ್ ಶರ್ಮಾ ಅವರಿಗೂ ಮನವಿ ನೀಡಲಾಯಿತು.

ಈ ಸಂದರ್ಭ ಬೂಡದ ಅಧ್ಯಕ್ಷ ಬೇಬಿ ಕುಂದರ್, ಸಂಘದ ಮಾಜಿ ಅಧ್ಯಕ್ಷರಾದ ರಾಮಪ್ಪ ಪೂಜಾರಿ, ಸಂಜೀವ ಪೂಜಾರಿ ಗುರುಕೃಪಾ, ಉಪಾಧ್ಯಕ್ಷ ಜಯಪ್ರಕಾಶ್ ಜೆ ಎಸ್, ಪ್ರಧಾನ ಕಾರ್ಯದರ್ಶಿ ಶ್ರೀನಿವಾಸ್ ಪೂಜಾರಿ ಮೆಲ್ಕಾರ್, ಜತೆ ಕಾರ್ಯದರ್ಶಿ ಆನಂದ ಸಾಲ್ಯಾನ್, ಕೋಶಾಧಿಕಾರಿ ಸುನೀಲ್ ಕುಂದರ್, ಲೆಕ್ಕಪರಿಶೋಧಕ ಪ್ರಶಾಂತ್ ಕೋಟ್ಯಾನ್. ಯುವವಾಹಿನಿ ಬಂಟ್ವಾಳ ಘಟಕದ ನಿಯೋಜಿತ ಅಧ್ಯಕ್ಷ ಕಿರಣ್ ರಾಜ್ ಪೂಂಜೆರೆಕೋಡಿ, ತಾಲೂಕು ಮಹಿಳಾ ಸಮಿತಿ ಅಧ್ಯಕ್ಷೆ ರಾಗಿಣಿ ಮಾಧವ, ಉದ್ಯಮಿ ಪ್ರಕಾಶ್ ಅಂಚನ್, ಕಾರಿಂಜ ಕ್ಷೇತ್ರದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ವೀರೇಂದ್ರ ಅಮೀನ್, ಸಿದ್ಧಕಟ್ಟೆ ಬಿಲ್ಲವ ಸಂಘದ ಅಧ್ಯಕ್ಷ ಕಿರಣ್ ಕುಮಾರ್ ಮಂಜಿಲ ಹಾಗೂ ತಾಲೂಕಿನ ವಿವಿಧ ಬಿಲ್ಲವ ಸಂಘದ ಪದಾಧಿಕಾರಿಗಳು ಉಪಸ್ಥಿತರಿದ್ದರು. ದಿನೇಶ್ ಸುವರ್ಣ ರಾಯಿ ನಿರ್ವಹಿಸಿದರು.

ವೆನ್‌ಲಾಕ್‌ನಲ್ಲಿ ಅಪರಿಚಿತ ಶವ

• **ಮಂಗಳೂರು:** ಜಿಲ್ಲಾಸ್ಪತ್ರೆ ವೆನ್‌ಲಾಕ್‌ನ ಶವಾಗಾರದಲ್ಲಿ 24 ವರ್ಷ ಪ್ರಾಯದ ಜುಲೇಖಾ ಖಿತುನ್ ಎಂಬ ಮಹಿಳೆಯ ಶವವಿದ್ದು ಸಂಬಂಧಪಟ್ಟವರು ಗುರುತು ಚೀಟಿ ತೋರಿಸಿ ಪಡೆಯಬಹುದು. ಯಾರೂ ಬಾರದಿದ್ದಲ್ಲಿ ಶವವನ್ನು ಸೂಕ್ತ ರೀತಿಯಲ್ಲಿ ವಿಲೇವಾರಿ ಮಾಡಲಾಗುವುದು ಎಂದು ಆಸ್ಪತ್ರೆಯ ಅಧೀಕ್ಷಕರು ತಿಳಿಸಿದ್ದಾರೆ.



ನಾಳೆ ವಿದ್ಯುತ್ ವ್ಯತ್ಯಯ

• **ಮಂಗಳೂರು:** ಜೂ.10ರಂದು ಬೆಳಗ್ಗೆ 10ರಿಂದ ಸಂಜೆ 5 ಗಂಟೆಯವರೆಗೆ ತುರ್ತು ನಿರ್ವಹಣೆ ಕಾಮಗಾರಿಗಳನ್ನು ಹಮ್ಮಿಕೊಂಡಿರುವುದರಿಂದ, ವಿವೇಕನಗರ, ಶ್ರೀದೇವಿ ಕಾಲೇಜ್ ರಸ್ತೆ ಕೆಎಸ್‌ಆರ್‌ಟಿಸಿ, ಸಿಜಿ ಕಾಮತ್ ರಸ್ತೆ ಜೈಲ್ ರಸ್ತೆ ಎಂ.ಜಿ ರಸ್ತೆ ಲಾಲ್ ಬಾಗ್ ರಸ್ತೆ ಬಲ್ಲಾಳ್‌ಬಾಗ್, ಮಾನಸ ಟವರ್ ಎದುರು, ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ನಿಲುಗಡೆ ಮಾಡಲಾಗುತ್ತದೆ.

ಪುತ್ತೂರು ಮಾರುಕಟ್ಟೆ ಧಾರಣೆ

08-06-2026 ಅಡಿಕೆ ಧಾರಣೆ ಕೆ.ಜಿ.ಗೆ

ಹೊಸ ಅಡಿಕೆ	:	420 - 470
ಚೋಲ್ ಅಡಿಕೆ	:	525 - 550
ಡಬಲ್ ಚೋಲ್	:	525 - 550
ಹೊಸ ಪಟೋರ	:	340 - 390
ಹಳೆ ಪಟೋರ	:	360 - 390
ಹೊಸ ಉಳ್ಳಿ	:	140 - 285
ಹಳೆ ಉಳ್ಳಿ	:	130 - 285
ಹೊಸ ಕೋಕಾ	:	315 - 335
ಹಳೆ ಕೋಕಾ	:	315 - 335
ಹೊಸ ಕರಿಗೋಟು	:	245 - 275
ಹಳೆ ಕರಿಗೋಟು	:	245 - 275
ಹಸಿ ಕೊಕ್ಕೋ	:	70 - 105
ಒಣ ಕೊಕ್ಕೋ	:	270 - 320

ಕಾಳುಮೆಣಸು ಧಾರಣೆ

ಕಾಳುಮೆಣಸು	:	450 - 665

ರಬ್ಬರ್ ಧಾರಣೆ : ಗ್ರೇಡ್

ಆರ್‌ಎಸ್‌ಎಸ್ 1	-	260.50
ಆರ್‌ಎಸ್‌ಎಸ್ 2	-	211.00
ಸ್ಕ್ರಾಪ್ 1	-	151.00
ಸ್ಕ್ರಾಪ್ 2	-	140.00

ಕೇರಳ ರಾಜ್ಯ ಲಾಟರಿ ಫಲಿತಾಂಶ ವಿವರ ಪ್ರಕಟ

ತಿರುವನಂತಪುರಂ: ಕೇರಳ ರಾಜ್ಯ ಲಾಟರಿಯ ಭಾಗ್ಯತಾರ (ನಂ.BT-57) ಡ್ರಾ ಜೂನ್ 08ರಂದು ತಿರುವನಂತಪುರಂನ ಬೇಕರಿ ಜಂಕ್ಷನ್ ಬಳಿಯ ಗೋರ್ಕಿ ಭವನದಲ್ಲಿ ನಡೆದಿದ್ದು, ಫಲಿತಾಂಶ ವಿವರ ಇಂತಿದೆ.

1st Prize Rs.1,00,00,000/- [1 Crore]
BE 603224 (IDUKKI)
Consolation Prize Rs.5,000/-
BA 603224 BB 603224 BC 603224 BD 603224
BF 603224 BG 603224 BH 603224 BJ 603224
BK 603224 BL 603224 BM 603224
2nd Prize Rs.30,00,000/- [30 Lakhs]
BL 523669 (CHERTHALA)
3rd Prize Rs.5,00,000/- [5 Lakhs]
BJ 743869 (THAMARASSERY)

FOR THE TICKETS ENDING WITH THE FOLLOWING NUMBERS

4th Prize Rs.5,000/-
0107 0631 1129 1164 1176 2622 3020 3492 3593 4958
6949 6971 7272 7740 7859 7975 8231 9503 9683
5th Prize Rs.2,000/-
0162 1533 4340 5269 6580 7227
6th Prize Rs.1,000/-
0114 1476 1718 2225 2272 2487 2755 3585 3685 3777
4771 5459 6030 6303 6393 6632 7381 7691 7844 7936
8271 9470 9829 9913 9943
7th Prize Rs.500/-
0091 0123 0149 0281 0298 0670 0702 0910 0992 1036
1391 1508 1699 2256 2506 2509 3551 3723 4029 4258
4290 4296 4463 4622 4643 4727 4740 4857 4946 5049
5202 5281 5448 5526 5573 5620 5816 6009 6021 6108
6131 6242 6312 6403 6461 6643 7029 7034 7067 7189
7329 7385 7597 7625 7648 7703 7846 7858 7921 8051
8120 8146 8320 8353 8458 8482 8802 8921 9195 9301
9571 9592 9713 9756 9888 9910
8th Prize Rs.200/-
0220 0410 0725 0767 0828 0839 0860 0972 1029 1089
1125 1141 1207 1412 1486 1575 1828 1969 2047 2069
2085 2093 2106 2250 2455 2542 2738 2860 2897 2907
3091 3141 3204 3294 3314 3343 3382 3415 3473 3649
3717 3819 3987 4018 4206 4280 4370 4559 4598 4935
4959 5126 5256 5302 5391 5634 5716 5775 5908 6206
6262 6544 6613 6792 6794 6842 6899 7154 7275 7456
7530 7582 7656 7673 7960 7986 8136 8169 8251 8414
8530 8648 8692 9050 9114 9182 9309 9416 9467 9481
9500 9712 9837 9940
9th Prize Rs.100/-
0283 0471 0503 0717 0741 0794 0849 0906 0909 0967
0970 0971 0996 1033 1056 1137 1256 1346 1384 1482
1511 1604 1609 1653 1664 1785 1822 1991 2035 2275
2362 2371 2380 2417 2458 2470 2527 2672 2681 2696
2705 2913 2970 2985 3038 3063 3110 3257 3316 3459
3498 3582 3762 3845 3872 3942 4001 4056 4191 4275
4307 4511 4529 4614 4658 4675 4688 4692 4730 4805
4976 5087 5169 5227 5288 5453 5531 5555 5633 5743
5754 5829 5886 5905 5930 5982 6036 6169 6178 6252
6361 6464 6483 6517 6581 6721 6754 6799 6901 6992
7070 7101 7191 7221 7225 7240 7292 7314 7394 7425
7563 7718 7935 8022 8046 8148 8218 8243 8266 8354
8365 8515 8533 8559 8607 8608 8690 8712 8811 8830
8841 8847 8990 9004 9044 9209 9261 9415 9513 9605
9627 9629 9703 9763

ಕಿರುಸುದ್ದಿ

ಜಿಲ್ಲಾ ಉಸ್ತುವಾರಿ ಸಚಿವರ ವೈಫಲ್ಯ ಮರೆಮಾಚಲು ಟೀಕೆ : ಬಾಲಕೃಷ್ಣ ಶೆಟ್ಟಿ

ಉಡುಪಿ: ಸರ್ವೀಸ್ ಬಸ್ ನಿಲ್ದಾಣದಲ್ಲಿ ನೀರು ಸೋರುತ್ತಿರುವ ಬಗ್ಗೆ ತಮ್ಮದೇ ಪಕ್ಷದ ರಾಜ್ಯ ಸರ್ಕಾರ ಹಾಗೂ ಅತಿಥಿಯಾಗಿ ಜಿಲ್ಲೆಗೆ ಆಗಮಿಸುತ್ತಿದ್ದ ಜಿಲ್ಲಾ ಉಸ್ತುವಾರಿ ಸಚಿವರ ವೈಫಲ್ಯ ಮರೆಮಾಚಲು ಉಡುಪಿ ಶಾಸಕರ ವಿರುದ್ಧ ಹತಾಶರಾಗಿ ರಾಜಕೀಯ ಪ್ರೇರಿತ ಟೀಕೆಗೆ ಪ್ರಸಾದ್ ರಾಜ್ ಕಾಂಚನ್ ಮುಂದಾಗಿದ್ದಾರೆ ಎಂದು ನಗರಸಭೆ ಮಾಜಿ ಸದಸ್ಯ ಬಾಲಕೃಷ್ಣ ಶೆಟ್ಟಿ ವ್ಯಂಗ್ಯವಾಡಿದ್ದಾರೆ. ಉಡುಪಿ ಬಸ್ ನಿಲ್ದಾಣ ಸೋರುತ್ತಿರುವುದು ರಾಜ್ಯ ಸರ್ಕಾರದ ಆರ್ಥಿಕ ದಿವಾಳಿಗೆ ಕೈಗನ್ನಡಿಯಾಗಿದ್ದು, ರಾಜ್ಯ ಸರಕಾರ ನಿರಂತರವಾಗಿ ಉಡುಪಿ ಜಿಲ್ಲೆಯನ್ನು ಕಳೆದ ಮೂರು ವರ್ಷಗಳಿಂದ ನಿರಂತರವಾಗಿ ನಿರ್ಲಕ್ಷ್ಯ ಮಾಡುತ್ತಿದ್ದರೂ ಚಕಾರ ಎತ್ತದ ಪ್ರಸಾದ್ ಕಾಂಚನ್ ಇದೀಗ ಬಸ್ ನಿಲ್ದಾಣದ ವಿಚಾರ ಚಿಲ್ಲರೆ ರಾಜಕಾರಣ ಮಾಡಲು ಹೋಗಿ ನಗೆಪಾಟಲಿಗೀಡಾಗಿದ್ದಾರೆ. ಉಡುಪಿಯ ಪ್ರಜ್ಞಾವಂತ ಜನತೆ ಅನನುಭವಿ, ಕಾಂಗ್ರೆಸ್ ಪಕ್ಷದಲ್ಲಿಯೇ ಮೂಲೆಗುಂಪಾಗಿರುವ ಪ್ರಸಾದ್ ಕಾಂಚನ್ ಹೇಳಿಕೆಯನ್ನು ಗಂಭೀರವಾಗಿ ಪರಿಗಣಿಸುವುದಿಲ್ಲ. ಇದೇ ರೀತಿ ಪ್ರಸಾದ್ ಕಾಂಚನ್ ತನ್ನ ಬಿಟ್ಟಿ ಪ್ರಚಾರಕ್ಕಾಗಿ ಇಂತಹ ಹೇಳಿಕೆ ಮುಂಬರುವ ದಿನಗಳಲ್ಲಿ ಅವರಿಗೆ ಮುಳುವಾಗಲಿದೆ ಎಂದು ಬಾಲಕೃಷ್ಣ ಶೆಟ್ಟಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಯುವವಾಹಿನಿ ಬಂಟ್ವಾಳ ಘಟಕದ ವಾರ್ಷಿಕ ಮಹಾಸಭೆ

ಬಂಟ್ವಾಳ: ಯುವವಾಹಿನಿ ಬಂಟ್ವಾಳ ಘಟಕದ 2025–26ನೇ ಸಾಲಿನ ವಾರ್ಷಿಕ ಮಹಾಸಭೆಯು ಭಾನುವಾರ ಬಿ.ಸಿ.ರೋಡ್‌ನ ಬ್ರಹ್ಮಶ್ರೀ ನಾರಾಯಣಗುರು ಸಭಾಭವನದಲ್ಲಿ ನಡೆಯಿತು. ಘಟಕದ ಅಧ್ಯಕ್ಷ ನಾಗೇಶ್ ಪೂಜಾರಿ ನೈಬೇಲು ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಕಾರ್ಯದರ್ಶಿ ಮಧುಸೂದನ್ ಮದ್ವ ವಾರ್ಷಿಕ ವರದಿಯನ್ನು ಮಂಡಿಸಿದರು. ಕೋಶಾಧಿಕಾರಿ ನವೀನ್ ಪೂಜಾರಿ ವಾರ್ಷಿಕ ಲೆಕ್ಕಪತ್ರವನ್ನು ಮಂಡಿಸಿದರು. ನಿಕಟಪೂರ್ವ ಅಧ್ಯಕ್ಷ ದಿನೇಶ್ ಸುವರ್ಣ ರಾಯಿ ಅವರು 2026–27ನೇ ಸಾಲಿನ ನೂತನ ಕಾರ್ಯಕಾರಿ ಸಮಿತಿಯನ್ನು ಘೋಷಿಸಿದರು. ನೂತನ ಅಧ್ಯಕ್ಷರಾಗಿ ಆಯ್ಕೆಯಾದ ಕಿರಣ್ ರಾಜ್ ಪೂಂಜರೆಕೋಡಿ ಮಾತನಾಡಿ, ಸದಸ್ಯರ ಸಹಕಾರ ಹಾಗೂ ಮಾರ್ಗದರ್ಶನದೊಂದಿಗೆ ಸಂಘಟನೆಯನ್ನು ಮತ್ತಷ್ಟು ಬಲಪಡಿಸಿ ಮುನ್ನಡೆಸುವ ವಿಶ್ವಾಸ ವ್ಯಕ್ತಪಡಿಸಿದರು. ವೇದಿಕೆಯಲ್ಲಿ ಎರಡನೇ ಉಪಾಧ್ಯಕ್ಷ ನಿಕೇಶ್ ಕೋಟ್ಯಾನ್, ಸಲಹೆಗಾರರಾದ ಅಣ್ಣು ಪೂಜಾರಿ ಹಾಗೂ ರಾಮಚಂದ್ರ ಸುವರ್ಣ ಉಪಸ್ಥಿತರಿದ್ದರು. ಜತೆ ಕಾರ್ಯದರ್ಶಿ ಲೋಹಿತ್ ಕನಪಾದೆ ವಂದಿಸಿದರು.

ವರ್ಷಕ್ಕೊಮ್ಮೆ ಆರೋಗ್ಯ ತಪಾಸಣೆ ಅಗತ್ಯ: ಡಾ.ರೋಸ್ಲಿ

ಸುಬ್ರಹ್ಮಣ್ಯ: ಉತ್ತಮವಾದ ಸಮಾಜ ನಿರ್ಮಾಣಕ್ಕೆ ಉತ್ತಮವಾದ ಆರೋಗ್ಯ ಮುಖ್ಯ. ವರ್ಷಕ್ಕೊಮ್ಮೆಯಾದರೂ ಪ್ರತಿಯೊಬ್ಬರು ಆರೋಗ್ಯ ತಪಾಸಣೆ ಮಾಡುವುದು ಒಳಿತು. ಆರೋಗ್ಯ ಹದಗೆಟ್ಟರೆ ಮಾನಸಿಕ ನೆಮ್ಮದಿ ಕೂಡ ಇರುವುದಿಲ್ಲ. ಉತ್ತಮ ಆರೋಗ್ಯ ಕಾಪಾಡಲು ತಜ್ಞ ವೈದ್ಯರ ಸಲಹೆ ಸೂಚನೆಗಳನ್ನು ಪಾಲಿಸಬೇಕು ಎಂದು ಖ್ಯಾತ ಸ್ತ್ರೀರೋಗ, ಮಕ್ಕಳ ತಜ್ಞೆ ಡಾ.ರೋಸ್ಲಿ ಹೇಳಿದರು. ಶ್ರೀ ಸುಬ್ರಹ್ಮಣ್ಯ ಮಠ ಎಜುಕೇಶನ್ ಸೊಸೈಟಿ ಆಡಳಿತದ ಬಿಳಿನೆಲೆ ಶ್ರೀ ಗೋಪಾಲಕೃಷ್ಣ ಪ್ರೌಢ ಶಾಲೆ ಹಾಗೂ ವೇದವ್ಯಾಸ ವಿದ್ಯಾಲಯಗಳ ಸಹಯೋಗದಲ್ಲಿ ವಿವಿಧ ಸಂಘ–ಸಂಸ್ಥೆಗಳ ಸಹಕಾರದೊಂದಿಗೆ ಕಡಬದ ಜೆ.ಎಂ.ಜೆ. ಆಸ್ಪತ್ರೆಯ ವತಿಯಿಂದ ಬಿಳಿನೆಲೆ ಶ್ರೀ ಗೋಪಾಲಕೃಷ್ಣ ಪ್ರೌಢ ಶಾಲೆಯಲ್ಲಿ ಸೋಮವಾರ ನಡೆದ ಮೆಗಾ ಹೆಲ್ತ್ ಕ್ಯಾಂಪ್ ಉದ್ಘಾಟಿಸಿ ಅವರು ಮಾತನಾಡಿದರು. ಜೆ.ಎಂ.ಜೆ. ಆಸ್ಪತ್ರೆಯ ಆಡಳಿತ ಅಧಿಕಾರಿ ಸಿಸ್ಟರ್ ಸಿಜಿ ಜಾರ್ಜ್ ಅಧ್ಯಕ್ಷತೆ ವಹಿಸಿದ್ದರು. ಜೆ.ಎಂ.ಜೆ. ಆಸ್ಪತ್ರೆಯ ವೈದ್ಯ ಡಾ. ವಿಕ್ರಂ ರಾವ್, ಆಡಳಿತ ಮಂಡಳಿ ಕಾರ್ಯದರ್ಶಿ ಶ್ರೀಕೃಷ್ಣಶರ್ಮ, ಗೋಪಾಲಕೃಷ್ಣ ಪ್ರೌಢ ಶಾಲೆಯ ಮುಖ್ಯ ಶಿಕ್ಷಕ ಸತ್ಯಶಂಕರ ಭಟ್, ವೇದವ್ಯಾಸ ವಿದ್ಯಾಲಯದ ಶಿಕ್ಷಕ–ರಕ್ಷಕ ಸಂಘದ ಅಧ್ಯಕ್ಷ ಕೇಶವ ಗೌಡ, ಮುಖ್ಯ ಗುರು ಪ್ರಶಾಂತ್ ಬಿ. ವೇದಿಕೆಯಲ್ಲಿದ್ದರು. ಶಿಕ್ಷಕ ವಿನೋದ್ ವಂದಿಸಿದರು. ಚಿತ್ರಕಲಾ ಅಧ್ಯಾಪಕ ದಿನೇಶ್ ಕುಂದರ್ ಕಾರ್ಯಕ್ರಮ ನಿರ್ವಹಿಸಿದರು.

ಜೂ. 10ರಂದು ಹಲವೆಡೆ ವಿದ್ಯುತ್ ವ್ಯತ್ಯಯ

ಮಂಗಳೂರು: ಜೂ. 10 ರಂದು ಬೆಳಿಗ್ಗೆ 10 ರಿಂದ ಸಂಜೆ 5 ಗಂಟೆಯವರೆಗೆ ತುರ್ತು ನಿರ್ವಹಣೆ ಕಾಮಗಾರಿಗಳನ್ನು ಹಮ್ಮಿಕೊಂಡಿರುವುದರಿಂದ, ಮರೋಳಿ, ಜಯನಗರ, ವಸಂತನಗರ, ಅಂಜಲೋರ್ ಚರ್ಚ್, ಅಡ್ಯಾರ್, ಅಡ್ಯಾರ್ ಕಟ್ಟೆ, ಅಡ್ಯಾರ್ ಪದವು, ವಳಚ್ಚಿಲ್, ವಳಚ್ಚಿಲ್ ಪದವು, ಅರ್ಕುಳ, ಮೇರೆಮಜಲು, ಮೇರ್ಲಪದವು, ತುಪ್ಪೆಕಲ್ಲು, ಕಣ್ಣೂರು, ಬಲ್ಲೂರು, ಕೊಡಕ್ಕಲ್ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ನಿಲುಗಡೆ ಮಾಡಲಾಗುತ್ತದೆ ಎಂದು ಮೆಸ್ಕಾಂ ಪ್ರಕಟಣೆ ತಿಳಿಸಿದೆ.



ರಾಜ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ನೂತನ ಸಚಿವರಾಗಿ ನೇಮಕಗೊಂಡ ಯು.ಟಿ. ಖಾದರ್ ಅವರನ್ನು ಕರ್ನಾಟಕ ಕೊಂಕಣಿ ಸಾಹಿತ್ಯ ಅಕಾಡೆಮಿ ವತಿಯಿಂದ ಗೌರವಿಸಿ, ಅಭಿನಂದಿಸಲಾಯಿತು. ಅಕಾಡೆಮಿ ಅಧ್ಯಕ್ಷ ಜೋಕಿಂ ಸ್ಟ್ಯಾನಿ ಆಲ್ವಾರಿಸ್ ಅವರು ಸಚಿವರನ್ನು ಅಭಿನಂದಿಸಿದರು. ಈ ಸಂದರ್ಭದಲ್ಲಿ ಅಕಾಡೆಮಿಯ ಸದಸ್ಯರಾದ ನವೀನ್ ಲೋಬೊ, ಸಮರ್ಥ್ ಭಟ್ ಉಪಸ್ಥಿತರಿದ್ದರು.

ಜೂ. 11: 'ಕಜ್ಜ' ತುಳು ಸಿನಿಮಾ ತೆರೆಗೆ

ಮಂಗಳೂರು: ಸುಮುಖ ಪ್ರೊಡಕ್ಷನ್ಸ್ ಲಾಂಛನದಲ್ಲಿ ಜಿಷ್ಣು ಎಸ್. ಮೆನನ್ ಮತ್ತು ಸಿದ್ದಾರ್ಥ್ ಶೆಟ್ಟಿ ನಿರ್ದೇಶನ, ವಿಶಾಂತ್ ಮಿನೆಜಸ್ ನಿರ್ಮಾಣದಲ್ಲಿ ತಯಾರಾದ 'ಕಜ್ಜ' ತುಳು ಸಿನಿಮಾ ಜೂನ್ 11 ರಂದು ಕರಾವಳಿ ಜಿಲ್ಲೆಯಾದ್ಯಂತ ತೆರೆ ಕಾಣಲಿದೆ ಎಂದು ಸಿನಿಮಾದ ನಿರ್ದೇಶಕ, ನಟ ಸಿದ್ದಾರ್ಥ್ ಶೆಟ್ಟಿ ತಿಳಿಸಿದರು.

'ಕಜ್ಜ' ಅಂದರೆ ತುಳುವಿನಲ್ಲಿ ಕಾರ್ಯ ಎಂದರ್ಥ. ಒಂದು ಒಳ್ಳೆಯ ಕಾರ್ಯವನ್ನು ಮಾಡಲು ನಾವೆಲ್ಲ ಒಂದಾಗಿದ್ದೇವೆ. ಹಿಂದಿನ ತುಡರ್ ಸಿನಿಮಾಕ್ಕೆ ನೀಡಿದಷ್ಟೇ ಪ್ರೋತ್ಸಾಹ, ಪ್ರೀತಿಯನ್ನು ಈ ಬಾರಿಯೂ ಕಜ್ಜ ಸಿನಿಮಾಕ್ಕೂ ನೀಡಿ ಎಂದು ಸೋಮವಾರ ಸುದ್ದಿಗೋಷ್ಠಿಯಲ್ಲಿ ಅವರು ವಿನಂತಿಸಿದರು.

ಕಜ್ಜ ಸಿನಿಮಾದಲ್ಲಿ ಸಿದ್ದಾರ್ಥ್ ಶೆಟ್ಟಿ, ಅರವಿಂದ ಬೋಳಾರ್, ಉಮೇಶ್ ಮಿಜಾರ್, ಜಯಶೀಲಾ, ಉದಯ ಪೂಜಾರಿ, ಶ್ವೇತಾ ಕೋಟ್ಯಾನ್, ಸಹನಾ ಸುಧಾಕರ್, ವೆನ್ಸಿಟಾ ಡಯಾಸ್, ಮೋಹನ್ ರಾಜ್, ಗೌತಮ್ ಬಂಗೇರ, ಪ್ರಜ್ವಲ್ ಬಂಬ್ರಾಣ, ಸುವರ್ಣ ಪೂಜಾರಿ, ಸವಿತಾ ಅಂಚನ್, ಶಾಹಿನ್ ಶೇಖ್, ಸನ್ನಿಧಿ ಶೆಟ್ಟಿ, ಪ್ರಜೋಶ್ ಅಭಿನಯಿಸಿದ್ದಾರೆ ಎಂದರು.

> ಕಜ್ಜ ತುಳು ಸಿನಿಮಾ ಮಂಗಳೂರು, ಸುರತ್ಕಲ್, ಪಡುಬಿದ್ರೆ, ಉಡುಪಿ, ಮಣಿಪಾಲ, ಕಾರ್ಕಳ ಕುಂದಾಪುರ, ಬೆಳ್ತಂಗಡಿ, ಸುಳ್ಯ, ಮುಡಿಪು ಮೊದಲಾದ ಕಡೆಗಳಲ್ಲಿ ತೆರೆಕಾಣಲಿದೆ.

ಜಿಷ್ಣು ಎಸ್ ಮೆನನ್ ಸಿದ್ದಾರ್ಥ್ ಶೆಟ್ಟಿ ನಿರ್ದೇಶನದ ಈ ಸಿನೆಮಾಕ್ಕೆ ವಿಶಾಂತ್ ಮಿನೆಜಸ್ ನಿರ್ಮಾಪಕರಾಗಿದ್ದಾರೆ. ಚಂದು ಮೆಪ್ಪಾಯೂರ್ ಛಾಯಾಗ್ರಾಹಣ, ಶರತ್ ಹೆಗ್ಡೆ ಸಂಕಲನ, ವಿಜೇತ್ ಆರ್. ನಾಯಕ್ ನೃತ್ಯ, ಯೋಗಾನಂದ್ ಸಾಹಸ ಈ ಸಿನೆಮಾಕ್ಕಿದೆ. ಕಾರ್ತಿಕ್ ರೈ ಅಡ್ಯನಡ್ಕ ಪ್ರೊಡಕ್ಷನ್ ಮ್ಯಾನೇಜರ್ ಆಗಿದ್ದಾರೆ. 'ಕಜ್ಜ' ಸಿನಿಮಾ ಈಗಾಗಲೇ ಹಲವಾರು ಪ್ರೀಮಿಯರ್ ಶೋಗಳನ್ನು ನೀಡಿ ಪ್ರೇಕ್ಷಕರ ಮೆಚ್ಚುಗೆ ಗಳಿಸಿದೆ ಎಂದರು.

ಚಿತ್ರತಂಡದ ಮೋಹನ್ ರಾಜ್, ಸಹನಾ ಸುಧಾಕರ್, ನಿರ್ಮಾಪಕ ವಿಶಾಂತ್ ಮಿನೆಜೆಸ್, ಗೌತಮ್ ಬಂಗೇರ, ಉದಯ ಪೂಜಾರಿ ಬಲ್ಲಾಳ್‌ಬಾಗ್ ಉಪಸ್ಥಿತರಿದ್ದರು.

ವಸತಿ ಯೋಜನೆಯಡಿಯಲ್ಲಿ ಆಯ್ಕೆಯಾದ ಫಲಾನುಭವಿಗಳಿಗೆ ಮನೆ ನಿರ್ಮಾಣ ಕಾಮಗಾರಿ ಆದೇಶ ಪ್ರತಿ ವಿತರಿಸಿ ಶಾಸಕ ಪೊನ್ನಣ್ಣ

ಸರ್ಕಾರದಿಂದ ಆದ್ಯತೆ ಮೇರೆಗೆ ಸವಲತ್ತು

ಮಡಿಕೇರಿ: ರಾಜ್ಯ ಸರ್ಕಾರ ಬಡವರ ಪರವಾಗಿದ್ದು, ಸಮಾಜದ ಕಟ್ಟ ಕಡೆಯ ವ್ಯಕ್ತಿಯೂ ಗೌರವಯುತವಾಗಿ ಬಾಳ್ವೆ ನಡೆಸಲು ಬೇಕಾದ ಎಲ್ಲಾ ಸವಲತ್ತುಗಳನ್ನು ಆದ್ಯತೆ ಮೇರೆಗೆ ಒದಗಿಸುತ್ತಾ ಬರುತ್ತಿದೆ ಎಂದು ವೀರಾಜಪೇಟೆ ವಿಧಾನಸಭಾ ಕ್ಷೇತ್ರದ ಶಾಸಕ ಎ.ಎಸ್.ಪೊನ್ನಣ್ಣ ಅವರು ಹೇಳಿದರು.

ನಗರದ ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ ನಡೆದ ವೀರಾಜಪೇಟೆ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಮಡಿಕೇರಿ ತಾಲೂಕಿನ 18 ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಬಸವ ಮತ್ತು ಅಂಬೇಡ್ಕರ್ ವಸತಿ ಯೋಜನೆಯಡಿಯಲ್ಲಿ ಆಯ್ಕೆ ಆಗಿರುವ ಅರ್ಹ ಫಲಾನುಭವಿಗಳಿಗೆ ನೂತನ ಮನೆ ನಿರ್ಮಾಣ ಕಾಮಗಾರಿ ಆದೇಶ ಪ್ರತಿ ವಿತರಣಾ ಕಾರ್ಯಕ್ರಮದಲ್ಲಿ ಸುಮಾರು 400 ಕ್ಕೂ ಅಧಿಕ ಫಲಾನುಭವಿಗಳಿಗೆ ಆದೇಶ ಪತ್ರವನ್ನು ವಿತರಿಸಿ ಅವರು ಮಾತನಾಡಿದರು.

ನಿವೇಶನ ಮತ್ತು ವಸತಿ ರಹಿತರಿಗೆ ವಸತಿ ನೀಡುವುದು ಸರ್ಕಾರದ ಕರ್ತವ್ಯ. ಹಲವು ವರ್ಷಗಳಿಂದ ಸರ್ಕಾರದಿಂದ ಮನೆ ನಿರ್ಮಿಸಬೇಕೆಂಬ ನಿವೇಶನ ರಹಿತರು, ವಸತಿ ರಹಿತರಿಗೆ ಆದ್ಯತೆ ಮೇರೆಗೆ ಸ್ವಂತ ಸೂರು ಕಲ್ಪಿಸುವ ನಿಟ್ಟಿನಲ್ಲಿ ರಾಜ್ಯ ಸರ್ಕಾರ, ಹಲವಾರು ಜನಪರ ಯೋಜನೆಗಳೊಂದಿಗೆ ವಸತಿ ನೀಡುವ ಯೋಜನೆಗೂ ಮಹತ್ವ ನೀಡಿದೆ ಎಂದು ಪೊನ್ನಣ್ಣ ನುಡಿದರು.



ಹಿಂದಿನ ವಸತಿ ಸಚಿವರಾದ ಜಮೀರ್ ಅಹಮ್ಮದ್ ಅವರು ಬಸವ ಮತ್ತು ಅಂಬೇಡ್ಕರ್ ವಸತಿ ಯೋಜನೆಯಡಿ ವಸತಿ ಸೌಲಭ್ಯ ಒದಗಿಸಿದ್ದು, ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮತ್ತು ಸಚಿವ ಸಂಪುಟದ ಸದಸ್ಯರ ಸಹಕಾರದಿಂದ ಜಿಲ್ಲೆಗೆ ಮನೆ ನಿರ್ಮಾಣಕ್ಕೆ ಅನುದಾನ ದೊರೆತಿದೆ ಎಂದು ಅವರು ವಿವರಿಸಿದರು.

ಮಳೆಗಾಲ ಪ್ರಾರಂಭಕ್ಕೂ ಮೊದಲು ಮನೆ ಹಸ್ತಾಂತರ ಮಾಡುವ ಯೋಜನೆ ಇದ್ದು, ಇದರ ಸದುಪಯೋಗ ಜನರು ಪಡೆದುಕೊಂಡು, ತಮ್ಮ ಅನುಕೂಲಕ್ಕನುಸಾರ ಮನೆ ನಿರ್ಮಿಸಿ ಉತ್ತಮ ಜೀವನ ನಡೆಸುವಂತಾಗಲಿ ಎಂದು ಶಾಸಕರು ಹಾರೈಸಿದರು.

ಮುಂದಿನ ದಿನಗಳಲ್ಲಿ ವೀರಾಜಪೇಟೆ ವಿಧಾನಸಭಾ ಕ್ಷೇತ್ರದಲ್ಲಿ ಅನೇಕ ಅಭಿವೃದ್ಧಿ ಕಾರ್ಯಗಳು ನಡೆಯಲ್ಲಿದ್ದು, ಸಣ್ಣ ಸಣ್ಣ ಹೆಜ್ಜೆಯ ಮೂಲಕ ಅಭಿವೃದ್ಧಿ ಕಾರ್ಯ ಹಮ್ಮಿಕೊಳ್ಳಲಾಗುವುದೆಂದು ಭರವಸೆ ನೀಡಿದರು.

ಮಡಿಕೇರಿ ತಾಲೂಕು ಪಂಚಾಯಿತಿ ಇ.ಒ ಶೇಖರ್ ಅವರು ಮಾತನಾಡಿ, ಜಿಲ್ಲೆಯಲ್ಲಿ ನಿವೇಶನ ರಹಿತರಿಗೆ ಸೂರು ಒದಗಿಸುವಲ್ಲಿ ವೀರಾಜಪೇಟೆ ವಿಧಾನಸಭಾ ಕ್ಷೇತ್ರದ ಶಾಸಕ ಎ.ಎಸ್.ಪೊನ್ನಣ್ಣ ಅವರ ನೇತೃತ್ವದಲ್ಲಿ ಜಿಲ್ಲೆಗೆ 1200 ಮನೆಗಳ ನಿರ್ಮಾಣಕ್ಕೆ ಸರ್ಕಾರದಿಂದ ಮಂಜೂರು ಮಾಡಿರುವುದು ಶ್ಲಾಘನೀಯ ಎಂದರು.

ವೀರಾಜಪೇಟೆ ಕ್ಷೇತ್ರ ಭೌಗೋಳಿಕವಾಗಿ ಹೆಚ್ಚಿನ ವಿಸ್ತೀರ್ಣ ಹೊಂದಿರುವುದರಿಂದ ವೀರಾಜಪೇಟೆ ಕ್ಷೇತ್ರ ವ್ಯಾಪ್ತಿಯ ಮಡಿಕೇರಿ ತಾಲೂಕಿನಲ್ಲಿ 527 ಮನೆಗಳ ನಿರ್ಮಾಣಕ್ಕೆ ಕ್ರಮ ವಹಿಸಲಾಗಿದೆ. ಮೊದಲ ಹಂತದಲ್ಲಿ ವೀರಾಜಪೇಟೆ ವಿಧಾನಸಭಾ ವ್ಯಾಪ್ತಿಯ ಪೆರಾಜೆ, ಚೆಂಬು, ಸಂಪಾಜೆ, ಮದೆ, ಬೆಟ್ಟಗೇರಿ, ಚೇರಂಬಾಣೆ, ಕುಂದಚೇರಿ ಭಾಗಮಂಡಲ, ಕರಿಕೆ, ಅಯ್ಯಂಗೇರಿ, ಬಲ್ಲಮಾವಟಿ, ಎಮ್ಮೆಮಾಡು ನಾಪೋಕ್ಲು, ಕುಂಜಿಲ–ಕಕ್ಕಬ್ಬೆ, ನರಿಯಂದಡ, ಹಾಕತ್ತೂರು, ಮೇಕೇರಿ, ಕೋಣಂಜಗೇರಿ ಗ್ರಾ.ಪಂ. ವ್ಯಾಪ್ತಿಯ 427 ಅರ್ಹ ಕುಟುಂಬಗಳಿಗೆ ಶಾಶ್ವತ ಸೂರು ಒದಗಿಸುವ ಸಂಬಂಧ ಪ್ರಯತ್ನ ನಡೆದಿದೆ. ಮುಂದಿನ ದಿನಗಳಲ್ಲಿ ಜಿಲ್ಲಾಡಳಿತದಿಂದ ನಿವೇಶನ ಗುರುತಿಸಿ ಫಲಾನುಭವಿಗಳಿಗೆ ಮನೆ ನಿರ್ಮಿಸಲಾಗುವುದು ಎಂದು ಮಾಹಿತಿ ನೀಡಿದರು.

> - ಸಮಾಜದ ಕಟ್ಟ ಕಡೆಯ ವ್ಯಕ್ತಿಯೂ ಗೌರವಯುತವಾಗಿ ಬಾಳ್ವೆ ನಡೆಸಲು ಬೇಕಾದ ಎಲ್ಲಾ ಸವಲತ್ತುಗಳನ್ನು ಆದ್ಯತೆ ಮೇರೆಗೆ ಒದಗಿಸುತ್ತದೆ.
> - ಸುಮಾರು 400 ಕ್ಕೂ ಅಧಿಕ ಫಲಾನುಭವಿಗಳಿಗೆ ಆದೇಶ ಪತ್ರ ವಿತರಣೆ.
> - ಮಳೆಗಾಲ ಪ್ರಾರಂಭಕ್ಕೂ ಮೊದಲು ಮನೆ ಹಸ್ತಾಂತರ ಮಾಡುವ ಯೋಜನೆ
> - ಜನರು ತಮ್ಮ ಅನುಕೂಲಕ್ಕನುಸಾರ ಮನೆ ನಿರ್ಮಿಸಿ ಉತ್ತಮ ಜೀವನ ನಡೆಸುವಂತಾಗಲಿ

ಸಭೆಯಲ್ಲಿ ಜಿಲ್ಲಾಧಿಕಾರಿ ಎಸ್. ಜೆ.ಸೋಮಶೇಖರ್, ಜಿಲ್ಲಾ ಪಂಚಾಯತ್ ಸಿಇಒ ಆನಂದ್ ಪ್ರಕಾಶ್ ಮೀನಾ, ಮಡಿಕೇರಿ ತಾಲೂಕು ಗ್ಯಾರಂಟಿ ಅನುಷ್ಠಾನ ಸಮಿತಿಯ ಅಧ್ಯಕ್ಷ ಮಂದ್ರೀರ ಮೋಹನ್ ದಾಸ್, ಮಡಿಕೇರಿ ತಾಲೂಕು ಅಭಿವೃದ್ಧಿ ಮತ್ತು ಯೋಜನೆಗಳ ಸಮಿತಿಯ ಉಪಾಧ್ಯಕ್ಷ ಬಾಲಚಂದ್ರ ನಾಯರ್, ಕೊಡಗು ಜಿಲ್ಲಾ ಪಂಚಾಯಿತಿ ಯೋಜನೆ ನಿರ್ದೇಶಕ ಜೀವನ್ ಕುಮಾರ್, ಜಿಲ್ಲಾ ಅಲ್ಪಸಂಖ್ಯಾತರ ಅಧ್ಯಕ್ಷ ಹನೀಫ್, ತಾಲೂಕು ಅಲ್ಪಸಂಖ್ಯಾತ ಅಧ್ಯಕ್ಷರಾದ ರಫೀಕ್, ಕಕ್ಕಬೆ ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ ಕಲಿಯಂಡ ಸಂಪನ್ ಅಯ್ಯಪ್ಪ, ಚೆಟ್ಟಿಮಾನಿ ಪಂಚಾಯಿತಿ ಮಾಜಿ ಸದಸ್ಯ ಹ್ಯಾರೀಸ್, ಮೇಕೇರಿ ಪಂಚಾಯಿತಿ ಮಾಜಿ ಸದಸ್ಯ ಹನೀಫ್, ಪ್ರಮುಖರಾದ ಸೂರಜ್ ಹೊಸೂರು, ಕೋಡಿರ ವಿನೋದ್ ನಾಣಯ್ಯ, ಅಪ್ರು ರವೀಂದ್ರ, ಪಿ.ಎಲ್.ಸುರೇಶ್, ತುಳಸಿ ಗಾಂಧಿ ಪ್ರಸಾದ್, ಮಡಿಕೇರಿ ತಾಲೂಕು ಎಲ್ಲಾ ಪಂಚಾಯಿತಿಯ ಮಾಜಿ ಅಧ್ಯಕ್ಷರುಗಳು, ಮಾಜಿ ಸದಸ್ಯರು, ಫಲಾನುಭವಿಗಳು ಇದ್ದರು.

ಕಟೀಲು ಕಾಲೇಜು : ವಿದ್ಯಾರ್ಥಿಗಳಿಗೆ ಕಂಪ್ಯೂಟರ್ ಕೋರ್ಸ್ ಪ್ರಮಾಣಪತ್ರ ವಿತರಣೆ



ಕಟೀಲು : ಶ್ರೀದುರ್ಗಾಪರಮೇಶ್ವರಿ ದೇವಸ್ಥಾನ ಪ್ರಥಮ ದರ್ಜೆ ಕಾಲೇಜಿನ ಅಂತಿಮ ವರ್ಷದ ಬಿ.ಕಾಂ. ವಿದ್ಯಾರ್ಥಿಗಳಿಗಾಗಿ ಬೀಳ್ಕೊಡುಗೆ ಸಮಾರಂಭ ಹಾಗೂ ಕಾಲೇಜಿನಲ್ಲಿ ಉಚಿತವಾಗಿ ನಡೆಸಲಾದ ಕೌಶಲ್ಯಾಭಿವೃದ್ಧಿ ಆಧಾರಿತ ಕಂಪ್ಯೂಟರ್ ಕೋರ್ಸ್‌ಗಳ ಪ್ರಮಾಣ ಪತ್ರ ವಿತರಣಾ ಸಮಾರಂಭ ನಡೆಯಿತು.

ಅರ್ಚಕರಾದ ಕಮಲಾದೇವಿಪ್ರಸಾದ ಅಸ್ರಣ್ಣ ಪ್ರಮಾಣಪತ್ರಗಳನ್ನುವಿತರಿಸಿದರು.

ಪ್ರಥಮ ಬಿ.ಕಾಂ. ವಿದ್ಯಾರ್ಥಿಗಳಿಗೆ ಸೈಬರ್ ಸೆಕ್ಯುರಿಟಿ ಕೋರ್ಸ್, ದ್ವಿತೀಯ ಬಿ.ಕಾಂ. ವಿದ್ಯಾರ್ಥಿಗಳಿಗೆ ಆರ್ಟಿಫಿಷಿಯಲ್ ಇಂಟೆಲಿಜೆನ್ಸ್ ಕಂಪ್ಯೂಟರ್ ಕೋರ್ಸ್ ಹಾಗೂ ತೃತೀಯ ಬಿ.ಕಾಂ. ವಿದ್ಯಾರ್ಥಿಗಳಿಗೆ ಬಿಸಿನೆಸ್ ಡೇಟಾ ಅನಾಲಿಟಿ ಕಂಪ್ಯೂಟರ್ ಕೋರ್ಸ್‌ಗಳ ಪ್ರಮಾಣಪತ್ರಗಳನ್ನುವಿತರಿಸಲಾಯಿತು.

ಉಚಿತ ಕೌಶಲ್ಯಾಧಾರಿತ ಹ್ಯಾಂಡ್ಸ್–ತರಬೇತಿ ತರಗತಿಗಳನ್ನು ಮಂಗಳೂರಿನ ಸಿಯೋನಾ ಸೊಲ್ಯೂಷನ್ಸ್ ಸಂಸ್ಥೆಯು, ಸೇಂಟ್ ಅಲೋಶಿಯಸ್ ಡೀಮ್ಡ್ ವಿಶ್ವವಿದ್ಯಾನಿಲಯದ ಸೆಂಟರ್ ಫಾರ್ ಎಐ ಅಂಡ್ರಾಯ್ಡ್ ಡೆವಲೆಪ್‌ಮೆಂಟ್ ಸಹಯೋಗದಲ್ಲಿ ನಡೆಸಿಕೊಟ್ಟಿತು.

ಪ್ರಾಂಶುಪಾಲರಾದ ಡಾ. ವಿಜಯ್ ವಿ., ಡಾ. ಪದ್ಮನಾಭ ಮರಾಠೆ, ವಿದ್ಯಾರ್ಥಿ ಕ್ಷೇಮಪಾಲನಾಧಿಕಾರಿ ಶ್ರೀಮತಿ ಅಶ್ವಿತಾ ವಿ. ಶೆಟ್ಟಿ, ಶೈಕ್ಷಣಿಕ ಸಲಹೆಗಾರ್ತಿ ಶ್ರೀಮತಿ ಶಿಫಾಲಿ, ಕಂಪ್ಯೂಟರ್ ತರಬೇತುಗಾರ್ತಿ ಶ್ರೀಮತಿ ಹರ್ಷಿತಾ ಶೆಟ್ಟಿ, ವಿದ್ಯಾರ್ಥಿ ಸಂಘದ ಅಧ್ಯಕ್ಷ ಕಾರ್ತಿಕ್ ಎಸ್. ನಾಯಕ್, ಉಪಾಧ್ಯಕ್ಷ ತರುಣಿ. ದೇವಾಡಿಗ, ಕಾರ್ಯದರ್ಶಿ ಕೃಪಾಟಿ ಶೆಟ್ಟಿ ಹಾಗೂ ಜಂಟಿ ಕಾರ್ಯದರ್ಶಿ ಪ್ರಾರ್ಥನಾ ಉಪಸ್ಥಿತರಿದ್ದರು.

ನವ್ಯಶ್ರೀ ಜೆ. ಆಚಾರ್ಯ ಸ್ವಾಗತಿಸಿದರು. ಕೃಪಾಟಿ. ಶೆಟ್ಟಿ ವಂದಿಸಿದರು. ಪ್ರಜ್ಞಾ ಭಂಡಾರಿ, ಪ್ರಗ್ಯಾ ಎಲ್. ಪೂಜಾರಿ ಹಾಗೂ ವರ್ಷಿತಾ ಕಾರ್ಯಕ್ರಮ ನಿರೂಪಿಸಿದರು.

ಬೇಳೂರು, ತೆಕ್ಕಟ್ಟೆ ಗ್ರಾಮ ಪಂ. ಬಿಜೆಪಿ ಶಕ್ತಿ ಕೇಂದ್ರಗಳಿಗೆ ನೇಮಕ



ಕುಂದಾಪುರ: ಕುಂದಾಪುರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಬೇಳೂರು ಮತ್ತು ತೆಕ್ಕಟ್ಟೆ ಗ್ರಾಮ ಪಂಚಾಯತ್ ಬಿಜೆಪಿ ಶಕ್ತಿ ಕೇಂದ್ರಗಳಿಗೆ ನೂತನ ಅಧ್ಯಕ್ಷರು ಹಾಗೂ ಕಾರ್ಯದರ್ಶಿಗಳ ಆಯ್ಕೆ ಶುಕ್ರವಾರ ನಡೆಯಿತು.

ಕುಂದಾಪುರ ಬಿಜೆಪಿ ಕ್ಷೇತ್ರಾಧ್ಯಕ್ಷ ಸುರೇಶ್ ಶೆಟ್ಟಿ ಗೋಪಾಡಿ ಅವರ ಅಧ್ಯಕ್ಷತೆಯಲ್ಲಿ ನಡೆದ ಶಕ್ತಿ ಕೇಂದ್ರಗಳ ಸಭೆಯಲ್ಲಿ ಕುಂದಾಪುರ ಶಾಸಕ ಎ. ಕಿರಣ್ ಕುಮಾರ್ ಕೊಡ್ಗಿ ಅವರು ಪಕ್ಷ ಸಂಘಟನೆ ಕುರಿತು ಮಾರ್ಗದರ್ಶನ ನೀಡಿದರು.

ಮಂಡಲ ನಿಕಟಪೂರ್ವ ಅಧ್ಯಕ್ಷ ಶಂಕರ ಅಂಕದಕಟ್ಟೆ, ಪ್ರಧಾನ ಕಾರ್ಯದರ್ಶಿಗಳಾದ ಸತೀಶ್ ಪೂಜಾರಿ ವಕ್ವಾಡಿ, ಸುಧೀರ್ ಕೆ.ಎಸ್., ಯುವಮೋರ್ಚಾ ಅಧ್ಯಕ್ಷ ಕಿರಣ್ ಪೂಜಾರಿ ತೆಕ್ಕಟ್ಟೆ, ಬೇಳೂರು ನಿಕಟ ಪೂರ್ವ ಅಧ್ಯಕ್ಷ ರವಿ ಶೆಟ್ಟಿ, ಸೇರಿದಂತೆ ಪ್ರಮುಖರು ಉಪಸ್ಥಿತರಿದ್ದರು.

> **ಶಕ್ತಿ ಕೇಂದ್ರದ ಆಯ್ಕೆಯಾದ ಪದಾಧಿಕಾರಿಗಳು**
>
> ತೆಕ್ಕಟ್ಟೆ ಶಕ್ತಿ ಕೇಂದ್ರ ಅಧ್ಯಕ್ಷ ಶ್ರೀನಾಥ್ ಶೆಟ್ಟಿ, ಕಾರ್ಯದರ್ಶಿ ಗಣೇಶ, ಬೇಳೂರು ಶಕ್ತಿ ಕೇಂದ್ರ ಅಧ್ಯಕ್ಷ ಸತೀಶ್ ಶೆಟ್ಟಿ, ಕಾರ್ಯದರ್ಶಿ ಅನಿಲ್ ಆಯ್ಕೆಯಾದರು. ಇದೇ ವೇಳೆ ಎರಡೂ ಶಕ್ತಿ ಕೇಂದ್ರಗಳ ವ್ಯಾಪ್ತಿಯ ಬೂತ್ ಅಧ್ಯಕ್ಷರ ನೇಮಕ ನಡೆಯಿತು.

'ಅಪ್ಪೆ ಬೇರ್‌ದ ತುಳುನಾಡ್' ಕಾರ್ಯಕ್ರಮದ ಯಶಸ್ಸಿಗೆ ಅಭಿನಂದನಾ ಸಮಾರಂಭ



ಮುಲ್ಕಿ: ಬಪ್ಪನಾಡು ಶ್ರೀ ದುರ್ಗಾ ಪರಮೇಶ್ವರೀ ಕ್ಷೇತ್ರದಲ್ಲಿ ಯಶಸ್ವಿಯಾಗಿ ನಡೆದ 'ಅಪ್ಪೆ ಬೇರ್‌ದ ತುಳುನಾಡ್ – ರಾಷ್ಟ್ರೀಯ ತುಳು ವಿಚಾರಗೋಷ್ಠಿ' ಕಾರ್ಯಕ್ರಮದ ಯಶಸ್ಸಿಗೆ ಕಾರಣ ಕರ್ತರಾದ ಕಾರ್ಯಕರ್ತರು ಹಾಗೂ ಸಂಘಟಕರಿಗೆ ಅಭಿನಂದನೆ ಸಲ್ಲಿಸುವ ಸಮಾರಂಭವು ಮುಲ್ಕಿ ಲಯನ್ಸ್ ಕ್ಲಬ್ ಸಭಾಂಗಣದಲ್ಲಿ ಶನಿವಾರ ನಡೆಯಿತು.

ಸಾಹಿತಿ ಡಾ.ಹರೀಶ್ಚಂದ್ರ ಸಾಲ್ಯಾನ್ ಮಾತನಾಡಿ, 'ಅಪ್ಪೆ ಬೇರ್ ದ ತುಳುನಾಡ್' ಕಾರ್ಯಕ್ರಮದ ಯಶಸ್ಸು ಮುಲ್ಕಿಯ ಗಡಿಯನ್ನು ದಾಟಿ ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ಮಟ್ಟದಲ್ಲಿ ಸ್ಪಂದನೆ ಪಡೆಯುವಂತಾಗಿದೆ. ಇದು ಕೇವಲ ಒಂದು ಕಾರ್ಯಕ್ರಮದ ಯಶಸ್ಸಲ್ಲ, ತುಳು ನಾಡಿನ ಮಾತೃಮೂಲ ಸಂಸ್ಕೃತಿ, ಜೀವನ ಮೌಲ್ಯಗಳು ಹಾಗೂ ಪರಂಪರೆಯ ಪುನರ್ಜಾಗೃತಿಯ ಸಂಕೇತವಾಗಿದೆ ಎಂದರು. ಅಧ್ಯಕ್ಷತೆಯನ್ನು ತುಳುವ ಮಹಾಸಭೆ ಇಂಟರ್‌ನ್ಯಾಷನಲ್‌ನ ಪ್ರಧಾನ ಸಂಚಾಲಕಿ ಭಾನುಮತಿ ಶೆಟ್ಟಿ ಕಕ್ವಗುತ್ತು ವಹಿಸಿದ್ದರು. ತುಳು ವರ್ಡ್ ಇಂಟರ್‌ನ್ಯಾಶನಲ್ ಸ್ಥಾಪಕ ಡಾ.ರಾಜೇಶ್ ಆಳ್ವ, ತುಳುವರ್ಲ್ಡ್ ಫೌಂಡೇಶನ್‌ನ ಹರಿಪ್ರಸಾದ್ ರೈ, ವಸಂತ್ ರೈ, ಅರವಿಂದ ಬೆಲ್ಚಡ, ಮುಲ್ಕಿ ಬಂಟರ ಸಂಘದ ಅಧ್ಯಕ್ಷ ಅಶೋಕ್ ಕುಮಾರ್ ಶೆಟ್ಟಿ, ಮುಲ್ಕಿ ಲಯನ್ಸ್ ಕ್ಲಬ್ ಅಧ್ಯಕ್ಷ ಹರ್ಷರಾಜ್ ಶೆಟ್ಟಿ, ಜಿ. ಯಮ್. ಸರಕಾರಿ ಕಾಲೇಜು ಪ್ರಾಂಶುಪಾಲ ಡಾ.ವಾಸುದೇವ ಬೆಳ್ಳೆ, ವಾಸು ಪೂಜಾರಿ ಚಿತ್ರಾಪು, ಉದಯ್ ಕುಮಾರ್ ಶೆಟ್ಟಿ, ಅಪ್ಪೆಬೇರು ತುಳುನಾಡು ಸಮಿತಿಯ ಸರೋಜಿನಿ ಸುವರ್ಣ, ಶಶಿಕಲಾ ಯದೀಶ್ ಅಮೀನ್, ಲತಾ ಶೇಖರ್, ಗೀತಾ ಗಣೇಶ್, ಜಯಪಾಲ್ ಶೆಟ್ಟಿ, ಪ್ರಶಾಂತ್ ಶೆಟ್ಟಿ, ಅಮೂಲ್ಯ ಶೆಟ್ಟಿ, ಚಂದ್ರಕಲಾ ಶೆಟ್ಟಿ, ವಕೀಲರಾದ ರವೀಶ್ ಕಾಮತ್, ಸಾಧು ಅಂಚನ್ ಮಟ್ಟು, ಪ್ರೀತಿ ಅಮೀನ್ ಮತ್ತಿತರರು ಉಪಸ್ಥಿತರಿದ್ದರು.

'ಯಕ್ಷ ಪುರುಷೋತ್ತಮ' ಭಕ್ತಿ–ಸಾಹಿತ್ಯ–ಕಲಾ ವೈಭವದ ಅಪೂರ್ವ ಯಕ್ಷ ಪಯಣ

ಪುತ್ತೂರು: ದಕ್ಷಿಣ ಕನ್ನಡದ ಹೆಮ್ಮೆಯ ಸಾಂಸ್ಕೃತಿಕ ಪರಂಪರೆಯಾದ ಯಕ್ಷಗಾನವನ್ನು ಮುಂದಿನ ಪೀಳಿಗೆಗೆ ದಾಟಿಸುವ ಹಾಗೂ ಕಲೆಯ ಸೊಬಗನ್ನು ಪಸರಿಸುವ ದಿವ್ಯ ಸಂಕಲ್ಪದೊಂದಿಗೆ ಆರಂಭಗೊಂಡ 'ಯಕ್ಷ ಪುರುಷೋತ್ತಮ' ತಾಳಮದ್ದಳೆ ಕಾರ್ಯಕ್ರಮಗಳ ಸರಣಿಯು ಕಲಾಭಿಮಾನಿಗಳ ಮನಸೂರೆಗೊಳ್ಳುವಲ್ಲಿ ಅಭೂತಪೂರ್ವ ಯಶಸ್ಸು ಕಂಡಿದೆ.

ಬೊಳುವಾರಿನ ಶ್ರೀ ಆಂಜನೇಯ ಯಕ್ಷಗಾನ ಕಲಾ ಸಂಘ ಮತ್ತು ಸವಣೂರಿನ ಶ್ರವಣರಂಗ ಪ್ರತಿಷ್ಠಾನದ ಜಂಟಿ ಆಶ್ರಯದಲ್ಲಿ, ಅಧಿಕ ಮಾಸದ ಪವಿತ್ರ ಸಂದರ್ಭದಲ್ಲಿ ಚಾಲನೆ ಪಡೆದ ಈ ಸಾಂಸ್ಕೃತಿಕ ಸರಣಿ ಪ್ರೇಕ್ಷಕರಲ್ಲಿ ಭಕ್ತಿ, ಜ್ಞಾನ ಮತ್ತು ಕಾವ್ಯ ಮೀಮಾಂಸೆಯ ರಸದೌತಣವನ್ನು ಬಡಿಸಿದೆ. ಸಾಂಪ್ರದಾಯಿಕ ಚೌಕಟ್ಟಿನಲ್ಲಿ ಒಂದೊಂದು ಆಖ್ಯಾನವೂ ವಿಭಿನ್ನ ರಸಗಳನ್ನು (ನವರಸ) ಪ್ರಸ್ತುತಪಡಿಸುವ ಮೂಲಕ ಸಾಹಿತ್ಯ ಆಸಕ್ತರಿಗೆ ವಿಶಿಷ್ಟ ಅನುಭವವನ್ನು ನೀಡಿತು.

ವೈವಿಧ್ಯಮಯ ಪ್ರಸಂಗಗಳು

'ಶರಸೇತು ಪ್ರಸಂಗ' (ಶ್ರೀರಾಮದರ್ಶನ) ಹನುಮಂತ ಮತ್ತು ಅರ್ಜುನನ ನಡುವಿನ ಭಕ್ತಿ ಹಾಗೂ ಅಹಂಕಾರದ ಮುಖಾಮುಖಿ; ಅಂತಿಮವಾಗಿ ಶ್ರೀರಾಮನ ದರ್ಶನದೊಂದಿಗೆ ಕರುಣ ಮತ್ತು ಅದ್ಭುತ ರಸದ ಸಮ್ಮಿಲನ, 'ಭಕ್ತ ಸುಧನ್ವ' ಧರ್ಮ ಮತ್ತು ಕರ್ತವ್ಯದ ಸತ್ವಪರೀಕ್ಷೆ; ರಣರಂಗದ ಭೀಕರತೆಯ ನಡುವೆಯೂ ಶ್ರೀಕೃಷ್ಣನ ದಿವ್ಯ ರೂಪವನ್ನು ಕಂಡು ಮುಕ್ತಿ ಹೊಂದುವ ರೋಮಾಂಚನಕಾರಿ ಕಥನ, 'ಪಾರಿಜಾತ ಪ್ರಕರಣ' (ನರಕಾಸುರ ಮೋಕ್ಷ) ತಾಯಿ ಸತ್ಯಭಾಮೆ ಮತ್ತು ಕೃಷ್ಣನ ಲೀಲೆ; ಭೂಮಿಪುತ್ರ ನರಕಾಸುರನ ಗರ್ವಭಂಗ ಹಾಗೂ ಅಹಂಕಾರದ ಅಂತ್ಯದೊಂದಿಗೆ ಲಭಿಸುವ ಮೋಕ್ಷದ ತತ್ವದರ್ಶನ, ಶಿವಭಕ್ತ ರಾಮಭಕ್ತರ ಸಂಗ್ರಾಮ ಹರಿ ಮತ್ತು ಹರ ಇಬ್ಬರೂ ಒಂದೇ ಎಂಬ ಅದ್ವೈತ ತತ್ವವನ್ನು ಸಾರುವ 'ಶಿವರಾಮರ ದರ್ಶನ' ಅತ್ಯುನ್ನತ ತಾತ್ವಿಕ ಸಂವಾದದ ಪ್ರಸಂಗ, 'ಶ್ಯಮಂತಕ ಮಣಿ' (ಜಾಂಬವತೀ ಕಲ್ಯಾಣ) ತ್ರೇತಾಯುಗದ ಭಕ್ತ ಜಾಂಬವಂತನಿಗೆ ದ್ವಾಪರದಲ್ಲಿ ಕೃಷ್ಣನ ರೂಪದಲ್ಲಿ ರಾಮನ ದರ್ಶನವಾಗುವ ಅಪೂರ್ವ ದೃಶ್ಯ ಹಾಗೂ ಸಡಗರದ ಕಲ್ಯಾಣೋತ್ಸವದ ವೈಭವ, 'ಹರಿಭಕ್ತ ಅಂಬರೀಷನ ಯಶೋಗಾಥೆ' ಏಕಾದಶಿ ವ್ರತದ ಮಹಾತ್ಮೆ, ದೂರ್ವಾಸ ಮುನಿಯ ತಾಮಸ ಕೋಪ ಹಾಗೂ ಭಕ್ತನ ರಕ್ಷಣೆಗಾಗಿ ಧಾವಿಸುವ ವಿಷ್ಣು ಚಕ್ರದ ಧರ್ಮನಿಷ್ಠೆಯ ಕಥೆ.



> **'ಯಕ್ಷ ಪುರುಷೋತ್ತಮ'**
>
> ಭಕ್ತಿ, ಕಲೆ ಮತ್ತು ಸಮಾಜಸೇವೆಯ ತ್ರಿವೇಣಿ ಸಂಗಮವಾಗಿರುವ 'ಯಕ್ಷ ಪುರುಷೋತ್ತಮ' ಸರಣಿಯು ಮುಂದಿನ ದಿನಗಳಲ್ಲೂ ನಿರಂತರವಾಗಿ ನಡೆದು, ಯಕ್ಷ ಲೋಕಕ್ಕೆ ಇನ್ನಷ್ಟು ಚೈತನ್ಯ ತುಂಬಲಿ ಎಂಬುದು ಸಮಸ್ತ ಕಲಾಭಿಮಾನಿಗಳ ಆಶಯವಾಗಿದೆ.
>
> ■ ತಾರಾನಾಥ ಸವಣೂರು

ಸಾಹಿತ್ಯ–ಗಾಯನದ ಜುಗಲ್‌ಬಂದಿ

ತಾಳಮದ್ದಳೆಯ ಜೀವನಾಡಿಯಾಗಿರುವ ವಾಕ್ಚಾತುರ್ಯ ಹಾಗೂ ಗಾಯನ ಎರಡೂ ವಿಭಾಗಗಳಲ್ಲಿ ನಾಡಿನ ಪ್ರಸಿದ್ಧ ಕಲಾವಿದರು ಈ ಸರಣಿಗೆ ಬಲ ತುಂಬಿದರು. ಅನುಭವಿ ಅರ್ಥಧಾರಿಗಳಾದ ಗುಂಡ್ಯಡ್ಕ ಈಶ್ವರ ಭಟ್, ಗೇರುಕಟ್ಟೆ ದಿವಾಕರ ಆಚಾರ್ಯ, ಗುಡ್ಡಪ್ಪ ಬಲ್ಯ, ಭಾಸ್ಕರ ಬಾರ್ಯ, ವೇಣುಗೋಪಾಲ ಭಟ್ ಮಾಂಬಾಡಿ, ತಾರಾನಾಥ ಸವಣೂರು, ಪ್ರೇಮಲತಾ ರಾವ್, ಕಿಶೋರಿ ದುಗ್ಗಪ್ಪ ನಡುಗಲ್ಲು, ಶಾರದಾ ಅರಸ್, ಭಾರತಿ ರೈ ಹಾಗೂ ಅಚ್ಯುತ ಕೋಡಿಬೈಲ್ ಅವರು ತಮ್ಮ ಪ್ರಬುದ್ಧ ವಾಗ್ಝರಿ ಮತ್ತು ತರ್ಕಬದ್ಧ ಸಂವಾದಗಳ ಮೂಲಕ ಪ್ರಸಂಗಗಳಿಗೆ ಜೀವ ತುಂಬಿ ಯಕ್ಷಗಾನದ ಸಾಹಿತ್ಯಿಕ ತೂಕವನ್ನು ಹೆಚ್ಚಿಸಿದರು.

ಸುಮಧುರ ಹಿಮ್ಮೇಳ

ಪ್ರಸಿದ್ಧ ಭಾಗವತರಾದ ಲಕ್ಷ್ಮೀ ನಾರಾಯಣ ಭಟ್ ಬಟ್ಯಮೂಲೆ, ಕುಸುಮಾಕರ ಆಚಾರ್ಯ ಹಳೆನೇರಂಕಿ, ಸತೀಶ್ ಇರ್ದೆ, ಆನಂದ ಸವಣೂರು ಹಾಗೂ ನಿತೀಶ್ ಎಂಕಣ್ಣಮೂಲೆ ಇವರ ಕಂಠಸಿರಿಯಲ್ಲಿ ಮೂಡಿಬಂದ ಭಾವಪೂರ್ಣ ಪದ್ಯಗಳು ಪ್ರೇಕ್ಷಕರನ್ನು ಮಂತ್ರಮುಗ್ಧರನ್ನಾಗಿಸಿದವು. ಅವರಿಗೆ ಮುರಳೀಧರ ಕಲ್ಲೂರಾಯ ಕುಂಜೂರು ಪಂಜ, ಅನೀಶ್ ಕೃಷ್ಣ ಪುಣಚ, ಸಮರ್ಥ ವಿಷ್ಣು ಮತ್ತು ನೆತ್ತರಕೆರೆ ಅವರು ಮೃದಂಗ–ಚಂಡೆಗಳ ಚಮತ್ಕಾರಿಕ ಲಯದ ಮೂಲಕ ಸಾಥ್ ನೀಡಿದರು.

ಪುತ್ತೂರು ಮತ್ತು ಸವಣೂರು ಭಾಗದ ಗ್ರಾಮೀಣ ಪ್ರದೇಶಗಳಾದ ಮುಗೇರು, ಶಾಂತಿಗೋಡು, ವೀರಮಂಗಲ, ಕುರಿಯ, ಪುತ್ತೂರು ಹಾಗೂ ಸವಣೂರು ವಿಷ್ಣುಮೂರ್ತಿ ದೇವಸ್ಥಾನಗಳ ಪವಿತ್ರ ವಠಾರಗಳಲ್ಲಿ ಈ ಕಾರ್ಯಕ್ರಮಗಳು ಜರುಗಿದ್ದು, ಇಡೀ ಪರಿಸರದಲ್ಲಿ ಭಕ್ತಿಪರ ವಾತಾವರಣ ಸೃಷ್ಟಿಯಾಗಿತ್ತು. ಈ ಯಕ್ಷ ಪಯಣವು ಸರಣಿಯ ಕೊನೆಯ ನಿಲ್ದಾಣವಾದ ಬಾರ್ಯದಲ್ಲಿ ಅತ್ಯಂತ ಯಶಸ್ವಿಯಾಗಿ ಸಂಪನ್ನಗೊಳ್ಳಲಿದೆ.

> **ಅಪೂರ್ವ ಮಾದರಿ**
>
> ಯಕ್ಷಗಾನವು ಕೇವಲ ರಂಜನೆಯ ಕಲೆಯಲ್ಲ, ಅದು ನಮ್ಮ ಸಂಸ್ಕೃತಿ, ಧರ್ಮ ಮತ್ತು ಜೀವನ ಮೌಲ್ಯಗಳ ಪ್ರತಿಬಿಂಬ ಎಂಬುದನ್ನು ಈ ಸರಣಿ ಸಾಬೀತುಪಡಿಸಿದೆ. ಗ್ರಾಮೀಣ ಭಾಗದ ಯುವ ಜನತೆಯಲ್ಲಿ ಕಲೆಯ ಬಗ್ಗೆ ಆಸಕ್ತಿ ಮೂಡಿಸುವಲ್ಲಿ ಮತ್ತು ಹಿರಿಯ ಕಲಾವಿದರ ಜ್ಞಾನವನ್ನು ಸಮಾಜದ ಮುಂದಿಡುವಲ್ಲಿ ಸಂಘಟಕರು ಶ್ಲಾಘನೀಯ ಸೇವೆ ಸಲ್ಲಿಸಿದ್ದಾರೆ. ಶ್ರೀ ಆಂಜನೇಯ ಯಕ್ಷಗಾನ ಕಲಾ ಸಂಘದ ಅಧ್ಯಕ್ಷ ಭಾಸ್ಕರ ಬಾರ್ಯ ಮತ್ತು ಶ್ರವಣರಂಗದ ಸಂಚಾಲಕ ತಾರಾನಾಥ ಸವಣೂರು ಅವರ ಅದ್ಭುತ ಸಂಘಟನಾ ಚಾತುರ್ಯ ಹಾಗೂ ಕಲಾ ಸೇವೆ ಕಲಾಭಿಮಾನಿಗಳ ನೆನಪಿನಲ್ಲಿ ಸದಾ ಹಸಿರಾಗಿರಲಿದೆ.

ಕಿರುಸುದ್ದಿ

ಜೂ.11ರಂದು ನಾನೂ ಕಾಫಿರ ಪುಸ್ತಕ ಬಿಡುಗಡೆ

ಮಂಗಳೂರು: ಅಖಿಲ ಭಾರತೀಯ ಸಾಹಿತ್ಯ ಪರಿಷದ್ ದ.ಕ. ಜಿಲ್ಲಾ ಸಮಿತಿ ವತಿಯಿಂದ ಲೇಖಕ ಡಾ.ಸುಧಾಕರ ಹೊಸಳ್ಳಿ ಅವರ ಕೃತಿ 'ನಾನೂ ಕಾಫಿರ' ಇದರ ಬಿಡುಗಡೆ ಸಮಾರಂಭ ಜೂ.11ರಂದು ಸಂಜೆ 4.30ಕ್ಕೆ ನಗರದ ಕೊಡಿಯಾಲ್‌ಬೈಲ್‌ನ ಎಸ್‌ಡಿಎಂ ಕಾಲೇಜು ಸಭಾಂಗಣದಲ್ಲಿ ನಡೆಯಲಿದೆ. ಮಂಗಳೂರು ವಿ.ವಿ.ಯ ಕಲಾ ವಿಭಾಗದ ಡೀನ್ ಪ್ರೊ. ಸೋಮಣ್ಣ ಹೊಂಗಳ್ಳಿ ಕೃತಿ ಬಿಡುಗಡೆ ಮಾಡಲಿದ್ದಾರೆ. ಲೇಖಕ ಪ್ರವೀಣ್ ಕುಮಾರ್ ಮಾವಿನಕಾಡು ಕೃತಿ ಪರಿಚಯ ನೀಡಲಿದ್ದಾರೆ. ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್‌ನ ಕರ್ನಾಟಕ ದಕ್ಷಿಣ ಪ್ರಾಂತ ಅಧ್ಯಕ್ಷ ಡಾ.ರವಿ ಮಂಡ್ಯ ಅಧ್ಯಕ್ಷತೆ ವಹಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ನಿಧನ ಸುದ್ದಿ

ವೀಣಾ ಡೇಸ



ಉಳ್ಳಾಲ: ದೇರಳಕಟ್ಟೆಯ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯ ಸಹಾಯಕ ಶಿಕ್ಷಕಿ ರಾಣಿಪುರ ನಿವಾಸಿ ವೀಣಾ ಡೇಸ (49) ಅವರು ಅಲ್ಪಕಾಲದ ಅಸೌಖ್ಯದಿಂದ ಭಾನುವಾರದಂದು ನಿಧನರಾದರು. ಶಿಕ್ಷಣ ಕ್ಷೇತ್ರದಲ್ಲಿ ಸೇವೆ ಸಲ್ಲಿಸುತ್ತಿದ್ದ ಅವರು ವಿದ್ಯಾರ್ಥಿಗಳು ಹಾಗೂ ಸಹೋದ್ಯೋಗಿಗಳ ಮೆಚ್ಚುಗೆಗೆ ಪಾತ್ರರಾಗಿದ್ದರು. ಶಿಕ್ಷಕಿ ವೀಣಾ ಡೇಸ ಅವರ ಅಕಾಲಿಕ ನಿಧನಕ್ಕೆ ಆರೋಗ್ಯ ಸಚಿವ ಯು.ಟಿ.ಖಾದರ್, ಮಂಗಳೂರು ದಕ್ಷಿಣ ವಲಯದ ಕ್ಷೇತ್ರ ಶಿಕ್ಷಣಾಧಿಕಾರಿ ಹೆಚ್.ಆರ್.ಈಶ್ವರ್, ಕರ್ನಾಟಕ ರಾಜ್ಯ ಅನುದಾನಿತ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಕೆ.ಎಂ.ಕೆ ಮಂಜನಾಡಿ, ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಮಂಗಳೂರು ದಕ್ಷಿಣ ವಲಯದ ಗೌರವಾಧ್ಯಕ್ಷ ಜಗದೀಶ ಶೆಟ್ಟಿ, ಅಧ್ಯಕ್ಷ ರಾಧಾಕೃಷ್ಣ ಭಟ್, ಕರ್ನಾಟಕ ರಾಜ್ಯ ಸರಕಾರಿ ಶಿಕ್ಷಣ ಇಲಾಖೆ ನೌಕರರ ಸಂಘದ ರಾಜ್ಯ ಕಾರ್ಯದರ್ಶಿ ತ್ಯಾಗಂ ಹರೇಕಳ, ಶಿಕ್ಷಕರ ಸಂಘದ ತಾಲೂಕು ಕಾರ್ಯದರ್ಶಿ ಮೋಹನ್ ಸಿರ್ಲಾಲ್, ಕರ್ನಾಟಕ ರಾಜ್ಯ ಪ್ರೌಢಶಾಲಾ ಸಹ ಶಿಕ್ಷಕರ ಸಂಘದ ತಾಲೂಕು ಅಧ್ಯಕ್ಷರಾದ ಪ್ರಮೀಳಾ, ಜಿಲ್ಲಾ ಕಾರ್ಯದರ್ಶಿ ಮಾರ್ಕ್ ಮೆಂಡೋನ್ಸಾ ಹಾಗೂ ಶಿಕ್ಷಣ ಇಲಾಖೆಯ ಎಲ್ಲಾ ಸಿಬ್ಬಂದಿಗಳು ಸಂತಾಪ ಸೂಚಿಸಿದ್ದಾರೆ. ವೀಣಾ ಡೇಸ ಅವರು ತೊಕ್ಕೊಟ್ಟು ಕಾಪಿಕಾಡ್‌ನ ಜಾನ್ ಬೇಕರಿಯ ಮಾಲಕ ಜಾನ್ ಡೇಸ ಅವರ ಪುತ್ರಿಯಾಗಿದ್ದರು. ವೀಣಾ ಅವರ ಪುತ್ರಿ ಎರಡು ವರ್ಷಗಳ ಹಿಂದೆ ಮೃತಪಟ್ಟಿದ್ದಳು. ಪತಿ ಹಾಗೂ ಓರ್ವ ಪುತ್ರನನ್ನು ವೀಣಾ ಡೇಸ ಅವರು ಅಗಲಿದ್ದಾರೆ.

ವಿನೋದ್ ಕುಮಾರ್



ಬಂಟ್ವಾಳ: ಇಲ್ಲಿನ ಪುರಸಭೆಯ ಯುವ ಪೌರ ಕಾರ್ಮಿಕ ವಿನೋದ್ ಕುಮಾರ್ ಕುದನೆಗುಡ್ಡೆ (27) ಅವರು ಅಲ್ಪ ಕಾಲದ ಅನಾರೋಗ್ಯದಿಂದ ಶುಕ್ರವಾರ ಸಂಜೆ ನಿಧನರಾಗಿದ್ದಾರೆ. ಅವಿವಾಹಿತರಾಗಿರುವ ಪುರಸಭೆಯ ಪೌರ ಕಾರ್ಮಿಕನಾಗಿದ್ದು, ಪೇಟೆ ಸ್ವಚ್ಛತೆ ಕೆಲಸ ಮಾಡುತ್ತಿದ್ದರು. ಕಳೆದ ಕೆಲ ದಿನಗಳಿಂದ ಹಠಾತ್ ಅನಾರೋಗ್ಯಕ್ಕೊಳಗಾಗಿ ಆಸ್ಪತ್ರೆಗೆ ದಾಖಲಾಗಿದ್ದು, ಅಲ್ಪ ಕಾಲದ ಅನಾರೋಗ್ಯದಿಂದ ನಿಧನರಾಗಿದ್ದಾರೆ. ವಿನೋದ್ ಕುಮಾರ್ ಅವರ ಅಕಾಲಿಕ ನಿಧನಕ್ಕೆಪುರಸಭಾ ಮುಖ್ಯಾಧಿಕಾರಿ ತೀರ್ಥಪ್ರಸಾದ್ ಅವರು ತೀವ್ರ ಸಂತಾಪ ಸೂಚಿಸಿದ್ದಾರೆ. ಶನಿವಾರ ಪುರಸಭೆಯ ಪೌರಕಾರ್ಮಿಕರು,ಸಿಬ್ಬಂದಿಗಳು ಮೃತರ ಅಂತಿಮ ದರ್ಶನ ಪಡೆದು ಶ್ರದ್ಧಾಂಜಲಿ ಅರ್ಪಿಸಿದರು.

ಚಂದ್ರ ಶೇಖರ ಆರ್.ಐಲ್



ಉಪ್ಪಳ: ಉಪ್ಪಳ ಹನುಮಾನ್‌ನಗರ ನಿವಾಸಿ, ಮೀನು ಕಾರ್ಮಿಕರಾಗಿದ್ದ ಚಂದ್ರಶೇಖರ ಆರ್.ಐಲ್ (63) ಅಲ್ಪಕಾಲದ ಅಸೌಖ್ಯದಿಂದ ಶನಿವಾರ ರಾತ್ರಿ ಸ್ವಗೃಹದಲ್ಲಿ ನಿಧನ ಹೊಂದಿದರು. ಅವರು ಆರ್‌ಎಸ್‌ಎಸ್‌ನ ಹಿರಿಯ ಸ್ವಯಂಸೇವಕರಾಗಿದ್ದರು. ಉಪ್ಪಳ ಶ್ರೀ ಅಯ್ಯಪ್ಪ ಮಂದಿರದ ಹಿರಿಯ ಶಬರಿಮಲೆ ವ್ರತಧಾರಿಯಾಗಿದ್ದರು. ಅಲ್ಲದೆ ಮಂದಿರದ ಸೇವಾ ಸಮಿತಿಯ ಹಿರಿಯ ಸದಸ್ಯರು, ಅಯೋಧ್ಯೆ ಕರಸೇವಕರೂ ಆಗಿದ್ದರು. ಮೃತರು ಪತ್ನಿ ಪುಷ್ಪಾ, ಮಕ್ಕಳಾದ ನಿಶಿತಾ, ನಿಖಿತಾ, ಕಾವ್ಯಾ ಅವರನ್ನು ಅಗಲಿದ್ದಾರೆ.

ಜಯಾನಂದ ಕೀಲಾರು



ಸುಳ್ಯ: ಸಂಪಾಜೆ ಗ್ರಾಮದ ಕಲ್ಲುಗುಂಡಿಯ ಕೀಲಾರು ನಿವಾಸಿ ಜಯಾನಂದ ಕೆ.(48) ಅಲ್ಪಕಾಲದ ಅಸೌಖ್ಯದಿಂದ ಜೂ.7ರಂದು ಮಂಗಳೂರಿನ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾದರು. ಕೆಲವು ದಿನಗಳಿಂದ ಅನಾರೋಗ್ಯದಿಂದ ಬಳಲುತ್ತಿದ್ದ ಅವರು ಮಂಗಳೂರಿನ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದು ಚಿಕಿತ್ಸೆ ಫಲಕಾರಿಯಾಗದೆ ಭಾನುವಾರ ಮೃತಪಟ್ಟರು. ಮೃತರು ತಾಯಿ, ಪತ್ನಿ, ಓರ್ವ ಪುತ್ರ, ತಾಯಿ ಹಾಗೂ ಅಪಾರ ಬಂಧು ಮಿತ್ರರನ್ನು ಅಗಲಿದ್ದಾರೆ.

ವಲೇರಿಯಸ್ ರೊಡ್ರಿಗಸ್



ಬೆಳ್ತಂಗಡಿ: ಮಡಂತ್ಯಾರಿನ ಜವಳಿ ಸಂಸ್ಥೆ 'ನೂತನ್ ಕ್ಲಾತ್ ಸೆಂಟರ್'ನ ಮಾಲಿಕ ವಲೇರಿಯನ್ ರೊಡ್ರಿಗಸ್ (89) ಅವರು ಜೂ. 6ರಂದು ನಿಧನರಾಗಿದ್ದಾರೆ. ವಲೇರಿಯನ್ ರೊಡ್ರಿಗಸ್ ಅವರು ಕಳೆದ 77 ವರ್ಷಗಳ ಹಿಂದೆ ಮಡಂತ್ಯಾರಿನಲ್ಲಿ ನೂತನ್ ಕ್ಲಾತ್ ಸೆಂಟರ್ ಸಂಸ್ಥೆಯನ್ನು ಪ್ರಾರಂಭಿಸಿದ್ದರು. ತಮ್ಮ ದಕ್ಷ ಉದ್ಯಮ ಶೈಲಿಯಿಂದ ದಕ್ಷಿಣ ಕನ್ನಡ, ಉಡುಪಿ, ಕಾಸರಗೋಡು, ಚಿಕ್ಕಮಗಳೂರು ಜಿಲ್ಲೆಗಳು ಮಾತ್ರವಲ್ಲದೆ ದೇಶ–ವಿದೇಶಗಳಲ್ಲೂ ಅಪಾರ ಗ್ರಾಹಕರನ್ನು ಹೊಂದುವ ಮೂಲಕ ಸಂಸ್ಥೆಯನ್ನು ಯಶಸ್ವಿಯಾಗಿ ಬೆಳೆಸಿದ್ದರು. ಮೃತರು ಪತ್ನಿ, ಮೂವರು ಪುತ್ರರು, ಇಬ್ಬರು ಪುತ್ರಿಯರನ್ನು ಅಗಲಿದ್ದಾರೆ.

ಸುಬ್ರಹ್ಮಣ್ಯ ಭಟ್



ಬದಿಯಡ್ಕ: ಪೆರಡಾಲ ಸೇವಾ ಸಹಕಾರಿ ಬ್ಯಾಂಕ್‌ನ ನಿವೃತ್ತ ಕಾರ್ಯದರ್ಶಿ, ಪುದುಕೋಳಿ ನಿವಾಸಿ ಸುಬ್ರಹ್ಮಣ್ಯ ಭಟ್ (84) ನಿಧನ ಹೊಂದಿದರು. ಮೃತರು ಪತ್ನಿ ರುಕ್ಮಿಣಿ, ಮಕ್ಕಳಾದ ಶಂಕರಕುಮಾರ್, ಜ್ಯೋತಿಷಿ ಕೃಷ್ಣಮೂರ್ತಿ, ಪ್ರೇಮಸುಧಾ ಅವರನ್ನು ಅಗಲಿದ್ದಾರೆ.



ಕೆ ಎಂಎಫ್ ಮಾಜಿ ಅಧ್ಯಕ್ಷ, ಮಾಜಿ ಶಾಸಕ ಭೀಮ ನಾಯ್ಕ್ ಕುಟುಂಬ ಸಹಿತ ಕಟೀಲು ಶ್ರೀ ದುರ್ಗಾಪರಮೇಶ್ವರಿ ದೇಗುಲಕ್ಕೆ ಭೇಟಿ ನೀಡಿ ಪ್ರಸಾದ ಸ್ವೀಕರಿಸಿದರು. ಅರ್ಚಕ ಶ್ರೀಹರಿ ಅಸ್ರಣ್ಣ, ತಾ. ಪಂ.ಮಾಜಿ ಸದಸ್ಯ ತಿಮ್ಮಪ್ಪ ಕೋಟ್ಯಾನ್ ಉಪಸ್ಥಿತರಿದ್ದರು.

ಮಣಿಪಾಲದ ಎಂಐಟಿಯಲ್ಲಿ ಸಂಶೋಧನೆ ನಿತೀಶ್ ಕುಮಾರ್‌ಗೆ ಪಿಎಚ್.ಡಿ ಪದವಿ



ಮಂಗಳೂರು: ಮಣಿಪಾಲ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ (ಎಂಐಟಿ) ಗಣಿತ ವಿಭಾಗದಲ್ಲಿ (ಸ್ಕೂಲ್ ಆಫ್ ಬೇಸಿಕ್ ಸಯನ್ಸ್) ಸಂಶೋಧನೆ ನಡೆಸುತ್ತಿದ್ದ ನಿತೀಶ್ ಕುಮಾರ್ ಅವರು ತಮ್ಮ ಪಿಎಚ್.ಡಿ ಮಹಾಪ್ರಬಂಧವನ್ನು ಯಶಸ್ವಿಯಾಗಿ ಮಂಡಿಸಿ, ಅಧಿಕೃತವಾಗಿ ಡಾಕ್ಟರೇಟ್ ಪದವಿಗೆ ಭಾಜನರಾಗಿದ್ದಾರೆ.

ಇವರು ತಮ್ಮ ಈ ಮಹತ್ವದ ಸಂಶೋಧನಾ ಪ್ರಬಂಧವನ್ನು ಮಣಿಪಾಲ ಎಂಐಟಿಯ ಗಣಿತ ವಿಭಾಗದ ಪ್ರಾಧ್ಯಾಪಕ ಡಾ. ವಾದಿರಾಜ ಭಟ್ಟ ಜಿ. ಆರ್. ಅವರ ಮುಖ್ಯ ಮಾರ್ಗದರ್ಶನದಲ್ಲಿ ಹಾಗೂ ಸಹ–ಪ್ರಾಧ್ಯಾಪಕರಾದ ಡಾ. ಪ್ರಸನ್ನ ಪೂಜಾರಿ ಅವರ ಸಹ–ಮಾರ್ಗದರ್ಶನದಲ್ಲಿ ಯಶಸ್ವಿಯಾಗಿ ಪೂರ್ಣಗೊಳಿಸಿದ್ದಾರೆ.

ಮಂಗಲ್ಪಾಡಿ– ಪ್ರತಾಪನಗರ ನಿವಾಸಿಯಾದ ರಾಧಾಕೃಷ್ಣ ಆಚಾರ್ಯ, ದಿವಂಗತ ಉಮಾವತಿ ಆಚಾರ್ಯ ಅವರ ಪುತ್ರರಾದ ನಿತೀಶ್ ಕುಮಾರ್ ಅವರು, ಗಣಿತ ವಿಭಾಗದಲ್ಲಿ 'w&"r- CLOSED SETS AND VALUE SETS OVER FINITE FIELDS WITH APPLICATIONS" ಎಂಬ ಅತ್ಯಂತ ಸಂಕೀರ್ಣ ಹಾಗೂ ಮಹತ್ವದ ವಿಷಯದ ಮೇಲೆ ಸುದೀರ್ಘ ಸಂಶೋಧನೆ ನಡೆಸಿ ಈ ಸಾಧನೆಗೈದಿದ್ದಾರೆ.

ವರ್ಷಗಳ ನಿರಂತರ ಕಠಿಣ ಪರಿಶ್ರಮ ಹಾಗೂ ಗಣಿತ ಕ್ಷೇತ್ರದ ಮೇಲಿನ ಅಪಾರ ಆಸಕ್ತಿಯ ಪ್ರತಿಫಲವಾಗಿ ಇಂದು ಅವರಿಗೆ ಈ ಉನ್ನತ ಗೌರವ ಲಭಿಸಿದೆ. ಇವರ ಈ ಶೈಕ್ಷಣಿಕ ಸಾಧನೆಯು ಯುವ ಪೀಳಿಗೆಗೆ ಪ್ರೇರಣೆಯಾಗಿದೆ.

ಡಾ. ನಿತೀಶ್ ಕುಮಾರ್ ಅವರ ನಿರಂತರ ಶ್ರಮ ಮತ್ತು ಛಲವನ್ನು ಶ್ಲಾಘಿಸುತ್ತಾ, ಅವರ ಮುಂದಿನ ಉಜ್ವಲ ಭವಿಷ್ಯ ಹಾಗೂ ಶೈಕ್ಷಣಿಕ ಜೀವನಕ್ಕೆ ಊರಿನ ಸಮಸ್ತ ನಾಗರಿಕರು, ಹಿತೈಷಿಗಳು ಮತ್ತು ಮಿತ್ರರು ಹೃತ್ಪೂರ್ವಕ ಅಭಿನಂದನೆಗಳನ್ನು ಸಲ್ಲಿಸಿದ್ದಾರೆ.

ಆಳ್ವಾಸ್‌ನಲ್ಲಿ 'ಮೈ ಪ್ಲಾನೆಟ್, ಮೈ ಫೈಡ್' ವಿಶೇಷ ಉಪನ್ಯಾಸ | ಆರ್.ಕೆ. ನಾಯರ್ ಮೆಚ್ಚುಗೆ

ಆಳ್ವಾಸ್ ಹಸಿರು ಪ್ರೇಮ ಶ್ಲಾಘನಾರ್ಹ

ಮೂಡುಬಿದಿರೆ: ಪ್ರಕೃತಿಯ ಸಂಪನ್ಮೂಲಗಳ ಮೇಲೆ ಸಂಪೂರ್ಣವಾಗಿ ಅವಲಂಬಿತನಾಗಿರುವ ಮಾನವ, ಅವುಗಳನ್ನು ನಿರಂತರವಾಗಿ ಬಳಸುತ್ತಿದ್ದರೂ ಪ್ರಕೃತಿಗೆ ತನ್ನ ಋಣವನ್ನು ತೀರಿಸುವ ಕಿಂಚಿತ್ತು ಪ್ರಯತ್ನ ಮಾಡುತ್ತಿಲ್ಲ ಎಂದು 'ಗ್ರೀನ್ ಹೀರೋ ಆಫ್ ಇಂಡಿಯಾ' ಖ್ಯಾತಿಯ ಆರ್.ಕೆ. ನಾಯರ್ ಅಭಿಪ್ರಾಯಪಟ್ಟರು.

ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ರೋಸ್ಟ್ರಮ್ ಸ್ಪೀಕರ್ಸ್ ಕ್ಲಬ್ ಹಾಗೂ ರೋಟರಿ ಕ್ಲಬ್ ಮಂಗಳೂರು ಸೆಂಟ್ರಲ್ ಇವುಗಳ ಸಂಯುಕ್ತ ಆಶ್ರಯದಲ್ಲಿ ವಿ.ಎಸ್. ಆಚಾರ್ಯ ಸಭಾಂಗಣದಲ್ಲಿ ಸೋಮವಾರ ನಡೆದ 'ಮೈ ಪ್ಲಾನೆಟ್, ಮೈ ಫೈಡ್' ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಭಾರತದ ಭಾಷಾ ವೈವಿಧ್ಯತೆ ಮತ್ತು ಜೀವ ವೈವಿಧ್ಯತೆಯನ್ನು ಹೋಲಿಕೆ ಮಾಡಿದ ನಾಯರ್, ವಿವಿಧ ಭಾಷೆಗಳು ಹೇಗೆ ಪರಸ್ಪರ ಸಹಬಾಳ್ವೆಯಿಂದ ಬೆಳೆಯುತ್ತವೆಯೋ, ಅದೇ ರೀತಿ ಪರಿಸರ ವ್ಯವಸ್ಥೆಯೂ ವೈವಿಧ್ಯತೆ ಮತ್ತು ಪರಸ್ಪರ ಅವಲಂಬನೆಯ ಮೇಲೆ ನಿಂತಿದೆ. ನಾವು ಉಸಿರಾಡುವ ಗಾಳಿ, ಕುಡಿಯುವ ನೀರು, ಬೆಟ್ಟಗಳು, ನದಿಗಳು, ಕಾಡುಗಳು ಹಾಗೂ ಜೀವ ಜಗತ್ತು ಯಾವುದನ್ನೂ ಮಾನವ ಸೃಷ್ಟಿಸಿಲ್ಲ. ಇವೆಲ್ಲವೂ ಪ್ರಕೃತಿಯ ಕೊಡುಗೆಗಳು ಎಂದರು.

ತಮ್ಮ ಪರಿಸರ ಯೋಜನೆಗಳ ಅನುಭವ ಹಂಚಿಕೊಂಡ ಅವರು, ತಮ್ಮ ಪರಿಸರ ಯೋಜನೆಗಳ ಯಶಸ್ಸಿನಿಂದ ಜನರು ತಮ್ಮನ್ನು 'ಬಾಬಾ' ಅಥವಾ ಪವಾಡ ಪುರುಷನಂತೆ ಕಾಣುವುದುಂಟು. ಆದರೆ ಯಾವುದೇ ಪವಾಡವಿಲ್ಲ; ಪ್ರಕೃತಿಯ ಶಕ್ತಿಯನ್ನು ಅರ್ಥಮಾಡಿಕೊಂಡು ಅದರೊಂದಿಗೆ ಕೆಲಸ ಮಾಡಿದಾಗ ಇಂತಹ ಫಲಿತಾಂಶಗಳು ಸಾಧ್ಯವಾಗುತ್ತವೆ ಎಂದರು.

ಸಮುದ್ರ ತೀರದ ಉಪ್ಪುಮಣ್ಣಿನ ಪ್ರದೇಶಗಳಂತಹ ಅತ್ಯಂತ ಸವಾಲಿನ ಪರಿಸರದಲ್ಲಿಯೂ ಮಿಯಾವಾಕಿ ಮಾದರಿಯ ಅರಣ್ಯಗಳನ್ನು ಯಶಸ್ವಿಯಾಗಿ ನಿರ್ಮಿಸಿರುವ ಅನುಭವವನ್ನು ಹಂಚಿಕೊಂಡ ಅವರು, ಆರಂಭದಲ್ಲಿ ಅಸಾಧ್ಯವೆಂದು ಪರಿಗಣಿಸಲ್ಪಟ್ಟ ಅನೇಕ ಯೋಜನೆಗಳು ಇಂದು ಪರಿಸರ ಪುನಶ್ಚೇತನದ ಯಶಸ್ವಿ ಮಾದರಿಗಳಾಗಿವೆ. ಗುಜರಾತಿನ ಸ್ಮೃತಿವನ ಯೋಜನೆಯನ್ನು ಉದಾಹರಿಸಿದ ಅವರು, ದೃಢಸಂಕಲ್ಪ, ಜನಸಹಭಾಗಿತ್ವ ಹಾಗೂ ದೂರದೃಷ್ಟಿಯ ಯೋಜನೆಯೊಂದಿಗೆ ಹಾಳಾಗಿರುವ ಭೂಭಾಗಗಳನ್ನೂ ಹಸಿರು ಸಂಪತ್ತಾಗಿ ಪರಿವರ್ತಿಸಬಹುದು ಎಂಬುದನ್ನು ಈ ಯೋಜನೆ ಸಾಬೀತುಪಡಿಸಿದೆ ಎಂದರು.

ಆಳ್ವಾಸ್ ಆವರಣದಲ್ಲಿ ಕಾಪಾಡಿಕೊಂಡಿರುವ ಹಸಿರು ಮತ್ತು ಸ್ವಚ್ಛ ವಾತಾವರಣವನ್ನು ಶ್ಲಾಘಿಸಿದ ಅವರು, ವಿದ್ಯಾರ್ಥಿಗಳು ಸುಸ್ಥಿರ ಜೀವನಶೈಲಿ ಅಳವಡಿಸಿಕೊಳ್ಳಬೇಕು, ನೀರು ಸಂರಕ್ಷಿಸಬೇಕು, ತ್ಯಾಜ್ಯವನ್ನು ಕಡಿಮೆ ಮಾಡಬೇಕು ಹಾಗೂ ಪರಿಸರ ಸಂರಕ್ಷಣಾ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳಬೇಕು ಎಂದು ಕರೆ ನೀಡಿದರು.



> **ಪರಿಸರ ಸಂರಕ್ಷಣೆಯ ಜವಾಬ್ದಾರಿಯನ್ನು ಸರ್ಕಾರ, ಅಧಿಕಾರಿಗಳು ಅಥವಾ ರಾಜಕಾರಣಿಗಳ ಜವಾಬ್ದಾರಿ ಮಾತ್ರವಲ್ಲ. ನಾಗರಿಕ ಪ್ರಜ್ಞೆ ಪ್ರತಿಯೊಬ್ಬರ ಜೀವನಶೈಲಿಯ ಭಾಗವಾಗಬೇಕು ಬಟ್ಟೆ ಕೊಳೆಯಾದರೆ ಬದಲಾಯಿಸಬಹುದು. ಆದರೆ ಭೂಮಿಯನ್ನು ಬದಲಾಯಿಸಲು ಸಾಧ್ಯವಿಲ್ಲ. ಸ್ವಚ್ಛತೆ, ನಾಗರಿಕ ಪ್ರಜ್ಞೆ ಮತ್ತು ಪರಿಸರದ ಬಗ್ಗೆ ಗೌರವ ನಮ್ಮ ದೈನಂದಿನ ಬದುಕಿನ ಭಾಗವಾಗಬೇಕು.**
> ■ ಆರ್.ಕೆ. ನಾಯರ್

ಪ್ರಕೃತಿ ಉಳಿಸುವ ಜವಾಬ್ದಾರಿ ನಮ್ಮದು

ಕಾರ್ಯಕ್ರಮದ ಅಧ್ಯಕ್ಷತೆವಹಿಸಿದ್ದ ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ವ್ಯವಸ್ಥಾಪಕ ಟ್ರಸ್ಟಿ ವಿವೇಕ್ ಆಳ್ವ ಮಾತನಾಡಿ, ನಾಗರಿಕ ಪ್ರಜ್ಞೆಯನ್ನು ಯಾರೂ ಕಲಿಸಿಕೊಡಲು ಸಾಧ್ಯವಿಲ್ಲ; ಅದನ್ನು ಅರ್ಥಮಾಡಿಕೊಂಡು ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಪರಿಸರ ಸಂರಕ್ಷಣೆಗೆ ತಮ್ಮನ್ನು ತಾವು ಸಮರ್ಪಿಸಿಕೊಂಡಿರುವ 'ಗ್ರೀನ್ ವಾರಿಯರ್ಸ್'ಗಳನ್ನು ಸಮಾಜ ಗೌರವಿಸಬೇಕು. ಯಾರೂ ಇವರಿಗೆ ಈ ಜವಾಬ್ದಾರಿಯನ್ನು ನೀಡಿಲ್ಲ. ಸಮಾಜದ ಒಳಿತಿಗಾಗಿ ಅವರು ಸ್ವಯಂಪ್ರೇರಿತರಾಗಿ ಈ ಹೊಣೆ ಹೊತ್ತಿದ್ದಾರೆ. ಪಶ್ಚಿಮ ಘಟ್ಟ ಮತ್ತು ಅರಬ್ಬೀ ಸಮುದ್ರ ಎಂಬ ಅಮೂಲ್ಯ ಪ್ರಕೃತಿ ಸಂಪತ್ತನ್ನು ಹೊಂದಿರುವ ಕರಾವಳಿ ಕರ್ನಾಟಕ ಭಾಗದ ಜನರು ಅದೃಷ್ಟವಂತರು. ಈ ಸಂಪತ್ತನ್ನು ಉಳಿಸಿ ಬೆಳೆಸುವ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ.

ಜಾತಿ, ಧರ್ಮ ಮುಂತಾದ ವಿಷಯಗಳು ಸಾರ್ವಜನಿಕ ಚರ್ಚೆಯಲ್ಲಿ ಹೆಚ್ಚಿನ ಪ್ರಾಮುಖ್ಯತೆ ಪಡೆಯುತ್ತಿರುವ ಸಂದರ್ಭದಲ್ಲಿ ಪರಿಸರದ ಧ್ವನಿ ಹಿಂಬದಿಗೆ ಸರಿಯುತ್ತಿರುವುದು ವಿಷಾದನೀಯ. ಪರಿಸರ ಸಂರಕ್ಷಣೆಯ ಪರವಾಗಿ ಸಮಾಜ ಒಗ್ಗಟ್ಟಿನ ಧ್ವನಿ ಎತ್ತಬೇಕಿದೆ. ಭಿನ್ನಾಭಿಪ್ರಾಯಗಳು ವ್ಯಕ್ತಿಗಳ ನಡುವೆ ಇರಬಹುದು, ಆದರೆ ಎಲ್ಲರ ಬದುಕಿಗೂ ಆಧಾರವಾಗಿರುವ ಪ್ರಕೃತಿಯ ಬಗ್ಗೆ ಎಂದಿಗೂ ನಿರ್ಲಕ್ಷ್ಯ ಅಥವಾ ಅಸಡ್ಡೆ ಇರಕೂಡದು ಎಂದರು.

ಕಾರ್ಯಕ್ರಮದ ನಂತರ ಮಿಜಾರಿನ ಆಳ್ವಾಸ್ ಕ್ಯಾಂಪಸ್‌ನ ಹರೀಶ್ ಭಟ್ ವನದಲ್ಲಿ ಔಷಧೀಯ ಸಸ್ಯಗಳ ನೆಡುವ ಮೂಲಕ ಹಸಿರು ಅಭಿಯಾನಕ್ಕೆ ಚಾಲನೆ ನೀಡಿದರು.

ರೋಟರಿ ಕ್ಲಬ್ ಮಂಗಳೂರು ಸೆಂಟ್ರಲ್ ಅಧ್ಯಕ್ಷ ಭಾಸ್ಕರ್ ರೈ ಕಟ್ಟ, ರೊಟರ್ಯಾಕ್ಟ್ ಸೌತ್ ವಿಷ್ಣು ಅಧ್ಯಕ್ಷ ಡ್ಯಾರೆಲ್ ಡಿಸೋಜಾ, ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯ ಸಮಿತಿ ಸದಸ್ಯ ಶ್ರೀನಿವಾಸ್ ನಾಯಕ್ ಇಂದಾಜೆ, ರೋಸ್ಟ್ರಮ್ ಸ್ಪೀಕರ್ಸ್ ಕ್ಲಬ್ ಅಧ್ಯಕ್ಷೆ ಡಾ. ದೀಪಾ ಕೊಠಾರಿ, ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಇಡಿಸಿ ಮುಖ್ಯಸ್ಥೆ ಹಾಗೂ ಕಾರ್ಯಕ್ರಮ ಸಂಯೋಜಕ ವೇಣುರಾವ್‌ದೇವಾ ಉಪಸ್ಥಿತರಿದ್ದರು. ತೃಷಾ ಹೆಗ್ಡೆ ಕಾರ್‍ಯಕ್ರಮ ನಿರೂಪಿಸಿ ವಿತುಲಾ ಜೈನ್ ಸ್ವಾಗತಿಸಿ, ಡಾ. ರುಚಿಕಾ ಸಹಕರಿಸಿದರು.

ಉಜಿರೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸೇವಾ ಸಂಘ | 'ಉತ್ಥಾನ' ಲೋಕಾರ್ಪಣೆ

ಡಾ.ಎಂ.ಎನ್.ರಾಜೇಂದ್ರ ಕುಮಾರ್‌ಗೆ ಸನ್ಮಾನ



ಮಂಗಳೂರು: ಉಜಿರೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸೇವಾ ಸಂಘದ 'ಉತ್ಥಾನ' ನೂತನ ಕಟ್ಟಡದ ಲೋಕಾರ್ಪಣೆ ಹಿನ್ನೆಲೆಯಲ್ಲಿ, ಎಸ್‌ಸಿಡಿಸಿಸಿ ಬ್ಯಾಂಕ್ ಹಾಗೂ ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾಮಂಡಳದ ಅಧ್ಯಕ್ಷ ಸಹಕಾರ ರತ್ನ ಡಾ. ಎಂ.ಎನ್. ರಾಜೇಂದ್ರ ಕುಮಾರ್ ಅವರನ್ನು ಸೋಮವಾರ ಎಸ್‌ಸಿಡಿಸಿಸಿ ಬ್ಯಾಂಕ್‌ನಲ್ಲಿ ಆತ್ಮೀಯವಾಗಿ ಸನ್ಮಾನಿಸಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ಉಜಿರೆ ಕೃಷಿ ಪತ್ತಿನ ಸಹಕಾರಿ ಸೇವಾ ಸಂಘದ ಅಧ್ಯಕ್ಷ ಕೇರಿಮಾರ್ ಬಾಲಕೃಷ್ಣ ಗೌಡ, ಸಂಘದ ನಿರಂತರ ಅಭಿವೃದ್ಧಿಗೆ ಡಾ. ರಾಜೇಂದ್ರ ಕುಮಾರ್ ಅವರ ಮಾರ್ಗದರ್ಶನ ಮತ್ತು ಸಹಕಾರ ಮಹತ್ವದ ಪಾತ್ರ ವಹಿಸಿದೆ ಎಂದು ಸ್ಮರಿಸಿದರು. ಬಳಿಕ ಸಂಘದ ಆಡಳಿತ ಮಂಡಳಿಯ ನಿರ್ದೇಶಕರೊಂದಿಗೆ ಸೇರಿ ಅವರನ್ನು ಗೌರವಿಸಿ ಅಭಿನಂದಿಸಿದರು.

ಸನ್ಮಾನ ಸ್ವೀಕರಿಸಿ ಮಾತನಾಡಿದ ಡಾ. ಎಂ.ಎನ್. ರಾಜೇಂದ್ರ ಕುಮಾರ್, ಸಹಕಾರಿ ಕ್ಷೇತ್ರದಲ್ಲಿ ತನ್ನದೇ ಆದ ವಿಶಿಷ್ಟ ಗುರುತನ್ನು ನಿರ್ಮಿಸಿಕೊಂಡಿರುವ ಉಜಿರೆ ಕೃಷಿ ಪತ್ತಿನ ಸಹಕಾರಿ ಸೇವಾ ಸಂಘವು ಇದೀಗ ರೂ. 3.50 ಕೋಟಿ ವೆಚ್ಚದಲ್ಲಿ ನಿರ್ಮಿಸಿರುವ 'ಉತ್ಥಾನ' ನೂತನ ಕಟ್ಟಡವನ್ನು ಲೋಕಾರ್ಪಣೆಗೊಳಿಸುವ ಮೂಲಕ ತನ್ನ ಸೇವಾ ಬದ್ಧತೆ ಮತ್ತು ಅಭಿವೃದ್ಧಿಯ ಸಂಕಲ್ಪವನ್ನು ಮತ್ತೊಮ್ಮೆ ಪ್ರತಿಬಿಂಬಿಸಿದೆ ಎಂದು ಹೇಳಿದರು. ಇದೇ ಸಂದರ್ಭದಲ್ಲಿ ನೂತನ ಕಟ್ಟಡದ ಅಭಿವೃದ್ಧಿಗೆ ಎಸ್‌ಸಿಡಿಸಿಸಿ ಬ್ಯಾಂಕ್ ವತಿಯಿಂದ 10 ಲಕ್ಷ ರೂ. ಸಹಾಯಧನ ನೀಡಲಾಗುವುದು ಎಂದು ಅವರು ಘೋಷಿಸಿದರು.

ಎಸ್‌ಸಿಡಿಸಿಸಿ ಬ್ಯಾಂಕಿನ ಉಪಾಧ್ಯಕ್ಷ ವಿನಯ ಕುಮಾರ್ ಸೂರಿಂಜೆ, ನಿರ್ದೇಶಕರಾದ ಶಶಿಕುಮಾರ್ ರೈ ಬಾಲ್ಯೊಟ್ಟು, ಕುಶಾಲಪ್ಪ ಗೌಡ, ಪೆರಾಡಿ ವ್ಯವಸಾಯ ಸೇವಾ ಸಹಕಾರಿ ಸಂಘದ ಅಧ್ಯಕ್ಷ ಸತೀಶ್ ಪೆರಾಡಿ, ಉಜಿರೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸೇವಾ ಸಂಘದ ನಿರ್ದೇಶಕರಾದ ರಜತ್ ಗೌಡ, ಗುರುರಾಜ್, ಪುಷ್ಪಾವತಿ, ಅಣ್ಣು ನಾಯ್ಕ್ ಹಾಗೂ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಸರಸ್ವತಿ ಉಪಸ್ಥಿತರಿದ್ದರು.

ಬಿಜೆಪಿ ಕಾಸರಗೋಡು ಜಿಲ್ಲಾ ನಾಯಕರ ಸಭೆ

ಜನಮನದಲ್ಲಿ ಮುಖ್ಯ ವಿರೋಧ ಪಕ್ಷ ಸ್ಥಾನ ಬಿಜೆಪಿಗೆ:ವಿ.ಕೆ.ಸಜೀವನ್

ಕಾಸರಗೋಡು: ಇತ್ತೀಚೆಗೆ ನಡೆದ ಕೇರಳ ವಿಧಾನಸಭಾ ಚುನಾವಣೆ ಯೊಂದಿಗೆ ಜನಮನದಲ್ಲಿ ಮುಖ್ಯ ವಿರೋಧ ಪಕ್ಷದ ಸ್ಥಾನವನ್ನು ಬಿಜೆಪಿ ಅಲಂಕರಿಸಿದೆ. ವಿಧಾನಸಭೆಯ ಒಳಗೂ ಮತ್ತು ಹೊರಗೂ ಬಿಜೆಪಿ ಶಾಸಕರು ಶಬರಿಮಲೆ ಚಿನ್ನ ಲೂಟಿ, ಸಿಎಂಆರ್‌ಎಲ್ – ಎಕ್ಸಾಲೋಜಿಕ್ ಮಾಸಾಶನ (ಮಂತ್ಲಿ ಪೇಮೆಂಟ್) ಸೇರಿದಂತೆ ವಿವಿಧ ವಿಷಯಗಳನ್ನು ಮತ್ತೊಮ್ಮೆ ಸಕ್ರಿಯಗೊಳಿಸಿದ್ದಾರೆ ಎಂದು ಬಿಜೆಪಿ ರಾಜ್ಯ ಸೆಲ್ ಸಂಯೋಜಕ ವಿ.ಕೆ. ಸಜೀವನ್ ತಿಳಿಸಿದ್ದಾರೆ.

ಪಂಡಿತ್ ದೀನ್ ದಯಾಳ್ ಉಪಾಧ್ಯಾಯ ಪ್ರಶಿಕ್ಷಣ್ ಮಹಾ ಅಭಿಯಾನದ ಅಂಗವಾಗಿ ಬಿಜೆಪಿ ಕಾಸರಗೋಡು ಜಿಲ್ಲಾ ಕಾರ್ಯಾಲಯವಾದ ಡಾ.ಶ್ಯಾಮ್ ಪ್ರಸಾದ್ ಮುಖರ್ಜಿ ಮಂದಿರದಲ್ಲಿ ಸೋಮವಾರ ನಡೆದ ಜಿಲ್ಲಾ ನಾಯಕರ ಸಭೆಯನ್ನು ಉದ್ಘಾಟಿಸಿ ಅವರು ಮಾತನಾಡಿದರು.



ತರಬೇತಿ ಕಾರ್ಯಕ್ರಮ

ನರೇಂದ್ರಮೋದಿಯವರನಾಯಕತ್ವಕ್ಕೆ ಆಕರ್ಷಿತರಾಗಿ ಬಿಜೆಪಿಗೆ ಹೊಸದಾಗಿ ಸೇರ್ಪಡೆಗೊಳ್ಳುತ್ತಿರುವವರಲ್ಲಿ ಮತ್ತು ಪ್ರಸ್ತುತ ಬಿಜೆಪಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಕಾರ್ಯಕರ್ತರಲ್ಲಿ ಪಕ್ಷದ ಸಿದ್ಧಾಂತ, ಇತಿಹಾಸ, ಕಾರ್ಯಯೋಜನೆ ಮತ್ತು ಗುರಿಗಳ ಬಗ್ಗೆ ಸ್ಪಷ್ಟ ಅರಿವು ಮೂಡಿಸುವ ಉದ್ದೇಶದಿಂದ ಇಂತಹ ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತಿದೆ. ಮೂರು ವರ್ಷಗಳ ಅವಧಿಯಲ್ಲಿ ಸದಸ್ಯತ್ವ ವಿತರಣೆ, ಪದಾಧಿಕಾರಿಗಳ ಆಯ್ಕೆ ಮತ್ತು ತರಬೇತಿಯನ್ನು ನಿಖರವಾಗಿ ಅನುಷ್ಠಾನಗೊಳಿಸುವ ಏಕೈಕ ರಾಜಕೀಯ ಪಕ್ಷ ಬಿಜೆಪಿ ಮಾತ್ರವಾಗಿದೆ ಎಂದು ಅವರು ಹೇಳಿದರು.

ಬಿಜೆಪಿ ಜಿಲ್ಲಾಧ್ಯಕ್ಷೆ ಎಂ.ಎಲ್. ಅಶ್ವಿನಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಬಿಜೆಪಿ ರಾಷ್ಟ್ರೀಯ ಕೌನ್ಸಿಲ್ ಸದಸ್ಯ ಎಂ.ಸಂಜೀವ ಶೆಟ್ಟಿ, ರಾಜ್ಯ ಸಮಿತಿ ಸದಸ್ಯ ಎ.ವೇಲಾಯುಧನ್, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಪಿ.ಆರ್.ಸುನೀಲ್, ರಾಜ್ಯ ಕೌನ್ಸಿಲ್ ಸದಸ್ಯ ಶಿವಕೃಷ್ಣ ಭಟ್, ಜಿಲ್ಲಾ ಸೆಲ್ ಸಂಯೋಜಕ ಸುಕುಮಾರ ಕುದ್ರೆಪ್ಪಾಡಿ ಉಪಸ್ಥಿತರಿದ್ದು ಮಾತನಾಡಿದರು.

ಮಂಗಳೂರಿನ 'ಪ್ರಭಾಕರ ಘಾಟೆ' ಸಭಾಂಗಣದಲ್ಲಿ ಬಿಎಂಎಸ್ ಜಿಲ್ಲಾ ಕಾರ್ಯಕಾರಿಣಿ ಸಭೆ | ವಿ.ರಾಧಾಕೃಷ್ಣನ್ ವೇಲು ಸಲಹೆ

ಕಾರ್ಮಿಕ ಸಂಘಟನೆಗಳ ಬಲವರ್ಧನೆಗೆ ಸಮಗ್ರ ಕಾರ್ಯಯೋಜನೆ

ಮಂಗಳೂರು: ಕಾರ್ಮಿಕರ ಸಮಸ್ಯೆಗಳ ಪರಿಣಾಮಕಾರಿ ಪರಿಹಾರ, ಸಂಘಟನೆಯ ವಿಸ್ತರಣೆ, ಯೂನಿಯನ್‌ಗಳ ಸಬಲೀಕರಣ ಹಾಗೂ ಹೊಸ ಕ್ಷೇತ್ರಗಳ ಕಾರ್ಮಿಕರನ್ನು ಸಂಘಟಿಸುವ ಸಮಗ್ರ ಕಾರ್ಯಯೋಜನೆಯೊಂದಿಗೆ ಭಾರತೀಯ ಮಜ್ದೂರ್ ಸಂಘದ (ಬಿಎಂಎಸ್) ದಕ್ಷಿಣ ಕನ್ನಡ ಜಿಲ್ಲಾ ಕಾರ್ಯಕಾರಿಣಿ ಸಭೆಯು ಜಿಲ್ಲಾ ಕಾರ್ಯಾಲಯದ 'ಪ್ರಭಾಕರ ಘಾಟೆ' ಸಭಾಂಗಣದಲ್ಲಿ ನಡೆಯಿತು.

ಸಭೆಯಲ್ಲಿ ಭಾರತೀಯ ಮಜ್ದೂರ್ ಸಂಘದ ದಕ್ಷಿಣ ಮತ್ತು ದಕ್ಷಿಣ ಮಧ್ಯ ಕ್ಷೇತ್ರೀಯ ಸಂಘಟನಾ ಕಾರ್ಯದರ್ಶಿ ವಿ.ರಾಧಾಕೃಷ್ಣನ್ ವೇಲು ಅವರು ಮಾತನಾಡಿ, ಕಾರ್ಮಿಕ ಸಂಘಟನೆಗಳು ಬಲಿಷ್ಠವಾಗಬೇಕಾದರೆ ಆಡಳಿತಾತ್ಮಕ ಶಿಸ್ತು, ದಾಖಲಾತಿಗಳ ಸಮರ್ಪಕ ನಿರ್ವಹಣೆ ಹಾಗೂ ಸದಸ್ಯತ್ವ ವೃದ್ಧಿಗೆ ಹೆಚ್ಚಿನ ಒತ್ತು ನೀಡಬೇಕು ಎಂದು ಹೇಳಿದರು.

ಪ್ರತಿಯೊಂದು ಯೂನಿಯನ್ ಸದಸ್ಯತ್ವ ರಿಜಿಸ್ಟರ್, ಮಿನಿಟ್ ಬುಕ್, ಕ್ಯಾಶ್ ಬುಕ್, ರಶೀದಿ ಪುಸ್ತಕ ಸೇರಿದಂತೆ ಅಗತ್ಯ ದಾಖಲೆಗಳನ್ನು ನಿಯಮಾನುಸಾರ ನಿರ್ವಹಿಸಬೇಕು. ಕಾರ್ಮಿಕರ ಸಮಸ್ಯೆಗಳನ್ನು ಆಳವಾಗಿ ಅಧ್ಯಯನ ಮಾಡಿ, ಸಂಘಟಿತ ಹೋರಾಟದ ಮೂಲಕ ಪರಿಹಾರ ಕಂಡುಕೊಳ್ಳುವಸಾಮರ್ಥ್ಯವನ್ನುಬೆಳೆಸಿಕೊಳ್ಳಬೇಕು ಎಂದು ಅವರು ಕರೆ ನೀಡಿದರು.

ಹಿರಿಯ ಮುಖಂಡರಾದ ವಿಶ್ವನಾಥ್ ಶೆಟ್ಟಿ ಅವರು ಭಾರತೀಯ ಮಜ್ದೂರ್ ಸಂಘದ ಸುದೀರ್ಘ ಪಯಣ, ಹಿರಿಯ ಕಾರ್ಯಕರ್ತರ ತ್ಯಾಗ ಮತ್ತು ಸಮರ್ಪಣೆಯನ್ನು ಸ್ಮರಿಸಿ ಮಾತನಾಡಿದರು. ಸಂಘಟನೆಯು ಇಂದು ಬೆಳೆದಿರುವುದು ಸಾವಿರಾರು ಕಾರ್ಯಕರ್ತರ ನಿಸ್ವಾರ್ಥ ಸೇವೆಯಿಂದಾಗಿದ್ದು, ಆ ಪರಂಪರೆಯನ್ನು ಮುಂದುವರಿಸುವ ಜವಾಬ್ದಾರಿ ಇಂದಿನ ಕಾರ್ಯಕರ್ತರ ಮೇಲಿದೆ ಎಂದು ಹೇಳಿದರು.



> **ಜಿಲ್ಲೆಯಲ್ಲಿ ನಡೆಯಲಿರುವ ಜಿಲ್ಲಾ ಸಮ್ಮೇಳನವು ಸಂಘಟನೆಯ ಬೆಳವಣಿಗೆಯಲ್ಲಿ ಮಹತ್ವದ ಮೈಲಿಗಲ್ಲಾಗಬೇಕಿದ್ದು, ಎಲ್ಲಾ ಸಂಯೋಜಿತ ಯೂನಿಯನ್‌ಗಳು ಮತ್ತು ಕಾರ್ಯಕರ್ತರು ಸಕ್ರಿಯವಾಗಿ ಭಾಗವಹಿಸಿ ಅದನ್ನು ಯಶಸ್ವಿಗೊಳಿಸಬೇಕು ಎಂದು ತಿಳಿಸಿದರು. ಜಿಲ್ಲಾ ಸಮ್ಮೇಳನವು ಸಂಘಟನೆಯ ಶಕ್ತಿ, ಏಕತೆ ಮತ್ತು ಕಾರ್ಯಕ್ಷಮತೆಯನ್ನು ಸಮಾಜದ ಮುಂದೆ ಪ್ರದರ್ಶಿಸುವ ವೇದಿಕೆಯಾಗಲಿದೆ.**
> ■ ವಿಶ್ವನಾಥ್ ಎಚ್.ಎಲ್, ರಾಜ್ಯ ಪ್ರಧಾನ ಕಾರ್ಯದರ್ಶಿ

ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದ ವಕೀಲ ಅನಿಲ್ ಕುಮಾರ್ ಯು. ಅವರು ಮಾತನಾಡಿ, ಭಾರತೀಯ ಮಜ್ದೂರ್ ಸಂಘವು ಕೇವಲ ಕಾರ್ಮಿಕರ ಬೇಡಿಕೆಗಳಿಗಾಗಿ ಹೋರಾಡುವ ಸಂಘಟನೆಯಲ್ಲ; ರಾಷ್ಟ್ರ ನಿರ್ಮಾಣದಲ್ಲಿ ಕಾರ್ಮಿಕರ ಪಾತ್ರವನ್ನು ಬಲಪಡಿಸುವ ರಾಷ್ಟ್ರೀಯ ಚಳವಳಿಯಾಗಿದೆ ಎಂದು ಹೇಳಿದರು.

ಕೇಂದ್ರ ಮತ್ತು ರಾಜ್ಯ ಸಂಘಟನೆಯ ಮಾರ್ಗದರ್ಶನವನ್ನು ಜಿಲ್ಲೆಯಲ್ಲಿ ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವ ಸಂಕಲ್ಪ ವ್ಯಕ್ತಪಡಿಸಿದ ಅವರು, ಸದಸ್ಯತ್ವ ವೃದ್ಧಿ, ಹೊಸ ಕ್ಷೇತ್ರಗಳ ಕಾರ್ಮಿಕರ ಸಂಘಟನೆ, ಯೂನಿಯನ್‌ಗಳ ಸಬಲೀಕರಣ ಹಾಗೂ ಕಾರ್ಮಿಕರ ಸಮಸ್ಯೆಗಳ ಪರಿಹಾರಕ್ಕೆ ಹೆಚ್ಚಿನ ಆದ್ಯತೆ ನೀಡಲಾಗುವುದು ಎಂದು ತಿಳಿಸಿದರು.

ಸಭೆಯಲ್ಲಿ ರಾಜ್ಯ ಕಾರ್ಯದರ್ಶಿ ಜಯರಾಜ್ ಸಾಲ್ಯಾನ್, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಗೋಪಾಲಕೃಷ್ಣ ಜಿಲ್ಲಾ ಸಂಘಟನಾ ಕಾರ್ಯದರ್ಶಿ ವಸಂತ ಕುಮಾರ್ ಮನಿಹಳ್ಳ, ಪ್ರಮುಖರಾದ ಕುಮಾರನಾಥ್, ಸುದೀಂದ್ರ ಹಾಗೂ ಜಿಲ್ಲೆಯ ಪದಾಧಿಕಾರಿಗಳು ಮತ್ತು ಜಿಲ್ಲೆಯ ಎಲ್ಲಾ ಸಂಯೋಜಿತ ಯೂನಿಯನ್‌ಗಳ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಕಿರುಸುದ್ದಿ

ಆವೆಮಣ್ಣಿನ ರಾಜ ಜ್ವೆರೆವ್ ಚೊಚ್ಚಲ ಸ್ಲಾಮ್ ಗೆದ್ದ ವೀರ



ಪ್ಯಾರಿಸ್: ಫ್ರೆಂಚ್ ಓಪನ್ 2026ರಲ್ಲಿ ಪುರುಷರ ಚಾಂಪಿಯನ್ ಆಗಿ ಹೊರಹೊಮ್ಮಿದ ಜರ್ಮನಿಯ ಅಲೆಗ್ಸಾಂಡರ್ ಜ್ವೆರೆವ್ ತಮ್ಮ ಚೊಚ್ಚಲ ಪ್ರಶಸ್ತಿಯನ್ನು ಗೆದ್ದಿದ್ದಾರೆ. 2020ರ ಯುಎಸ್ ಓಪನ್, 2024ರ ಫ್ರೆಂಚ್ ಓಪನ್ ಮತ್ತು 2025ರ ಆಸ್ಟ್ರೇಲಿಯನ್ ಓಪನ್ ಫೈನಲ್‌ಗಳಲ್ಲಿ ಸೋತಿದ್ದ ಜ್ವೆರೆವ್ ತಮ್ಮ ಚೊಚ್ಚಲ ಗ್ರ್ಯಾಂಡ್ ಸ್ಲಾಮ್ ಗೆದ್ದುಕೊಂಡಿದ್ದಾರೆ. ಬೋರಿಸ್ ಬೆಕರ್ 1996ರ ಆಸ್ಟ್ರೇಲಿಯನ್ ಓಪನ್ ಗೆದ್ದ ಬಳಿಕ ಗ್ರ್ಯಾಂಡ್ ಸ್ಲಾಮ್ ಗೆದ್ದ ಮೊದಲ ಜರ್ಮನ್ ಪುರುಷ ಆಟಗಾರನೆಂಬ ದಾಖಲೆಯನ್ನೂ ಬರೆದಿದ್ದಾರೆ.
ಭಾನುವಾರ ನಡೆದ ರೋಚಕ ಫೈನಲ್‌ನಲ್ಲಿ ಜ್ವೆರೆವ್ ತಮ್ಮ ಎದುರಾಳಿ ಇಟಲಿಯ ಫ್ಲೇವಿಯೋ ಕೊಬೊಲಿ ಅವರನ್ನು 6-1, 4-6, 6-4, 6-7(5/7), 6-1 ಸೆಟ್‌ಗಳ ಅಂತರದಿಂದ ಸೋಲಿಸಿದರು. ನಾಲ್ಕನೇ ಸೆಟ್‌ನಲ್ಲಿ ತೀವ್ರ ಪೈಪೋಟಿ ನೀಡಿ ನಿರ್ಭೀತ ಆಟವಾಡಿ ಗೆದ್ದ ಫ್ಲೇವಿಯೋ, ಜ್ವೆರೆವ್ ನಿರ್ಣಾಯಕ ಐದನೇ ಸೆಟ್ ಆಡುವಂತೆ ಮಾಡಿದರು. ಆದರೆ ಕೊನೆಗೂ ಜ್ವೆರೆವ್ ಐದನೇ ಸೆಟ್ ಸುಲಭದಲ್ಲಿ ಗೆದ್ದರು. ಮೊದಲ ಸೆಟ್‌ನಲ್ಲಿ ಜ್ವೆರೆವ್ ಸಂಪೂರ್ಣ ಮೇಲುಗೈ ಸಾಧಿಸಿದರು. ಆದರೆ ಕೊಬೊಲಿ ಅದ್ಭುತವಾಗಿ ಪುಟಿದೇಳುವ ಮೂಲಕ ದ್ವಿತೀಯ ಸೆಟ್ ತಮ್ಮದಾಗಿಸಿದರು. ಮೂರನೇ ಸೆಟ್ ಗೆದ್ದ ಜ್ವೆರೆವ್ ತಮ್ಮ ಚೊಚ್ಚಲ ಗ್ರ್ಯಾಂಡ್ ಸ್ಲ್ಯಾಮ್ ಪ್ರಶಸ್ತಿಯತ್ತ ಹೆಜ್ಜೆಯಿಟ್ಟರು. ಒತ್ತಡ ಮತ್ತು ಉದ್ವಿಗ್ನತೆಯ ನಡುವೆ ನಡೆದ ಈ ಪಂದ್ಯದಲ್ಲಿ ಮುನ್ನಡೆ ಹಲವು ಬಾರಿ ಬದಲಾಗುತ್ತಾ, ಅಭಿಮಾನಿಗಳನ್ನು ಕೊನೆಯ ಕ್ಷಣದವರೆಗೂ ಕುತೂಹಲದಲ್ಲಿ ಇಟ್ಟಿತು.

ವೈಭವ್ ವಿಶೇಷ ಪ್ರತಿಭೆ, ಅತಿಯಾದ ನಿರೀಕ್ಷೆ ನ್ಯಾಯವಲ್ಲ

ಮುಂಬೈ: ಯುವ ಬ್ಯಾಟರ್ ವೈಭವ್ ಸೂರ್ಯವಂಶಿ ವಿಶೇಷವಾದ ಪ್ರತಿಭೆ. ಆದರೆ ಈ ಹಂತದಲ್ಲಿ ಅವರಿಂದ ಅತಿಯಾದ ನಿರೀಕ್ಷೆ ಇಟ್ಟುಕೊಳ್ಳುವುದು ನ್ಯಾಯೋಚಿತವಲ್ಲ ಎಂದು ಕ್ರಿಕೆಟ್ ದಂತಕತೆ ಕಪಿಲ್ ದೇವ್ ಸೋಮವಾರ ಅಭಿಪ್ರಾಯಿಸಿದ್ದಾರೆ.



ಯುವ ಪ್ರತಿಭೆಯಿಂದ ಇಷ್ಟೊಂದು ನಿರೀಕ್ಷಿಸುವುದು ನ್ಯಾಯೋಚಿತವಲ್ಲ. ಅವರಿಗೆ ಕ್ಲಬ್ ಕ್ರಿಕೆಟ್‌ನಿಂದ ಅಂತಾರಾಷ್ಟ್ರೀಯ ಕ್ರಿಕೆಟ್‌ಗೆ ಹೊಂದಿಕೊಳ್ಳಲು ಅವರಿಗೆ ಸಮಯ ಬೇಕಾಗುತ್ತದೆ. ಸಮಯ ನೀಡಿ. ಆದರೆ ಖಂಡಿತವಾಗಿ ತನ್ನಲ್ಲಿ ಪ್ರತಿಭೆಯಿದೆ ಎಂದು ತೋರಿಸಿದ್ದಾರೆ. ನಂಬಲಸಾಧ್ಯ ಪ್ರತಿಭೆಯನ್ನು ಸೂರ್ಯವಂಶಿ ಹೊಂದಿದ್ದಾರೆ ಎಂದು ಕಪಿಲ್ ಎಚ್ಚರಿಸಿದ್ದಾರೆ.

ಪಿ.ವಿ. ಸಿಂಧು ನೇತೃತ್ವದಲ್ಲಿ ಭಾರತ ಸ್ಪರ್ಧೆ

ಹೊಸದಿಲ್ಲಿ: ಆಸ್ಟ್ರೇಲಿಯನ್ ಓಪನ್ ಸೂಪರ್ 500 ಬ್ಯಾಡ್ಮಿಂಟನ್ ಪಂದ್ಯಾವಳಿಯಲ್ಲಿ ಜೂ.9ರಿಂದ 14ರವರೆಗೆ ಸಿಡ್ನಿ ನಗರದಲ್ಲಿ ನಡೆಯಲಿದ್ದು, ಪಿವಿ ಸಿಂಧು ನೇತೃತ್ವದ ಭಾರತ ತಂಡ ಸ್ಪರ್ಧಿಸಲಿದೆ. ಎರಡು ಬಾರಿಯ ಒಲಿಂಪಿಕ್ ಪದಕ ವಿಜೇತೆ ಸಿಂಧು ಈ ಋತುವಿನಲ್ಲಿ ಮೊದಲ ಪ್ರಶಸ್ತಿ ಗೆಲ್ಲುವ ಗುರಿ ಹೊಂದಿದ್ದಾರೆ.

ಅಂಪೈರ್ ವಿಕ್ರಮ್ ನಿಧನ

ಬೆಂಗಳೂರು: ವಯೋಸಹಜ ಕಾಯಿಲೆಯಿಂದ ಬಳಲುತ್ತಿದ್ದ ಮಾಜಿ ಅಂತಾರಾಷ್ಟ್ರೀಯ ಕ್ರಿಕೆಟ್ ಅಂಪೈರ್ ವಿಕ್ರಮ್ ರಾಜು(92) ಭಾನುವಾರ ಮೈಸೂರಿನ ತಮ್ಮ ಸ್ವಗೃಹದಲ್ಲಿ ನಿಧನರಾದರು.



ಇವರು 1986ರ ಸೆಪ್ಟೆಂಬರ್‌ನಲ್ಲಿ ಮದ್ರಾಸ್‌ನಲ್ಲಿ (ಇಂದಿನ ಚೆನ್ನೈ) ನಡೆದ ಭಾರತ–ಆಸ್ಟ್ರೇಲಿಯಾ ಟೆಸ್ಟ್‌ನಿಂದ ಪ್ರಸಿದ್ಧಿ ಪಡೆದಿದ್ದು, ಟೆಸ್ಟ್ ರೋಚಕ ಟೈ ಆಗಿತ್ತು. ಇವರು ಪ್ರಜಾವಾಣಿ ಮತ್ತು ಡೆಕ್ಕನ್ ಹೆರಾಲ್ಡ್ ಪತ್ರಿಕೆಗಳ ಪ್ರಸರಣ ವಿಭಾಗದಲ್ಲಿ ಸೇವೆ ಸಲ್ಲಿಸಿದ್ದರು.

ಇಂದಿನಿಂದ ಆರ್ಚರಿ ವಿಶ್ವಕಪ್ 3ನೇ ಹಂತ

ಆಂಟಲ್ಯಾ: ಆರ್ಚರಿ ವಿಶ್ವಕಪ್ 2026ರ ಮೂರನೇ ಹಂತ ಟರ್ಕಿಯ ಆಂಟಲ್ಯಾದಲ್ಲಿ ಜೂ.9ರಿಂದ 14ರವರೆಗೆ ನಡೆಯಲಿದ್ದು, ದೀಪಿಕಾ ಕುಮಾರಿ ಸಹಿತ ಭಾರತದ 16 ಸದಸ್ಯರ ತಂಡ ಸ್ಪರ್ಧಿಸಲಿದೆ. ಯುವ ಕೀರ್ತಿ ಶರ್ಮಾ ಮತ್ತು ಗಣೇಶ್ ಮಣಿರತ್ನಂ ವಿಶ್ವಕಪ್ ಪದಾರ್ಪಣೆ ಮಾಡಲಿದ್ದಾರೆ.

ಕನಸಿನ ಪದಾರ್ಪಣೆಗೈದ ಎಡಗೈ ಸ್ಪಿನ್ನರ್ ಮಾನವ್ ಸುಥಾರ್ | ಭಾರತಕ್ಕೆ ಅತಿ ದೊಡ್ಡ ಇನ್ನಿಂಗ್ಸ್ ಗೆಲುವು

ಮುಲ್ಲಾನ್‌ಪುರದಲ್ಲಿ ಆಫ್ಘನ್ ತಂಡದ ಕಬ್ಜ





ಮುಲ್ಲಾನ್‌ಪುರ: ಎಡಗೈ ಸ್ಪಿನ್ನರ್ ಮಾನವ್ ಸುಥಾರ್ ಕನಸಿನ ಪದಾರ್ಪಣೆಯು ಭಾರತದ ಅತಿ ದೊಡ್ಡ ಟೆಸ್ಟ್ ಜಯದೊಂದಿಗೆ ಸಂಪನ್ನಗೊಂಡಿದೆ. ಅಫ್ಘಾನಿಸ್ತಾನ ಎದುರಿನ ಏಕೈಕ ಟೆಸ್ಟ್‌ನಲ್ಲಿ ಭಾರತ ಇನ್ನಿಂಗ್ಸ್ ಮತ್ತು 300 ರನ್ ಭಾರೀ ಅಂತರದ ಗೆಲುವು ಸಾಧಿಸಿದೆ.
ಪ್ರಥಮ ಇನ್ನಿಂಗ್ಸ್‌ನಲ್ಲಿ 113ಕ್ಕೆ 5 ಎಂಬಲ್ಲಿಂದ ಮೂರನೇ ದಿನದಾಟ ಆರಂಭಿಸಿದ ಆಫ್ಘನ್ ಪರ ಆಸರೆಯಾಗಿದ್ದ ರೆಹಮತ್ ಶಾ (60) ಅವರನ್ನು ಸುಥಾರ್ ತಮ್ಮ ಸ್ಪಿನ್ ಮೋಡಿಗೆ ಸಿಲುಕಿಸಿ 5ನೇ ಬಲಿ ಪಡೆದರು. ಇದರೊಂದಿಗೆ ತಮ್ಮ ಪದಾರ್ಪಣಾ ಟೆಸ್ಟ್‌ನಲ್ಲಿ 5 ವಿಕೆಟ್ ಕಬಳಿಸಿದ ಸುಥಾರ್, ಈ ಸಾಧನೆಗೈದ ಎಲೈಟ್ ಬೌಲರ್‌ಗಳ ಯಾದಿಗೆ ಸೇರಿದ್ದಾರೆ. ಮೂರನೇ ದಿನದಾಟ ಆರಂಭವಾದ ಅರ್ಧ ಗಂಟೆಯೊಳಗೆ ಅಜ್ಮತುಲ್ಲಾ ಒಮರ್‌ಝಾಯಿ ಅವರನ್ನು ಕರ್ನಾಟಕ ವೇಗಿ ಪ್ರಸಿದ್ಧ ಕೃಷ್ಣ ಕ್ಲೀನ್‌ಬೌಲ್ಡ್ ಮಾಡಿದ್ದರು. ಇದಾದ ಬಳಿಕ ಆಫ್ಘನ್ ಪತನ ಆರಂಭವಾಗಿದ್ದು, 152 ರನ್‌ಗಳಿಗೆ ತನ್ನೆಲ್ಲಾ ವಿಕೆಟ್‌ಗಳನ್ನು ಕಳೆದುಕೊಂಡಿತು. ಭಾರತ ಮೊದಲ ಇನ್ನಿಂಗ್ಸ್‌ನಲ್ಲಿ 412 ರನ್‌ಗಳ ಭಾರೀ ಮುನ್ನಡೆ ಪಡೆಯಿತು.
ಆಫ್ಘನ್ 112ಕ್ಕೆ ಆಲೌಟ್: ಅಫ್ಘಾನಿಸ್ತಾನದ ದ್ವಿತೀಯ ಇನ್ನಿಂಗ್ಸ್‌ನಲ್ಲಿ ಸೆದಿಕುಲ್ಲಾ ಅತಲ್ ಅವರ 80 ಎಸೆತಗಳ 42 ರನ್ ಆಟವೊಂದನ್ನು ಬಿಟ್ಟರೆ ನೋಡುವಂತದ್ದು ಏನೂ ಇರಲಿಲ್ಲ. 23 ಓವರ್‌ಗಳಲ್ಲಿ 87ಕ್ಕೆ 2 ವಿಕೆಟ್ ಕಳೆದುಕೊಂಡಿದ್ದ ಆಫ್ಘನ್ ಇನ್ನೂ 12 ಓವರ್ ಆಗುವಷ್ಟರಲ್ಲಿ 112 ರನ್‌ಗಳಿಗೆ ಆಲೌಟಾಗಿತ್ತು. ಪ್ರಥಮ ಇನ್ನಿಂಗ್ಸ್‌ನಲ್ಲಿ ಯುವ ಸ್ಪಿನ್ನರ್ ಸುಥಾರ್ ಅದ್ಭುತ ಪ್ರದರ್ಶನ ನೀಡಿದ್ದರಿಂದ ಒತ್ತಡಕ್ಕೊಳಗಾದ ಕುಲ್ದೀಪ್ ಮತ್ತು ವಾಷಿಂಗ್ಟನ್ ದ್ವಿತೀಯ ಇನ್ನಿಂಗ್ಸ್‌ನಲ್ಲಿ ಉತ್ತಮ ಪ್ರದರ್ಶನ ನೀಡಿದ್ದಾರೆ.
ಜೂ.13ರಿಂದ ಏಕದಿನ ಸರಣಿ: ಏಕೈಕ ಟೆಸ್ಟ್‌ನಲ್ಲಿ ಅತಿ ದೊಡ್ಡ ಇನ್ನಿಂಗ್ಸ್ ಸೋಲುಂಡ ಅಫ್ಘಾನಿಸ್ತಾನ ಏಕದಿನ ಸರಣಿಯಲ್ಲಿ ಉತ್ತಮ ಹೋರಾಟ ನೀಡುವ ಸಾಧ್ಯತೆಯಿದೆ. ಇದೇ ಶನಿವಾರ ಧರ್ಮಶಾಲಾದಲ್ಲಿ ಮೊದಲ ಏಕದಿನ ಪಂದ್ಯ ನಡೆಯಲಿದೆ.

ಪದಾರ್ಪಣಾ ಟೆಸ್ಟ್‌ನಲ್ಲಿ ಅತ್ಯುತ್ತಮ ಬೌಲಿಂಗ್ (ಭಾರತೀಯರು)

ಬೌಲರ್	ಎದುರಾಳಿ	ಮೈದಾನ	ವರ್ಷ	ವಿಕೆಟ್	ಫಲಿತಾಂಶ
ನರೇಂದ್ರ ಹೀರ್ವಾನಿ	ವೆಸ್ಟ್ ಇಂಡೀಸ್	ಚೆನ್ನೈ	1988	61ಕ್ಕೆ 8	ಗೆಲುವು
ನರೇಂದ್ರ ಹೀರ್ವಾನಿ	ವೆಸ್ಟ್ ಇಂಡೀಸ್	ಚೆನ್ನೈ	1988	75ಕ್ಕೆ 8	ಗೆಲುವು
ಮಾನವ್ ಸುಥಾರ್	ಅಫ್ಘಾನಿಸ್ತಾನ	ಮುಲ್ಲಾನ್‌ಪುರ	ಜೂ.8, 2026	33ಕ್ಕೆ 6	ಗೆಲುವು
ರವಿಚಂದ್ರನ್ ಅಶ್ವಿನ್	ವೆಸ್ಟ್ ಇಂಡೀಸ್	ಕೋಟ್ಲಾ, ದಿಲ್ಲಿ	ನ.6, 2011	47ಕ್ಕೆ 6	ಗೆಲುವು
ಸೈಯದ್ ಆಬಿದ್ ಅಲಿ	ಆಸ್ಟ್ರೇಲಿಯಾ	ಅಡಿಲೇಡ್, ಅಡಿಲೇಡ್	ಡಿ.23, 1967	55ಕ್ಕೆ 6	ಸೋಲು

> **ಯಾವುದೇ ಪರಿಸ್ಥಿತಿಯಲ್ಲಿ 20 ವಿಕೆಟ್‌ಗಳನ್ನು ಕಬಳಿಸಬಲ್ಲ ಬೌಲಿಂಗ್ ವಿಭಾಗವನ್ನು ನಾವು ಹೊಂದಿದ್ದೇವೆ. ಪ್ರಥಮ ಇನ್ನಿಂಗ್ಸ್‌ನಲ್ಲಿ ನಿರಂತರ 350ರಿಂದ 400 ರನ್ ಮೊತ್ತ ಕಲೆಹಾಕುವ ಅಗತ್ಯವಿದೆ. ತ್ರಿವಳಿ ಸ್ಪಿನ್ನರ್‌ಗಳು ಗುಣಮಟ್ಟದ ಬೌಲಿಂಗ್ ಪ್ರದರ್ಶನ ನೀಡಿದ್ದಾರೆ. ಇದೊಂದು ಪೂರ್ಣ ಗೆಲುವು.**
> ■ **ಶುಬ್ಮನ್ ಗಿಲ್,** ಭಾರತ ನಾಯಕ

> **ಕ್ರಿಕೆಟ್ ವೃತ್ತಿಜೀವನದ ನಂಬಲಸಾಧ್ಯ ಅನುಭವ. ಭಾರತವನ್ನು ಪ್ರತಿನಿಧಿಸಿ ಟೆಸ್ಟ್ ಕ್ರಿಕೆಟ್ ಆಡುವುದು ಆರಂಭದಿಂದಲೂ ನನ್ನ ಕನಸಾಗಿತ್ತು. ಟೆಸ್ಟ್‌ನಲ್ಲಿ ತಾಳ್ಮೆ ಹಾಗೂ ಸ್ಥಿರ ಪ್ರದರ್ಶನ ನೀಡುವುದು ಬಹಳ ಮುಖ್ಯ ಎಂದು ಕಲಿತಿದ್ದೇನೆ.**
> ■ **ಮಾನವ್ ಸುಥಾರ್,** ಎಡಗೈ ಸ್ಪಿನ್ನರ್

ಭಾರತದ ಅತಿ ದೊಡ್ಡ ಇನ್ನಿಂಗ್ಸ್ ಗೆಲುವು

ಗೆಲುವು	ಎದುರಾಳಿ
ಇನ್ನಿಂಗ್ಸ್ ಮತ್ತು 300 ರನ್	ಅಫ್ಘಾನಿಸ್ತಾನ, ಮುಲ್ಲಾನ್‌ಪುರ, 2026
ಇನ್ನಿಂಗ್ಸ್ ಮತ್ತು 272 ರನ್	ವೆಸ್ಟ್ ಇಂಡೀಸ್, ರಾಜ್‌ಕೋಟ್, 2018
ಇನ್ನಿಂಗ್ಸ್ ಮತ್ತು 262 ರನ್	ಅಫ್ಘಾನಿಸ್ತಾನ, ಬೆಂಗಳೂರು, 2018
ಇನ್ನಿಂಗ್ಸ್ ಮತ್ತು 239 ರನ್	ಬಾಂಗ್ಲಾದೇಶ, ಮಿರ್‌ಪುರ್, 2007
ಇನ್ನಿಂಗ್ಸ್ ಮತ್ತು 239 ರನ್	ಶ್ರೀಲಂಕಾ, ನಾಗ್ಪುರ, 2017

ಆಫ್ಘನ್‌ನ ಇನ್ನಿಂಗ್ಸ್ ಸೋಲುಗಳು

ಸೋಲು	ಎದುರಾಳಿ
ಇನ್ನಿಂಗ್ಸ್ ಮತ್ತು 300 ರನ್	ಭಾರತ, ಮುಲ್ಲಾನ್‌ಪುರ, 2026
ಇನ್ನಿಂಗ್ಸ್ ಮತ್ತು 262 ರನ್	ಭಾರತ, ಬೆಂಗಳೂರು, 2018
ಇನ್ನಿಂಗ್ಸ್ ಮತ್ತು 73 ರನ್	ಜಿಂಬಾಬ್ವೆ, ಹರಾರೆ, 2025
112 ರನ್ ಅಫ್ಘಾನಿಸ್ತಾನದ 3ನೇ ಅತಿ ಕಡಿಮೆ ಮೊತ್ತ	

ಸ್ಕೋರ್ ಬೋರ್ಡ್

ಭಾರತ ಪ್ರಥಮ ಇನ್ನಿಂಗ್ಸ್: 564/8 ಡಿ.
ಅಫ್ಘಾನಿಸ್ತಾನ ಪ್ರಥಮ ಇನ್ನಿಂಗ್ಸ್: 152/10

ರೆಹಮತ್ ಶಾ	ಬಿ ಸುಥಾರ್	60
ಒಮರ್‌ಝಾಯಿ	ಬಿ ಪ್ರಸಿದ್ಧ	0
ಅಶ್ರಫ್	ಸಿ ಪಂತ್ ಬಿ ಸುಥಾರ್	11
ಖರೋಟೆ	ಔಟಾಗದೆ	4
ಸಲೀಮ್	ಎಲ್‌ಬಿ ಸುಥಾರ್	0
ಜಿಯಾವುರ್	ಸಿ ಪಂತ್ ಬಿ ಸುಂದರ್	6
ಇತರೆ		3

ಬೌಲಿಂಗ್ ವಿವರ

ಸಿರಾಜ್	9-2-29-0
ಪ್ರಸಿದ್ಧ	11-2-37-3
ಸುಥಾರ್	22-10-33-6
ಕುಲ್ದೀಪ್	10-1-32-0
ಸುಂದರ್	6.4-1-21-1

ಅಫ್ಘಾನಿಸ್ತಾನ ದ್ವಿತೀಯ ಇನ್ನಿಂಗ್ಸ್: 112/10

ಸೆದಿಕುಲ್ಲಾ	ಸಿ ಪ್ರಸಿದ್ಧ ಬಿ ಸುಂದರ್	42
ಮಲಿಕ್	ಎಲ್‌ಬಿ ಸಿರಾಜ್	8
ಗುರ್ಬಜ್	ಸಿ ಪ್ರಸಿದ್ಧ ಬಿ ಕುಲ್ದೀಪ್	24
ರೆಹಮತ್	ಶಾ ಸಿ ಸುಥಾರ್ ಬಿ ಸುಂದರ್	13
ಶಾಹಿದಿ	ಸಿ ಗಿಲ್ ಬಿ ಸುಂದರ್	5
ಅಫ್ಸರ್	ಎಲ್‌ಬಿ ಸುಥಾರ್	8
ಒಮರ್‌ಝಾಯಿ	ಸಿ ಕುಲ್ದೀಪ್ ಬಿ ಸುಂದರ್	4
ಖರೋಟೆ	ಸಿ ಸುಥಾರ್ ಬಿ ಕುಲ್ದೀಪ್	6
ಜಿಯಾವುರ್ ಔಟಾಗದೆ		0
ಸಲೀಮ್	ಸಿ ಸಾಯಿ ಬಿ ಕುಲ್ದೀಪ್	0
ಶರಾಫುದ್ದೀನ್	ಗಾಯಾಳು	-
ಇತರೆ		2

ಬೌಲಿಂಗ್ ವಿವರ

ಸುಥಾರ್	10-2-29-1
ಪ್ರಸಿದ್ಧ	3-0-6-0
ಕುಲ್ದೀಪ್	7.5-1-30-3
ಸಿರಾಜ್	4-1-11-1
ಸುಂದರ್	11-4-36-4

ಶ್ರೇಯಾಂಕಾಗೆ 4 ವಿಕೆಟ್ | ರಾಧಾಗೆ 3 ವಿಕೆಟ್

ಕನ್ನಡತಿ ಸ್ಪಿನ್ ದಾಳಿ: ನಡುಗಿದ ವಿಂಡೀಸ್



ಸಂಕ್ಷಿಪ್ತ ಸ್ಕೋರ್
ಭಾರತ 179/8(20): ಭಾರ್ತಿ 56(40), ಮಂದನಾ 39(23), ಯಸ್ತಿಕಾ 36(26), ಶೆಫಾಲಿ 29(13), ಫ್ಲೆಚರ್ 23ಕ್ಕೆ 4.
ವೆಸ್ಟ್ ಇಂಡೀಸ್ 153/8(20): ಡೊಟಿನ್ 49(44), ಕ್ಯಾಂಪಬೆಲ್ ಗಾಯಾಳಾಗಿ ನಿವೃತ್ತಿ 25(22), ಹೆಕ್ಟರ್ 19(11), ಶ್ರೇಯಾಂಕಾ 36ಕ್ಕೆ 4, ರಾಧಾ 25ಕ್ಕೆ 3.

ಕಾರ್ಡಿಫ್: ವೆಸ್ಟ್ ಇಂಡೀಸ್ ವನಿತೆಯರ ವಿರುದ್ಧದ ಐಸಿಸಿ ಟಿ20 ವಿಶ್ವಕಪ್ ಅಭ್ಯಾಸ ಪಂದ್ಯದಲ್ಲಿ ಭಾರತ ತಂಡ 26 ರನ್‌ಗಳ ಗೆಲುವು ದಾಖಲಿಸಿದೆ. ಭಾರತ ನೀಡಿದ 180 ರನ್‌ಗಳ ಸವಾಲನ್ನು ಬೆನ್ನತ್ತುವಲ್ಲಿ ವಿಂಡೀಸ್ ವಿಫಲವಾಗಿದ್ದು, 20 ಓವರ್‌ಗಳಲ್ಲಿ 8 ವಿಕೆಟ್ ಕಳೆದುಕೊಂಡು 153 ರನ್‌ಗಳಿಸಲಷ್ಟೇ ಶಕ್ತವಾಯಿತು.
ಸೋಮವಾರ ಕಾರ್ಡಿಫ್‌ನಲ್ಲಿ ನಡೆದ ವಿಶ್ವಕಪ್ ಅಭ್ಯಾಸ ಪಂದ್ಯದಲ್ಲಿ ಟಾಸ್ ಸೋತು ಬ್ಯಾಟಿಂಗ್‌ಗೆ ಇಳಿಸಲ್ಪಟ್ಟ ಭಾರತ ಪರ ಭಾರ್ತಿ ಫುಲ್ಮಾಲಿ ಅರ್ಧಶತಕ ದಾಖಲಿಸಿದರು. ನಾಯಕ ಹರ್ಮನ್ ಪ್ರೀತ್ ಅನುಪಸ್ಥಿತಿಯಲ್ಲಿ ಸ್ಮೃತಿ ತಂಡ ಮುನ್ನಡೆಸಿದ್ದು, ನಾಯಕಿ ಮಂದನಾ ಮತ್ತು ಶೆಫಾಲಿ ಮೊದಲ ವಿಕೆಟ್‌ಗೆ 5.2 ಓವರ್‌ಗಳಲ್ಲಿ 59 ರನ್ ಪೇರಿಸಿ ಉತ್ತಮ ಅಡಿಪಾಯ ಹಾಕಿಕೊಟ್ಟರು. ಶೆಫಾಲಿ ಎಂದಿನಂತೆ ಸ್ಫೋಟಕ ಆರಂಭವನ್ನು ನೀಡಿದ್ದರು. ಸ್ಮೃತಿ 23 ಎಸೆತಗಳಲ್ಲಿ 39 ರನ್ ಹೊಡೆದರು. ಉತ್ತಮ ಲಯದಲ್ಲಿರುವ ಯಸ್ತಿಕಾ ಭಾಟಿಯ 26 ಎಸೆತಗಳಿಂದ 36 ರನ್ ಕೊಡುಗೆ ನೀಡಿದರು. ನಾಲ್ಕನೇ ವಿಕೆಟ್‌ಗೆ ಯಸ್ತಿಕಾ ಮತ್ತು ಭಾರ್ತಿ 60 ರನ್ ಕಲೆಹಾಕಿ ಭಾರತ ಉತ್ತಮ ಮೊತ್ತ ಪೇರಿಸಲು ನೆರವಾದರು. ಭಾರತ ತಂಡ ನಿಗದಿತ 20 ಓವರ್‌ಗಳಲ್ಲಿ 8 ವಿಕೆಟ್ ನಷ್ಟಕ್ಕೆ 179 ರನ್ ಪೇರಿಸಿತು. ವೆಸ್ಟ್ ಇಂಡೀಸ್ ಪರ ಫ್ಲೆಚರ್ 23ಕ್ಕೆ 4 ವಿಕೆಟ್ ಕಬಳಿಸಿದ್ದರು.
ಶ್ರೇಯಾಂಕಾ, ರಾಧಾ ಸ್ಪಿನ್ ಮೋಡಿ: 180 ರನ್ ಗುರಿ ಬೆನ್ನತ್ತಿದ ವಿಂಡೀಸ್ ಮೊದಲ ವಿಕೆಟ್‌ಗೆ ನಿಧಾನಗತಿಯಲ್ಲಿ 63 ರನ್ ಕಲೆಹಾಕಿತು. ಆರಂಭಿಕರ ಸ್ಕೋರ್ ವಿಂಡೀಸ್ ಪರ ವೈಯಕ್ತಿಕ ಅತ್ಯುತ್ತಮ ಆಗಿದ್ದವು. ಕನ್ನಡತಿ ಶ್ರೇಯಾಂಕಾ ಪಾಟೀಲ್ ಹಾಗೂ ರಾಧಾ ಯಾದವ್ ಅವರ ಸ್ಪಿನ್ ದಾಳಿಗೆ ನಲುಗಿದ ವಿಂಡೀಸ್ 26 ರನ್‌ಗಳ ಸೋಲುಂಡಿತು.

ಪ್ರಜ್ಞಾನಂದಗೆ ತ.ನಾಡು ಸರ್ಕಾರದಿಂದ ₹50 ಲಕ್ಷ


ಚೆನ್ನೈ: ಇತ್ತೀಚೆಗೆ ನಾರ್ವೆ ಚೆಸ್ ಪ್ರಶಸ್ತಿ ಗೆದ್ದ ಭಾರತೀಯ ಗ್ರ್ಯಾಂಡ್ ಮಾಸ್ಟರ್ ಆರ್.ಪ್ರಜ್ಞಾನಂದ ಅವರನ್ನು ತಮಿಳುನಾಡು ಮುಖ್ಯಮಂತ್ರಿ ಸಿ.ಜೋಸೆಫ್ ವಿಜಯ್ ಸೋಮವಾರ ಸನ್ಮಾನಿಸಿದರು. 20ರ ಹರೆಯದ ಪ್ರಜ್ಞಾನಂದರನ್ನು ಸೋಮವಾರ ತಮ್ಮ ಮುಖ್ಯಮಂತ್ರಿ ಕಚೇರಿಗೆ ಸ್ವಾಗತಿಸಿದ ಸಿಎಂ ವಿಜಯ್ ತಮಿಳುನಾಡು ಸರ್ಕಾರದ ವತಿಯಿಂದ 50 ಲಕ್ಷ ರೂ. ನಗದು ಬಹುಮಾನದ ಚೆಕ್ ನೀಡಿ ಸನ್ಮಾನಿಸಿದರು.
ಇದಲ್ಲದೆ ಆಕಸ್ಮಿಕವಾಗಿ ಪ್ರಜ್ಞಾನಂದ ಅವರೊಂದಿಗೆ ಚೆಸ್ ಆಟವನ್ನು ಆಡಿದರು. ಚೆಕ್‌ಮೇಟ್ ನೀಡುವ ಮೂಲಕ ಮುಖ್ಯಮಂತ್ರಿ ವಿಜಯ್ ಸಹಿತ ಕಚೇರಿಯಲ್ಲಿ ಸೇರಿದ್ದವರನ್ನು ನಿಬ್ಬೆರಗಾಗಿಸಿದರು. ಮುಖ್ಯಮಂತ್ರಿ ಭೇಟಿ ಸಂದರ್ಭ ಪ್ರಜ್ಞಾನಂದ ತಾಯಿ ನಾಗಲಕ್ಷ್ಮಿ ಜೊತೆಗಿದ್ದರು. ಸಾರ್ವಜನಿಕ ಸೇವಾ ಇಲಾಖೆ ಮತ್ತು ಕ್ರೀಡಾ ಸಚಿವ ಆಧವ್ ಅರ್ಜುನ ಸೇರಿ ಹಲವರು ಸ್ಥಳದಲ್ಲಿದ್ದರು.
ಬೋರ್ಡ್ ತರಲು ಹೇಳಿದ್ದ ವಿಜಯ್: ಮುಖ್ಯಮಂತ್ರಿ ಭೇಟಿಯ ಬಳಿಕ ಮಾತನಾಡಿದ ಪ್ರಜ್ಞಾನಂದ, ಮುಖ್ಯಮಂತ್ರಿ ಚೆಸ್ ಆಡುತ್ತಾರೆಂದು ತಿಳಿದಿರಲಿಲ್ಲ. ಚೆಸ್ ಬೋರ್ಡ್ ತರಲು ಹೇಳಿದ್ದರು. ಆದರೆ ಭೇಟಿ ಬಳಿಕ ನಾವು ಆಕಸ್ಮಿಕವಾಗಿ 15 ನಿಮಿಷಗಳ ಕಾಲ ಚೆಸ್ ಆಡಿದೆವು. ಮುಖ್ಯಮಂತ್ರಿ ಚೆಸ್ ಆಟ ನನಗೆ ಅಚ್ಚರಿ ಮೂಡಿಸಿತು ಎಂದು ಹೇಳಿದ್ದಾರೆ. ಸ್ನೇಹಿತರ ಜತೆ ಚೆಸ್ ಆಡುವ ಹವ್ಯಾಸ ಇರುವುದಾಗಿ ಪ್ರಜ್ಞಾನಂದಗೆ ವಿಜಯ್ ಹೇಳಿದ್ದಾರೆ.



ಗ್ರ್ಯಾಂಡ್ ಮಾಸ್ಟರ್ ಜತೆ ಚೆಸ್ ಆಡಿದ ಸಿಎಂ ವಿಜಯ್

ಪದಬಂಧ

▸▸ ರಾಜಾ ಸಂಗಮೇಶ ಹಿರೇಮಠ



6009

ಎಡದಿಂದ ಬಲಕ್ಕೆ
1.ಮನಸ್ಸಿನ ಉಮ್ಮಳ–ದುಃಖವಿದು (3)
3.ಹೋರಿ ನಡುವೆ ತಿರುಗಿ ಪಥಿಕನಾದ (4)
5.ಬೇಡತಿ–ಕಿರಾತ ಸ್ತ್ರೀಯೀಕೆ (4)
6.ಮೃತದೇಹಗಳನ್ನಿಡುವ ಸ್ಥಳ (4)
8.ಬಿಳಿಯ ನಡುವೆ ಬೀಸಿದ ಚಂಡಮಾರುತ (4)
11.ಶುಭಲಕ್ಷಣಗಳಿಂದ ಕೂಡಿದ ಆನೆ (4)
14.ಇದು ನಾಲ್ಕನೆಯ ವೇದ (4)
15.ಸಸಿ–ಕಸ ಒಳಗೊಂಡ ತಿಕ್ಕಾಟ ತಿರುಗಿದೆ (4)
16.ಕಾಳಗ ನಡೆಯುವ ಬಯಲು (4)
17.ಇದು ತಾಂಬೂಲದ ಎಲೆ (3)

ಮೇಲಿನಿಂದ ಕೆಳಕ್ಕೆ
1.ಕೆಟ್ಟ ಹಂಚಿಕೆಯನ್ನು ಹೀಗೂ ಹೇಳುತ್ತೇವೆ (4)
2.ಮಂದಿರದ ಮಧ್ಯಮಂಟಪ ಕಡೆಯಲ್ಲಿ ದೀರ್ಘವಾಗಿದೆ (4)
3.ನಡತೆಗೆಡು ಎಂಬರ್ಥದ ನುಡಿಗಟ್ಟು (4)
4.ಬಾಳೆಯಗಿಡವನ್ನು ಸೂಚಿಸುವ ಶಬ್ದ (3)
7.ಹಾವಾಡಿಗ–ಐಂದ್ರಜಾಲಿಕ ಎಂಬರ್ಥದ ಶಬ್ದ (4)
9.ಆಕಾಶಮಾರ್ಗವನ್ನು ಹೀಗೂ ಹೇಳಬಹುದು (4)
10.ಈತ ಅಡುಗೆ ಮಾಡುವವನು (4)
12.ಶಿವನ ಉಗ್ರರೂಪ ತಲೆಕೆಳಗಾಗಿದೆ (4)
13.ಜಯದ ನಡುವೆ ತಟಾಕವಿದೆ (4)
14. ಅಸಂಖ್ಯಾತ–ಮಿತಿಯಿಲ್ಲದ್ದು (3)

6008 ಉತ್ತರ

ಎಡದಿಂದ ಬಲಕ್ಕೆ:
1.ಅಂಕಣ 4.ನಮೂದು
6.ಕುಕವಿ 8.ನೆಲಹಾಸು
9.ಕಲಸನ್ನ 11.ಅಮೇರಿಕ
13.ಕರಿನೀರು 15.ವಿದುರ
17.ಅಂದಣ 18.ಪಾತಕ

ಮೇಲಿನಿಂದ ಕೆಳಕ್ಕೆ:
2.ಕರವಾಲ 3.ಕಂಟಕ
5.ಮೂಗುಬ್ಬಸ
6.ಕುಸುಮಾಕರ
7.ವಿಕಟಕವಿ 8.ಅರ್ಚನೆ
10.ತಿಮಿರು
12.ಮೇಘನಾದ
14.ಕಲಕಂಠ 16.ದುಪ್ಪಟ್ಟು

ವಿಶ್ವಯೋಗಾಸನ ಚಾಂಪಿಯನ್‌ಶಿಪ್–2026 | 102 ಸ್ವರ್ಣಸಹಿತ ಒಟ್ಟು 114 ಪದಕ ಬಾಚಿಕೊಂಡ ಭಾರತ

ಜಾಗತಿಕ ವೇದಿಕೆಯಲ್ಲಿ ಹೊಸ ಇತಿಹಾಸ ಸೃಷ್ಟಿಸಿದ ಭಾರತ

ಅಹಮದಾಬಾದ್: ನಗರದಲ್ಲಿ ನಡೆದ ಉದ್ಘಾಟನಾ ವಿಶ್ವ ಯೋಗಾಸನ ಚಾಂಪಿಯನ್‌ಶಿಪ್‌ನಲ್ಲಿ ಆತಿಥೇಯ ಭಾರತ ಸಂಪೂರ್ಣ ಪ್ರಾಬಲ್ಯ ಮೆರೆದಿದೆ. ಸೋಮವಾರ ಮುಕ್ತಾಯಗೊಂಡ ಈ ಕೂಟದಲ್ಲಿ ಭಾರತವು 102 ಚಿನ್ನದ ಪದಕಗಳೊಂದಿಗೆ ಒಟ್ಟು 114 ಪದಕಗಳನ್ನು ಬಾಚಿಕೊಳ್ಳುವ ಮೂಲಕ ಭರ್ಜರಿ ಪ್ರದರ್ಶನ ನೀಡಿದೆ.
ಜಪಾನ್ ಮೂರು ಚಿನ್ನ, ಮೂರು ಬೆಳ್ಳಿ ಮತ್ತು ಐದು ಕಂಚಿನ ಪದಕಗಳೊಂದಿಗೆ ಎರಡನೇ ಸ್ಥಾನ ಪಡೆದರೆ, ಅರ್ಜೆಂಟೀನಾದ ಕ್ರೀಡಾಪಟು ನಬೀಲಾ ಬರ್‍ರಾಜಾ ಅವರು ಎರಡು ಚಿನ್ನ ಮತ್ತು ಮೂರು ಬೆಳ್ಳಿ ಪದಕಗಳನ್ನು ಗೆಲ್ಲುವ ಮೂಲಕ ತಮ್ಮ ದೇಶವನ್ನು ಮೂರನೇ ಸ್ಥಾನದಲ್ಲಿ ನಿಲ್ಲಿಸಿದರು.
52 ಪದಕ ಗೆದ್ದ ನೇಪಾಳ: ಪಕ್ಕದ ರಾಷ್ಟ್ರ ನೇಪಾಳವು ಒಂದು ಚಿನ್ನ, 36 ಬೆಳ್ಳಿ ಮತ್ತು 15 ಕಂಚಿನ ಪದಕಗಳೊಂದಿಗೆ ಒಟ್ಟು 52 ಪದಕಗಳನ್ನು ಗೆದ್ದು, ಪದಕ ಪಟ್ಟಿಯಲ್ಲಿ ಐದನೇ ಸ್ಥಾನವನ್ನು ಪಡೆದುಕೊಂಡಿತು. ಉಜ್ಬೇಕಿಸ್ತಾನ್ ಒಂದು ಚಿನ್ನ, 13 ಬೆಳ್ಳಿ ಮತ್ತು 11 ಕಂಚಿನ ಪದಕಗಳೊಂದಿಗೆ ಒಟ್ಟು 25 ಪದಕಗಳನ್ನು ಗಳಿಸಿತು.





522 ಯೋಗಪಟುಗಳು ಭಾಗಿ: ಈ ಚಾಂಪಿಯನ್‌ಶಿಪ್‌ನಲ್ಲಿ 79 ದೇಶಗಳ ಒಟ್ಟು 522 ಕ್ರೀಡಾಪಟುಗಳು ಭಾಗವಹಿಸಿದ್ದರು. ಇವರಲ್ಲಿ 31 ದೇಶಗಳ ಕ್ರೀಡಾಪಟುಗಳು ಪದಕಗಳನ್ನು ಗೆಲ್ಲುವಲ್ಲಿ ಯಶಸ್ವಿಯಾದರು ಮತ್ತು ಹತ್ತು ದೇಶಗಳು ಕನಿಷ್ಠ ಒಂದು ಚಿನ್ನದ ಪದಕವನ್ನು ತಮ್ಮದಾಗಿಸಿಕೊಂಡವು.
ಕ್ರೀಡಾ ಪ್ರಾಧಿಕಾರಗಳ ಬೆಂಬಲ: 2030ರ ಕಾಮನ್ವೆಲ್ತ್ ಕ್ರೀಡಾಕೂಟದ ಆತಿಥ್ಯ ವಹಿಸಲಿರುವ ಅಹಮದಾಬಾದ್‌ನಲ್ಲಿ ನಡೆದ ಈ ಚಾಂಪಿಯನ್‌ಶಿಪ್, ಪ್ರಾಚೀನ ಭಾರತೀಯ ಕಲೆ ಯೋಗಾಸನವನ್ನು ಜಾಗತಿಕ ಸ್ಪರ್ಧಾತ್ಮಕ ಕ್ರೀಡೆಯಾಗಿ ಪರಿವರ್ತಿಸುವಲ್ಲಿ ಮತ್ತು ಅದನ್ನು ಒಲಿಂಪಿಕ್ ಕ್ರೀಡಾಕೂಟದತ್ತ ಕೊಂಡೊಯ್ಯುವಲ್ಲಿ ಒಂದು ಐತಿಹಾಸಿಕ ಘಟ್ಟವಾಗಿದೆ.
ಯುವಜನ ವ್ಯವಹಾರಗಳು ಮತ್ತು ಕ್ರೀಡಾ ಸಚಿವಾಲಯ, ಆಯುಷ್ ಸಚಿವಾಲಯ, ಭಾರತೀಯ ಕ್ರೀಡಾ ಪ್ರಾಧಿಕಾರ (ಸಾಯ್), ಗುಜರಾತ್ ಕ್ರೀಡಾ ಪ್ರಾಧಿಕಾರ, ಗುಜರಾತ್ ಪ್ರವಾಸೋದ್ಯಮ ಮತ್ತು ಗುಜರಾತ್ ಯೋಗಾಸನ ಕ್ರೀಡಾ ಸಂಘಗಳು ಈ ಚಾಂಪಿಯನ್‌ಶಿಪ್‌ಗೆ ಬೆಂಬಲ ನೀಡಿದ್ದವು.
6 ವಿಭಾಗಗಳಲ್ಲಿ ಸ್ಪರ್ಧೆ: ಆತಿಥೇಯ ಭಾರತವು 122 ಸದಸ್ಯರ ತಂಡವನ್ನು ಕಣಕ್ಕಿಳಿಸಿತ್ತು. ಕ್ರೀಡಾಪಟುಗಳು ಆರು ವಯೋಮಿತಿ ವಿಭಾಗಗಳಲ್ಲಿ ಸ್ಪರ್ಧಿಸಿದರು: ಸಬ್-ಜೂನಿಯರ್ (10–14 ವರ್ಷ), ಜೂನಿಯರ್ (14–18 ವರ್ಷ), ಸೀನಿಯರ್ (18–28 ವರ್ಷ), ಸೀನಿಯರ್ ಎ (28–35 ವರ್ಷ), ಸೀನಿಯರ್ ಬಿ (35–45 ವರ್ಷ) ಮತ್ತು ಸೀನಿಯರ್ ಸಿ (45–55 ವರ್ಷ).

ಶಾಂತಿ, ಮಾನವ ಐಕ್ಯತೆಯ ಮಾರ್ಗ

ವೀಡಿಯೊ ಸಂದೇಶವೊಂದರಲ್ಲಿ ಮಾತನಾಡಿದ ವಿಶ್ವ ಯೋಗಾಸನದ ಅಧ್ಯಕ್ಷ ಯೋಗಋಷಿ ಸ್ವಾಮಿ ರಾಮದೇವ್ ಜಿ ಮಹಾರಾಜ್, ವಿಶ್ವ ಯೋಗಾಸನ ಚಾಂಪಿಯನ್‌ಶಿಪ್ ಕೇವಲ ಒಂದು ಗಮ್ಯಸ್ಥಾನವಲ್ಲ; ಇದು ಜಾಗತಿಕ ಚಳುವಳಿಯ ಆರಂಭವಾಗಿದೆ. ಯೋಗವು ಕೇವಲ ಕ್ರೀಡೆಯಲ್ಲ–ಅದು ಜೀವನಶೈಲಿ, ಆರೋಗ್ಯ, ಸಾಮರಸ್ಯ, ಶಾಂತಿ ಮತ್ತು ಮಾನವ ಐಕ್ಯತೆಯ ಮಾರ್ಗ ಎಂದು ತಿಳಿಸಿದರು. ಫಲಿತಾಂಶಗಳ ಪ್ರಕಾರ, ಆರ್ಟಿಸ್ಟಿಕ್ ಪೇರ್ ಸಬ್-ಜೂನಿಯರ್ ಮಹಿಳೆಯರ ವಿಭಾಗದಲ್ಲಿ ಭಾರತದ ಇಶಿಕಾ ಗುಚ್ಛೈತ್ ಮತ್ತು ಇಶಾನ್ವಿ (90.89) ಚಿನ್ನದ ಪದಕ ಗೆದ್ದರೆ, ಜಾಂಬಿಯಾದ ನಿಯಾ ವಿಜಯ್‌ವರ್ಗೀಯ ಮತ್ತು ಆರೋಹಿ ಲೋಖಂಡೆ (82.38) ಬೆಳ್ಳಿ ಹಾಗೂ ಜಪಾನ್‌ನ ರೆಂಕಾ ಅಯೋಕಿ ಮತ್ತು ಇಚಿಕಾ ಶಿಮಿಜು (60.34) ಕಂಚಿನ ಪದಕ ಪಡೆದರು. ಜೂನಿಯರ್ ಮಹಿಳೆಯರ ವಿಭಾಗದಲ್ಲಿ ಭಾರತದ ದೀಪಾ ಲೋಧಿ ಮತ್ತು ಸಿಮಾ ನಿಯೋಪಾನೆ (90.42) ಚಿನ್ನ, ನೇಪಾಳದ ಸ್ವೀಕೃ ಥಾಪಾ ಮತ್ತು ಪ್ರಜ್ಞಾ ಗೌತಮ್ (56.39) ಬೆಳ್ಳಿ ಹಾಗೂ ಜಾಂಬಿಯಾದ ಟಸಿಲಾ ಬ್ಲೆಸ್ಸಿಂಗ್ಸ್ ಫಿರಿ ಮತ್ತು ಡೆಬೊರಾ (41.30) ಕಂಚಿನ ಪದಕಗಳನ್ನು ಗೆದ್ದುಕೊಂಡರು.

ಕಿರುಸುದ್ದಿ

ಮೂಡುಬಿದಿರೆ: ತಾಲೂಕಿನಾದ್ಯಂತ ಭಾರೀ ಮಳೆ, ಜನಜೀವನ ಅಸ್ತವ್ಯಸ್ತ

ಮೂಡುಬಿದಿರೆ: ತಾಲೂಕಿನಾದ್ಯಂತ ಸೋಮವಾರ ಭಾರೀ ಮಳೆಯಾಗಿದ್ದು, ಜನಜೀವನದ ಮೇಲೆ ಪರಿಣಾಮ ಬೀರಿದೆ. ಬೆಳಗ್ಗೆ ಸುಮಾರು 11 ಗಂಟೆಯ ತನಕ ಬಿಸಿಲಿನ ವಾತಾವರಣ ಕಂಡುಬಂದಿದ್ದರೂ, ಬಳಿಕ ಏಕಾಏಕಿ ಮೋಡ ಕವಿದು ಮಳೆ ಆರಂಭಗೊಂಡಿತು. ಮಧ್ಯಾಹ್ನದ ವೇಳೆಗೆ ಗಾಳಿ ಮತ್ತು ಗುಡುಗಿನ ಅಬ್ಬರ ಹೆಚ್ಚಾಗಿ, ಹಲವು ಪ್ರದೇಶಗಳಲ್ಲಿ ಮಳೆಯ ತೀವ್ರತೆ ಜೋರಾಗಿತ್ತು. ದಿನವಿಡೀ ಆಕಾಶ ಮೋಡಗಳಿಂದ ಕವಿದಿದ್ದು, ಸೂರ್ಯನ ದರ್ಶನ ಅಪರೂಪವಾಗಿತ್ತು. ಗುಡುಗು–ಮಿಂಚಿನೊಂದಿಗೆ ಸುರಿದ ಮಳೆಯಿಂದ ಕೆಲವೊಂದು ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜು ವ್ಯತ್ಯಯಗೊಂಡಿದ್ದು, ಹಲವಾರು ಬಾರಿ ಕರೆಂಟ್ ಕೈಕೊಟ್ಟಿದೆ ಎಂದು ಸ್ಥಳೀಯರು ತಿಳಿಸಿದ್ದಾರೆ. ಇದರಿಂದ ಮನೆಮಂದಿ ಹಾಗೂ ವ್ಯಾಪಾರಸ್ಥರು ಕೆಲಕಾಲ ತೊಂದರೆ ಅನುಭವಿಸಿದರು. ಮಧ್ಯಾಹ್ನದ ಬಳಿಕ ಮಳೆ ನಿರಂತರವಾಗಿ ಸುರಿಯುತ್ತಲೇ ಇದ್ದು, ರಸ್ತೆಗಳಲ್ಲಿ ನೀರು ಸಂಗ್ರಹವಾಗಿರುವ ದೃಶ್ಯ ಕಂಡುಬಂತು. ಶಾಲೆಗಳು ಬಿಡುವ ವೇಳೆಗೆ ಮಳೆ ಮತ್ತಷ್ಟು ಜೋರಾಗಿದ್ದರಿಂದ ವಿದ್ಯಾರ್ಥಿಗಳು ಹಾಗೂ ಪೋಷಕರು ಸಂಕಷ್ಟ ಅನುಭವಿಸಿದರು. ಕೆಲವೆಡೆ ವಾಹನ ಸಂಚಾರವೂ ನಿಧಾನಗೊಂಡಿತ್ತು.

ವ್ಯಾನ್–ಸ್ಕೂಟರ್ ನಡುವೆ ಡಿಕ್ಕಿ: ಸವಾರ ಸಾವು

ಮಡಿಕೇರಿ: ವೀರಾಜಪೇಟೆ–ಅಮ್ಮತ್ತಿ ರಸ್ತೆಯಲ್ಲಿ ಮಾರುತಿ ವ್ಯಾನ್ ಹಾಗೂ ಸ್ಕೂಟರ್ ನಡುವೆ ಸಂಭವಿಸಿದ ಭೀಕರ ರಸ್ತೆ ಅಪಘಾತದಲ್ಲಿ ಸ್ಕೂಟರ್ ಸವಾರರೊಬ್ಬರು ಸಾವಿಗೀಡಾಗಿದ್ದಾರೆ. ಬಿಳುಗುಂದ ಗ್ರಾಮದ ವಾಸು ಅವರ ಪುತ್ರ ಪ್ರಗತ್ ಎಂಬವರೇ ಸಾವಿಗೀಡಾದವರು.



ಭಾನುವಾರ ರಾತ್ರಿ 8 ಗಂಟೆಯ ಸುಮಾರಿಗೆ ಪ್ರಗತ್ ಹಾಗೂ ತಂಗಪ್ಪ ಎಂಬವರು ಸ್ಕೂಟಿಯಲ್ಲಿ ಅಮ್ಮತ್ತಿಗೆ ತೆರಳುತ್ತಿದ್ದಾಗ, ಸಿದ್ದಾಪುರದಿಂದ ವೀರಾಜಪೇಟೆ ಕಡೆಗೆ ಬರುತ್ತಿದ್ದ ವ್ಯಾನ್ ಡಿಕ್ಕಿ ಹೊಡೆದಿದೆ. ಅಪಘಾತದಲ್ಲಿ ಗಂಭೀರವಾಗಿ ಗಾಯಗೊಂಡಿದ್ದ ಪ್ರಗತ್ ಅವರಿಗೆ ವೀರಾಜಪೇಟೆ ಸರ್ಕಾರಿ ಆಸ್ಪತ್ರೆಯಲ್ಲಿ ಪ್ರಾಥಮಿಕ ಚಿಕಿತ್ಸೆ ನೀಡಿ, ಹೆಚ್ಚಿನ ಚಿಕಿತ್ಸೆಗಾಗಿ ಮಂಗಳೂರಿನ ಆಸ್ಪತ್ರೆಗೆ ಕರೆದೊಯ್ಯಲಾಗುತ್ತಿತ್ತು. ಆದರೆ ಮಾರ್ಗಮಧ್ಯೆ ಅವರು ಕೊನೆಯುಸಿರೆಳೆದಿದ್ದಾರೆ.

ಕೊನೆಗೂ ಕೊಡಗಿಗೆ ಕಾಲಿಟ್ಟ ಮುಂಗಾರು: ಅಲ್ಲಲ್ಲಿ ಹಗುರವಾದ ಮಳೆ

ಮಡಿಕೇರಿ: ಕೊಡಗು ಜಿಲ್ಲೆಗೆ ಮುಂಗಾರು ನಿಧಾನವಾಗಿ ಪ್ರವೇಶಿಸಿದ್ದು, ಜಿಲ್ಲೆಯ ಬಹುತೇಕ ಕಡೆ ಹಗುರದಿಂದ ಸಾಧಾರಣ ಮಳೆಯಾಗಿದೆ. ಸೋಮವಾರ ಬೆಳಗ್ಗೆ 8.30ಕ್ಕೆ ಕೊನೆಗೊಂಡಂತೆ ಕಳೆದ 24 ಗಂಟೆ ಅವಧಿಯಲ್ಲಿ ಜಿಲ್ಲೆಯಲ್ಲಿ ಸರಾಸರಿ 4.36 ಮಿ.ಮೀ. ಮಳೆಯಾಗಿದೆ. ಮಡಿಕೇರಿ ತಾಲೂಕಿನಲ್ಲಿ 5.65 ಮಿ.ಮೀ., ವೀರಾಜಪೇಟೆ ತಾಲೂಕಿನಲ್ಲಿ 5.30 ಮಿ.ಮೀ. ಮಳೆಯಾಗಿದೆ. ಪೊನ್ನಂಪೇಟೆ ತಾಲೂಕಿನಲ್ಲಿ 4.96 ಮಿ.ಮೀ, ಸೋಮವಾರಪೇಟೆ ತಾಲೂಕಿನಲ್ಲಿ 5.90 ಮಿ.ಮೀ. ಮಳೆಯಾಗಿದ್ದು, ಕುಶಾಲನಗರ ತಾಲೂಕಿನಲ್ಲಿ ಮಾತ್ರ ಮಳೆಯಾಗಿಲ್ಲ. ಜಿಲ್ಲೆಯಲ್ಲಿ ಹೋಬಳಿವಾರು ದಾಖಲಾಗಿರುವ ಮಳೆ ವಿವರದನ್ವಯ ಮಡಿಕೇರಿ ಕಸಬಾ 3.50, ನಾಪೋಕ್ಲು 2.60, ಸಂಪಾಜೆ 4, ಭಾಗಮಂಡಲ 12.50, ವೀರಾಜಪೇಟೆ 7.60, ಅಮ್ಮತ್ತಿ 3, ಹುದಿಕೇರಿ 3.80, ಶ್ರೀಮಂಗಲ 5, ಪೊನ್ನಂಪೇಟೆ 4, ಬಾಳೆಲೆ 7.06, ಸೋಮವಾರಪೇಟೆ 2.40, ಶನಿವಾರಸಂತೆ 3.20, ಶಾಂತಳ್ಳಿ 9, ಕೊಡ್ಲಿಪೇಟೆ 9 ಮಿ.ಮೀ.ಮಳೆಯಾಗಿದೆ.

ಆಪರೇಶನ್ ತೂಫಾನ್: ವಿವಿಧೆಡೆಗಳಿಂದ ಎಂಡಿಎಂಎ ವಶ: ಹಲವರ ಬಂಧನ

ಕಾಸರಗೋಡು: ಮಾದಕ ದ್ರವ್ಯದ ಬೇಟೆಗಾಗಿ ಪೊಲೀಸರು ಜಿಲ್ಲೆಯಾದ್ಯಂತ ಆರಂಭಿಸಿರುವ ಆಪರೇಶನ್ ತೂಫಾನ್ ಕಾರ್ಯಾಚರಣೆಯಡಿ ಭಾನುವಾರ ರಾತ್ರಿ ನಗರದ ಪಳ್ಳಂನ ಮನೆಯೊಂದರಲ್ಲಿ ನಡೆಸಿದ ದಾಳಿಯಲ್ಲಿ ಮಾದಕ ವಸ್ತುವಾದ 47 ಗ್ರಾಂ ಎಂಡಿಎಂಎ ಪತ್ತೆಹಚ್ಚಿ ವಶಪಡಿಸಿಕೊಳ್ಳಲಾಗಿದೆ. ಇದಕ್ಕೆ ಸಂಬಂಧಿಸಿ ಬೈತುಲ್ ನೂರ್ ನಿವಾಸಿ ಅಬ್ದುಲ್ ನಸೀರ್ (40) ಎಂಬಾತನನ್ನು ಬಂಧಿಸಿ ಕೇಸು ದಾಖಲಿಸಲಾಗಿದೆ. ಇದೇ ರೀತಿ ಬದಿಯಡ್ಕ, ಕುಂಬಳೆ, ಬೇಕಲ ಮೊದಲಾದ ಪೊಲೀಸ್ ಠಾಣೆಗಳ ವ್ಯಾಪ್ತಿಗಳಲ್ಲಾಗಿ ಪೊಲೀಸರು ಕಾರ್ಯಾಚರಣೆ ನಡೆಸಿದ್ದಾರೆ. ಒಟ್ಟು 45 ಪ್ರಕರಣಗಳನ್ನು ದಾಖಲಿಸಲಾಗಿದ್ದು, ಅನೇಕ ಮಂದಿಯನ್ನು ಸೆರೆಹಿಡಿಯಲಾಗಿದೆ ಎಂದು ಪೊಲೀಸ್ ಇಲಾಖೆಯ ಮಾಹಿತಿಯಲ್ಲಿ ತಿಳಿಸಲಾಗಿದೆ.

ನಿವೃತ್ತ ನೌಕರ ನೇಣು ಬಿಗಿದು ಆತ್ಮಹತ್ಯೆ

ಕಾಸರಗೋಡು: ಜನವಾಸವಿಲ್ಲದ ತರವಾಡು ಮನೆಯಲ್ಲಿ ಆರೋಗ್ಯ ಇಲಾಖೆಯ ನಿವೃತ್ತ ನೌಕರನ ಮೃತದೇಹ ನೇಣು ಬಿಗಿದು ಆತ್ಮಹತ್ಯೆಗೈದ ಸ್ಥಿತಿಯಲ್ಲಿ ಪತ್ತೆಯಾಗಿದೆ. ಪಿಲಿಕೋಡು ಕಣ್ಣಂಗೈ ನಿವಾಸಿ ಕೆ.ವಿ.ರವೀಂದ್ರನ್ (65) ಎಂಬವರ ಮೃತದೇಹ ಇದಾಗಿದೆ. ಮೃತರು ಪತ್ನಿ ಕೆ.ಗೀತಾ, ಪುತ್ರಿ ಕೆ.ಶ್ರುತಿ ಅವರನ್ನು ಅಗಲಿದ್ದಾರೆ. ಪರಿಯಾರಂ ವೈದ್ಯಕೀಯ ಕಾಲೇಜಿನಲ್ಲಿ ಮರಣೋತ್ತರ ಪರೀಕ್ಷೆ ನಡೆಸಲಾಯಿತು.

ಮಣಿಪಾಲದ ಹೊಟೇಲ್ ನೌಕರ ನಾಪತ್ತೆ

ಉಡುಪಿ: ಮೂಲತಃ ನೇಪಾಳ ದೇಶದವರಾದ, ಪ್ರಸ್ತುತ ಮಣಿಪಾಲದ ಲಕ್ಷ್ಮೀಶ ನಗರದಲ್ಲಿರುವ ಹೊಟೇಲ್ ಒಂದರಲ್ಲಿ ವೇಟರ್ ಕೆಲಸ ಮಾಡಿಕೊಂಡಿದ್ದ ಮನೋಜ್ (20) ಎಂಬ ಯುವಕನು ಮೇ 18 ರಂದು ರಾತ್ರಿ 11 ರ ಸುಮಾರಿಗೆ ವಿಪರೀತ ಮದ್ಯಪಾನ ಮಾಡಿ, ಗಲಾಟೆ ಮಾಡುತ್ತಿದ್ದು, ಪೋಷಕರೊಂದಿಗೆ ಮನೆಗೆ ಹೋಗಲು ನಿರಾಕರಿಸಿದ್ದು, ಬಳಿಕ ನಾಪತ್ತೆಯಾಗಿದ್ದಾನೆ. ಈತನ ಬಗ್ಗೆ ಮಾಹಿತಿ ದೊರೆತಲ್ಲಿ ಮಣಿಪಾಲ ಪೊಲೀಸ್ ನಿರೀಕ್ಷಕರು ಮೊ.ನಂ: 9480805448, ಪಿ.ಎಸ್.ಐ ಮೊ.ನಂ:9480805475, 8277988945 ಹಾಗೂ ಮಣಿಪಾಲ ಪೊಲೀಸ್ ಠಾಣೆ ದೂ.ಸಂಖ್ಯೆ : 0820–2526444 ಅನ್ನು ಸಂಪರ್ಕಿಸಬಹುದಾಗಿದೆ ಎಂದು ಮಣಿಪಾಲ ಪೊಲೀಸ್ ಠಾಣೆಯ ಸಹಾಯಕ ಪೊಲೀಸ್ ಉಪನಿರೀಕ್ಷಕರ ಕಚೇರಿ ಪ್ರಕಟಣೆ ತಿಳಿಸಿದೆ.

ಕಾಸರಗೋಡಿನಲ್ಲಿ ರೆಡ್ ಅಲರ್ಟ್ ಘೋಷಣೆ, ಶಾಲಾ ಕಾಲೇಜುಗಳಿಗೆ ರಜೆ ಘೋಷಣೆ

ಕರಾವಳಿಯಾದ್ಯಂತ ಮಳೆ ಬಿರುಸು

ಮಂಗಳೂರು: ದಕ್ಷಿಣ ಕನ್ನಡ ಜಿಲ್ಲೆಯಾದ್ಯಂತ ಸೋಮವಾರರೆಡ್ ಅಲರ್ಟ್ ಘೋಷಣೆಯಾಗಿದ್ದು, ಉತ್ತಮ ಮಳೆ ಸುರಿದಿದೆ. ಭಾನುವಾರ ಬಿಡುವು ಪಡೆದಿದ್ದಮಳೆಸೋಮವಾರಮುಂಜಾನೆಯಿಂದಲೇ ಬಿರುಸು ಪಡೆದಿತ್ತು. ಕಾಸರಗೋಡಿನಲ್ಲಿ ಭಾರೀ ಮಳೆಯ ಹಿನ್ನೆಲೆಯಲ್ಲಿ ಇಂದು (ಜೂ.9) ಶಾಲಾ ಕಾಲೇಜುಗಳಿಗೆ ರಜೆ ಘೋಷಿಸಲಾಗಿದೆ. ಅಲ್ಲದೆ ರೆಡ್ ಅಲರ್ಟ್ ಮುಂದುವರಿದಿದ್ದು ಭಾರೀ ಮಳೆಯಾಗುವ ಮುನ್ಸೂಚನೆಯನ್ನು ಹವಾಮಾನ ಇಲಾಖೆ ನೀಡಿದೆ.

ದಕ್ಷಿಣ ಕನ್ನಡ ಮತ್ತು ಉಡುಪಿಯಲ್ಲಿ ಬೆಳಗ್ಗಿನಿಂದಲೇ ಮೋಡ ಕವಿದ ವಾತಾವರಣವಿತ್ತು. ಮಧ್ಯಾಹ್ನದ ಬಳಿಕ ಎಡೆಬಿಡದೆ ಮಳೆ ಸುರಿದಿದೆ. ಬೆಳ್ತಂಗಡಿ, ಸುಳ್ಯ, ಮತ್ತು ಪುತ್ತೂರು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಬಿರುಗಾಳಿ ಸಹಿತ ಮಳೆಯಾಗಿದೆ. ಇನ್ನುಳಿದಂತೆ ಬಂಟ್ವಾಳ, ವಿಟ್ಲ, ಕೊಣಾಜೆ, ಮಂಗಳೂರು ಹಾಗೂ ಮೂಲ್ಕಿ ಪರಿಸರದಲ್ಲಿ ಸಾಧಾರಣ ಮಳೆ ಸುರಿದಿದೆ.

ಮುಂಗಾರು ಮಾರುತಗಳ ಚಲನೆಗೆ ತೊಡಕು

ಹವಾಮಾನ ಇಲಾಖೆಯ ಮುನ್ಸೂಚನೆಯ ಪ್ರಕಾರ, ಮಂಗಳವಾರ ಕಾಸರಗೋಡು ಸೇರಿದಂತೆ ಕರ್ನಾಟಕದ ಕರಾವಳಿ ಜಿಲ್ಲೆಗಳ ತೀರ ಪ್ರದೇಶಗಳಲ್ಲಿ ಉತ್ತಮ ಮಳೆಯಾಗುವ ಸಾಧ್ಯತೆಯಿದೆ.

ಜೂನ್ 10ರಿಂದ ಮಳೆ ಹೆಚ್ಚಳ

ಸದ್ಯಕ್ಕೆ ಮಳೆಯ ತೀವ್ರತೆ ಕೊಂಚ ಕಡಿಮೆಯಾಗಿದ್ದರೂ, ಜೂನ್ 10ರಿಂದ ಕರಾವಳಿ ಜಿಲ್ಲೆಗಳಲ್ಲಿ ಮುಂಗಾರು ಮತ್ತೆ ಚುರುಕುಗೊಳ್ಳುವ ಸಾಧ್ಯತೆಯಿದೆ. ಜೂನ್ 10ರಿಂದ ಮುಂದಿನ ಒಂದೆರಡು ದಿನಗಳ ಕಾಲ ದಕ್ಷಿಣ ಕನ್ನಡ, ಉಡುಪಿ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ಉತ್ತಮ ಮಳೆಯಾಗುವ ನಿರೀಕ್ಷೆಯಿದೆ ಎಂದು ಹವಾಮಾನ ತಜ್ಞರು ಮುನ್ಸೂಚನೆ ನೀಡಿದ್ದಾರೆ. ಸಾರ್ವಜನಿಕರು ಹಾಗೂ ಮೀನುಗಾರರು ಜಾಗರೂಕರಾಗಿರಲು ಸೂಚಿಸಲಾಗಿದೆ.

ಕಾಸರಗೋಡು ಜಿಲ್ಲೆಯಲ್ಲಿ ಇಂದು ಶಿಕ್ಷಣ ಸಂಸ್ಥೆಗಳಿಗೆ ರಜೆ ಘೋಷಣೆ

ಕಾಸರಗೋಡು: ಜಿಲ್ಲೆಯಲ್ಲಿ ಮುಂಗಾರು ಮಾರುತವು ಪ್ರಬಲಗೊಂಡಿದೆ. ಈ ಹಿನ್ನೆಲೆಯಲ್ಲಿ ಭಾರೀ ಮಳೆಯಾಗುವ ಸಾಧ್ಯತೆಯಿರುವುದಾಗಿ ಕೇಂದ್ರ ಹವಾಮಾನ ಇಲಾಖೆಯು ಮುನ್ಸೂಚನೆ ನೀಡಿದೆ. ಇದರಿಂದಾಗಿ ಜಿಲ್ಲೆಯಲ್ಲಿ ರೆಡ್ ಅಲರ್ಟ್ ಜಾರಿಗೊಳಿಸಲಾಗಿದೆ.

ಮುನ್ನೆಚ್ಚರಿಕೆ ಕ್ರಮದ ಅಂಗವಾಗಿ ಜಿಲ್ಲಾಧಿಕಾರಿ ಅರ್ಜುನ್ ಪಾಂಡ್ಯನ್ ಅವರು ಜೂ.9ರಂದು ಜಿಲ್ಲೆಯ ವೃತ್ತಿಪರ ಕಾಲೇಜುಗಳು ಸೇರಿದಂತೆ ಎಲ್ಲಾ ಶಿಕ್ಷಣ ಸಂಸ್ಥೆಗಳಿಗೆ ರಜೆ ಘೋಷಿಸಿದ್ದಾರೆ. ಕಾಲೇಜುಗಳು, ಶಾಲೆಗಳು, ಅಂಗನವಾಡಿಗಳು, ಬೋಧನಾ ಕೇಂದ್ರಗಳು, ಐಸಿಎಸ್‌ಇ, ಸಿಬಿಎಸ್‌ಇ ಸೇರಿದಂತೆ ಎಲ್ಲಾ ಶಿಕ್ಷಣ ಸಂಸ್ಥೆಗಳಿಗೆ ರಜೆ ಅನ್ವಯವಾಗುತ್ತದೆ ಎಂದು ಜಿಲ್ಲಾಧಿಕಾರಿ ಸ್ಪಷ್ಟ ಸೂಚನೆ ನೀಡಿದ್ದಾರೆ.

ವೃತ್ತಿಪರ ಕಾಲೇಜುಗಳು ಸೇರಿದಂತೆ ಶಾಲೆಗಳು, ಕೇಂದ್ರೀಯ ವಿದ್ಯಾಲಯಗಳು, ಮದರಸಾಗಳು ಸೇರಿದಂತೆ ಧಾರ್ಮಿಕ ಶಿಕ್ಷಣ ಸಂಸ್ಥೆಗಳು, ವಸತಿ ಶಾಲೆಗಳಿಗೆ ರಜೆ ಅನ್ವಯಿಸುವುದಿಲ್ಲ. ಪೂರ್ವ ನಿಗದಿತ ವಿಶ್ವವಿದ್ಯಾಲಯ, ಸಾರ್ವಜನಿಕ ಪರೀಕ್ಷೆಗಳು ಮತ್ತು ಸಂದರ್ಶನಗಳಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ ಎಂದು ಜಿಲ್ಲಾಡಳಿತ ಹೊರಡಿಸಿದ ಮಾಹಿತಿಯಲ್ಲಿ ಉಲ್ಲೇಖಿಸಲಾಗಿದೆ.

ಅತಿ ಹೆಚ್ಚು ಮಳೆ ಸುರಿಯುವ ಸಾಧ್ಯತೆಯಿರುವುದರಿಂದ ತುರ್ತು ವಿಪತ್ತು ನಿರ್ವಹಣಾ ಕ್ರಮಗಳಿಗಾಗಿ ಜಿಲ್ಲಾಧಿಕಾರಿಗಳು ಸೂಚನೆ ನೀಡಿದ್ದಾರೆ. ಇದರ ಅಂಗವಾಗಿ ಜಿಲ್ಲೆಯಲ್ಲಿ ಕಟ್ಟುನಿಟ್ಟಿನ ಮುನ್ನೆಚ್ಚರಿಕೆ ಮತ್ತು ವಿಪತ್ತು ನಿರ್ವಹಣಾ ಕಾರ್ಯಾಚರಣೆಗೆ ಜಿಲ್ಲಾಧಿಕಾರಿ ಆದೇಶಿಸಿದ್ದಾರೆ. ಜೂ.4ರಂದು ನೈಋತ್ಯ ಮಾನ್ಸೂನ್ ಕೇರಳವನ್ನು ಪ್ರವೇಶಿಸಿದ ನಂತರ ಜಿಲ್ಲೆಯಲ್ಲಿ ಹೈ ಅಲರ್ಟ್ ಮುಂದುವರಿದಿದೆ. ಇದೇ ವೇಳೆ ಮುಂದಿನ 24 ಗಂಟೆಗಳಲ್ಲಿ 204.4 ಮಿ.ಮೀ.ಗಿಂತ ಹೆಚ್ಚು ಮಳೆ ಸುರಿಯುವ ಸಾಧ್ಯತೆಯಿರುವುದಾಗಿ ಮುನ್ನೆಚ್ಚರಿಕೆ ನೀಡಲಾಗಿದೆ.

ಆದ್ದರಿಂದ ನದಿಗಳು, ಹೊಳೆಗಳು ಮತ್ತು ಪ್ರವಾಸಿ ತಾಣಗಳಿಗೆ ಭೇಟಿ ನೀಡುವುದನ್ನು ಕಟ್ಟುನಿಟ್ಟಾಗಿ ನಿಷೇಧಿಸಲಾಗಿದೆ. ತುರ್ತು ಸಂದರ್ಭಗಳಲ್ಲಿ ಸಾರ್ವಜನಿಕರು ಜಿಲ್ಲಾ ಮತ್ತು ತಾಲೂಕು ನಿಯಂತ್ರಣ ಕೊಠಡಿಗಳನ್ನು ಅಥವಾ ದಿನದ 24 ಗಂಟೆಯೂ ತೆರೆದಿರುವ ಪೊಲೀಸ್ ಕಂಟ್ರೋಲ್ ರೂಮ್‌ನ್ನು ಸಂಪರ್ಕಿಸಬಹುದು.

ಜಿಲ್ಲಾ ಮತ್ತು ತಾಲೂಕು ನಿಯಂತ್ರಣ ಕೊಠಡಿಗಳಲ್ಲಿ ದಿನದ 24 ಗಂಟೆಯೂ ಸಿಬ್ಬಂದಿಗಳು ಕಾರ್ಯನಿರ್ವಹಿಸುತ್ತಾರೆ. ತಹಶೀಲ್ದಾರರು ಅಗತ್ಯವಿರುವ ಹಂತಗಳಲ್ಲಿ ತಕ್ಷಣ ಪರಿಹಾರ ಶಿಬಿರಗಳನ್ನು ಪ್ರಾರಂಭಿಸಬೇಕು. ಸ್ಥಳೀಯಾಡಳಿತ ಸಂಸ್ಥೆಗಳು ವಿಶೇಷ ಗಮನ ಹರಿಸಿ ಸಮಸ್ಯೆಪೀಡಿತ ಪ್ರದೇಶಗಳು ಮತ್ತು ಎತ್ತರದ ಪ್ರದೇಶಗಳಲ್ಲಿ ವಾಸಿಸುವವರನ್ನು ಸುರಕ್ಷಿತ ಸ್ಥಳಗಳಿಗೆ ಸ್ಥಳಾಂತರಿಸಲು ಕ್ರಮ ಕೈಗೊಳ್ಳಬೇಕು ಎಂದು ಜಿಲ್ಲಾಡಳಿತವು ನಿರ್ದೇಶಿಸಿದೆ.




ತುರ್ತು ರಕ್ಷಣೆಗೆ ಸಜ್ಜಾದ ಹೆಚ್.ಆರ್.ಎಸ್ ತಂಡ

ಉಡುಪಿ: ಜಿಲ್ಲೆಯಲ್ಲಿ ರೆಡ್ ಅಲರ್ಟ್ ಘೋಷಣೆಯಾಗಿರುವ ಬೆನ್ನಲ್ಲೇ, ಮಳೆ ಹಾಗೂ ಪ್ರಕೃತಿ ವಿಕೋಪದಂತಹ ಯಾವುದೇ ತುರ್ತು ಪರಿಸ್ಥಿತಿಗಳನ್ನು ಎದುರಿಸಲು ಸಾರ್ವಜನಿಕರ ನೆರವಿಗಾಗಿ ಹೂಮ್ಯಾನಿಟೇರಿಯನ್ ರಿಲೀಫ್ ಸೊಸೈಟಿ ತನ್ನ ವಿಶೇಷ ಟಾಸ್ಕ್ ಫೋರ್ಸ್ ತಂಡಗಳನ್ನು ರಂಗಕ್ಕಿಳಿಸಿದೆ. ಕರಾವಳಿ ಭಾಗದಲ್ಲಿ ನೆರೆ ಹಾವಳಿ ಅಥವಾ ಅಪಾಯ ಎದುರಾದರೆ ತಕ್ಷಣವೇ ಸ್ಪಂದಿಸಲು ತಂಡದ ಸದಸ್ಯರು ಸನ್ನದ್ಧರಾಗಿದ್ದು, ಸಾರ್ವಜನಿಕರ ಸಂಪರ್ಕಕ್ಕಾಗಿ ತುರ್ತು ಸಹಾಯವಾಣಿ ಸಂಖ್ಯೆಗಳನ್ನೂ ಪ್ರಕಟಿಸಿದ್ದಾರೆ.

ಅಧಿಕಾರಿಗಳ ಮನವಿ: ತಗ್ಗು ಪ್ರದೇಶದ ನಿವಾಸಿಗಳು ಎಚ್ಚರ!

ಮುಂದಿನ ದಿನಗಳಲ್ಲಿ ಮಳೆಯ ಪ್ರಮಾಣ ತೀವ್ರಗೊಳ್ಳಲಿರುವುದರಿಂದ ನದಿ ತೀರ, ಸಮುದ್ರ ತೀರ ಹಾಗೂ ಗುಡ್ಡಗಾಡು ಮತ್ತು ತಗ್ಗು ಪ್ರದೇಶಗಳಲ್ಲಿ ವಾಸಿಸುವ ಸಾರ್ವಜನಿಕರು ಅತ್ಯಂತ ಜಾಗರೂಕರಾಗಿ ಇರಬೇಕು. ಯಾವುದೇ ಅನಗತ್ಯ ಪ್ರಯಾಣ ಅಥವಾ ಕಡಲಿಗಿಳಿಯುವ ಸಾಹಸಕ್ಕೆ ಕೈಹಾಕದಂತೆ ಹಾಗೂ ಜಿಲ್ಲಾಡಳಿತ ನೀಡುವ ಮುನ್ನೆಚ್ಚರಿಕೆಗಳನ್ನು ಕಡ್ಡಾಯವಾಗಿ ಪಾಲಿಸುವಂತೆ ಕಂದಾಯ ಮತ್ತು ವಿಪತ್ತು ನಿರ್ವಹಣಾ ಅಧಿಕಾರಿಗಳು ಮನವಿ ಮಾಡಿದ್ದಾರೆ.

ಹವಾಮಾನ ಇಲಾಖೆಯ ವರದಿಯ ಪ್ರಕಾರ, ಜೂನ್ 8 ಮತ್ತು 9 ರಂದು ಉಡುಪಿ ಹಾಗೂ ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ 204.5 ಮಿ.ಮೀ.ಗಿಂತಲೂ ಅಧಿಕ ಭೀಕರ ಮಳೆಯಾಗುವ ಸಾಧ್ಯತೆಯಿದೆ. ಇದರೊಂದಿಗೆ ಕರಾವಳಿ ತೀರದಲ್ಲಿ ಗಂಟೆಗೆ 40 ರಿಂದ 50 ಕಿ.ಮೀ. ವೇಗದಲ್ಲಿ ಬಲವಾದ ಗಾಳಿ ಬೀಸಲಿದ್ದು, ಗುಡುಗು–ಸಿಡಿಲು ಸಹಿತ ಮಳೆಯಾಗಲಿದೆ. ಇನ್ನುಳಿದಂತೆ ಉತ್ತರ ಕನ್ನಡ, ಶಿವಮೊಗ್ಗ ಹಾಗೂ ಚಿಕ್ಕಮಗಳೂರು ಜಿಲ್ಲೆಗಳಲ್ಲಿ 'ಆರೆಂಜ್ ಅಲರ್ಟ್' ಮುಂದುವರಿದಿದೆ. ಜೂನ್ 7ರಂದು ಕರಾವಳಿ, ಮಲೆನಾಡು ಹಾಗೂ ಉತ್ತರ ಕರ್ನಾಟಕದ ಬೆಳಗಾವಿ, ಧಾರವಾಡ ಮತ್ತು ಹಾವೇರಿ ಜಿಲ್ಲೆಗಳಲ್ಲಿ ಆರೆಂಜ್ ಅಲರ್ಟ್ ಇತ್ತಾದರೂ, ಇಂದಿನಿಂದ (ಜೂನ್ 8) ಮಳೆಯ ಅಬ್ಬರ ಮತ್ತಷ್ಟು ಹೆಚ್ಚಾಗಲಿದೆ.

ರೆಡ್ ಅಲರ್ಟ್ ಹಿನ್ನೆಲೆಯಲ್ಲಿ ಸಮಗ್ರ ಪರಿಶೀಲನಾ ಸಭೆ

ಜಿಲ್ಲೆಯಲ್ಲಿ ಜೂ.9ರಂದು ರೆಡ್ ಅಲರ್ಟ್ ಹಿನ್ನೆಲೆಯಲ್ಲಿ ಅಗತ್ಯದ ಸಿದ್ಧತೆಗಳನ್ನು ಪರಿಶೀಲಿಸಲು ಜಿಲ್ಲಾಧಿಕಾರಿ ಅರ್ಜುನ್ ಪಾಂಡ್ಯನ್ ಅಧ್ಯಕ್ಷತೆಯಲ್ಲಿ ಎಡಿಎಂಗಳು, ಆರ್‌ಡಿಒಗಳು, ತಹಶೀಲ್ದಾರ್‌ಗಳು ಮತ್ತು ಸ್ಥಳೀಯಾಡಳಿತ ಇಲಾಖೆಯ ಜಂಟಿ ನಿರ್ದೇಶಕರ ತುರ್ತು ಹಾಗೂ ಸಮಗ್ರ ಪರಿಶೀಲನಾ ಸಭೆಯು ಕಲೆಕ್ಟರೇಟ್‌ನಲ್ಲಿ ಸೋಮವಾರ ನಡೆಯಿತು. ಆರೋಗ್ಯ ಇಲಾಖೆಯ ನೇತೃತ್ವದಲ್ಲಿ ಸಿಎಚ್‌ಸಿ ಮತ್ತು ಪಿಎಚ್‌ಸಿ ಆಸ್ಪತ್ರೆಗಳನ್ನು ದಿನದ 24 ಗಂಟೆಗಳೂ ಕಾರ್ಯನಿರ್ವಹಿಸುವಂತೆ ಮಾಡಬೇಕು. ರಾಷ್ಟ್ರೀಯ ಹೆದ್ದಾರಿ 66ರಲ್ಲಿ ನಿರ್ಮಾಣ ಕಾರ್ಯ ನಡೆಯುತ್ತಿರುವ ಪ್ರದೇಶಗಳಲ್ಲಿ ಭೂಕುಸಿತ ಮತ್ತು ನೀರಿನ ಅಡಚಣೆಯನ್ನು ತಪ್ಪಿಸಲು ಮುನ್ನೆಚ್ಚರಿಕೆ ವಹಿಸುವಂತೆ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರಕ್ಕೆ ಸೂಚಿಸಲಾಯಿತು. ಅಗತ್ಯದ ಹಂತದಲ್ಲಿ ತಹಶೀಲ್ದಾರ್‌ಗಳ ನೇತೃತ್ವದಲ್ಲಿ ಪರಿಹಾರ ಶಿಬಿರಗಳನ್ನು ಪ್ರಾರಂಭಿಸಬೇಕು. ಅಪಾಯಕಾರಿ ಪ್ರದೇಶಗಳಿಂದ ಜನರನ್ನು ಪರಿಹಾರ ಶಿಬಿರಗಳು ಮತ್ತು ಸುರಕ್ಷಿತ ಸ್ಥಳಗಳಿಗೆ ಸ್ಥಳಾಂತರಿಸಲು ಸ್ಥಳೀಯಾಡಳಿತ ಸಂಸ್ಥೆಗಳು ಗಮನ ಹರಿಸಬೇಕು. ಈ ಹಿನ್ನೆಲೆಯಲ್ಲಿ ಸಹಕರಿಸಲು ಪೊಲೀಸ್ ಮತ್ತು ಮೋಟಾರು ವಾಹನ ಇಲಾಖೆಗೆ ಸೂಚಿಸಲಾಯಿತು. ಪಂಚಾಯತ್ ನಿಯಂತ್ರಣ ಕೊಠಡಿಯನ್ನು ಬಲಪಡಿಸಬೇಕು ಮತ್ತು ರೆಡ್ ಅಲರ್ಟ್ ಘೋಷಿಸಲಾದ ನಿಟ್ಟಿನಲ್ಲಿ ಎಲ್ಲರೂ ಜಾಗರೂಕರಾಗಿರಬೇಕು ಎಂದು ಜಿಲ್ಲಾಧಿಕಾರಿ ಸಭೆಯಲ್ಲಿ ತಿಳಿಸಿದರು.

ಮಳೆಗೆ ಆವರಣಗೋಡೆ ಕುಸಿದು ನಾಶನಷ್ಟ


ಉಪ್ಪಳ: ಧಾರಾಕಾರ ಸುರಿದ ಮಳೆಗೆ ವಿವಿಧೆಡೆಗಳಲ್ಲಿ ಭಾರೀ ನಾಶನಷ್ಟ ಉಂಟಾಗಿರುವಂತೆ ಶನಿವಾರ ಸಂಜೆ ಪ್ರತಾಪನಗರದ ಪುಳಿಕುತ್ತಿ ನಿವಾಸಿ ಕಮಲಾಕ್ಷ ಟೈಲರ್ ಎಂಬವರ ಮನೆಗೆ ಸಮೀಪದಖಾಸಗಿವ್ಯಕ್ತಿಯೋರ್ವರಕೆಂಪು ಕಲ್ಲು ಕಟ್ಟಿದ ಬೃಹತ್ ಆವರಣಗೋಡೆ ಕುಸಿದು ಬಿದ್ದಿದೆ. ಇದರಿಂದ ಅಡುಗೆ ಕೋಣೆ ಪರಿಸರದಲ್ಲಿದ್ದ ಕಬ್ಬಿನದ ಏಣಿ ಮುರಿದು ಹಾನಿಗೀಡಾಗಿದೆ. ಕಲ್ಲುಗಳು ಮನೆಯ ಅಂಗಳದಲ್ಲಿ ಚೆಲ್ಲಾಪಿಲ್ಲಿಯಾಗಿ ಬಿದ್ದುಕೊಂಡಿದ್ದು, ಪರಿಸರ ಪ್ರದೇಶವು ಅವ್ಯವಸ್ಥೆಯ ಗೂಡಾಗಿದೆ. ಘಟನೆ ಸಂದರ್ಭ ಹೊರಗಡೆ ಯಾರೂ ಇಲ್ಲದಿದ್ದುದರಿಂದ ಅಪಾಯ ತಪ್ಪಿದೆ.



ಕಳಾಯಿ ಪಾಡಿಯಲ್ಲಿ ಗಾಳಿ ಮಳೆಗೆ ವಿದ್ಯುತ್ ಕಂಬ ಬಿದ್ದು ಮನೆಗೆ ಹಾನಿ

ಉಪ್ಪಳ: ಕಳೆದೆರಡು ದಿನಗಳಲ್ಲಿ ಸುರಿದ ಭಾರೀ ಗಾಳಿ ಮಳೆಗೆ ಪೈವಳಿಕೆ ಗ್ರಾಮ ಪಂಚಾಯತ್ ವ್ಯಾಪ್ತಿಯ ಕಡೆಂಕೋಡಿ ವಾರ್ಡ್‌ಗೊಳಪಟ್ಟ ಕಳಾಯಿ ಕೊಮ್ಮಂಗಳ ದಾರಿಯಲ್ಲಿ ಕಳಾಯಿ ಪಾಡಿ ಎಂಬಲ್ಲಿರುವ ಅಬ್ದುಲ್ಲ ಎಂಬವರ ಹೊಸದಾಗಿ ನಿರ್ಮಿಸಿದ ಟೆರೇಸ್‌ನ ಮನೆ ಮೇಲೆ ರಸ್ತೆ ಬದಿಯಲ್ಲಿದ್ದ ವಿದ್ಯುತ್ ಕಂಬ ಬಿದ್ದು ಮನೆಗೆ ಹಾನಿಯಾಗಿದೆ.

ಹೊಸದಾಗಿ ಅಳವಡಿಸಿದ ವಿದ್ಯುತ್ ಕಂಬದಲ್ಲಿ ಸಂಪರ್ಕ ಇಲ್ಲದಿರುವುದರಿಂದ ಅಪಾಯ ಸಂಭವಿಸಲಿಲ್ಲ. ಘಟನಾ ಸ್ಥಳಕ್ಕೆ ಪೈವಳಿಕೆ ಗ್ರಾಮ ಪಂಚಾಯತ್‌ನ ಉಪಾಧ್ಯಕ್ಷ ಟಿ.ರಾಘವೇಂದ್ರ ಭಟ್, ಸ್ಥಾಯೀ ಸಮಿತಿ ಅಧ್ಯಕ್ಷ ಶ್ರೀನಿವಾಸ ಮಾಸ್ಟರ್, ಪೈವಳಿಕೆ ಗ್ರಾಮಾಧಿಕಾರಿ ಮೊಯ್ದೀನ್ ಕುಂಞಿ ಬಿ., ವಿಶೇಷ ಗ್ರಾಮಾಧಿಕಾರಿ ತಸ್ಲೀಮುಲ್ಲಾ, ಯೂತ್ ಲೀಗ್ ನೇತಾರ ಫಾರೂಕ್ ಪಲ್ಲಕುಡೇಲ್ ಮೊದಲಾದವರು ಭೇಟಿ ನೀಡಿ ಮಾಹಿತಿ ಸಂಗ್ರಹಿಸಿದರು. ವಿದ್ಯುತ್ ಇಲಾಖೆಯವರ ನಿರ್ಲಕ್ಷ್ಯವೇ ಈ ಅಪಾಯಕ್ಕೆ ಕಾರಣವೆನ್ನಲಾಗಿದೆ.



ಚೆರ್ಕಳ: ರಾ.ಹೆ. ನಿರ್ಮಾಣ ಕಂಪೆನಿಯ ವ್ಯವಸ್ಥಾಪಕರು, ಜನಪ್ರತಿನಿಧಿಗಳು ಭೇಟಿ

ಕಾಸರಗೋಡು: ರಾಷ್ಟ್ರೀಯ ಹೆದ್ದಾರಿ 66ರ ನಿರ್ಮಾಣ ಕಾರ್ಯ ನಡೆಯುತ್ತಿರುವ ಚೆರ್ಕಳದಲ್ಲಿ ನೀರಿನ ಹರಿವು ಮತ್ತು ಭೂಕುಸಿತಕ್ಕೆ ಪರಿಹಾರ ಕಂಡುಕೊಳ್ಳುವ ನಿಟ್ಟಿನಲ್ಲಿ ಕಾಸರಗೋಡು ಆರ್‌ಡಿಒ ಬಿನು ಜೋಸೆಫ್ ಅಧ್ಯಕ್ಷತೆಯಲ್ಲಿ ನಿರ್ಮಾಣ ಗುತ್ತಿಗೆ ಕಂಪೆನಿಯ ಪ್ರತಿನಿಧಿಗಳು ತುರ್ತು ಸಭೆ ನಡೆಸಿದರು. ಬಳಿಕ ಜನಪ್ರತಿನಿಧಿಗಳು ಮತ್ತು ಅಧಿಕಾರಿಗಳು ಆ ಪ್ರದೇಶಕ್ಕೆ ಭೇಟಿ ನೀಡಿ ಪರಿಶೀಲಿಸಿದರು.

ಮೇಘಾ ಕನ್‌ಸ್ಟ್ರಕ್ಷನ್ಸ್ ಪ್ರಾಜೆಕ್ಟ್ ಉಸ್ತುವಾರಿ ಎ.ಭಾಸ್ಕರ್ ಮಾತನಾಡಿ, ಈ ಪ್ರದೇಶದ ಜನರ ಸಮಸ್ಯೆಗಳನ್ನು ಸಹಾನುಭೂತಿಯಿಂದ ಪರಿಗಣಿಸಲಾಗುವುದುಮತ್ತುರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಸೂಚನೆಯಂತೆ ಕೆಲಸ ಮಾಡಲಾಗುವುದು. ಎರಡು ದಿನಗಳಲ್ಲಿ ಚೆಂಗಳ ಗ್ರಾಮ ಪಂಚಾಯತ್ ಅಂದಾಜು ಪಟ್ಟಿ ಸಿದ್ಧಪಡಿಸಿ ಜಿಲ್ಲೆಗೆ ಭೇಟಿ ನೀಡಲಿರುವ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಸ್ವತಂತ್ರ ಇಂಜಿನಿಯರ್‌ಗೆ ಸಲ್ಲಿಸಲಿದೆ ಎಂದರು. ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಸ್ವತಂತ್ರ ಇಂಜಿನಿಯರ್ ಬಂದ ತಕ್ಷಣ ಮತ್ತೆ ಆ ಪ್ರದೇಶಕ್ಕೆ ಭೇಟಿ ನೀಡಲಾಗುವುದು ಅವರು ತಿಳಿಸಿದರು.

ಚೆಂಗಳ ಗ್ರಾಮ ಪಂಚಾಯತ್ ಅಧ್ಯಕ್ಷ ವಸಂತ ಅಜಕ್ಕೋಡು, ಇತರ ಜನಪ್ರತಿನಿಧಿಗಳು, ಕಂದಾಯ ಅಧಿಕಾರಿಗಳು ಮತ್ತಿತರರು ಭಾಗವಹಿಸಿದ್ದರು.



ಕಾಞಂಗಾಡು ಆರ್‌ಡಿಒ ಕೆ.ಆರ್. ಮನೋಜ್ ಕುಳಂಗಟ್ಟು ಬೆಟ್ಟಕ್ಕೆ ಭೇಟಿ

ಕಾಞಂಗಾಡು ಆರ್‌ಡಿಒ ಕೆ.ಆರ್.ಮನೋಜ್ ಅವರು ಕುಳಂಗಟ್ಟು ಬೆಟ್ಟ ಪ್ರದೇಶಕ್ಕೆ ಭೇಟಿ ನೀಡಿ ಮಳೆಗಾಲ ತೀವ್ರಗೊಳ್ಳುತ್ತಿರುವ ಹಿನ್ನೆಲೆಯಲ್ಲಿ ಹತ್ತಿರದ ಕುಟುಂಬಗಳನ್ನು ತಕ್ಷಣ ಸ್ಥಳಾಂತರಿಸುವಂತೆ ತಹಶೀಲ್ದಾರ್ ಮತ್ತು ಗ್ರಾಮಾಧಿಕಾರಿಗಳಿಗೆ ಸೂಚನೆ ನೀಡಿದರು. ತಹಶೀಲ್ದಾರ್, ಗ್ರಾಮ ಅಧಿಕಾರಿಗಳು ಮತ್ತು ಚೆರುವತ್ತೂರು ಗ್ರಾಮ ಪಂಚಾಯತ್ ಅಧ್ಯಕ್ಷ ಟಿ.ನಾರಾಯಣನ್ ಈ ಸಂದರ್ಭ ಹಾಜರಿದ್ದರು.

ಸೀಮಂತ ಕಾರ್ಯಕ್ರಮಕ್ಕೆ ತೆರಳಿದ್ದ ಮಿನಿ ಬಸ್ ಅಪಘಾತ

ಯುವಕನ ದಾರುಣ ಸಾವು

ಬಂಟ್ವಾಳ: ಮಡಂತ್ಯಾರ್‌ನಲ್ಲಿ ಸೀಮಂತ ಕಾರ್ಯಕ್ರಮ ಮುಗಿಸಿ ವಾಪಸು ಮನೆಗೆ ತೆರಳುತ್ತಿದ್ದ ಮಿನಿ ಬಸ್ ಚಾಲಕನ ನಿಯಂತ್ರಣ ರಸ್ತೆ ಮಧ್ಯದ ಡಿವೈಡರ್‌ಗೆ ಡಿಕ್ಕಿ ಹೊಡೆದು ಎಡಮಗ್ಗುಲಿಗೆ ಮಗುಚಿ ಬಿದ್ದ ಪರಿಣಾಮ ಒಬ್ಬಾತ ಮೃತಪಟ್ಟರೆ, 9 ಮಂದಿ ಗಾಯಗೊಂಡ ಘಟನೆ ರಾ.ಹೆಯ 10ನೇ ಮೈಲಿಗಲ್ಲು ಬಳಿ ಸಂಭವಿಸಿದೆ.

ಮೃತರನ್ನು ಸುರತ್ಕಲ್ ಸಮೀಪದ ಕಾಟಿಪಳ್ಳ ನಿವಾಸಿ ವಿಕಾಸ್ (19) ಎಂದು ಗುರುತಿಸಲಾಗಿದೆ. ಉಳಿದಂತೆ ವಿಶಾಲಾಕ್ಷಿ, ಜಯಂತಿ, ಅನುಸೂಯ, ಶಿವಾನಿ, ವೀಣಾ, ಲಕ್ಷ್ಮೀ ಹಾಗೂ ಚಾಲಕ ಪ್ರಶಾಂತ್ ಸಹಿತ ಇತರರು ಸಣ್ಣಪುಟ್ಟ ಗಾಯಗೊಂಡು ಮಂಗಳೂರು ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.



ಘಟನೆಯಿಂದ ವಿಕಾಸ್ ಅವರು ಗಂಭೀರ ಗಾಯಗೊಂಡಿದ್ದು, ತಕ್ಷಣ ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿತ್ತಾದರೂ ಚಿಕಿತ್ಸೆ ಫಲಕಾರಿಯಾಗದೆ ಕೊನೆಯುಸಿ ರೆಳೆದಿದ್ದಾರೆ ಎಂದು ತಿಳಿದು ಬಂದಿದೆ. ಭಾನುವಾರ ಬೆಳ್ತಂಗಡಿ ತಾಲೂಕಿನ ಮಡಂತ್ಯಾರು ಎಂಬಲ್ಲಿಗೆ ಸೀಮಂತ ಕಾರ್ಯಕ್ರಮಕ್ಕಾಗಿ ಮಿನಿ ಬಸ್ ನಲ್ಲಿ ಬಂದು ಸಂಜೆಯ ಹೊತ್ತಿಗೆ ವಾಪಸು ಮಂಗಳೂರಿಗೆ ತೆರಳುತ್ತಿದ್ದ ವೇಳೆ ಮಂಗಳೂರು – ಬೆಂಗಳೂರು ರಾಷ್ಟ್ರೀಯ ಹೆದ್ದಾರಿಯ 10 ನೇ ಮೈಲಿಗಲ್ಲು ತಲುಪಿದಾಗ ಚಾಲಕನ ನಿಯಂತ್ರಣ ತಪ್ಪಿ ರಸ್ತೆಯ ಡಿವೈಡರ್‌ಗೆ ಡಿಕ್ಕಿ ಹೊಡೆದು ಮಿನಿ ಬಸ್ ಬಳಿಕ ಎಡಮಗ್ಗುಲಿಗೆ ಪಲ್ಟಿಯಾಗಿದೆ. ಇದರಿಂದ ಕೆಲ ಹೊತ್ತ ಸಂಚಾರದಲ್ಲಿ ಅಡಚಣೆ ಉಂಟಾಯಿತು.

ಸುದ್ದಿ ತಿಳಿದ ಬಂಟ್ವಾಳ ಸಂಚಾರಿ ಪೊಲೀಸರುಸ್ಥಳಕ್ಕಾಗಮಿಸಿ, ವಾಹನವನ್ನು ಬದಿಗೆ ಸರಿಸಿ ಸುಗಮ ವಾಹನ ಸಂಚಾರಕ್ಕೆ ಅನುವುಮಾಡಿಕೊಟ್ಟರು. ಈ ಬಗ್ಗೆ ಬಂಟ್ವಾಳ ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ರಸ್ತೆ ಹೊಂಡಕ್ಕೆ ಬಿದ್ದು ಪ್ರಾಣ ಹಾನಿಯಾದರೆ ಇಂಜಿನಿಯರ್‌ಗಳೇ ಹೊಣೆ: ಸಚಿವ ಖಾದರ್

ಮಂಗಳೂರು: ಮಳೆಗಾಲದಲ್ಲಿ ಎದುರಾಗುವ ಯಾವುದೇ ವಿಪತ್ತುಗಳನ್ನು ಎದುರಿಸಲು ಅಧಿಕಾರಿಗಳು ಪರಸ್ಪರ ಸಮನ್ವಯದಿಂದ ನಿರ್ವಹಿಸಬೇಕು ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ಯು. ಟಿ. ಖಾದರ್ ಸೂಚಿಸಿದ್ದಾರೆ.

ಅವರು ಸೋಮವಾರ ಜಿಲ್ಲಾಧಿಕಾರಿ ಕಚೇರಿಯಲ್ಲಿ ಮಳೆಗಾಲದ ಸಿದ್ಧತೆಗಳ ಕುರಿತು ಅಧಿಕಾರಿಗಳ ಸಭೆ ನಡೆಸಿ ಮಾತನಾಡಿದರು. ಮುಖ್ಯವಾಗಿ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಮತ್ತು ಲೋಕೋಪಯೋಗಿ ಇಲಾಖೆಗಳು ರಸ್ತೆಯಲ್ಲಿ ನೀರು ನಿಲ್ಲುವ ಪ್ರಕರಣಗಳನ್ನು ಸಮನ್ವಯದಿಂದ ನಿರ್ವಹಿಸಬೇಕು. ತುರ್ತು ಸಂದರ್ಭಗಳಲ್ಲಿ ಸಾರ್ವಜನಿಕ ಹಿತಾಸಕ್ತಿಯಿಂದ ವ್ಯಾಪ್ತಿ ಮೀರಿ ಕ್ರಮ ಕೈಗೊಳ್ಳಬೇಕು ಎಂದರು.

ಮಳೆಗಾಲದಲ್ಲಿ ರಸ್ತೆ ಹೊಂಡದಲ್ಲಿ ನೀರು ನಿಂತ ಕಾರಣ ಅಪಘಾತಗಳಾಗಿ ಪ್ರಾಣ ಹಾನಿ ಸಂಭವಿಸಿದರೆ ಸಂಬಂಧಿಸಿದ ಇಂಜಿನಿಯರ್‌ಗಳನ್ನೇ ನೇರ ಹೊಣೆಗಾರರನ್ನಾಗಿ ಮಾಡಲಾಗುವುದು ಎಂದು ಎಚ್ಚರಿಸಿದ ಸಚಿವರು, ಪದೇ ಪದೇ ಹೊಂಡ ಮುಚ್ಚುವ ಕೆಲಸದ ಬದಲು ಶಾಶ್ವತ ಕಾಮಗಾರಿಗೆ ಒತ್ತು ನೀಡಲು ತಿಳಿಸಿದರು.



> ಮಳೆಗಾಲದಲ್ಲಿ ಮಾನವ ನಿರ್ಮಿತ ಸಮಸ್ಯೆಗಳನ್ನು ತಗ್ಗಿಸಲು ಗಮನಹರಿಸಬೇಕು. ನೆರೆಯಿಂದ ರಸ್ತೆ ತಡೆಗಳನ್ನು ಆಯಾ ಸ್ಥಳೀಯ ಸಂಸ್ಥೆಗಳು ವಿಳಂಬಿಸದೆ ತೆರವುಗೊಳಿಸಬೇಕು. ಪರಿಹಾರ ಕ್ರಮಗಳನ್ನು ಕೈಗೊಳ್ಳುವಾಗ ಸ್ಥಳೀಯ ಸಂಘ ಸಂಸ್ಥೆಗಳು ಮತ್ತು ಸಾರ್ವಜನಿಕರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಬೇಕು ಟಾಸ್ಕ್ ಫೋರ್ಸ್‌ಗಳನ್ನು ಸಕ್ರಿಯಗೊಳಿಸಬೇಕು. ಪ್ರತಿ ಗ್ರಾಮ ಪಂಚಾಯತ್‌ಗಳಿಗೆ ನೋಡಲ್ ಅಧಿಕಾರಿಗಳನ್ನು ನೇಮಿಸಬೇಕು.
>
> ■ ಯು. ಟಿ. ಖಾದರ್, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ

ಮೆಸ್ಕಾಂ ವ್ಯಾಪ್ತಿಯಲ್ಲಿ ಮಳೆಗಾಲದಲ್ಲಿ ವಿದ್ಯುತ್ ಸಂಪರ್ಕ ನಿರ್ವಹಣೆಗೆ ಹೆಚ್ಚುವರಿ ಲೈನ್‌ಮ್ಯಾನ್ ಮತ್ತು ವಾಹನಗಳನ್ನು ಒದಗಿಸಬೇಕು. ವಿದ್ಯುತ್ ಸಂಪರ್ಕ ಮರುಸ್ಥಾಪನೆಗೆ ತ್ವರಿತ ಕ್ರಮ ಕೈಗೊಳ್ಳಬೇಕು ಎಂದು ಸಚಿವರು ಮೆಸ್ಕಾಂ ಅಧಿಕಾರಿಗಳಿಗೆ ಸೂಚಿಸಿದರು.

ಜಿಲ್ಲಾಧಿಕಾರಿ ದರ್ಶನ್ ಎಚ್. ವಿ. ಅವರು ಮಳೆಗಾಲ ನಿರ್ವಹಣೆಗೆ ಕೈಗೊಳ್ಳಗಿರುವ ಸಿದ್ಧತೆಗಳನ್ನು ಸಭೆಗೆ ವಿವರಿಸಿದರು.

ಸಭೆಯಲ್ಲಿ ಪೊಲೀಸ್ ಆಯುಕ್ತ ಸುಧೀರ್ ಕುಮಾರ್ ರೆಡ್ಡಿ, ಪೊಲೀಸ್ ಅಧೀಕ್ಷಕ ಅರುಣ್, ಡಿಸಿಎಫ್ ರವಿ ಶಂಕರ್, ಉಪವಿಭಾಗಾಧಿಕಾರಿ ಮೀನಾಕ್ಷಿ ಆರ್ಯ ಮತ್ತಿತರರು ಉಪಸ್ಥಿತರಿದ್ದರು.

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. published at : 2nd Floor, Micasa, Near KSRTC Bus stand, Bejai, Mangaluru - 575 004, Phone : 2497091 to 2497093. Fax : 2497098. RNI:29813/78, Printed at Digantha Mudrana Ltd., D/No.5-184-185, Industrial Estate, Yeyyadi, Mangaluru - 575 008. . Editor: P.S.Prakash, Group Editor: Vinayak S. Bhat, Resident Editor : Prakash Ilanthila.